ಸಂಪುಟ ೧-೨
ಸಂಚಿಕೆ ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

ತ್ರೈಮಾಸಿಕ ಪತ್ರಿಕೆ
ಜನವರಿ-೧೯೮೦

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗು ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾದಗದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯು ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, "ಕರ್ನಾಟಕ ಭಾರತಿ"** ಕನ್ನಡ **ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ	೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ	೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ ೮ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೪.೦೦ ಮಾತ್ರ

ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ

ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೨ ಸಂಚಿಕೆ : ೩

ಪ್ರಧಾನ ಸಂಪಾದಕರು

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು

ಡಾ. ಕೆ. ಜಿ. ಶಾಸ್ತ್ರಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೨ ಸಂಚಿಕೆ : ೩

ಜನವರಿ-೧೯೮೦

ಸಂಕ್ರಮಣ ಸಂಚಿಕೆ

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಎಂ. ಎಸ್. ಹಿರಿಯಣ್ಣಯ್ಯ

ನಿರ್ದೇಶಕರು,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ

ಪರಿವಿಡಿ

ನಮ್ಮ ಮಕ್ಕಳು ಮತ್ತು ಭಾಷೆ*

• ವಿಲ್ಯಂ ಮಾಡ್ತ

ಭಾರತದಲ್ಲಿ ಹೇಗೆ ನಾನಾ ಬಗೆಯ ಸಮಾಜಗಳು ಇವೆಯೋ ಹಾಗೆಯೇ ಅನೇಕ ತರಹದ ಭಾಷೆಗಳೂ ಇವೆ. ಮಾನವದ್ಯೋತಕವಾಗಿರುವ ಭಾಷೆ ಮಾನವ ಬುದ್ಧಿಯ ಕೂಸಾದರೂ ಅದು ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿಶಿಷ್ಟರೂಪಗಳನ್ನು ಪಡೆದು ನಾನಾ ಭಾಷೆಗಳಾಗಿ ಕವಲೊಡೆದು ಬೆಳೆಯುತ್ತದೆ. ವಸ್ತುಸ್ಥಿತಿ ಹೀಗಿರುವಾಗ ನಮ್ಮ ಮಕ್ಕಳಿಗೆ ಎಷ್ಟು ಭಾಷೆಗಳನ್ನು ಕಲಿಸಬೇಕೆಂಬ ಪ್ರಶ್ನೆ ಹೆತ್ತವರಲ್ಲಿ ಹಾಗೂ ಶಿಕ್ಷಕರಲ್ಲಿ ತಲೆದೋರುವುದು ಅಂತೆಯೇ ಅವರ ತಲೆ ಕೆಡಿಸುವುದೂ ಸಹಜ. ನಮ್ಮ ಸುತ್ತಮುತ್ತಲು ಈ ಭಾಷಾ ಸಮಸ್ಯೆ ದೈತ್ಯಾಕಾರದಿಂದ ಬೆಳೆದಿರುವಾಗ ಅದನ್ನು ಸಮರ್ಥವಾಗಿ ಎದುರಿಸಬೇಕಾದ ನಾವು ಮೊದಲ ಹಂತದಲ್ಲಿ ಕೆಲವು ನೇರ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಭಾಷೆ ಎಂದರೇನು? ಅದು ಯಾತಕ್ಕಾಗಿ? ಪ್ರಾದೇಶಿಕ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಮಕ್ಕಳ ವಿಕಾಸಕ್ಕೆ ಭದ್ರ ಬುನಾದಿಯನ್ನು ನಾವು ಕಲ್ಪಿಸಿಕೊಡಬೇಕಾದರೆ ಎಷ್ಟು ಮತ್ತು ಯಾವ ಭಾಷೆಗಳನ್ನು ಅವರಿಗೆ ಕಲಿಸುವ ಅವಕಾಶವನ್ನು ನಾವು ಒದಗಿಸಬೇಕು ? ಈ ವಿಷಯಗಳನ್ನು ಕುರಿತು ಚರ್ಚಿಸಿ ನಿರ್ಣಯವನ್ನು ತೆಗೆದುಕೊಳ್ಳುವಲ್ಲಿ ಕೇವಲ ಸಾಂಸ್ಕೃತಿಕ, ಭಾವನಾಪರ, ಮತೀಯ, ರಾಜಕೀಯ ದೃಷ್ಟಿಕೋನವನ್ನಿಟ್ಟುಕೊಳ್ಳಬೇಕೆ? ಅಥವಾ ಒಂದು ಸಮಗ್ರ ಪ್ರಯೋಜನಕಾರಿ ದೃಷ್ಟಿ ಕೋನ (Practical Persepective) ಇಟ್ಟುಕೊಳ್ಳಬೇಕೆ? ಎಂಬಿತ್ಯಾದಿ ಪ್ರಶ್ನೆಗಳು ಹಾಗೂ ಅವುಗಳಿಗೆ ಕೊಡಬೇಕಾದ ಉತ್ತರಗಳು ಅವಶ್ಯಕಗಳೆಂದು ನನ್ನ ವೈಯಕ್ತಿಕ ಅಭಿಪ್ರಾಯ. ಈ ಪ್ರಶ್ನೆಗಳಿಗೆ ಉತ್ತರಗಳು ಎಲ್ಲರ ಮನಸ್ಸಿನಿಂದ ಏಕರೀತಿಯಾಗಿ ಬರಲಾರವು. ಆದರೆ, ಈ ಬಗೆಯ ಪ್ರಶ್ನೆಗಳನ್ನು ಮಾತ್ರ ನಾವೆಲ್ಲರೂ ಕೇಳಲೇಬೇಕಾಗುತ್ತದೆ: ಇಲ್ಲವಾದರೆ ಈ ಸಮಸ್ಯೆಯ ಪರಿಹಾರ ಕೇವಲ ಭಾವೋದ್ರೇಕತೆಯ ಪರಿಣಾಮವಾಗಬಹುದೇ ಹೊರತು ಚಿಂತನಪರ ಹಾಗೂ ಪರಿಣಾಮಕಾರಿಯಾದ ಪರಿಹಾರವಾಗಲಾರದೆಂದೇ ನನ್ನ ವಿನಮ್ರ ಭಾವನೆ.

ಆಧುನಿಕ ಸಂಪರ್ಕಸಾಧನೆಗಳಿಂದಾಗಿ ಪ್ರಪಂಚದ ಉದ್ದಗಲಗಳು ಸಂಕುಚಿತಗೊಂಡು ಅದೊಂದು ವಿಶ್ವ–ಹಳ್ಳಿ (Global village) ಆಗಿ ಬಿಟ್ಟಿದೆ. ಇದರಿಂದಾಗಿ

* ಧಾರವಾಡ ಆಕಾಶವಾಣಿಯ ಕೃಪೆ.

ಸಾಂಸ್ಕೃತಿಕ ಪ್ರಾಣಿಯಾಗಿರುವ ಮಾನವನಿಗೆ ಸಾಮಾಜಿಕ ಸಂಪರ್ಕ ಅನಿವಾರ್ಯವಾಗ ತೊಡಗಿದೆ. ಭಾಷೆ ಮಾನವ ರಚಿತ ಮತ್ತು ಮಾನವಸೀಮಿತ ಹಾಗೂ ಮೂಲಭೂತ ಅಂತೆಯೇ ಅಮೂಲ್ಯವಾದ ಒಂದು ಸಂಪರ್ಕಸಾಧನ.

ಭಾಷೆಯೆಂಬುದು ಸಂಪರ್ಕ ಮಟ್ಟದಲ್ಲಿ ಗುರಿಯಲ್ಲ: ಅದು ಕೇವಲ ಸಾಧನ ವೆಂಬುದು ಅರಂಭದಲ್ಲಿಯೇ ನೆನಪಿಸಿಕೊಳ್ಳುವುದು ಅತ್ಯಗತ್ಯ. ಸಾಧನಗಳನ್ನು ಬಳಸಿ ಕೊಳ್ಳುವಾಗ ಅದರ ಉಪಯುಕ್ತತೆಯನ್ನು ಕಂಡುಕೊಳ್ಳಬೇಕೆ ವಿನಹ ಇನ್ನಿತರ ವಿಷಯ ಗಳನ್ನಲ್ಲ.

ವೈಜ್ಞಾನಿಕವಾಗಿ ಭಾಷೆಯಾಗಿ ಗಮನಿಸಿದಾಗ ಭಾಷೆ ಮಾನವನಿರ್ಮಿತವಾಗಿದೆ. ಮಾನವ ತನ್ನ ಬೇಡಿಕೆ ನೀಡಿಕೆಗಳನ್ನು ಪೂರೈಸುವುದಕ್ಕೋಸ್ಕರ ಪರರ ಸಂಪರ್ಕ ಬೆಳೆಯಿ ಸುವ ಸಂದರ್ಭದಲ್ಲಿ ನಿರ್ಮಿಸಿಕೊಂಡ ಸಾಧನವೇ ಭಾಷೆಯಾದುದರಿಂದ ಯಾವ ಭಾಷೆಯೂ ದೇವಭಾಷೆಯಲ್ಲ. 'ದೇವಭಾಷೆ'ಯೆಂಬ ಪೌರಾಣಿಕ ಕಲ್ಪನೆಯಿಂದ ಮೇಲು ಕೀಳೆಂಬ ಭಾವನೆ ಹುಟ್ಟಿ ಸಮಾಜದಲ್ಲಿ ಅಲ್ಲೋಲಕಲ್ಲೋಲತೆಯುಂಟಾಗಿದೆಯೇ ವಿನಹ ಅದರಿಂದ ಇನ್ನಾವ ತರಹದ ಉಪಯುಕ್ತತೆಯೂ ಕಂಡುಬಂದಿಲ್ಲ. ಈ ಸಂದರ್ಭದಲ್ಲಿ ಭಾಷೆಯೆಂದರೇನು? ಎಂಬ ಮೂಲಭೂತ ಪ್ರಶ್ನೆ ನಿಮ್ಮಲ್ಲಿ ಹುಟ್ಟಬಹುದು.

ಸ್ಥೂಲವಾಗಿ ಹಾಗೂ ವೈಜ್ಞಾನಿಕವಾಗಿ ಹೇಳುವುದಾದರೆ "ಸಾಮಾಜಿಕ ಜೀವನ ಕ್ಕಾಗಿ ಪರಸ್ಪರ ಬಳಸುವ ಯಾದೃಚ್ಛಿಕ, ಉಚ್ಚರಣಾತ್ಮಕ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ" ಪ್ರಸ್ತುತ ವ್ಯಾಖ್ಯೆಯನ್ನು ಸೂಚಿಸಿದವರು ಬ್ಲೊಕ್ ಮತ್ತು ಟ್ರೇಗರ್ ಇವರುಗಳು. ಸಾಮಾನ್ಯವಾಗಿ ಹೇಳುವುದಾದರೆ ಮನುಷ್ಯ ತನ್ನ ಮನಸ್ಸಿನಲ್ಲಿರುವ ಆಲೋಚನೆ ಭಾವನೆ ಗಳನ್ನು ಮೌಖಿಕ ಸಂಕೇತಗಳ ಮೂಲಕ ಪರರಿಗೆ ತಿಳಿಸುತ್ತಾನೆ. ಅದೇ ಭಾಷೆ. ಮಾನವ ತನ್ನ ಬೆಳವಣಿಗೆಯ ಇತಿಹಾಸದಲ್ಲಿ ತನ್ನ ಭಾಷೆಗೆ ಲಿಪಿ ರೂಪವನ್ನು ಕೊಟ್ಟಿರುವುದನ್ನು ನಾವು ಸ್ಮರಿಸಿಕೊಳ್ಳಬಹುದು; ಆದರೆ, ಲಿಪಿ ಭಾಷೆಯ ಪ್ರಮುಖಾಂಗವಲ್ಲ. ಲಿಪಿಯಿಲ್ಲದ ಭಾಷೆಗಳು ಸಹಸ್ರಾರು ಸಂಖ್ಯೆಯಲ್ಲಿವೆ. ಆದರೆ ಭಾಷೆಯಿಲ್ಲದೆ ಲಿಪಿಯಿರುವುದು ಅಸಾಧ್ಯ ಹಾಗೂ ಅರ್ಥಹೀನ.

ಸಮಾಜದ ಅಂಗವಾಗಿ ಸಂಸ್ಕೃತಿಯ ಪ್ರತೀಕವಾಗಿ ಹುಟ್ಟುವ ಭಾಷೆ ಆ ಸಮಾಜಕ್ಕೆ ಹಾಗೂ ಸಮಾಜದಲ್ಲಿ ಸಂಪರ್ಕ–ವಾಹನವಾಗಿರುವುದರಿಂದ ಅದನ್ನು ಚೆನ್ನಾಗಿ ಕಲಿತುಕೊಳ್ಳುವುದು ಅವಶ್ಯಕ. ಹೀಗೆ ಕನ್ನಡನಾಡಿನಲ್ಲಿ ಕನ್ನಡ ಸಂಸ್ಕೃತಿಯಲ್ಲಿ ಬೆಳೆಯಲು ಹಾಗೂ ಮುಂದೆ ಸಾಗಲು ಕನ್ನಡದ ಕಲಿಕೆ ಅತ್ಯಗತ್ಯ. ಆದರೆ ಯಾವ ಕನ್ನಡ ? ಹವ್ಯಕ ಕನ್ನಡವೆ? ಕುರುಬರ ಕನ್ನಡವೆ? ಮೈಸೂರು–ಬೆಂಗಳೂರು ಕನ್ನಡವೇ? ಧಾರವಾಡ–ಗುಲಬರ್ಗಾ ಕಡೆಯ ಗಂಡುಮೆಟ್ಟಿನ ಕನ್ನಡವೇ? ಇದೊಂದು ಪ್ರಶ್ನೆ.

ಯಾವ ಕನ್ನಡ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮನ್ನಣೆ ಪಡೆದಿದೆ, ಆ ಕನ್ನಡವನ್ನೇ ಕನ್ನಡಗಳಿಂದ ಆರಿಸಬೇಕೆಂಬುದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಕನ್ನಡವನ್ನೇ ಪ್ರಮಾಣ (Standard) ಕನ್ನಡ ಎಂದು ಕರೆಯುತ್ತಾರೆ. ಅದು ಒಂದು ಕಾಲದಲ್ಲಿ ಪುಲಿಗೆರೆಯ ಕನ್ನಡವಾಗಿರಬಹುದು ಇನ್ನೊಂದು ಕಾಲದಲ್ಲಿ ಬೆಂಗಳೂರು–ಮೈಸೂರು ಕನ್ನಡವಾಗಿರಬಹುದು. ಆ ವಿಷಯ ಬೇರೆ.

ಕನ್ನಡನಾಡಿನ ಅವಿಭಾಜ್ಯಾಂಗವಾಗಿ ಬೆಳೆಯುವ ತುಳುವರ, ಕೊಂಕಣಿಗರ, ತಮಿಳರ ಇತ್ಯಾದಿ ವರ್ಗದವರ ಗತಿ ಏನು ? ಅವರ ಮಾತೃಭಾಷೆಗಳಿಗೆ ಸ್ಥಾನವಿಲ್ಲವೆ ? ಸ್ಥಾನವಿದೆ; ಆದರೆ ಕನ್ನಡ ಸಮಾಜದಲ್ಲಿ ಕನ್ನಡದ ಸ್ಥಾನ ಅವು ಉರುಳಿಸುವಂತಿಲ್ಲ. ಅವುಗಳಲ್ಲಿ ಕನ್ನಡದಷ್ಟೇ ಪ್ರಭುತ್ವಗಳಿಸಬೇಕಾಗಿಲ್ಲ, ಗಳಿಸಿದರೆ ಉತ್ತಮ; ಗಳಿಸದಿದ್ದರೆ ಸಾಮಾಜಿಕ ಸಂಪರ್ಕದ ಮೇಲಿನ ಹಂತದಲ್ಲಿ ಅಷ್ಟೊಂದು ತೊಂದರೆಯಾಗಲಾರದು. ಒಟ್ಟಿನಲ್ಲಿ ಭಾಷಾಧ್ಯಯನ ದೃಷ್ಟಿಯಿಂದ ಜನಪದ ಭಾಷೆ (Folk–language)ಗಳಿಗಿಂತ ಪ್ರಮಾಣ ಭಾಷೆ (Standard language)ಗೆ ಪ್ರಾಧಾನ್ಯ ಸಿಗಬೇಕೆಂಬುದೇ ಇಲ್ಲಿ ತಿಳಿದುಕೊಳ್ಳಬೇಕಾದ ವಿಷಯ.

ಪ್ರಮಾಣಭಾಷೆಯೇ ರಾಜ್ಯಭಾಷೆ (State language) ಆಗಿರುವುದಾದರೆ ಅದು ಕಡ್ಡಾಯವಾಗಿ ಕಲಿಸಲೇಬೇಕಾದ ಭಾಷೆಯೆಂದು ಒತ್ತಿಹೇಳಬೇಕಾಗುತ್ತದೆ. ಸಂಪರ್ಕ ಮಟ್ಟದಲ್ಲಿ ರಾಜ್ಯಭಾಷೆ ಅನಿವಾರ್ಯವಾಗಿರುವುದೇ ಅದಕ್ಕೆ ಕಾರಣ. ರಾಜ್ಯಭಾಷೆಯಿಲ್ಲದ ಜನಪದ ಭಾಷೆಗಳನ್ನು ಸಾಮಾಜಿಕ ಪರಿಸರದಿಂದ ಸಹಜವಾಗಿ ತಿಳಿದುಕೊಳ್ಳಬಹುದು. ಆದರೆ ರಾಜ್ಯಭಾಷೆಯನ್ನು ಸ್ಪಷ್ಟವಾದ ರೀತಿಯಲ್ಲಿ ವೈಜ್ಞಾನಿಕವಾಗಿ ಕಲಿಸಬೇಕೆಂಬುದು ವ್ಯಾವಹಾರಿಕ ಸತ್ಯ. ಹೀಗೆ ಒಂದು ರಾಜ್ಯದಲ್ಲಿ ಕೊಂಕಣಿ, ತುಳು, ಹವ್ಯಕ ಇತ್ಯಾದಿ ಭಾಷೆಗಳೊಡನೆ ಕನ್ನಡ ಜನಪದ ಭಾಷೆಗಳು ಇದ್ದುಕೊಂಡು ಅಲ್ಲಿ ಪ್ರಮಾಣಕನ್ನಡವೇ ರಾಜ್ಯಭಾಷೆಯೆನಿಸಿಕೊಂಡರೆ, ಆ ರಾಜ್ಯದಲ್ಲಿಯ ಮಕ್ಕಳಿಗೆ ನಾವು ಕಡ್ಡಾಯವಾಗಿ ಕಲಿಸಬೇಕಾದ ಭಾಷೆಯೆಂದರೆ ಪ್ರಮಾಣ ಕನ್ನಡವೇ ಹೊರತು ಇತರ ಜನಪದ ಭಾಷೆಗಳಲ್ಲ; ಅವುಗಳನ್ನು ಐಚ್ಛಿಕವಾಗಿ ಕಲಿಸಬಹುದೇನೋ.

ರಾಜ್ಯಭಾಷೆಯೊಂದಿಗೆ ರಾಷ್ಟ್ರಭಾಷೆ (National language) ಯೊಂದು ಬೇಡವೇ ? ಇದು ಮಹತ್ತರವಾದ ಪ್ರಶ್ನೆ. ಒಂದು ದೇಶದ ಸಂಸ್ಕೃತಿಯ ಪ್ರತೀಕವಾಗಿ ಹುಟ್ಟಿ ಬೆಳೆದ ರಾಷ್ಟ್ರಭಾಷೆಯೊಂದು ಅಸ್ತಿತ್ವದಲ್ಲಿದ್ದರೆ ಅದಕ್ಕೆ ಭಾಷೆಯ ಕಲಿಕೆಯಲ್ಲಿ ಪ್ರಾಧಾನ್ಯತೆಯನ್ನು ಕೊಡಲೇಬೇಕಾಗುತ್ತದೆಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ರಷ್ಯಕ್ಕೆ ರಷ್ಯನ್; ಚೀನಕ್ಕೆ ಚೀನ; ಜಪಾನಕ್ಕೆ ಜಪಾನಿ; ಶ್ರೀಲಂಕಾಕ್ಕೆ ಸಿಂಹಳೀ; ಪಾಕಿಸ್ತಾನಕ್ಕೆ ಪಾಕಿಸ್ತಾನೀ ಭಾಷೆಗಳು ಆಯಾಯ ಸಂಸ್ಕೃತಿಗಳ ಪ್ರತೀಕ

ಗಳೆಂಬಂತೆ ತಾವಾಗಿಯೇ ತಲೆಯೆತ್ತಿ ನಿಂತಿರುವಾಗ ಅವರು ಅವುಗಳನ್ನು ರಾಷ್ಟ್ರ ಭಾಷೆಗಳೆಂದು ಕಲಿಯಬೇಕಾಗುತ್ತದೆ. ಇದಕ್ಕೋಸ್ಕರ ಒತ್ತಾಯ ತರಬೇಕಾಗುವ ಪ್ರಸಂಗ ಬರುವುದಿಲ್ಲ; ಬಂದರೂ ಬಹು ಕಡಿಮೆ. ಆದರೆ ಭಾರತದಲ್ಲಿ ? ಭಾರತೀಯ ಭಾಷೆಗಳಲ್ಲಿ ಯಾವ ಭಾಷೆಯೂ ಸರ್ವಮಾನ್ಯವಾಗಿಲ್ಲ; ಹಾಗಾಗುವುದು ಸ್ವಭಾವತಃ ಕಠಿಣ. ಒಂದು ವೇಳೆ ಕಾನೂನಿನ ಮುಖಾಂತರ ಅದನ್ನು ಹೇರಿಸಿದರೂ ಆ ಭಾಷೆಯ ಬಗೆಗೆ ಗೌರವ ಹಾಗೂ ಅನ್ಯೋನ್ಯತೆ ಹುಟ್ಟುವುದು ಅಸ್ವಾಭಾವಿಕ. ಹೀಗೆ ಸಾಂಸ್ಕೃತಿಕ ವಾಗಿ, ಸಹಜವಾಗಿ, ಭಾರತದಲ್ಲಿ ರಾಷ್ಟ್ರಭಾಷೆ ಬೆಳೆಯದಿರುವುದು ನಮ್ಮ ದುರ್ದೈವ ಅಥವಾ ನಮ್ಮ ಮುಕ್ತ ಸಂಸ್ಕೃತಿಯ ಪ್ರತೀಕ.

ರಾಜ್ಯಮಟ್ಟದಲ್ಲಿ ರಾಜ್ಯಭಾಷೆಯ ಅಗತ್ಯವಿದ್ದಂತೆ ಅಂತರ್‌ರಾಜ್ಯ ಹಾಗೂ ಅಂತಾ ರಾಷ್ಟ್ರೀಯ ಮಟ್ಟದ ಸಂಪರ್ಕಕ್ಕೋಸ್ಕರ ಬೇರೊಂದು ಭಾಷೆಯ ಅಗತ್ಯ ಕರ್ನಾಟಕ ರಾಜ್ಯದ ಮಟ್ಟಕ್ಕಂತೂ ಇದ್ದೇ ಇದೆ. ಕನ್ನಡಿಗ ಕೇವಲ ಕನ್ನಡವನ್ನು ಕಲಿತು ಹಾಯಾಗಿ ಕುಳಿತರೆ ಆತ ಕೂಪಮಂಡೂಕನೇ ಸರಿ. "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಕನ್ನಡಿಗರ ಲಕ್ಷಣವಾಗಿದ್ದರೂ ಇಂದಿನ ಕಾಲದಲ್ಲಿ ಕಾವ್ಯ ಹಾಗೂ ಇತರ ಸಂದರ್ಭಗಳಲ್ಲಿ ಓದಬೇಕಾದುದು, ಕಲಿಯಬೇಕಾದುದು ಬಹಳಷ್ಟು ಇದೆ. ಜಾಗತಿಕ ಮಟ್ಟದಲ್ಲಿ ಸದ್ಯದ ಮಟ್ಟಿಗೆ ಇಂಗ್ಲೀಷನ್ನು ಸಂಪರ್ಕ ಭಾಷೆಯನ್ನಾಗಿ ಬಳಸುವುದು ಅನಿವಾರ್ಯ. ಶತಮಾನಗಳ ಕಾಲ ಆ ಭಾಷೆಯ ಆಡಳಿತದಲ್ಲಿದ್ದ ಭಾರತೀಯರಿಗೆ ಹಾಗೂ ಕನ್ನಡಿಗರಿಗೆ, ಮುಕ್ತ ಮನಸ್ಸಿದ್ದಲ್ಲಿ ಅದು ಅಷ್ಟೊಂದು ಕಠಿಣವೂ ಆಗಲಾರದು; ಆಗಬಾರದು.

ಕನ್ನಡವನ್ನೇ ಕುರಿತು ಭಾಷಾವೈಜ್ಞಾನಿಕ ಪುಸ್ತಕಗಳು ಹೇರಳವಾಗಿ ಸಿಗುವುದು ನಮಗೆ ಇಂಗ್ಲೀಷಿನಲ್ಲಿಯೇ. ದೇಶ-ವಿದೇಶಗಳಲ್ಲಿ ಎಲ್ಲ ಭಾಷೆಗಳಿಗಿಂತಲೂ ಹೆಚ್ಚಾಗಿ ಇಂಗ್ಲೀಷಿನ ಅರಿವೇ ಜಾಸ್ತಿ; ಕಾರಣ ಅದೇ ಇಂದಿನ ಲಿಂಗ್ವಾ ಫ್ರಾಂಕ, ಅರ್ಥಾತ್ ಜಗತ್ತಿನ ಸಂಪರ್ಕ ಭಾಷೆ. ಸ್ವಭಾವಾಭಿಮಾನದಿಂದ ಈ ಭಾಷೆಯ ಅಭ್ಯಾಸವನ್ನು ಅಲ್ಲಗಳೆಯುವುದು ಜ್ಞಾನದ್ವಾರವನ್ನು ಮುಚ್ಚಿದಂತೆ. ಆದುದರಿಂದ ಮಕ್ಕಳಿಗೆ ರಾಜ್ಯ ಭಾಷೆಯ ಜೊತೆಗೆ ಅಂತರ್‌ರಾಷ್ಟ್ರೀಯ ಸಂಪರ್ಕ ಭಾಷೆಯನ್ನು, ಸದ್ಯದ ನಮ್ಮ ಪರಿಸ್ಥಿತಿಯಲ್ಲಿ ಇಂಗ್ಲೀಷನ್ನು, ಕಲಿಸಲೇ ಬೇಕಾಗುತ್ತದೆ.

ಇಂಗ್ಲೀಷನ್ನು ಕಲಿಸುವುದೆಂದರೆ ಶೇಕ್ಸಪಿಯರ, ಮಿಲ್ಟನ್, ಗೋಲ್ಡಸ್ಮಿಥರನ್ನು ಪರಿಚಯಿಸುವುದಾಗಲಿ, ಆಂಗ್ಲ ಸಾಹಿತ್ಯವನ್ನು ದಿಢೀರನೆ ಮಕ್ಕಳ ಅಭ್ಯಾಸಪಟ್ಟಿಗೆ ಸೇರಿಸುವುದೆಂಬುದಾಗಲಿ ಅರ್ಥವಲ್ಲ. ದಯವಿಟ್ಟು ಶಿಕ್ಷಣತಜ್ಞರು ಆಂಗ್ಲಸಾಹಿತ್ಯದ ಭಾರವನ್ನು ನಮ್ಮ ಮಕ್ಕಳಿಂದ ಆದಷ್ಟು ತೀವ್ರವಾಗಿ ತಪ್ಪಿಸಿ ತಮ್ಮ ತಜ್ಞತೆಯನ್ನು ಜನತೆಗೆ ತೋರಿಸಬೇಕು. ಇಲ್ಲವಾದರೆ ಈ ತರಹದ ಸಾಹಿತ್ಯಿಕ ದಬ್ಬಾಳಿಕೆಯ ವಿರೋಧ ಬಂಡಾಯವೇಳುವ ಪ್ರಸಂಗ ತೀವ್ರದಲ್ಲಿಯೇ ಬರಬಹುದು.

ಅನ್ಯಭಾಷೆಗಳನ್ನು ಅಥವಾ ದ್ವಿತೀಯ ಭಾಷೆಗಳನ್ನು ಸಮಗ್ರವಾಗಿ ಹಾಗೂ ಕೆಲವೇ ಕಾಲದೊಳಗೆ ಕಲಿಸುವ ವಿಧಾನಗಳು ಭಾಷಾವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಮಕ್ಕಳ ಶಿಕ್ಷಣಕ್ಕೆ ಸಂಬಂಧ ಪಟ್ಟ ಅಧಿಕಾರಿಗಳು ಇಂಗ್ಲೀಷನ್ನು ಕಿರಿಯ ಶಾಲೆಯಿಂದ ಕಾಲೇಜಿನವರೆಗೆ ಕಲಿಸುವವರಲ್ಲಿಯಾದರೂ ಭಾಷಾವಿಜ್ಞಾನಿಗಳ ಸಹಾಯ ಪಡೆದು ಇಂಗ್ಲೀಷ ಭಾಷೆಯನ್ನು ಕಲಿಸುವಂತಹ ಪಠ್ಯಪುಸ್ತಕಗಳನ್ನು ರಚಿಸುವುದು ಅನಿವಾರ್ಯ; ಅಂತೆಯೇ ಅಧ್ಯಾಪಕರಿಗೂ, ಬೇಸಿಗೆ ಶಿಬಿರಾದಿ ಸವಲತ್ತುಗಳನ್ನು ಏರ್ಪಡಿಸಿ, ಯೋಗ್ಯ ತರಬೇತಿ ನೀಡಿದರೆ ನಮ್ಮ ಮಕ್ಕಳಿಗೆ ದ್ವಿತೀಯ ಭಾಷೆಯನ್ನು ಕರತಲಾಮಲಕವಾಗಿ ಕಲಿಯುವುದು ಕಷ್ಟಕರವಾದ ಕಡಲೆಯಾಗದು. ಭಾಷಾ ಅಧ್ಯಾಪಕ ಅಧ್ಯಯನಗಳ ವಿಧಾನಗಳನ್ನು ಕುರಿತು ಹೆಚ್ಚು ಹೇಳುವುದು ಇಲ್ಲಿ ಅಪ್ರಸ್ತುತ; ಆದರೆ ಇಂದಿನ ಪರಿಸರದಲ್ಲಿ ರಾಜ್ಯಭಾಷೆಯೊಂದಿಗೆ ಇಂಗ್ಲೀಷಿನ ಜ್ಞಾನ ನಮ್ಮ ಮಕ್ಕಳಿಗೆ ಕೊಡದಿದ್ದರೆ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಅವರನ್ನು ಹೆಳವರನ್ನಾಗಿ ಮಾಡಿದ ಕೀರ್ತಿ ಅವರ ಹೆತ್ತವರಿಗೆಯೇ ಪ್ರಪ್ರಥಮವಾಗಿ ಸಲ್ಲತಕ್ಕದ್ದು ಎಂದು ಹೇಳುವುದು ಖಂಡಿತವಾಗಿಯೂ ಪ್ರಸ್ತುತವೇ ಸರಿ.

ರಾಜ್ಯದಲ್ಲಿ ಬಹುಸಂಖ್ಯಾತರ ಭಾಷೆ ಹೇಗೆ ಸಂಪರ್ಕದ ವಿಷಯದಲ್ಲಿ ಗೌರವವನ್ನು ಪಡೆದುಕೊಳ್ಳುತ್ತದೆಯೋ ಹಾಗೆಯೇ ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಇಂತಹ ಗೌರವಾನ್ವಿತ ಭಾಷೆಗಳ ಅಧ್ಯಯನ ಮಕ್ಕಳಿಗೆ ಅತ್ಯಗತ್ಯ. ಈ ಹಿನ್ನೆಲೆಯಲ್ಲಿ ಎಷ್ಟು ಭಾಷೆಗಳು ರಾಜ್ಯಭಾಷೆಗಳಾಗಿ ಮನ್ನಣೆಯನ್ನು ಪಡೆದುಕೊಂಡಿವೆಯೋ ಅಷ್ಟು ಭಾಷೆಗಳನ್ನು ನಮ್ಮ ಮಕ್ಕಳು ಕಲಿಯಬೇಕಾದುದೇ. ಇಲ್ಲವಾದರೆ ಇಂದಿನ ಪೈಪೋಟಿ-ಸಮಾಜದಲ್ಲಿ ಅವರಿಗೆ ಸ್ಥಾನಮಾನವೇ ಇಲ್ಲದಂತಾಗುವುದು. ಈ ವಿಷಯದಲ್ಲಿ ದುರಭಿಮಾನ ಹಾಗೂ ಶುಷ್ಕ ಅಭಿಮಾನಕ್ಕಿಂತ ವ್ಯಾವಹಾರಿಕ ದೃಷ್ಟಿಯನ್ನಿಟ್ಟುಕೊಳ್ಳುವುದೇ ಹೆಚ್ಚು ಯೋಗ್ಯವೆಂದು ನನ್ನ ಅನಿಸಿಕೆ.

ಆಡಳಿತ, ವಾಣಿಜ್ಯ, ನ್ಯಾಯಾಲಯ, ಶಿಕ್ಷಣ, ಆಕಾಶವಾಣಿ, ಪತ್ರಿಕೋದ್ಯಮ, ವಿಶ್ವವಿದ್ಯಾಲಯ ಇತ್ಯಾದಿ ಹಂತಗಳಲ್ಲಿ ಯಾವ ಭಾಷೆಗೆ ರಾಜ್ಯ, ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟಗಳಲ್ಲಿ ಯಾವ ಭಾಷೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಇದೆ ?–ಎಂಬ ವಿಚಾರವನ್ನು ನಾವು ಗಮನಿಸಬೇಕು. ಭಾರತದ ಪರಿಸ್ಥಿತಿಯನ್ನು ಗಮನಿಸಿದಾಗ ಬಹುಶಃ ರಾಜ್ಯಭಾಷೆಗಳಿಗೆ ಆಯಾಯ ರಾಜ್ಯದಲ್ಲಿ ಅಗ್ರಸ್ಥಾನ ಸಂದರೆ ದ್ವಿತೀಯ ಸ್ಥಾನ ಹಿಂದಿ ಹಾಗೂ ಇತರ ರಾಜ್ಯಭಾಷೆಗಳಿಗಿಂತ ಇಂಗ್ಲೀಷಿಗೆ ಸಲ್ಲುತ್ತದೆಂಬುದು ದಕ್ಷಿಣ ಭಾರತದ ಮಟ್ಟಿಗೆ ಸತ್ಯವೇ ಸರಿ. ವಸ್ತುಸ್ಥಿತಿ ಹೀಗಿರುವಾಗ ದಕ್ಷಿಣ ಭಾರತದ ಮಕ್ಕಳು, ಆದ್ದರಿಂದ ಕರ್ನಾಟಕ ರಾಜ್ಯದ ಮಕ್ಕಳು, ತನ್ನ ರಾಜ್ಯಭಾಷೆಯೊಂದಿಗೆ ಇಂಗ್ಲೀಷನ್ನು ಕಲಿತುಕೊಳ್ಳಬೇಕಾಗುತ್ತದೆ. ಹೀಗೆ ಕೊನೆಯದಾಗಿ ಹಾಗೂ ಸಂಕ್ಷಿಪ್ತವಾಗಿ ಹೇಳುವುದಾದರೆ ದ್ವಿಭಾಷಿಕತೆ ನಮ್ಮ ಮಕ್ಕಳಿಗೆ ಅನಿವಾರ್ಯವೆಂದು ಹೇಳಬೇಕಾಗುತ್ತದೆ.

ಆಧಾರ ಸೂಚಿ

Fishman, Joshua A.

1974. **Advances in Language Planning,**
Mouton–The Hague, Paris

Hall, Robert A. (Jr.).

1969. **Introductory Linguistics,**
Delhi, Patna, Varanasi : Motilal Banarasidass,

Hill, Archibald. A. (Ed.)

1970. **Linguistics,**
Madras : Higginbothams (P) Ltd.

ವಿಲ್ಯಂ ಮಾಡ್ತ.

1976. **ಅನ್ಯಭಾಷಾಬೋಧೆ,**
ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ

ಗದಗ-ಬೆಟಗೇರಿಯ ಶಾಸನಗಳು

● ಎಸ್. ಕೆ. ಕೊಪ್ಪಾ

ಹದಿನೈದುನೂರು ವರ್ಷಗಳ ಇತಿಹಾಸವನ್ನು ಹೊಂದಿದ ಕನ್ನಡ ಶಾಸನಗಳ ಶಾಸ್ತ್ರೀಯ ಅಧ್ಯಯನಕ್ಕೆ ಪ್ರದೇಶ, ಭಾಷೆ. ರಾಜವಂಶ, ವಸ್ತು, ವಿಷಯ ಆಧಾರಿತ ವರ್ಗೀಕರಣ ಮಾಡಲಾಗುತ್ತಿದೆ. ಪ್ರಾದೇಶಿಕ ವರ್ಗೀಕರಣದ ಫಲವಾಗಿ ಕರ್ನಾಟಕದಲ್ಲಿ ಎಪಿಗ್ರಾಫಿಯ ಕರ್ನಾಟಿಕದ ಸಂಪುಟಗಳು ಹೊರಬಂದುವು. ಉತ್ತರ ಕರ್ನಾಟಕದಲ್ಲಿ ಈ ಕೊರತೆಯನ್ನು ಗಮನಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ, ತನ್ನ ಯೋಜನೆಯ ಅಂಗವಾಗಿ 'ಧಾರವಾಡ ತಾಲೂಕಿನ ಶಾಸನಗಳು' ಎಂಬ ಪ್ರಥಮ ಸಂಪುಟವನ್ನು ಹೊರತಂದಿದೆ. ಹೀಗೆ ಒಂದು ಪ್ರದೇಶದಲ್ಲಿ ದೊರೆತ ಶಾಸನಗಳ ರಾಜಮನೆತನಗಳ, ಬೇರೆ ಬೇರೆ ಕಾಲದ ಭಾಷೆಯ ಉದ್ದೇಶ, ಸ್ವರೂಪದಿಂದಾಗಿ ಸಂಶೋಧಕರ ಒಂದು ಸಮಗ್ರ ಅಧ್ಯಯನಕ್ಕೆ ಆತಂಕಕಾರಿಯೆನಿಸಬಹುದಾದರೂ; ಆಯಾ ಪ್ರದೇಶಗಳ ಇತಿಹಾಸ ಮತ್ತು ಸಂಸ್ಕೃತಿಗಳ ಸಾಮಾನ್ಯ ತಿಳುವಳಿಕೆಗೆ ತುಂಬ ಅನುಕೂಲ ಮಾಡಿಕೊಡುತ್ತವೆ. ಪ್ರಸ್ತುತ ಗದಗ-ಬೆಟಗೇರಿ ಶಾಸನಗಳು ಎಂಬ ಲೇಖನ ಇಂಥ ವಿವೇಚನೆಗೆ ಸೇರಿದ್ದಾಗಿದೆ.

ಇಂದು ಸಾಮಾನ್ಯವಾಗಿ ಗದಗ–ಬೆಟಗೇರಿ ಎಂದು ಕರೆಯಲ್ಪಡುವ ಗದಗು ಧಾರವಾಡ ಜಿಲ್ಲೆಗೆ ಸೇರಿದ ಪ್ರಮುಖ ತಾಲ್ಲೂಕುಗಳಲ್ಲೊಂದು. ಧಾರವಾಡದಿಂದ ಪೂರ್ವಕ್ಕೆ ಸಮಾರು ೫೦ ಮೈಲು ಅಂತರ ಮೇಲಿರುವ ಗದಗ-ಬೇಟಗೇರಿ ಉತ್ತರ ರೇಖಾಂಶ ೧೫°, ೨೫–೨೬' ಪೂರ್ವ ಅಕ್ಷಾಂಶ ೭೫°, ೩೫–೪೨'ವನ್ನು ಹೊಂದಿದೆ. ಗದುಗಿನಿಂದ ಸುಮಾರು ಒಂದು ಮೈಲು ಅಂತರದಲ್ಲಿರುವ ಬೆಟಗೇರಿ ಮೊದಲು ಪ್ರತ್ಯೇಕ ಸ್ಥಳವಾಗಿದ್ದು; ೧೯೬೦–೬೧ ರಿಂದ ಒಂದೇ ನಗರಸಭೆ ಆಡಳಿತಕ್ಕೆ ಒಳಪಟ್ಟಿವೆ.[1] ಪ್ರಾಚೀನ ಕಾಲದಲ್ಲಿ ಗದಗ–ಬೆಟಗೇರಿ ಪ್ರಮುಖ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು ಎನ್ನುವದಕ್ಕೆ ಅಲ್ಲಿಯ ಸುಮಾರು ೫೦ ಶಾಸನಗಳು ಸಾಕ್ಷಿಯನ್ನೊದಗಿಸುತ್ತವೆ. ಮೊದಲು

---

1) Bombay State Gazetteer. p. 792

ಗದಗ-ಬೆಟಗೇರಿ ಬೆಳ್ವಲ ೩೦೦ ನಾಡಿನಲ್ಲಿ ಕ್ರಮವಾಗಿ ೭೨ ಮತ್ತು ೨೦೦ ಜನ ಮಹಾಜನರನ್ನೊಳಗೊಂಡ ಅಗ್ರಹಾರ-ಪಟ್ಟಣಗಳಾಗಿದ್ದವು. ಶ್ರೀರಾಮಪುರದತ್ತಿ ಅನಾದಿ ಮಹಾಗ್ರಹಾರ ಲೊಕ್ಕಿಗುಂಡಿ (ಲಕ್ಕುಂಡಿ) ಮತ್ತು ಪಿರಾಜಿತ ಕಾಂಚಿಯುನೆ ಪ್ರೋಲ್ತಿ ಬಟ್ಟಕೆಜೆಯ ಸಾಸಿರ್ವರು. ಇನ್ನೂರ್ವ್ವರು, ಮಹಾಜನರು ಈ ನಾಡಿನ ಸದ್ಧರ್ಮಂಗಳನ್ನು ಪ್ರತಿಪಾಲಿಸುತ್ತಿದ್ದರು.

ಗದುಗು ಶಾಸನಗಳಲ್ಲಿ[೨] ಕರ್ದುಗು (ಕ್ರಿ.ಶ. ೧೦೦೨), ಕಮ್ಡಿಗ (ಕ್ರಿ. ಶ. ೧೦೦೮) ಗಮ್ದಿಗ ಕ್ರಿ. ಶ. ೧೧೦೨), ಕ್ರತುಕ (ಕ್ರಿ. ಶ. ೧೧೦೩) ಕ್ರತುಪುರ (ಕ್ರಿ. ಶ. ೧೧೮೪). ಗದುಗು (ಕ್ರಿ. ಶ. ೧೩೭೯). ಎಂದೂ ಬೆಟಗೇರಿ ಬಟ್ಟಕೆಜೆ ಬಟ್ಟಿಗೆಜೆ ಎಂದೂ ವರ್ಣಿತವಾಗಿವೆ. ಗದುಗಿನ ಮೂಲರೂಪ ಕಮ್ಡಿಗ ಎಂಬುದು ಸ್ಪಷ್ಟ. ಕಮ್ಡಿಗ>ಕರ್ದುಗ>ಗಮ್ದಿಗ>ಗುರ್ದುಗು>ಗದುಗು ಬಂದಿರಲು ಸಾಕು. ಇಲ್ಲಿಯ ಕಮ್ಡಿಗ>ಕರ್ದುಗವೇ ಸಂಸ್ಕೃತದಲ್ಲಿ ಕ್ರತುಕ ಕ್ರತುಪುರವೆಂದು ಸಂಸ್ಕೃತೀಕರಣಗೊಂಡಿದೆ.

ರಾಜಕೀಯ:

ಸಾಮಾನ್ಯವಾಗಿ ರಾಜ ಮೊದಲಿನಿಂದಲೂ ಸರ್ವೋಚ್ಚ ವ್ಯಕ್ತಿಯಾಗಿದ್ದು: ಆಡಳಿತವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡಿರುತ್ತಿದ್ದ. ಮಹಾಸಾಮಂತ-ಸಾಮಂತ, ಮಹಾಮಂಡಳೇಶ್ವರ-ಮಂಡಳೇಶ್ವರ, ಮಹಾಪ್ರಧಾನ-ಪ್ರಧಾನ ಮತ್ತು ದಂಡನಾಯಕರುಗಳ ಸಹಾಯದಿಂದ ಆಡಳಿತ ಸಾಗಿಸುತ್ತಿದ್ದ. ಇವರು ಆಯಾ ಪ್ರಾಂತವಿಭಾಗಗಳಲ್ಲಿ ರಾಜಪ್ರತಿನಿಧಿಗಳಾಗಿ ಆಡಳಿತವನ್ನು ನಿರ್ವಹಿಸುತ್ತಿದ್ದರು. ಪ್ರಾಂತಾಡಳಿತೆಗೆ ಸಂಬಂಧಿಸಿದಂತೆ ಪೆರ್ಗ್ಗಡೆ, ಊರೊಡೆಯ. ಸೇನಬೋಗ ಮೊದಲಾದ ಅಧಿಕಾರ ವರ್ಗದೊಡನೆ ಸ್ಥಳೀಯ ನಾಯಕ. ಪಟ್ಟಸಾಹಣಿ. ಮಹಾಜನರುಗಳು ಊರಿನ ವ್ಯವಸ್ಥೆಗಳನ್ನು ನೋಡಿಕೊಳ್ಳುತ್ತಿದ್ದರು.

ರಾಷ್ಟ್ರಕೂಟರು:

ಈಗ ದೊರೆತ ಆಧಾರಗಳಿಂದ ಗದಗ-ಬೆಟಗೇರಿಯ ಪ್ರಾಚೀನತೆಯನ್ನು ೯ನೆಯ ಶತಮಾನದವರೆಗೆ ಗುರುತಿಸಬಹುದು. ಬೆಟಗೇರಿಯಲ್ಲಿ ದೊರೆತ ಕ್ರಿ. ಶ. ೮೮೮ ರ ರಾಷ್ಟ್ರಕೂಟ ಅಕಾಲವರ್ಷ (ಕೃಷ್ಣ II) ನ ಶಾಸನವೇ ಇಲ್ಲಿಯ ಪ್ರಥಮ ಉಲ್ಲೇಖವಾಗಿದೆ. ಇವನ ಆಳ್ವಿಕೆಯ ಎರಡು ಶಾಸನಗಳು ಬಟ್ಟಕೆಜೆಯನ್ನು ಕಾಯುವಲ್ಲಿ ಹೋರಾಡಿದ ಗುಣರವ[೩] ಮತ್ತು ಕಲಿಗಳ್ನೆಯ[೪] ವೀರರಿಗಾಗಿ ಬರೆದವುಗಳು. ಆ

---

೨) SII. xi pt. I No 48, SII xviii. No 42. SII xi pt II No. 150, SI. III pp. 217-220, SII xv No. 140.

೩) EI. XIII. P. 187

೪) SII. XI. Pt. I, No. 21

ಮೇಲೆ ರಾಷ್ಟ್ರಕೂಟ ಅರಸು ನಿತ್ಯವರ್ಷ ನಿರುಪಮ ಇಂದ್ರರಾಜನ ಆಳ್ವಿಕೆಗೆ ಒಳಪಟ್ಟ ಶಾಸನ[೫] (ಕ್ರಿ. ಶ. ೯೧೮) ಬೆಳ್ವಲ ೩೦೦ ನ್ನು ಆಳುತ್ತಿದ್ದ ಮಹಾಶ್ರೀಮಂತನೆಂಬವನಿಗೆ ಬಿಟ್ಟಕೆಱೆಯ ಮಹಾಜನ 'ಅಸನ್ನಾಯ' ಬೇಡಿ ಪಡೆದುದನ್ನು ತಿಳಿಸುತ್ತದೆ.

ಕಲ್ಯಾಣಚಾಳುಕ್ಯರು:

ರಾಷ್ಟ್ರಕೂಟರ ಉತ್ತರಾಧಿಕಾರಿಗಳಾಗಿ ಬಂದ ಕಲ್ಯಾಣಚಾಳುಕ್ಯರ ವಿಸ್ತೃತ ಆಳ್ವಿಕೆಯಿಂದ ಈ ಭಾಗದ ಇತಿಹಾಸ ಹೆಚ್ಚು ಸ್ಪುಟವಾಗಿ ಗೋಚರಿಸುತ್ತದೆ. ಇಮ್ಮಡಿ ತೈಲನ ಉತ್ತರಾಧಿಕಾರಿ ಸತ್ಯಾಶ್ರಯ ಇಱಿವಬೆಡಂಗನ ಆಳ್ವಿಕೆಯ ಎರಡು ಶಾಸನಗಳು ಲಭ್ಯವಾಗಿದ್ದು: ಒಂದು[೬] ಗಿರಿದುರ್ಗಮಲ್ಲ ರಣವೀರನಾದ ಶೋಭನರಸರು ಬೆಳ್ವೊಲ ೩೦೦, ಪುರಿಗೆಱೆ ೩೦೦, ಕುಂದೂರ ೫೦೦, ಕುಕ್ಕನೂರು ೩೦ ಆಳುತ್ತಿರುವುದನ್ನು ತಿಳಿಸುತ್ತದೆ. ಇಲ್ಲಿಯ ಶೋಭನರಸ ಇಮ್ಮಡಿ ತೈಲನ ಆಳ್ವಿಕೆಯಲ್ಲಿ ಬನವಾಸಿ ಸಾಮಂತ ನಾಗಿದ್ದು; ಗಂಗ ಪಾಂಚಾಲನೊಂದಿಗೆ ನಡೆದ ಕಾಳದಲ್ಲಿ ತೋರಿದ ಸಾಹಸಕ್ಕಾಗಿ ತೈಲನಿಂದ ಗಿರಿದುರ್ಗಮಲ್ಲ, ಸಾಮಂತಚೂಡಾಮಣಿ ಎಂಬ ಬಿರುದುಗಳನ್ನು ಹೊಂದಿ ದುದಾಗಿ ತಿಳಿದುಬರುತ್ತದೆ.[೭] ಮತ್ತೊಂದು ಶಾಸನ[೮] ದೆಸಿಗನೆಂಬವ ಅಗ್ರಹಾರ ಕುಮ್ಮಿಗ (ಗದುಗ) ವನ್ನು ಮುತ್ತಿದನೆಂದೂ ಚಕ್ರವರ್ತಿಯ ಪೆರ್ಗಡೆ ಅಲ್ಲಿಯ ಮಹಾ ಜನರೊಡನೆ ಸೇರಿ ಚಕ್ರವರ್ತಿ ತೇಜ (ಶೂರತನ) ವನ್ನು ಹಿಡಿದು ಸಾವೆವು ಹೊರತು ಅಗ್ರಹಾರ ಒಪ್ಪಿಸುವುದಲ್ಲವೆಂದು ಸುಟ್ಟಿಱಿದುದನ್ನು ಹೇಳುತ್ತದೆ.

ಇಱಿವಬೆಡಂಗ ಸತ್ಯಾಶ್ರಯನ ನಂತರ ಐದನೆಯ ವಿಕ್ರಮಾದಿತ್ಯನ ಕಾಲದ ಶಾಸನವೊಂದು[೯] ಮಾಧವ ಮತ್ತು ಅವನ ಮಗ ಕೇಸವಜೀಯರು ದೋರ್ಗ್ಗರ್ಬ್ಬದ ಕೊಂಕಣರ ದಾಳಿಯನ್ನು ಗೋದಾವರಿ ತೀರದಲ್ಲಿ ಎದುರಿಸಿ ತೈಲ II ನ ಮೆಚ್ಚಿಸಿದು ದನ್ನು ಕೊಸಲರ ದಾಳಿಯನ್ನು ವಿಕ್ರಮಾದಿತ್ಯನನ್ನು ಸಂತೋಷಪಡಿಸಿದುದನ್ನೂ ತಿಳಿಸುತ್ತ, ಮಾಧವರಾಜ ಚೋಳರನ್ನು ಎದುರಿಸಿ ಗೆಲವು ತಂದುಕೊಟ್ಟದ್ದನ್ನು ಸಾರುತ್ತದೆ. ಕೊಂಕಣ, ಕೋಸಲ ಮತ್ತು ಚೋಳರ ದಾಳಿಗಳು ಚಾಳುಕ್ಯರ ಮೇಲೆ ಅವ್ಯಾಹತವಾಗಿ ನಡೆದಿದ್ದುವೆಂಬುದನ್ನು ಈ ಶಾಸನ ಸ್ಪಷ್ಟಪಡಿಸುತ್ತದೆ. ನಂತರ ಆಳ್ವಿಕೆ ವಹಿಸಿದ ಇಮ್ಮಡಿ ಜಯಸಿಂಹನ ಎರಡು ಶಾಸನಗಳಲ್ಲಿ[೧೦] ದಾಮೋದರಸೆಟ್ಟಿ

---

೫) SII. HVIII, No. 22

೬) SII. XI. Pt. I, No. 48

೭) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಬೆಂಗಳೂರು) ಸಂ. 2. ಪು. ೪

೮) SII. XVIII. No. 42

೯) SII. XI Pt. I, No. 76.

೧೦) EI. XIX. P. 217, SII. XI. Pt. I, No. 72.

ಲೊಕ್ಕಗೊಂಡಿಯ ಊರೊಡೆಯ ಪೆರ್ವ್ವಸುಗೆಯ ಸಂಕ್ರಯ್ಯನಾಯಕರ ಮಗ ಮದ್ದಿಮಯ್ಯ ಗಾಯಕನಿಂದ ಭೂಮಿಯನ್ನು ಕೊಂಡು ತ್ರೈಪುರುಷ ಮತ್ತು ಭಾರಾನಾರಾಯಣದೇವರಿಗೆ ದತ್ತಿಬಿಟ್ಟಿದ್ದನ್ನು ಹೇಳುತ್ತದೆ. ಜಯಸಿಂಹನ ನಂತರ ಆವನ ಮಗ ಅಹವಮಲ್ಲ, ತ್ರೈಲೋಕ್ಯಮಲ್ಲ, ರಾಜನಾರಾಯಣ ಬಿರುದಾಂಕಿತ ಒಂದನೇ ಸೋಮೇಶ್ವರ ಸಿಂಹಾಸನವನ್ನೇರಿದ. ಇವನ ಆಳ್ವಿಕೆಯ ಒಂದು ಶಾಸನ[೧೧] (ಕ್ರಿ. ಶ. ೧೦೬೪) ಕೊಂಕಣಿಗ ಬಳಜಿಳಧಿ ಬಡವಾನಳ ದ್ರೋಹಕಾಳಾನಳ ಜೋಳಗೊಂಡ ಮಹಾಮಂಡಳೇಶ್ವರ' ಮಾರರಸರು ಬೆಳುವಲ ೩೦೦ನ್ನು ಪ್ರತಿಪಾಳಿಸುತ್ತಿದ್ದುದನ್ನು ಉಲ್ಲೇಖಿಸುತ್ತದೆ.

ನಂತರ ತನ್ನ ಅಣ್ಣ ಎರಡನೇ ಸೋಮೇಶ್ವರನನ್ನು ಸೋಲಿಸಿ ದೀರ್ಘಕಾಲದ ಆಡಳಿತದಿಂದ ಅದ್ವಿತೀಯನೆನಿಸಿದ ಶಕಪುರುಷ ಆರನೆಯ ವಿಕ್ರಮಾದಿತ್ಯ ಆಳ್ವಿಕೆ ವಹಿಸಿದ. ಇವನ ಆಳ್ವಿಕೆಯ ಆರು ಶಾಸನಗಳು ಲಭ್ಯವಾಗಿದ್ದು ಅವುಗಳಲ್ಲಿ ಒಂದಂತೂ[೧೨] ಚಾಳುಕ್ಯ ವಂಶಾವಳಿಯ ಗುಣಗಾನ ಮಾಡುತ್ತ, ಮಹಾಪ್ರಧಾನ ದಂಡನಾಯಕ ಸೋಮೇಶ್ವರಭಟ್ಟನು ಪ್ರಭಾಕರ ಸಿದ್ಧಾಂತದ ಶಾಲೆಯೊಂದನ್ನು ಸ್ಥಾಪಿಸಿದ್ದನ್ನು ತಿಳಿಸುತ್ತದೆ. ಮತ್ತೊಂದು ಶಾಸನ[೧೩] ಹುಲಿಗೆಜೀಗಾಡ ಮಂಡಳಿಕ ಯಿಂದ್ರಕೇಳಿ ನೃಪತಿಯನ್ನು ಹೆಸರಿಸಿದರೆ ಇನ್ನೊಂದು[೧೪] ದಂಡನಾಯಕ ಮಹಾಸಾಮಂತಾಧಿಪತಿ ಭೀಮಣಯ್ಯಂಗಳು ಪಲಸಿಗೆ ಪನ್ನಿಬ್ಬಾಸಿರ ಸಪ್ತಾರ್ದ್ಧಲಕ್ಷೆಯುಚ್ಚುಪನ್ನಾಯ ಆಳುತ್ತಿದ್ದ ಸಮಯದಲ್ಲಿ ಅಚ್ಚುಪನ್ನಾಯದಧಿಷ್ಠಾಯಕ ದಂಡನಾಯಕ ಮಾಧವಭಟ್ಟರು ರಾಜಪೂಜ್ಯರೆನಿಸಿದ ಸ್ವಯಂಭೂದೇವರ ಮಠದಾಚಾರ್ಯ್ಯ ಕ್ರಿಯಾಶಕ್ತಿಪಂಡಿತ ದೇವರ ಕಾಲನ್ನು ತೊಳೆದು ದತ್ತಿ ಬಿಟ್ಟಿದ್ದನ್ನು ವಿವರಿಸುತ್ತದೆ.

ವಿಕ್ರಮಾದಿತ್ಯನ ನಂತರ ಚಾಳುಕ್ಯ ಸಾಮ್ರಾಜ್ಯ ಬಹುಕಾಲ ಉಳಿಯಲಿಲ್ಲ. ಆವನ ಮಗ ಸೋಮೇಶ್ವರ IIIನ ಆಳ್ವಿಕೆಯ ಒಂದು ಶಾಸನ[೧೫] (ಕ್ರಿ. ಶ. ೧೧೩೬) ಕಾಳಿಮಯಂಗೇರಿಯ ಹೃಷೀಕೇಶದೇವರಿಗೆ ಮೂವರು ಬಿಟ್ಟ ದತ್ತಿಯನ್ನು ಹೇಳುತ್ತದೆ. ನಂತರದಲ್ಲಿ ಸೋಮೇಶ್ವರನ ಮಗ ಎರಡನೆಯ ಜಗದೇಕಮಲ್ಲ ಮತ್ತು ಅವನ ಸಹೋದರ ಮೂರನೆಯ ತೈಲ ಅನುಕ್ರಮವಾಗಿ ಆಳ್ವಿಕೆ ನಡೆಸಿದರಾದರೂ ಅವರ ಯಾವ ಶಾಸನಗಳೂ ದೊರಕಿಲ್ಲ. ಮೂರನೆಯ ತೈಲ ಬಿಜ್ಜಳನಿಂದ ಕೊಲ್ಲಲ್ಪಟ್ಟ

---

೧೧) SII. XVIII. No. 70.

೧೨) EI. XV. P. 348, SII. XVIII. No. 102.

೧೩) SII. XI. Pt. II. No. 201.

೧೪) SII. XI. Pt. II. No. 150.

೧೫) SII. XVIII. No. 138.

ಮೇಲೆ ಚಾಳುಕ್ಯರಾಜ್ಯ ಸ್ವಲ್ಪಕಾಲ ಕಳಚುರ್ಯರ ವಶವಾಯಿತು. ಬಿಜ್ಜಳನ ಶಾಸನ[೧೬] (ಕ್ರಿ. ಶ. ೧೧೬೨) ಅಡಕೆಯ ಮಹಾದೇವ ಮತ್ತು ಕೇಜೀಯ ಹಿರಿಯ ಸೇನುಭೋಗ ಮಲ್ಲಿಮಯ್ಯ ನಾಯಕನು ಭೋಗೇಶ್ವರ ದೇವರಿಗೆ ಬಿಟ್ಟ ಪಣದಾನವನ್ನು ತಿಳಿಸುತ್ತದೆ. ನಂತರ ಈ ಭಾಗ ಕಳಚುರ್ಯರ ಸಂಕಮನ ಆಳ್ವಿಕೆಗೆ ಒಳಪಟ್ಟಿದ್ದು ಗೊತ್ತಾಗುತ್ತದೆ.[೧೭] ಆ ಮೇಲೆ ಬಂದ ವೀರಸೋಮೇಶ್ವರ (ಸೋಮೇಶ್ವರ IV) ಚಾಳುಕ್ಯರ ರಾಜಸತ್ತೆಯನ್ನು ಪುನಃ ಸ್ಥಾಪಿಸಿದನಾದರೂ ಹೊಯ್ಸಳ, ಸೇವುಣ ಮತ್ತು ಕಾಕತೀಯರ ದಾಳಿಗಳನ್ನು ಎದುರಿಸಲಾರದೆ ಹೋದ. ಇವನ ಆಳ್ವಿಕೆಯ ಶಾಸನದಲ್ಲಿ[೧೮] (ಕ್ರಿ. ಶ. ೧೧೮೫) ಶಂಕರನಾರಾಯಣ ದೇವರ ಪಾದಾರಾಧಕ ವಿಷ್ಣುವರ್ಧನ ಬೀಚಿಸೆಟ್ಟಿಯರು ತಮ್ಮ ಕೇಣಿಯ ದೇವರಂಗಭೋಗಕ್ಕೆ ದಾನಬಿಟ್ಟ ವಿಷಯವಿದೆ.

ಚಾಳುಕ್ಯರ ರಾಜಸತ್ತೆಯನ್ನು ಕೊನೆಗೊಳಿಸುವಲ್ಲಿ ಉತ್ತರದಲ್ಲಿ ಯಾದವ (ಸೇವುಣ)ರು ದಕ್ಷಿಣದಲ್ಲಿ ಹೊಯ್ಸಳರು ಸಫಲರಾದರು. ಹೇರೂರು ಮುಕ್ಕಾಂನಲ್ಲಿದ್ದಾಗ ಬರೆಸಿದ ಯಾದವ ಭಿಲ್ಲಮನ ಶಾಸನ[೧೯] (ಕ್ರಿ. ಶ. ೧೧೯೧) ಯಾದವ ವಂಶಾವಳಿಯನ್ನು ಹೊಗಳುತ್ತ: ತ್ರಿಕುಟೇಶ್ವರ ದೇವರ ಗುಡಿಯ ಆಚಾರ್ಯ ಸಿದ್ಧಾಂತಿ ಚಂದ್ರಭೂಷಣ ಪಂಡಿತರ ಪಾದಪ್ರಕ್ಷಾಳನ ಮಾಡಿ ಬೆಳ್ವೊಲ ೩೦೦ರಲ್ಲಿಯ ಹಿರಿಯ ಹಂದಿಗೋಳವನ್ನು ಸರ್ವಬಾಧಾಪರಿಹಾರವಾಗಿ ದಾನಕೊಟ್ಟಿದ್ದನ್ನು ತಿಳಿಸುತ್ತಿದೆ. ಅದೇ ವರ್ಷ ಭಿಲ್ಲಮ ಹೊಯ್ಸಳ ಎರಡನೆಯ ಬಲ್ಲಾಳರ ಮಧ್ಯ ನಡೆದ ಸೊರಟೂರು ಭೀಕರ ಕದನದಲ್ಲಿ ಭಿಲ್ಲಮ ಸೋತು ಹಿಮ್ಮೆಟ್ಟಿದ. ಈ ಭಾಗ ಬಲ್ಲಾಳನ ವಶವಾಯಿತು. ಲೊಕ್ಕಿಗುಂಡಿ ಮುಕ್ಕಾಂನಲ್ಲಿದ್ದಾಗ ಆತ ಬರೆಸಿದ ಶಾಸನ[೨೦] (ಕ್ರಿ. ಶ. ೧೧೯೩) ಸಂಸ್ಕೃತ ಭಾಷಾ ಪ್ರೌಢಿಮೆ ಕಾವ್ಯಬಂಧುರತೆಯಿಂದ ಸಣ್ಣ ಕಾವ್ಯ ತುಣಿಕಿನಂತೆ ಗೋಚರಿಸುತ್ತದೆ. ಈ ಶಾಸನ ಪೂರ್ವಪ್ರಸಿದ್ಧವಾಗಿ ಪಾಳುಬಿದ್ದ ತ್ರಿಕುಟೇಶ್ವರ ದೇವಸ್ಥಾನ ಸ್ಥಳವನ್ನು ಪುನಃ ವ್ಯವಸ್ಥಿತಗೊಳಿಸಿ ದತ್ತಿಬಿಟ್ಟಿದ್ದನ್ನು ತಿಳಿಸುತ್ತದೆ. ಮತ್ತೊಂದು ಶಾಸನ[೨೧] (ಕ್ರಿ. ಶ. ೧೧೯೯) ಮಹಾಮಂಡಳೇಶ್ವರ ಆಲಸಂದಿಮುಖಾರ ಪುರವರಾಧೀಶ್ವರ ರಾಯ ದೇವರಸನು ಬಲ್ಲಾಳನ ಮೀರಪ್ರಧಾನನಾಗಿ ಹಳ್ಳವುರದ ಕುಪ್ಪದಲ್ಲಿದ್ದುದನ್ನು ತಿಳಿಸುತ್ತದೆ. ಬಲ್ಲಾಳನ ತರುವಾಯ ಈ ಭಾಗ ಮತ್ತೆ ಯಾದವರ ವಶವಾಯಿತು. ಯಾದವ ಸಿಂಹಣನ ಕಾಲದ ಶಾಸನವೊಂದು ದೊರೆತಿದ್ದು, ಅದು ತ್ರಿಕುಟೇಶ್ವರ ದೇವರ ಆಚಾರ್ಯ

---

೧೬ SII. xv No 103
೧೭ SII xv✓ No 140
೧೮ SII xviii No 162
೧೯ SII xv No 150
೨೦ IA II p 292, EI vi p 89
೨೧ SII xv No 214

ಚಂದ್ರಭೂಷಣ ಪಂಡಿತರನ್ನು ಸ್ಮರಿಸುತ್ತದೆ. ಸುಮಾರು ಇದೇ ಅವಧಿಗೆ ಸೇರಿದ, ಮಂಡಳಿಕ ಗಂಡಬೇರುಂಡ ಉದ್ಧರೆಪುರದ ಏಕ್ಕಲದೇವನ ಶಾಸನ[೨೨] ಅವನ ರಾಜ್ಯಾಭ್ಯುದಯ ಕರಣ ಕಾರಣ ಕೇಳೀಧುರಂಧರ ಮಹಾದೇವ ದಂಡನಾಥನನ್ನು ಉಲ್ಲೇಖಿಸಿದರೆ, ಮತ್ತೊಬ್ಬ ಮಹಾಮಂಡಳೇಶ್ವರ ಕಾದಂಬಕುಳಕಮಲ ಬನವಾಸಿ ಪುರವರಾಧೀಶ್ವರ ಮಲ್ಲಿದೇವರಸರ ಶಾಸನ[೨೩] (ಕ್ರಿ. ಶ. ೧೨೨೫) ಪ್ರಧಾನ ಘೋಡೆರಾಯನ ಪಟ್ಟಸಾಹಣಿ ಮಲ್ಲಯ್ಯನ ಹೆಂಡತಿ ಚೌಂಡವ್ವೆ ತ್ರಿಕುಟೇಶ್ವರ ದೇವರಿಗೆ ಸುವರ್ಣಧ್ವಜ ಮಾಡಿಸಿ ಕೊಟ್ಟದ್ದನ್ನು ಹೇಳುತ್ತದೆ.

ನಂತರ ವಿಜಯನಗರದ ಹರಿಹರದವರೆಗೆ ಗದಗ-ಬೆಟಗೇರಿಯ ಇತಿಹಾಸ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ಸಂಗಮವಂಶದ ಹರಿಹರ IIನ ಕಾಲದ ಒಂದು ತಾಮ್ರ ಶಾಸನದಲ್ಲಿ[೨೪] (ಕ್ರಿ. ಶ. ೧೩೭೯) ಗದುಗು ದೇಶದಲ್ಲಿನ ೨೨ ಹಳ್ಳಿಗಳನ್ನು ತ್ರಿಕುಟೇಶ್ವರ ಮತ್ತು ವೀರನಾರಾಯಣ ದೇವರಿಗೆ ದಾನಬಿಟ್ಟ ಉಲ್ಲೇಖ ಬರುತ್ತದೆ. ಆಗ ಗದುಗು ತೋರಗಲ್ಲು ನಾಡಿನ ೬೬ ಹಳ್ಳಿಗಳಲ್ಲಿ ಒಂದಾಗಿತ್ತು. ಆ ಮೇಲೆ ತುಳುವ ವಂಶದ ಕೃಷ್ಣದೇವರಾಯನ ಕಾಲದ ಶಾಸನದಿಂದ[೨೫] ತಿಮ್ಮಪ್ಪ ನಾಯಕ ಮತ್ತು ಬಾಗಿಲನಾಗಿಯಕ್ಕರ ಮಗ ನಯನಪ್ಪ ನಾಯಕರು ಅಜೀವಟಿಗೆಗಾಗಿ ಹೊಲ ಉಂಬಳಿಯಾಗಿ ಕೊಟ್ಟದ್ದು ತಿಳಿದುಬರುತ್ತದೆ. ನಂತರ ಅಚ್ಯುತರಾಯ ಮಹಾರಾಯನ ಕಾಲದ ಶಾಸನ[೨೬] (ಕ್ರಿ. ಶ. ೧೫೩೯) ಭಾಸ್ಕರಕ್ಷೇತ್ರ ತುಂಗಭದ್ರಾ ತೀರದ ವಿಠಲ ಸನ್ನಿಧಿಯಲ್ಲಿ ಮಾಧವ ಪ್ರಿತ್ಯರ್ಥವಾಗಿ ಆನಂದನಿಧಿಯೆಂಬ ದಾನವನ್ನು ಕೊಟ್ಟು ಭೂಸುರರಿಗೆ ಸಂತೋಷ ಪಡಿಸಿದ್ದಕ್ಕಾಗಿ ಸಂಸ್ಕೃತ ಭಾಷಾಕವಿತ್ವದ ಶಾರ್ದೂಲ ವಿಕ್ರಿಡಿತವೆಂಬ ವೃತ್ತಗಳನ್ನು ಕವಿಕುಮಾರವ್ಯಾಸಂಗೆ ಪ್ರಸನ್ನನಾದ ಗದುಗಿನ ಶ್ರೀ ವೀರ ನಾರಾಯಣ ಸನ್ನಿಧಿಯಲ್ಲಿ ಶಿಲಾಶಾಸನಕ್ಕೆ ಬರೆಸಿದುದನ್ನು ಸಾರುತ್ತದೆ. ಇದು ಸಾಮಾನ್ಯವಾಗಿ ಗದಗ-ಬೆಟಗೇರಿ ಶಾಸನಗಳಿಂದ ತಿಳಿದುಬರುವ ರಾಜಕೀಯ ಸ್ಥೂಲ ಚಿತ್ರ.

ಧಾರ್ಮಿಕ :

ಭಾರತೀಯ ಜನಜೀವನದಲ್ಲಿ ಧರ್ಮ ಹಾಸುಹೊಕ್ಕಾಗಿರುವುದರಿಂದ ಅದು ಎಲ್ಲ ರಂಗಗಳಲ್ಲಿಯೂ ತನ್ನ ಪ್ರಭಾವವನ್ನು ಹರಡಿತ್ತು. ಇಲ್ಲಿಯ ಶಾಸನ ಮತ್ತು ಪುರಾತತ್ವ

---

೨೨) SII. XVIII. No. 372.
೨೩) SII. XV. No. 609.
೨೪) Bombay State Gazetteer P. 731.
೨೫) SII. XVIII. No. 280.
೨೬) SII. XV. No. 253, SII. XVIII. No. 283.

ಶೋಧಗಳಿಂದ[೩೭] ಈ ಭಾಗ ಬೌದ್ಧ, ಜೈನ, ವೈಷ್ಣವ ಮತ್ತು ಶೈವ ಧರ್ಮಗಳ ಪ್ರಭಾವಕ್ಕೆ ಒಳಗಾಗಿರುವುದು ಗೊತ್ತಾಗುತ್ತದೆ. ನಮ್ಮ ಧರ್ಮಗಳು ಹೆಚ್ಚಾಗಿ ಪ್ರಚಾರ ಗೊಂಡಿದ್ದು ದೇವಸ್ಥಾನಗಳಿಂದ. ನಮ್ಮ ಪುರಾತನರು ಪುಣ್ಯಾರ್ಜನೆಗಾಗಿ ನಡೆಸಿದ ಹೋರಾಟದಲ್ಲಿ ಸಾಕಷ್ಟು ದೇವಾಲಯ-ಬಸದಿಗಳು ಹುಟ್ಟಿಕೊಂಡವು. ಅಲ್ಲದೆ ಅಂದಿನ ರಾಜಮನೆತನಗಳು ಒಂದೊಂದು ಮತಧರ್ಮಕ್ಕೆ ಬದ್ಧವಾಗಿದ್ದರೂ ಪ್ರಜ್ಞಾವಂತ ಅರಸರ ಉದಾರ ಮನೋಭಾವ ಧರ್ಮಸಮನ್ವಯಕ್ಕೆ ಹಾದಿಮಾಡಿಕೊಟ್ಟಿತು. ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಶಾಸನ[೩೮] ಹುಲಿಗೆಜಿನಾಡ ಮಾಂಡಳಿಕ ಇಂದ್ರ ಕೇಶಿನೃಪತಿಯನ್ನು 'ಧಾರ್ಮಿಕ ಧರ್ಮನಂದನ, ಸಮುಜ್ವಲ ಚತುಸ್ಸಮಯ ಸಮುದ್ಧರಣ' ಎಂದು ಕರೆದಿರುವುದು ಗಮನಾರ್ಹ.

ಜೈನಧರ್ಮ : ಗದಗ-ಬೆಟಗೇರಿಯಲ್ಲಿ ಈ ವರೆಗೆ ಯಾವುದೇ ಬೌದ್ಧ ಧರ್ಮದ ಅವಶೇಷಗಳು ಕಂಡುಬಂದಿಲ್ಲ. ಆದರೆ ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಬೇರೂರಿದ್ದ ಜೈನಧರ್ಮ ಈ ಭಾಗದಲ್ಲಿಯೂ ಪ್ರಭಲವಾಗಿತ್ತೆನ್ನಲು ಆಧಾರಗಳು ದೊರಕುತ್ತವೆ. ಚಾಳುಕ್ಯ ಜಯಸಿಂಹನ ಶಾಸನ[೩೯] ದಾಮೋದರ ಸೆಟ್ಟಿಯ ತಾಯಿ 'ಗುಣಾಬ್ಬೆ' ಜೈನದಾನಧರ್ಮ ಮಾತೆಯಾಗಿದ್ದಳೆಂದು ಹೇಳಿದೆ. ಹೊಯ್ಸಳ ವೀರ ಬಲ್ಲಾಳನ ಮಹಾಮಂಡಳೇಶ್ವರ ರಾಯದೇವರಸನನ್ನು "ಶ್ರೀಮಜ್ಜಿನ ಗಂಧೋಧಕ ಪವಿತ್ರೀಕೃತೋತ್ತಮಾಂಗ" ಎನ್ನಲಾಗಿದೆ.[೪೦] ಉದ್ಧರೆಪುರದ ಎಕ್ಕಲದೇವನ ದಂಡನಾಥ ಮಹದೇವನನ್ನು "ಜಿನಸಮಯ ಸಮುದ್ಧರಣ ಪರಿಣತಾಂತಃಕರಣ ಭವನವಿನೂತಭವ ರಹಿತ ಜಿನಭವನ ನಿರ್ಮಾಪಣೋದ್ವಿ[ಗ್ನ]ತ್ತಚಿತ್ತ" ನೆಂದೂ ಕಲಿದೇವ ಸ್ವಾಮಿಯಾದೀ ಜಿನಭವನ ಮಹಾಮಂಟಪವನ್ನು ಮಾಡಿಸಿದನೆಂದೂ ಒಂದು ಶಾಸನ[೪೧] ಹೊಗಳಿದೆ. ಇನ್ನು ಗದಗ-ಬೆಟಗೇರಿ ಸಮೀಪದ ಲಕ್ಕುಂಡಿ ಜೈನರ ಪ್ರಮುಖ ಕೇಂದ್ರವಾಗಿತ್ತು ಅಲ್ಲಿ ಇತಿಹಾಸ ಪ್ರಸಿದ್ಧಳಾದ ಅತ್ತಿಮಬ್ಬೆ ಕಟ್ಟಿಸಿದ ಬ್ರಹ್ಮಜಿನಾಲಯ ಆ ಊರಿನ ಮಹಾಜನರ ಗಮನವನ್ನು ಸೆಳೆದು ಜಿನನಿಗೂ ತಮ್ಮ ಬ್ರಹ್ಮನಿಗೂ ಬೇಧವಿಲ್ಲವೆನ್ನು ವಂತೆ ಮಾಡಿತ್ತು.

---

೩೭) ಗದಗ-ಬೆಟಗೇರಿ ಪರಿಸರದಲ್ಲಿರುವ ಲಕ್ಕುಂಡಿ, ಡಂಬಳ; ಕಳಸಾಪೂರ, ವೆಂಕಟಾಪೂರ, ಮುಳಗುಂದ ಮುಂತಾದ ಪ್ರದೇಶಗಳು ಪ್ರಾಚೀನಕಾಲದ ಸಾಂಸ್ಕೃತಿಕ ಅವಶೇಷಗಳಿಂದಾಗಿ ಸಂಶೋಧಕರ ಗಮನವನ್ನು ಇಂದಿಗೂ ಸೆಳೆಯುತ್ತಿವೆ.

೩೮) SII. XI. Pt. II. No. 201

೩೯) EI. XIX. PP. 217-222

೪೦) SII. XV. No. 214

೪೧). SII. XVIII. No. 372

ವೈದಿಕ (ವೈಷ್ಣವ) ಧರ್ಮ : ವೈದಿಕ ಧರ್ಮ ಈ ಭಾಗದಲ್ಲಿ ಪ್ರಾಮುಖ್ಯತೆಯನ್ನು ಪಡೆದಿತ್ತೆನ್ನಲು ಗದಗ-ಬೆಟಗೇರಿ ೭೨ ಮತ್ತು ೨೦೦ ಮಹಾಜನರನ್ನೊಳಗೊಂಡ ಅಗ್ರಹಾರಗಳೆಂಬುದು ಸ್ಪಷ್ಟವಾದ ನಿದರ್ಶನವನ್ನೊದಗಿಸುತ್ತದೆ. ಅಲ್ಲಿಯ ವೀರನಾರಾಯಣ ಗುಡಿ ಮೊದಲಿನಿಂದಲೂ ವೈಷ್ಣವ ಧರ್ಮದಲ್ಲಿ ಮಹತ್ವದ ಪಾತ್ರ ವಹಿಸುತ್ತ ಬಂದಿದೆ. ಈ ಗುಡಿಯಲ್ಲಿ ದೊರೆತ ಒಂದು ಶಾಸನ[೪೨] ದಾಮೋದರ ಸೆಟ್ಟಿಯು ತ್ರೈಪುರುಷ ಮತ್ತು ಬಾರಾನಾರಾಯಣ ದೇವರಿಗೆ ಭೂಮಿ ದಾನಮಾಡಿದ್ದನ್ನು ಆತನ ತಂದೆ ಭೋಯಿಮಯ್ಯ ಈ ದೇವರ ಮಂದಿರಗಳನ್ನು ಕಟ್ಟಿಸಿ ಗರುಡ ಸ್ತಂಭ ನಿಲ್ಲಿಸಿದ್ದನ್ನೂ ತಿಳಿಸುತ್ತದೆ. ಬ್ರಹ್ಮ-ವಿಷ್ಣು-ಮಹೇಶ್ವರ ತ್ರಿಮೂರ್ತಿಗಳಿಗೆ ಸಾಮಾನ್ಯವಾಗಿ ತ್ರೈಪುರುಷ ದೇವರೆಂದು ಕರೆಯಲಾಗುತ್ತಿದ್ದು: ಕೆಲವು ಕಡೆ ವಿಷ್ಣುವಿಗೆ ಬದಲಾಗಿ ಸೂರ್ಯ ಇಲ್ಲವೆ ಆದಿತ್ಯನನ್ನು ಸೇರಿಸುವುದುಂಟು. ಇನ್ನು ಬಾರಾ ನಾರಾಯಣ ಯಾರು ಎಂಬುದು ಸ್ಪಷ್ಟವಾಗುವುದಿಲ್ಲ. ದ್ವಾದಶಾದಿತ್ಯನೋ ಅಥವಾ ವರಾಹ+ನಾರಾಯಣನೂ ಆಗಿ, ಈಗಿನ ವೀರನಾರಾಯಣ ನಾಗಿರಬಹುದು. ಮೂಲತಃ ವೈದಿಕ ಧರ್ಮಕ್ಕೆ ಹೊಂದಿದ ಬಾರಾನಾರಾಯಣ ದೇವಾಲಯ ಹೊಯ್ಸಳರ ಕಾಲದಲ್ಲಿ ವೈಷ್ಣವ ಧರ್ಮಕ್ಕೆ ತುತ್ತಾಗಿರಬೇಕು. ವೀರನಾರಾಯಣ ಗುಡಿಯನ್ನು ಹೊಯ್ಸಳ ವಿಷ್ಣುವರ್ಧನ ಕಟ್ಟಿಸಿದ ಐದುನಾರಾಯಣ ಗುಡಿಗಳಲ್ಲಿ ಒಂದೆಂದು ಹೇಳಲಾಗುತ್ತದೆ.[೪೩] ನಂತರ ವಿಜಯನಗರ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವ್ಯಾಸರಾಯರ ಸಂಚಾರದಿಂದ ಮಧ್ವ-ವೈಷ್ಣವ ಸಂಪ್ರದಾಯ ಅಲ್ಲಿ ನೆಲೆಗೊಂಡಂತೆ ತೋರುತ್ತದೆ. ಹೃಷೀಕೇಶವ, ಕೇಶವ, ಮಾಧವೇಶ್ವರ, ಶಂಕರ-ನಾರಾಯಣ ಮುಂತಾದ ಶಾಸನೋಕ್ತ ದೇವಾಲಯಗಳು ಈ ಧರ್ಮದ ಪ್ರಭಾವವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತವೆ. ಶಂಕರ ನಾರಾಯಣ, ಮಾಧವೇಶ್ವರ ದೇವಾಲಯಗಳು ಶೈವ-ವೈಷ್ಣವರ ಸಮರಸವಾದ ಸಮನ್ವಯವನ್ನು ತೋರಿಸುತ್ತವೆ. ಅಲ್ಲದೆ ಪ್ರತಿ ಅಗ್ರಹಾರದ ಸ್ಥಾಪನೆಯೊಡನೆ ಒಂದು ಶಿವಾಲಯವನ್ನು, ವೈಷ್ಣವಾಲಯವನ್ನು ನಿರ್ಮಿಸುವುದು ಆ ಕಾಲದ ಪದ್ಧತಿಯಾಗಿತ್ತೆಂದು ಕಾಣುತ್ತದೆ.

ಶೈವ : ಪ್ರಾಚೀನ ಶೈವಮತ ಈ ಭಾಗದಲ್ಲಿ ಮುಂದುವರೆದಿತ್ತು. ಸ್ವಯಂಭು ತ್ರಿಕೂಟೇಶ್ವರ, ಸೋಮನಾಥ, ಮಲ್ಲಿಕಾರ್ಜುನ, ಭೋಗೇಶ್ವರ ಮೊದಲಾದ ಗುಡಿಗಳು ಗದಗ-ಬೆಟಗೇರಿ ಬಹು ಪ್ರಮುಖ ಶೈವಕೇಂದ್ರವೆಂಬುದನ್ನು ಸೂಚಿಸುತ್ತವೆ. ಸ್ಥಳೀಯ ದೇವಾಲಯಗಳ ದತ್ತಿ-ದಾನ, ಆಡಳಿತಸೂತ್ರ ನಿರ್ವಹಿಸುವುದರಲ್ಲಿ ಅಲ್ಲಿಯ ಆಚಾರ್ಯರ ಪಾತ್ರ ಪ್ರಮುಖವಾಗಿತ್ತು. ಈ ಆಚಾರ್ಯರ ಸತತ ಪರಿಶ್ರಮದಿಂದಾಗಿ ಶೈವಧರ್ಮ ತನ್ನ ಸತ್ವ ಬೆಳಸಿಕೊಳ್ಳಲು ಅನುಕೂಲವಾಯಿತಲ್ಲದೆ,

೪೨) SII. XI. Pt. I. No. 72

೪೩) IA. II. P. 131.

ದೇವಾಲಯಗಳಲ್ಲಿ ಅಧ್ಯಯನ ಅಧ್ಯಾಪನ ಕಾರ್ಯಗಳು ಯಾವ ಅಡತಡೆಯಿಲ್ಲದೆ ಮುಂದುವರೆದವು. ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಸ್ವಯಂಭುದೇವರ ಮಠದಾಚಾರ್ಯರು ರಾಜಪೂಜ್ಯ ಕ್ರಿಯಾಶಕ್ತಿಪಂಡಿತರಾಗಿದ್ದರು.[೩೪] ದಿವ್ಯಜ್ಞಾನಿ ಮಣೆಯುರ ಮಹಾದೇವ ಶಿವಪಾದಾಂಬುಜ ಭೃಂಗನಾಗಿದ್ದನಂತೆ.[೩೫] ಹೊಯ್ಸಳ ವೀರಬಲ್ಲಾಳನ ಶಾಸನವೊಂದು[೩೬] ತ್ರಿಕುಟೇಶ್ವರ ದೇವಸ್ಥಾನದ ಸ್ಥಾನಾಚಾರಿ ಕಾಳಾಮುಖಾಚಾರ್ಯ ಚಂದಭೂಷಣರ ಬಗ್ಗೆ ಹೇಳುತ್ತ "ಶಿವಾಗಮ ಸಿದ್ಧಾಂತದಿಂ ಚಂದ್ರಭೂಷಣ ಸೈದ್ಧಾಂತಿಕನೊಳ್ ಸದಾಶಿವ ಸಮಗ್ರ ಜ್ಞಾನದಿಂ ಚಂದ್ರಭೂಷಣ ಯೋಗೀಂದ್ರನೊಳಾರ್ಸ್ಸ್ಮಂ ತೂಗೆ ಸಮಾನಂ ಭೂಚಕ್ರದೊಳ್" ಎನ್ನುತ್ತದೆ. ಯಾದವ ಸಿಂಹಣನ ಶಾಸನ ಈ ಆಚಾರ್ಯ ಚಂದ್ರಭೂಷಣ ಪಂಡಿತರನ್ನು ಸ್ತುತಿಸುತ್ತ ಅವರ ಶಿಷ್ಯ ಕ್ರಿಯಾಶಕ್ತಿ ಪಂಡಿತರಾಗಿದ್ದರೆಂದು ತಿಳಿಸುತ್ತದೆ. ಆದರೆ ಈ ಕ್ರಿಯಾಶಕ್ತಿಪಂಡಿತರು ೧೧೦೨ ರಲ್ಲಿ ರಾಜಪೂಜ್ಯರೆನಿಸಿದ ಕ್ರಿಯಾಶಕ್ತಿಪಂಡಿತರಿಂದ ಭಿನ್ನವೆಂಬುದು ಸ್ಪಷ್ಟ. ಇದಕ್ಕೆ ಪೂರಕವಾಗಿ ಕ್ರಿ. ಶ. ೧೨೨೫ ರ ಶಾಸನ[೩೭]ವೊಂದರಿಂದ ಶ್ರೀಮತ್ಸಿದ್ಧಾಂತಿ ಕ್ರಿಯಾಶಕ್ತಿಪಂಡಿತದೇವರು ತ್ರಿಕುಟೇಶ್ವರದೇವರ ಆಚಾರ್ಯ ರಾಗಿದ್ದುದು ತಿಳಿದು ಬರುತ್ತದೆ. ಇತ್ತೀಚೆಗೆ ಸರಸ್ವತಿ ದೇವಾಲಯದಲ್ಲಿ ದೊರೆತ ಶಾಸನ[೩೮] ಕ್ರಿಯಾಶಕ್ತಿಪಂಡಿತ ದೇವರ ವಿದ್ಯಾವಸ (ವಿದ್ಯಾಕೇಂದ್ರ) ಅನೇಕ ಚಿತ್ರ ಶಾಸ್ತ್ರಾದಿ ಉಪನ್ಯಾಸಕ ರೂವಾರಿಗಳಿಂದೊಡಗೂಡಿದ್ದನ್ನು ಹೇಳುತ್ತದೆ. ಇದು ಕ್ರಿಯಾಶಕ್ತಿಪಂಡಿತರ ಹಿರಿಮೆ-ವ್ಯಕ್ತಿತ್ವವನ್ನು ಮತ್ತಷ್ಟು ಸ್ಪಷ್ಟವಾಗಿಸುತ್ತದೆ. ಶೈವ ಧರ್ಮದ ನಂತರ ಅದೇ ಸಂಪ್ರದಾಯ ಹಿನ್ನೆಲೆಯಲ್ಲಿ ಮೂಡಿಬಂದ ವೀರಶೈವ ಧರ್ಮ

---

೩೪) SII. XI. Pt. II. No. 150.

೩೫) SII. XVIII. No. 114.

೩೬) SII. XV. No. 214.

೩೭) SII. XV. No. 609.

೩೮) 'ಕ್ರಿಯಾಶಕ್ತಿ ಪಂಡಿತ ದೇವರು'(ಸುಧಾ ವಾರಪತ್ರಿಕೆ ಸಂ. ೧೫, ಸಂ. ೩೯ ಸೆಪ್ಟಂಬರ ೩೦, ೧೯೭೯): ಪ್ರೊ. ಬಿ.ಕೆ. ಹಿರೇಮಠ, ಪು. ೧೬-೧೭. ಈ ಶಾಸನವನ್ನು ತಪ್ಪಾಗಿ ಅರ್ಥೈಸಿದ ಇವರು ಕ್ರಿಯಾಶಕ್ತಿ ಪಂಡಿತರನ್ನು ಪ್ರಖ್ಯಾತ ಚಿತ್ರಶಿಲ್ಪಕಾರರೆಂದೂ, ರೂವಾರಿಗಳ ಹೆಸರು ಬಿರುದುಗಳನ್ನೆಲ್ಲ ಕ್ರಿಯಾಶಕ್ತಿ ಪಂಡಿತರ ಬಿರುದುಗಳೆಂದೂ ಹೇಳಿದ್ದಾರೆ. ಆದರೆ ಶಾಸನ 'ಕ್ರಿಯಾಶಕ್ತಿಪಂಡಿತ ದೇವರ ವಿದ್ಯಾವಸ' ಅನ್ನುವಲ್ಲಿಯೇ ಅದು ಅವರ ವಿದ್ಯಾವಸವನ್ನು ಕುರಿತಾದುದು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಈ ಶಾಸನಕ್ಕೆ ಸಮಕಾಲೀನವಾದ ತ್ರಿಕುಟೇಶ್ವರ ದೇವಾಲಯದ ಎರಡು ಶಾಸನಗಳು ಕ್ರಿಯಾಶಕ್ತಿಪಂಡಿತರು ತ್ರಿಕುಟೇಶ್ವರ ದೇವರ ಆಚಾರ್ಯರಾಗಿದ್ದುದನ್ನು ತಿಳಿಸುವುದರಿಂದ ಇವರಿಬ್ಬರು ಅಭಿನ್ನರೆಂದು ಹೇಳಬಹುದು. ತ್ರಿಕುಟೇಶ್ವರ ದೇವಾಲಯದ ಪ್ರಾಂಗಣದಲ್ಲಿರುವ ಸರಸ್ವತಿ ದೇವಾಲಯ ಅಂದು ಅವರ ವಿದ್ಯಾವಸವಾಗಿರಬೇಕು.

ಈ ಭಾಗವನ್ನು ಆಕ್ರಮಿಸಿತು. ಅದರ ಕುರುಹಾಗಿ ಅಲ್ಲಿನ ವೀರಶೈವ ಮಠವೊಂದು ಇಂದು ಉರ್ಜಿತಾವಸ್ಥೆಯಲ್ಲಿರುವುದನ್ನು ನೋಡಬಹುದು.

ಸಮಾಜ :

ಅಂದಿನ ಆಡಳಿತ ವರ್ಗದೊಡನೆ ಸಾಮಾನ್ಯಜನ ಎಲ್ಲಂದದಲ್ಲಿಯೂ ಸಹಕರಿಸುತ್ತಿದ್ದರು. ಸಮಾಜದ ಮೇಲ್ವರ್ಗವೆನಿಸಿದ ಬ್ರಾಹ್ಮಣರು ರಾಜಕೀಯ ಕ್ಷೇತ್ರದಲ್ಲಿಯೂ ಪ್ರಮುಖ ಪಾತ್ರ ವಹಿಸಿ ಉನ್ನತ ಪದವಿಗಳನ್ನಲಂಕರಿಸಿದ್ದರು. ಆರನೆಯ ವಿಕ್ರಮಾದಿತ್ಯನ ಮಹಾಪ್ರಧಾನ ದಂಡನಾಯಕ ಸೋಮೇಶ್ವರಭಟ್ಟನನ್ನು ಒಂದು ಶಾಸನ[೩೯] ಚಾರಿತ್ರವಂತ. ವೇದಪರಿಣತ, ಶರಣಾಗತ ರಕ್ಷಾಮಣಿ ಎನ್ನುತ್ತ,

> "ವಿಶ್ವಜಗುಜ್ಜನಂ ಬಯಸಿ ಬಣ್ಣಿಸುವಂತುಟೆ ಮೂರ್ತಿ ಕುಂತಳೋ
> ರ್ವ್ವೀಶ್ವರನಂ ಮನಂಗೊಳಿಸುವಂತುಟೆ ಪೆಂಪು ವಿಶುದ್ಧ ಕೀರ್ತಿಯುಂ
> ಶಾಶ್ವತವಾಗಿ ಚಿತ್ರರಿಸುವಂತುಟೆ ದಾನವೊನಲ್ಕೆ ಬಾಪ್ಪು ಸೋ
> ಮೇಶ್ವರಭಟ್ಟ ನಿನ್ನೊರೆಗೆ ವರ್ಪರೆ ಮುತ್ತಿನ ವೇಷದಾರಿಗಳ್"

ಎಂದು ಹಾಡಿ ಹೊಗಳಿದೆ. ಇನ್ನೊಂದು ಶಾಸನ[೪೦] ಚಾಳುಕ್ಯ ಮಹಾಸಾಮಂತಾಧಿಪತಿ ಭೀವಣಯ್ಯನ ದಂಡನಾಯಕ, ಅಚ್ಚುಪನ್ನಾಯದಧಿಷ್ಠಾಯಕ ಮಾಧವಭಟ್ಟನು ಮಹಾಮಾತ್ಯ ಪದವಿ ವಿರಾಜಮಾನ. ವಿಬುಧ ಪ್ರಸನ್ನ, ಪ್ರಭುಮಂತ್ರೋತ್ಸಾಹ ಶಕ್ತಿತ್ರಯ ಸಂಪನ್ನನಾಗಿದ್ದನ್ನು ಹೇಳುತ್ತದೆ. ಮತ್ತೊಂದು ಶಾಸನ[೪೧] ಗುಣರಮ ಎನ್ನುವ ದ್ವಿಜೋತ್ತಮ 'ರಣದೀಕ್ಷಾಪರನಾಗಿ ನಾಗಘಟೆಯೊಳ್ ವಿಶ್ರಾಂತದಿಂ ಕಾದಿದಂ' ಎನ್ನುತ್ತದೆ. ಹೀಗೆ ಅವರು ರಾಜ್ಯ ಸೇವಕರಾಗಿರುವಂತೆಯೇ ಅಗ್ರಹಾರ ಆಡಳಿತಗಳನ್ನು ವಹಿಸಿಕೊಂಡು ರಾಜಪೂಜ್ಯರೆನಿಸಿ, ಎಲ್ಲರಿಂದಲೂ ಗೌರವಿತರಾಗಿದ್ದರು. ಊರಿನ ಯಾವ ಕಾರ್ಯ ನಡೆದರೂ ಅದು ಮಹಾಜನರ ಸನ್ನಿಧಿಯಲ್ಲಿ ನಡೆಯುತ್ತಿತ್ತು. ಗದಗ-ಬೆಟಗೇರಿಯ ಕಾರ್ಯಗಳನ್ನು ಅಲ್ಲಿಯ ೭೨ ಮತ್ತು ೨೦೦ ಮಹಾಜನರೊಡನೆ ಲಕ್ಕುಂಡಿಯ ಸಾಸಿರ್ವರು ನೋಡಿಕೊಳ್ಳುತ್ತಿದ್ದುದನ್ನು ಅಲ್ಲಿಯ ಶಾಸನಗಳು ಸಾರಿ ಹೇಳುತ್ತವೆ.

ಇನ್ನುಳಿದ ಸಾಮಾನ್ಯ ಜನತೆಗೆ ಮೇಲ್ವರ್ಗ ಆದರ್ಶವಾಗಿತ್ತು. ಅಂದಿನ ಸಾಮಾಜಿಕ ಮೌಲ್ಯಗಳಲ್ಲಿ ದಾನ (ತ್ಯಾಗ), ವೀರ ಮುಖ್ಯವಾಗಿದ್ದವು. ಇಲ್ಲಿಯ ಹೆಚ್ಚಿನ ಶಾಸನಗಳು ದಾನಶಾಸನಗಳಾಗಿದ್ದು; ತ್ಯಾಗದ ಪ್ರತಿನಿಧಿಗಳಾಗಿ ನಿಲ್ಲುತ್ತವೆ.

---

೩೯) EI. XV. P. 348.
೪೦) SII. XI. Pt. II. No. 150.
೪೧) EI. XIII. PP. 187-190.

ಬಡವ ಶ್ರೀಮಂತರೆನ್ನದೆ ಎಲ್ಲರೂ ಈ ಸಾಮಾಜಿಕ ಕಾರ್ಯದಲ್ಲಿ ಉಧಾರಿಯಾಗಿ ಭಾಗಿಯಾಗಿದ್ದಾರೆ. ಗದುಗಿನ ದಾನಿ ದಾಮೋದರಸೆಟ್ಟಿಯ ಮನೆತನ ಅಂಥದ್ದರಲ್ಲಿ ಒಂದು. ತಂದೆ ದೋಇಬಿಸಯ್ಯ ತ್ರೈಪುರುಷ. ಬಾಗಿಣಾರಾಯಣ ಗುಡಿಯನ್ನು ಕಟ್ಟಿಸಿ ಗರುಡಸ್ತಂಬವನ್ನು ನಿಲ್ಲಿಸಿದವ, ತಾಯಿ ಕುಲಕ್ಕೆ ತಕ್ಕ ಸತಿ 'ಗುಣಾಬ್ಬೆ' ಜೈನದಾನ ಧರ್ಮಾಮೃತೆ, ಮಗ ದಾಮೋದರನ ದಾನಗುಣವನ್ನಂತೂ ಒಂದು ಶಾಸನ :[೪೨]

"ಸುರರಾಜೇಂದ್ರ ಮದೇಭ ಮಸ್ತಕದೊಳ್ ದಿಗ್ದಂತಿ ದಂತಂಗಳೊಳ್
ಹರನಂಗಾಸ್ಥಿಯೊಳಿಂದ್ರಕೀಲ ತಟದೊಳ್ ನಿರ್ಜ ಪುತ್ರಾಂಡದೊಳ್
ಪರನಾಗಾಲಯದೊಳ್ ಮುರಾರಿಯ ಗೃಹೋದ್ಯದ್ವಾರ ಬಂದಂಗಳೊಳ್
ಬರೆದಳ್ ವಾಗ್ವಧು ದಾವಲಂ ಶುಚಿ ಮಾಹಾದನಾಢ್ಯನೆಂಬಂಕಮಂ

ಮೊಳೆವೋಯ್ತುರ್ಕಜನಿಂ ಪಸುರ್ಪುವಡೆದತ್ತಾ ವಿಕ್ರಮಾದಿತ್ಯ ಭೂ
ತಳನಾಥಾಗ್ರಣಿಯಿಂದೆ ಮತ್ತೆ ತಳಿರಾಯ್ತುತ್ತಂ ಹರಿಶ್ಚಂದ್ರನಿಂ
ನಳನಿಂ ಪೂತಂದು ಚಾರುದತ್ತ ವಿಭುನಿಂದಂ ಕಾತುದೀ ಭೂರಿ ಭೂ
ತಳದೊಳ್ ದಾಮನಿನಗ್ಗಳಂ ಫಲಿತಮಾಯ್ತು ದಾನಕಲ್ಪದ್ರುಮಂ"

ಎಂದು ಹೀಗೆ ಬಣ್ಣಿಸಿದೆ. ತ್ರೈಪುರುಷ ದೇವಂಗೆ ಗಗ್ಗರ ನಾಣೆಮಯ್ಯ, ಪಾಂಡವರ ಮಾದಿಯಂಣ, ಬೀಶಪಸೆಟ್ಟಿಯರು ಮತ್ತು ಪಾಂಡವರ ಕಾಯಂಣನ ಮಕ್ಕಳಾದ ಸಂಕಣ, ಗೋಪಣ, ಮಾದಿಯಂಣರು ದಾನ ಬಿಟ್ಟದನ್ನು ನೋಡಿದರೆ;[೪೩] ಒಂದೇ ಊರಿನ ಕೇರಿ ಮತ್ತು ಮನೆಯ ಜನ ದಾನಬಿಡುವ ಈ ಪೈಪೋಟಿ ಗಮನಾರ್ಹ ವಾದುದೆನಿಸುತ್ತದೆ. ಸ್ತ್ರೀಯರೂ ಈ ಕಾಲದಲ್ಲಿ ಭಾಗಿಗಳಾಗಿದ್ದರು. ಕಾಳಿಮಯ ಗೇರಿಯ ಹೃಷೀಕೇಸದೇವರಿಗೆ ಮೂವರು ಭಿನ್ನ ವ್ಯಕ್ತಿಗಳು ದಾನಬಿಟ್ಟದ್ದು;[೪೪] ಅದರಲ್ಲಿ ಹಿರಿಯೊಕ್ಕಲ ಮಾಹಣ್ಣನ ಮದುವಳಿಗೆ ಬ್ರಾಹ್ಮಣಿ ಮಾಳಿಯಕ್ಕ ಒಬ್ಬಳೆಂದು ಗೊತ್ತಾಗುತ್ತದೆ. ಮತ್ತೊಬ್ಬ ಹೆಣ್ಣುಮಗಳು ಪಾತ್ರಚೂಡಾಮಣಿ ಚೌಂಡವ್ವೆ ಶ್ರೀ ಸ್ವಯಂಭೂ ತ್ರೀಕುಟೇಶ್ವರ ದೇವರಿಗೆ ತನ್ನ ಧರ್ಮ ಕೀರ್ತಿಗಳೆಂತೆರಡು ಸುವರ್ಣ ಧ್ವಜ ಮಾಡಿಸಿಕೊಟ್ಟ ವಿಷಯವನ್ನು ಒಂದು ಶಾಸನ[೪೫] ಹೇಳಿದೆ.

ಇನ್ನು ವೀರ ಆ ಕಾಲದ ಸಾರ್ವತ್ರಿಕ ಮೌಲ್ಯವಾಗಿತ್ತು. ರಾಜರ ಆಶ್ರಯ ಹೊಂದಿದ ಅಧಿಕಾರವರ್ಗ ಅವನ ಸಹಾಯಕ್ಕೆ ಸದಾಸಿದ್ಧವಿರುತ್ತಿತ್ತು. ಅದರಲ್ಲಿಯೂ ರಾಜರ ಮೆಚ್ಚುಗೆ ಪಡೆಯುವುದೆಂದರೆ ಎಲ್ಲಿಲ್ಲದ ಆನಂದ ಅವರಿಗೆ. ಮಹಾಮಂಡ

೪೨ EI xix pp 217-222
೪೩ SII xv No 621
೪೪ SII xviii No 138
೪೫ SII xv No 609

ಳೇಶ್ವರ ಮತ್ತು ಸಾಮಂತಾಧಿಪತಿಗಳ ಉದ್ದುದ್ದ ಬಿರುದುಗಳು ಇದನ್ನೇ ಸಮರ್ಥಿಸುತ್ತವೆ. ಐದನೆಯ ವಿಕ್ರಮಾದಿತ್ಯನ ಕಾಲದ ಒಂದು ಶಾಸನ[೪೬] ಮಾಧವ ಮತ್ತು ಅವನ ಮಗ ಕೇಸವಜೀಯರು ತೈಲ II ನ ಆಳ್ವಿಕೆಯಲ್ಲಿ ದೊಗ್ಗರ್ಬ್ಬದ ಕೊಂಕಣರ ದಾಳಿಗಳನ್ನು ಗೋದಾವರಿ ತೀರದಲ್ಲಿ ಎದುರಿಸಿ ಅವನನ್ನು ಮೆಚ್ಚಿಸಿದುದನ್ನು ಹಾಗೆಯೇ ವಿಕ್ರಮಾದಿತ್ಯನನ್ನು ಕೋಸಲ ದಾಳಿಯ ಸಂತೋಷ ಪಡಿಸಿದುದಾಗಿಯೂ ತಿಳಿಸುತ್ತದೆ. ಇಂದಿನಂತಹ ರಕ್ಷಣಾ ವ್ಯವಸ್ಥೆಯಿಲ್ಲದ ಆ ಕಾಲದಲ್ಲಿ ಆಯಾಊರಿನ ರಕ್ಷಣೆಯನ್ನು ಅಲ್ಲಿಯ ಜನರೇ ಮಾಡಿಕೊಳ್ಳುತ್ತಿದ್ದರು. ಅದಕ್ಕಾಗಿ ಸ್ಥಳೀಯ ವೀರಪಡೆಯೇ ಸಿದ್ಧವಾಗಿರುತ್ತಿತ್ತೆಂದು ಕಾಣುತ್ತದೆ. ಇದಕ್ಕೆ ನಿದರ್ಶನವನ್ನೊದಗಿಸುತ್ತದೆ ಕರ್ನಾಟಕದ ವೀರಗಲ್ಲಿನ ಪರಂಪರೆ ಇಂಥ ಸುಮಾರು ಹದಿನಾರು ವೀರಗಲ್ಲುಗಳು ಬೇಟಗೇರಿಯಲ್ಲಿ ದೊರಕಿವೆ. ಅವು ಅಪರೂಪವಾದ ನಮ್ಮ ಪ್ರಾಚೀನ ಯುದ್ಧ ಚಿತ್ರಗಳನ್ನು ಒದಗಿಸುತ್ತಿದ್ದು: ಎರಡು ವೀರಗಲ್ಲುಗಳು ಶಾಸನವನ್ನು ಹೊಂದಿವೆ. ಅದರಲ್ಲಿ ಒಂದು[೪೭] ಸಾದೇವ ಬಟ್ಟಕೆಱೆ (ಬೆಟಗೇರಿ) ಅಳಿದಾಗ ಗುಣರಮ ರಣದೀಕ್ಷಾಪರನಾಗಿ ನಾಗಘಟೆಯಲ್ಲಿ ವಿಶ್ರಾಂತದಿಂದ ಕಾದಿದ್ದನ್ನು ತಿಳಿಸಿದರೆ ಮತ್ತೊಂದು[೪೮] ನಾಗದೋರನೆಂಬವ ಬಟ್ಟಕೆಱೆಯ ಮೇಲೆ ದಾಳಿಮಾಡಿದಾಗ ಕಲಿಗಳ್ನೆಂಬವ ಕಾದಿ ಸತ್ತದ್ದನ್ನು ತಿಳಿಸುತ್ತದೆ.

ವಿದ್ಯೆ :

ಆಯಾ ಧರ್ಮಗಳ ಸ್ಥಿತಿಗತಿಗಳು ಬದಲಾದಂತೆ ವಿದ್ಯಾಸಂಸ್ಥೆಗಳ ಪ್ರಭಾವ ಮತ್ತು ಸಂಖ್ಯೆಯಲ್ಲಿಯೂ ವ್ಯತ್ಯಾಸವಾಗುತ್ತಿತ್ತು. ಜೈನವಿದ್ಯಾಕೇಂದ್ರಗಳು ಗದಗ-ಬೆಟಗೇರಿಯಲ್ಲಿದ್ದವೆನ್ನಲು ಸಧ್ಯಕ್ಕೆಯಾವ ಆಧಾರಗಳೂ ಇಲ್ಲ. ನಂತರ ವೈದಿಕ ಮತ ಸಂಪ್ರದಾಯಕ್ಕನುಗುಣವಾಗಿ ಅಗ್ರಹಾರಗಳು ವಿದ್ಯಾಕೇಂದ್ರಗಳಾಗಿದ್ದವು. ಅಲ್ಲಿಯ ಮಹಾಜನರು ವಿದ್ವಾಂಸರಾಗಿರುತ್ತಿದ್ದರು ಬೆಟಗೇರಿಯ ಮಹಾಜನರ ಕುರಿತು ಒಂದು ಶಾಸನ[೪೯] ಯಮನಿಯಮ ಸ್ವಾಧ್ಯಾಯ ಧ್ಯಾನ ಧ್ಯಾನ ಧಾರಣ ಮೌನಾನುಷ್ಠಾನ ಪರಾಯಣ ಜಪಸಮಾಧಿಶೀಲ ಗುಣಸಂಪನ್ನ ಶ್ರುತಿಸ್ಮೃತ್ಯರ್ತ್ಥಾಗಮ ಕುಳಲಪ್ವೇದಾನ ಸಿದ್ಧಾನ್ತಾಗಮತರ್ಕ್ಕವಾದ ವ್ಯಾಕರಣಾದಿ ಸರ್ವ್ವ ಶಾಸ್ತ್ರ ಘೂರ್ಣ್ನರ್ತ್ತ ಸಭಾಳೋಭಿತರುದ್ವ್ರ ಪೂಜಿತಸ್ನಿದತ್ತ ಕಮಾರ್ತಿಯಭ್ಯಾಗತ ದೇವತಾ ಸಂತರ್ಪ್ಪಿತಗೃಗ್ಗಣ) ಧಾರವ್ವಾಪ ವಿದೂರ-ರಪ್ಪರಮಯೋಗಿಗಳಧ್ಯಯನಧ್ಯಾಪನ ವೇದವಿದ್ಯಾ ಪಾರಗರ್ಕಳಾಗಮ ಕುಶಲಜ್ಞಾನಸಂಪೂರ್ಣರ್" ಆಗಿದ್ದರೆಂದು ವರ್ಣಿಸುತ್ತದೆ. ಇಲ್ಲಿಯ ಪ್ರತಿವಿಶೇಷಣವೂ ಅವರು ಮಹಾವಿದ್ವಾಂಸರಾಗಿದ್ದು; ಊರಿನಲ್ಲಿ ತುಂಬಾ ಗೌರವ ಹೊಂದಿದ್ದರೆಂಬು

---

೪೬ SII xi pt I No 76

೪೭ 61 xiii pp 187-190

೪೮ SII xi pt I No 21

೪೯ SII xviii No 114

ದನ್ನು ತಿಳಿಸುತ್ತದೆ. ಅಗ್ರಹಾರಗಳಲ್ಲಿ ಸಾಮಾನ್ಯವಾಗಿ ವೇದಸಿದ್ಧಾಂತಾಗಮ, ತರ್ಕ, ವ್ಯಾಕರಣಾದಿ ಸರ್ವಶಾಸ್ತ್ರಗಳನ್ನು ಬೋಧಿಸಲಾಗುತ್ತಿತ್ತು.

ಶೈವ ದೇವಸ್ಥಾನಗಳು ಮುನಿಗಳವಾಸಸ್ಥಾನವಾಗಿರುವುದರೊಂದಿಗೆ ವಿದ್ಯಾಕೇಂದ್ರಗಳೂ ಆಗಿದ್ದವು. ಸಾಮಾನ್ಯವಾಗಿ ಮುನಿ, ಆಚಾರ್ಯರು ನೆಲೆಯಾಗಿ ನಿಂತ ದೇವಸ್ಥಾನಗಳನ್ನು, ಮಠಗಳೆಂದು ಕರೆಯಲಾಗುತ್ತಿತ್ತು. ಪ್ರತಿ ಮಠಗಳೂ ತನ್ನದೇ ಆದ ಗುರುಪರಂಪರೆಯನ್ನು ಹೊಂದಿರುತ್ತಿದ್ದವು. ಚಾಳುಕ್ಯರ ಕಾಲದಲ್ಲಿ ಸ್ವಯಂಭು ತ್ರಿಕೂಟೇಶ್ವರ ದೇವರ ಮಠದಾಚಾರ್ಯರು ರಾಜಪೂಜ್ಯ ಕ್ರಿಯಾಶಕ್ತಿಪಂಡಿದೇವರಾಗಿದ್ದರು. ಯಾದವ ಮತ್ತು ಹೊಯ್ಸಳರ ಕಾಲದಲ್ಲಿ ಚಂದ್ರಭೂಷಣ ಪಂಡಿತರು ಆಚಾರ್ಯ ಪದವಿಯನ್ನು ವಹಿಸಿಕೊಂಡಿದ್ದರು. ನಂತರ ಅವರ ಶಿಷ್ಯ ಕ್ರಿಯಾಶಕ್ತಿ ಪಂಡಿತರು ಅಲ್ಲಿ ಆಚಾರ್ಯರಾಗಿದ್ದರು. ಈಚೆಗೆ ದೊರೆತ ಸರಸ್ವತಿ ದೇವಾಲಯದ ಶಾಸನ[೫೦] ಈ ಕ್ರಿಯಾಶಕ್ತಿಪಂಡಿತರ ವಿದ್ಯಾಕೇಂದ್ರ ಅನೇಕ ಚಿತ್ರಶಾಸ್ತ್ರಾದಿ ಉಪನಾಸಕ ರೂವಾರಿಗಳಿಂದೊಡಗೂಡಿದ್ದನ್ನು ಹೇಳುತ್ತಿದ್ದು, ಈ ಭಾಗದ ಚಿತ್ರಕಲ್ಪಶಾಸ್ತ್ರ ಕಲೆಗಳ ವಿಷಯಕ್ಕೆ ಹೆಚ್ಚಿನ ಅಂಶಗಳನ್ನು ಸೇರಿಸುತ್ತದೆ. ವಿದ್ಯಾದಾನಕ್ಕಾಗಿ ಜನರಿಂದ ಮುಕ್ತಹಸ್ತದ ಸಹಾಯ-ಸಹಕಾರ ಯಾವಾಗಲೂ ದೊರೆಯುತ್ತಿತ್ತು. ಭಕ್ತರು ದೇವಸ್ಥಾನಗಳಿಗೆ ದತ್ತಿಗಳನ್ನು ಬಿಡುವಾಗ ವಿದ್ಯಾಭ್ಯಾಸಕ್ಕಾಗಿ ಇಂತಿಷ್ಟು ಎಂದು ನಿಗಧಿಪಡಿಸುತ್ತಿದ್ದರು. ನೆಗಳ್ದ ವೃತ್ತಿಯುರ್ದ್ಧಡೆ ದೀನನಾಥಗಳ ವಾರಿಸತ್ರ, ವಿದ್ಯಾದಾನ, ಶಿವಾರಾಧನೆಗೆ ಕೊಡಬೇಕೆನ್ನುವ ಒಂದು ಶಾಸನದ[೫೧] ಹೇಳಿಕೆ ಗಮನಾರ್ಹವಾದುದು. ಮಹಾಸಾಮಂತ ಶೋಭನರಸರು ಸ್ವಯಂಭುದೇವರ ದೇಗುಲದ ಪೂಲಿಯ ಪಂಡಿತರ ವಿದ್ಯಾಶಿಷ್ಯರಾದ ಕಾಳಗ್ನಾನಿ ಪಕ್ವಾಣಜೀಯರ್ಗೆ ವಿದ್ಯಾದಾನವೆಂದು ಭೂಮಿಕೊಟ್ಟದ್ದು ತಿಳಿದುಬರುತ್ತದೆ.[೫೨] ಆರನೆಯ ವಿಕ್ರಮಾದಿತ್ಯನ ಮಹಾಪ್ರಧಾನ ದಂಡನಾಯಕ ಸೋಮೇಶ್ವರಭಟ್ಟನು ಪ್ರಭಾಕರ ಸಿದ್ಧಾಂತದ ಪೂರ್ವ ಮಿಮಾಂಸಾ ಶಾಲೆಯೊಂದನ್ನು ಸ್ಥಾಪಿಸಿ ಶಾಲೆಯ ಅಧ್ಯಾಪಕರಿಗೆ ೧೫೦ ಗದ್ಯಾಣ ಹಣದ ಬಡ್ಡಿಯನ್ನು ನಿಶ್ಚಯಿಸಿ ಕೊಟ್ಟದ್ದನ್ನು ಶಾಸನ[೫೩] ಹೇಳುತ್ತದೆ. ಈ ಶಾಸನ ಸೂತಚರತ್ರವೆಂಬ ಗ್ರಂಥವನ್ನು ಉಲ್ಲೇಖಿಸುತ್ತಿದ್ದುದರಿಂದ ಅದು ಅಂದಿನ ಅಧ್ಯಯನದಲ್ಲಿ ಉಪಯೋಗಿಸುತ್ತಿದ್ದಿರಬೇಕು. ಮತ್ತೊಂದು ಶಾಸನ[೫೪] ಮೊದಲನೆ ಸೋಮೇಶ್ವರನ ಮಹಾಮಂಡಳೇಶ್ವರ ವಶಾದರಸರು ‘ಸ್ವಾಧ್ಯಾಯಧಾರಣ ಮೋನಾನುಷ್ಠಾನ ಪರಾಯಣ ಜಪಸಮಾಧಿಶೀಲ

---

೫೦ ‘ಕ್ರಿಯಾಶಕ್ತಿ ಪಂಡಿತ ದೇವರು’ (ಸುಧಾ ೩೦ ಸೆಪ್ಟೆಂಬರ್ ೧೯೭೯) ಪ್ರೊ. ಬಿ. ಕೆ. ಹಿರೇಮಠ ಪು. ೧೬-೧೭

೫೧ SII xv No 547

೫೨ SII xi pt I No 48

೫೩ EI xv p 348

೫೪ SII xviii No 70

ಸಂಪನ್ನರಪ್ಪ' ಶ್ರಮವರ ಶಿಷ್ಯ ತತ್ಪುರುಷಜೀಯರಿಗೆ, ದೇವರು ಮತ್ತು ಮಠದ ತಪೋಧನರಿಗೆಂದು ದತ್ತಿಬಿಟ್ಟದ್ದನ್ನು ಉಲ್ಲೇಖಿಸುತ್ತದೆ. ಪ್ರೌಢ ಅಧ್ಯಯನದಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೂ ದಾನಕೊಡುವ ಪದ್ಧತಿ ಅಂದು ಇತ್ತು. ೧೧ನೆಯ ಶತಮಾನದ ಒಂದು ಶಾಸನ[೫೫] ಬಾಯಿಕಬ್ಬೆ ಎನ್ನುವವಳು ಭಟ್ಟವೃತ್ತಿ, ಛಾತ್ರವೃತ್ತಿಗೆ ಧರ್ಮ ಬಿಟ್ಟದ್ದನ್ನು ತಿಳಿಸುತ್ತದೆ. ಈ ಭಟ್ಟವೃತ್ತಿ ಮತ್ತು ಛಾತ್ರವೃತ್ತಿಗಳು ಪ್ರೌಢ ಉಪಾಧ್ಯಾಯ ಮತ್ತು ಪ್ರೌಢ ವಿದ್ಯಾರ್ಥಿಗಳ ಜೀವನೋಪಾಯಕ್ಕಾಗಿ ಕೊಟ್ಟದಾನ-ದತ್ತಿಗಳಾಗಿವೆ.[೫೬].

ಆರ್ಥಿಕ :

ಮೊದಲಿನಿಂದಲೂ ನಡೆದು ಬಂದ ಒಕ್ಕಲುತನವೇ ಸಾಮಾನ್ಯ ಜನರ ಮುಖ್ಯ ಕಸಬಾಗಿತ್ತು. ಶಾಸನಗಳಲ್ಲಿ ಬರುವ ನೂಜಿಪ್ಪರ್ತೊಕ್ಕಲು,[೫೭] ಬಿರಿಯೊಕ್ಕಲ ಮಾಹಣ್ಣ[೫೮] ಮುಂತಾದ ಉಲ್ಲೇಖಗಳನ್ನು ಗಮನಿಸಬೇಕು. ರೂವಾರಿ ಬೈರವ,[೫೯] ಸಿಪ್ಪಿಗರಕುಳತಿಲಕ ತಿಪ್ಪ,[೬೦] ಕಂಪಾರಿಕೆಯ ದಶವಸ್ದ[೬೧] ಮೊದಲಾದ ಉಕ್ತಿಗಳು ಆಯಾ ಜಾತಿಪಂಥಗಳೊಡನೆ ವೃತ್ತಿಯನ್ನೂ ಸೂಚಿಸುತ್ತವೆ. ಅಂದಿನ ಜನ ವ್ಯವಹಾರಕ್ಕಾಗಿ ಉಪಯೋಗಿಸುತ್ತಿದ್ದುದರಲ್ಲಿ ಪಣ (ಹಣ), ಹಾಗ, ಗದ್ಯಾಣ ಮುಖ್ಯವಾಗಿದ್ದವು. ಸಾಮಾನ್ಯವಾಗಿ ಅಗ್ರಹಾರಗಳು ತೆರಿಗೆಯಿಂದ ಮುಕ್ತವಾಗಿರುತ್ತಿದ್ದವು. ಬಟ್ಟಕೆಜೀಯ ಮಹಾಜನ ಬೆಳ್ವೊಲ ೩೦೦ ಆಡಳಿತ ನೋಡುತ್ತಿದ್ದ ಮಹಾಶ್ರೀಮಂತನೆಂಬವನಿಂದ 'ಅಸನ್ನಾಯ' ಬೇಡಿಪಡೆದದ್ದು ತಿಳಿದುಬರುತ್ತದೆ.[೬೨] ಈ 'ಅಸನ್ನಾಯ' ಕಂದಾಯಕ್ಕೆ ಸಂಬಂಧಿಸಿದ ಒಪ್ಪಂದವಾಗಿರಬೇಕು. ಆರನೆಯ ವಿಕ್ರಮಾದಿತ್ಯನ ಮಹಾಸಾಮಂತಾಧಿಪತಿ ಭೀವಣಯ್ಯಂಗಳು ಪಲಸಿಗೆ ಪನ್ನಿರ್ಛಾಸಿರ, ಸಪ್ತಾರ್ದ್ಧಲಕ್ಷೆಯುಮಚ್ಚುಪನ್ನಾಯ ಆಳುತ್ತಿರುವ ವಿಷಯ ಒಂದು ಶಾಸನದಲ್ಲಿ[೬೩] ಬಂದಿದೆ. ಇಲ್ಲಿಯ 'ಅಚ್ಚುಪನ್ನಾಯ' ತೆರಿಗೆಗೆ ಸಂಬಂಧಿಸಿದ್ದು, ಸಪ್ತಾರ್ದ ಲಕ್ಷತೆರಿಗೆ ಬರುವ ಪ್ರದೇಶವನ್ನು ಸೂಚಿಸುತ್ತದೆ. ಹೊಯ್ಸಳ ವೀರಬಲ್ಲಾಳ ತ್ರಿಕೂಟೇಶ್ವರ ದೇವರಿಗೆ ದತ್ತಿಬಿಡುವ ಸಂದರ್ಭದಲ್ಲಿ ಬೆಳ್ವೊಲ

---

೫೫ SII xviii No 340

೫೬ ಹೆಚ್ಚಿನ ವಿವರಗಳಿಗೆ ನೋಡಿ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ: ಡಾ. ಎಂ. ಚಿದಾನಂದಮೂರ್ತಿ, ಪು. ೨೨೮ ರಿಂದ ೨೩೦.

೫೭ SII xviii No 115

೫೮ SII xviii No 138

೫೯ SII xi pt. No 48

೬೦ SII xviii No 70

೬೧ SII xviii No 115

೬೨ SII xviii No 22

೬೩ SII xi st II No 150

೩೦೦ ರಲ್ಲಿಯ ಹೊಂಬಾಳಲುವನ್ನು ಎಂಟು ವಿಷಯದಲ್ಲಿ ತೆರಿಗೆ ಮುಕ್ತಮಾಡಿ ಕೊಟ್ಟಿದ್ದನ್ನು ಒಂದು ಶಾಸನ[೬೪] ಹೇಳುತ್ತದೆ. ಆದರೆ ಈ ಎಂಟು ವಿಷಯಗಳು ಯಾವುವು ಎಂಬುದು ಗೊತ್ತಾಗುವುದಿಲ್ಲ. ಹೊರಗಿನಿಂದ ಬಂದ ವಸ್ತುಗಳಿಗೆ ಕರಭಾರಹಾಕುವ ಪದ್ಧತಿ ಇಂದಿಗೂ ಇದೆ. ಬತ್ತ, ಗೊಬ್ಬರ, ಎಳ್ಳು ಎಣ್ಣೆಯ ವಿಷಯದಲ್ಲಿ ಇಂಥ ಕರಬಾರವನ್ನು ಶಾಸನ[೬೫] ಸೂಚಿಸುತ್ತದೆ. ಭೂಮಿ ಅಳತೆಯನ್ನು ಸಾಮಾನ್ಯವಾಗಿ ಮತ್ತರಿನಲ್ಲಿ ಹೇಳಲಾಗುತ್ತಿತ್ತು. ಭೂಮಿಯ ಮೇರೆಗಳನ್ನು ನಿರ್ಧರಿಸಲು "ನಾಲ್ಕು ಗೋಟಿಸಲು ಕವಿಲೆ ಕತ್ತಿಗೆಯ ಲಿಂಗಲಾಂಛನ ಕಲ್ಲು" ನೆಡಲಾಗುತ್ತಿತ್ತು.[೬೬]

ಸಾರ್ವಜನಿಕ :

ದೇವಸ್ಥಾನಗಳು ಸಾರ್ವಜನಿಕ ಸಂಸ್ಥೆಗಳಾದುದರಿಂದ ಸಾರ್ವಜನಿಕ ಜೀವನದಲ್ಲಿ ಬಹುಪ್ರಮುಖ ಪಾತ್ರವಹಿಸಿವೆ. ಗದಗ-ಬೆಟಗೇರಿ ಶಾಸನಗಳಲ್ಲಿ ಹೆಚ್ಚಿನವು ವೀರನಾರಾಯಣ, ತ್ರಿಕುಟೇಶ್ವರ ದೇವಸ್ಥಾನದಲ್ಲಿ ದೊರೆತಿರುವುದನ್ನು ನೋಡಿದರೆ, ಅವು ಅಲ್ಲಿಯ ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿದ್ದು ಗೊತ್ತಾಗುತ್ತದೆ. ಜನತೆ ದಾನ ಕೊಡುವಾಗ ಅದು ಇಂತಿಂಥ ಕಾರ್ಯಗಳಿಗೇ ವಿನಿಯೋಗವಾಗಬೇಕೆಂದು ನಿರ್ಧರಿಸಿ ಕೊಡುತ್ತಿದ್ದರು. ಆರನೆಯ ವಿಕ್ರಮಾದಿತ್ಯನ ಶಾಸನ[೬೭] ಊರೊಡೆಯ ಮದ್ದಿಮಯ್ಯ ನಾಯಕನು ಶಂಕರನಾರಾಯಣ ಗುಡಿಯನ್ನು ಕಟ್ಟಿಸಿ ದೇವರಂಗಭೋಗಕ್ಕೆ, ಪನ್ನಿರ್ವ ಬ್ರಾಹ್ಮಣರ್ಗ್ಗೆ, ಛಾವಿಯ ಧರ್ಮ್ಮಪತ್ರಕ್ಕೆ, ಅಜಿವಂಟಗೆಗೆ, ದೇವಗೃಹ ಮತ್ತು ಅಲ್ಲಿಯ ಸತ್ರದ ಮನೆಗ ನಿಶ್ಚಯಿಸಿ ನೀಡಿದ ಗದ್ಯಾಣದ ವಿವರವನ್ನು ಹೇಳುತ್ತದೆ. ಹೊಯ್ಸಳ ವೀರಬಲ್ಲಾಳನು ಪೂರ್ವಪ್ರಸಿದ್ಧವಾಗಿ ಪಾಳುದಿದ್ದ ಸ್ಥಳವನ್ನು (ತ್ರಿಕುಟೇಶ್ವರ ದೇವಾಲಯ) ಪುನಃ ನಿರ್ಮಾಣಮಾಡಿ ಮೊದಲು ಬೇರೆಡೆಯಿದ್ದ ವೇಶ್ಯಾವಿಧಿಯನ್ನು ದೇವಾಲಯ ಸಮೀಪ ಮಾಡಿದ್ದಾಗಿಯೂ. ದೇವರ ಪೂಜೆಗಾಗಿ ಒಂದು ಪುಷ್ಕರಿಣಿ ಮತ್ತು ಹೂಗಳಿಗಾಗಿ ನಂದನವನ್ನು ನಿರ್ಮಿಸಿದಾಗಿಯೂ ಅವನ ಶಾಸನದಿಂದ[೬೮] ತಿಳಿದುಬರುತ್ತದೆ.

ದೇವರ ಪ್ರೀತಿಗಾಗಿ ಗದುಗಿನ ಶೇರ ಬೀದಿಯೊಳಗಣ ಕೋಟೆಯ ಮುಂದೆ ಒಂದು ಅಜಿಪಟಿಗೆ, ಬೆಟಗೇರಿ ಮತ್ತು ಬಿನಕನಕೊಪ್ಪಗಳ ಉಭಯಮಾರ್ಗದ ದಾರಿಯಲಿ ಅಜಿಪಟಿಗೆಗಾಗಿ ದಾನಕೊಟ್ಟಿದ್ದನ್ನು ಒಂದು ಶಾಸನ[೬೯] ಉಲ್ಲೇಖಿಸಿದೆ. ಮತ್ತೊಂದು

---

೬೪ IA II p 291

೬೫ SII xv No 140

೬೬ SII xv No 140

೬೭ SII xviii 104

೬೮ IA II p. 299

೬೯ SII xviii No 280

ಶಾಸನ ಬಾಯಿಕಟ್ಟೆ ವಿನ್ನಾವವಳು ಊರೊಳಗೀ ನಂದನವನಕ್ಕೆ ಗದ್ಯಾಣ ಬಿಟ್ಟು ಕೊಟ್ಟಿದ್ದನ್ನು ತಿಳಿಸುತ್ತದೆ.[೭೦] ವಿಜಯನಗರದ ಅರಸು ಅಚ್ಯುತರಾಯ ಭಾಸ್ಕರಕ್ಷೇತ್ರ ತುಂಗಭದ್ರಾ ತೀರದ ವಿಠಲಸನ್ನಿಧಿಯಲ್ಲಿ ಮಾದವ ಪ್ರೀತ್ಯರ್ಥವಾಗಿ ಭೂಸುರರಿಗೆ ಆನಂದ ನಿಧಿಯೆಂಬ ದಾನಕೊಟ್ಟು ಸಂತೋಷಪಡಿಸಿದ ವಿಷಯ ತಿಳಿದುಬಂದಿದೆ.[೭೧] ದುರ್ದೈವ ದಿಂದ ಅದರ ಸ್ವರೂಪಾದಿ ವಿವರಗಳು ಗೊತ್ತಾಗುವುದಿಲ್ಲ. ಸಾರ್ವಜನಿಕ ಚಟುವಟಿಕೆ ಗಳ ಕುರಿತು ಇಂಥ ಸಾಕಷ್ಟು ವಿವರಗಳನ್ನು ಕರ್ನಾಟಕದ ಶಾಸನಗಳಲ್ಲಿ ಗುರುತಿಸ ಬಹುದು.

ಒಟ್ಟು ರಾಷ್ಟ್ರಕೂಟರ ಕಾಲದಿಂದ ವಿಜಯನಗರ ಸಾಮ್ರಾಜ್ಯ ಕಾಲದವರೆಗೆ ಅಂದರೆ ಸುಮಾರು ೭೦೦ ವರ್ಷಗಳಕಾಲ ಗದಗ–ಬೆಟಗೇರಿ ತನ್ನದೇ ಆದ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸದಿಂದ ಕರ್ನಾಟಕ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದೆ.

---

೭೦ SII xviii No. 340

೭೧ SII xv No. 253 ಮತ್ತು SII xviii No. 283

ಕನ್ನಡ ಕಾವ್ಯಗಳಲ್ಲಿ ನೃತ್ಯ ಕಲಾವೈಭವ

• ಕೆ. ಶ್ರೀಕಂಠಯ್ಯ

ಪ್ರಕೃತಿಯಲ್ಲಿರುವ ಲಯಬದ್ಧವಾದ ವ್ಯವಸ್ಥೆಗೆ ಮಾನವನು ತೋರಿಸಿದ ದೈಹಿಕ ಪ್ರತಿಕ್ರಿಯೆಯೇ ನರ್ತನಕ್ಕೆ ಮೂಲ. ದಕ್ಷಿಣ ಭಾರತದಲ್ಲಿ ನೃತ್ಯಕಲೆ ವಿಜಯನಗರದ ಅರಸರ ಕಾಲದಲ್ಲಿ ಶಿಖರವನ್ನು ಮುಟ್ಟಿತು. ವಿಜಯನಗರ ಸಾಮ್ರಾಜ್ಯದ ನಂತರವೂ ಸಂಗೀತ ಮತ್ತು ನೃತ್ಯಕಲೆಗಳು ಜನಜೀವನವನ್ನು ಸೂರೆಗೊಂಡಿದ್ದವು. ವಿದೇಶೀ ಪ್ರವಾಸಿಗಳಾದ ಅಬ್ದುರ್‌ರಜಾಕ್, ಪಾಯೇಸ್ ಮತ್ತು ನ್ಯೂನಿಜ್ ಅವರುಗಳು ವಿಜಯನಗರದ ನವರಾತ್ರಿ ವೈಭವವನ್ನೂ ಹಾಗೂ ಹೆಂಗಸರು ಹೊಂದಿದ್ದ ಸ್ಥಾನಮಾನಗಳನ್ನೂ ಕುರಿತು ಹೇಳುವಾಗ ನೃತ್ಯ ನಾರಿಯರ ವೈಭವವನ್ನೂ ಹಾಗೂ ಅವರ ಹಾವಭಾವಗಳನ್ನೂ ನೋಡಿ ಬೆರಗುಗೊಂಡಿದ್ದಾರೆ, ಭಾವ ಪರವಶರಾಗಿದ್ದಾರೆ. ಪಾಯೇಸನು ತಾನು ಅರಮನೆಯಲ್ಲಿ ಕಂಡ ನಾಟ್ಯಶಾಲೆಯ ರಮ್ಯತೆಯನ್ನೂ, ಕಲಾವೈಭವವನ್ನೂ ಮನಮುಟ್ಟಿಹೊಗಳಿದ್ದಾನೆ: ಹಾಗೆಯೇ ಮಹಾನವಮಿ ಹಬ್ಬದಲ್ಲಿ ನಡೆಯುತ್ತಿದ್ದ ನೃತ್ಯ ಪ್ರದರ್ಶನವನ್ನು ವಿಸ್ತಾರವಾಗಿ ಚಿತ್ರಿಸಿದ್ದಾನೆ.

ಕರ್ನಾಟಕದಲ್ಲಿ ನೃತ್ಯ ಕಲೆ ಬಹಳ ಹಿಂದಿನಿಂದಲೂ ಪ್ರಸಿದ್ಧವಾಗಿತ್ತು ಎಂಬುದಕ್ಕೆ ಶಾಸನಾಧಾರಗಳು ಮಾತ್ರವೇ ಅಲ್ಲದೆ ಸಾಹಿತ್ಯ ಕೃತಿಗಳೂ ಸಾಕಷ್ಟು ಆಧಾರವನ್ನು ಒದಗಿಸಬಲ್ಲವು. ಪಂಪನ ಆದಿಪುರಾಣದಲ್ಲಿ ಬರುವ 'ನೀಲಾಂಜನೆಯ ನೃತ್ಯ; ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಮಾಯೆ ಮಧುಕೇಶ್ವರಾಲಯದಲ್ಲಿ ಸಲ್ಲಿಸಿದ ನಾಟ್ಯಸೇವೆ. ಚಂದ್ರಶೇಖರ ಕವಿಯ 'ವಿರೂಪಾಕ್ಷಾಸ್ಥಾನ ವರ್ಣನಂ'ದಲ್ಲಿ ಚಿತ್ರಿಸಿರುವ ವಿರೂಪಾಕ್ಷನೋಲಗದಲ್ಲಿ (ಅರ್ಥಾತ್ ಪ್ರೌಢದೇವರಾಯನ ಮುಂದೆ) ನಡೆದ ಸಂಗೀತ ನೃತ್ಯ ಕಲಾಸೇವೆ, ಕಡೆಯದಾಗಿ ರತ್ನಾಕರವರ್ಣಿಯ "ಭರತೇದ ವೈಭವದಲ್ಲಿ ಕಡೆದಿರುವ ಅದ್ಭುತ ನೃತ್ಯಕಲಾ ಪ್ರಪಂಚ– ಈ ಒಂದೊಂದು ಚಿತ್ರವೂ ನೃತ್ಯಕಲೆಗೆ ಕನ್ನಡ ಕವಿಗಳು ನೀಡಿರುವ ಕಮನೀಯ ಕಾಣಿಕೆ: ಅವು ಸಮಕಾಲೀನ ಚಿತ್ರಗಳೂ ಹೌದು.

ಈ ಕವಿಗಳು ಕೊಡುವ ನೃತ್ಯಕಲೆಯ ವೈಭವದ ವರ್ಣನೆಗಳಲ್ಲಿ ನಾಟ್ಯಕ್ಕೆ ಸಂಬಂಧಿಸಿದಂತೆ ನಾಟ್ಯಶಾಸ್ತ್ರ, ನಾಟ್ಯ ಶಾಲೆ, ನಾಟ್ಯಾಲಂಕಾರ, ಪಕ್ಕವಾದ್ಯ ನೃತ್ಯದ ನಡೆ, ವಿವಿಧ

ಭಂಗಿಗಳು, ವಿವಿಧ ನೃತ್ಯಗಳು; ರಾಜಸಭೆಯಲ್ಲಿ ನೃತ್ಯಪ್ರದರ್ಶನ, ಪ್ರೇಕ್ಷಕರು, ಪ್ರಶಂಸೆ, ರಾಜನಿಂದ ಬಹುಮಾನ-ಮುಂತಾದ ಉಪಯುಕ್ತ ಮಾಹಿತಿಗಳು ದೊರೆಯುತ್ತದೆ.

"ಪೂಜೆಯಲ್ಲಿ ದೇವರಿಗೆ ಮಾಡುವ ನಾನಾ ವಿಧವಾದ ಉಪಚಾರಗಳಲ್ಲಿ ನೃತ್ಯೋಪಚಾರವೂ ಒಂದು. ಕರ್ನಾಟಕದ ಶಾಸನಗಳಲ್ಲಿ 'ಅಂಗಭೋಗ' 'ರಂಗಭೋಗ' ಎಂಬ ಮಾತುಗಳು ಬರುತ್ತವೆ. ಸ್ನಾನ, ಗಂಧಲೇಪನ, ಧೂಪ, ದೀಪ, ಪುಷ್ಪ ಇತ್ಯಾದಿಗಳು ವಿಗ್ರಹಕ್ಕೆ ಸಲ್ಲುವ ಅಂಗಭೋಗಗಳು. ದೇವತಾಮೂರ್ತಿಯಿರುವ ಗರ್ಭಗುಡಿಯ ಮುಂದಿನ ರಂಗದ ಮೇಲೆ ನಡೆಯುವ ಗೀತ, ನೃತ್ಯಗಳೇ ರಂಗಭೋಗಗಳು ದೇವದಾಸಿಯರೇ ರಂಗಭೋಗದ ಉಪಕರಣಗಳು ದೇವಾಲಯಗಳಲ್ಲಿ ದೇವದಾಸಿಯರು ವಂಶಪರಂಪರೆಯಾಗಿ ಸೇವೆಮಾಡುತ್ತಿದ್ದರು. ದಕ್ಷಿಣ ದೇಶದಲ್ಲಿ ಕೆಲವು ಮುಖ್ಯ ದೇವಾಲಯಗಳಲ್ಲಿ ಸಂಗೀತ, ನಾಟ್ಯ ಸೇವೆಗಾಗಿ ದೇವದಾಸಿಯರಿಗೆ ಹೊಲಮನೆ ಮುಂತಾದುವುಗಳನ್ನು ದಾನಮಾಡುತ್ತಿದ್ದರೆಂದು ಶಾಸನಗಳು ಹೇಳುತ್ತವೆ. ಪ್ರವಾಸಿ ಪಾಯೇಸನು ಕೂಡ ವಿಜಯನಗರದಲ್ಲಿನ ದೇವಾಲಯಗಳನ್ನು ಕುರಿತು ಹೇಳುವಾಗ ದೇವಾಸ್ಥಾನಕ್ಕೆ ಸೇರಿದ ದೇವದಾಸಿಯರು ದೇವರ ಮುಂದೆ ನೃತ್ಯ ಮಾಡುತ್ತಾರೆ ಎಂದು ಹೇಳುತ್ತಾನೆ.

"ದೇವರಿಗೆ ನೃತ್ಯ ಸೇವೆಯನ್ನು ಪೂಜೆಯ ಕಾಲದಲ್ಲಿ ದೇವದಾಸಿಯರು ಸಲ್ಲಿಸುವುದು ಹಿಂದಿನಿಂದ ಬಂದ ಪದ್ಧತಿಯಾದರೂ ಆ ಕಲೆ ಅವರಿಗೆ ಮಾತ್ರವೇ ಸೀಮಿತವಾಗಿರಲಿಲ್ಲ. ವೇಶ್ಯೆಯರಲ್ಲದ ಉತ್ತಮ ಕುಲದವರೂ ನಾಟ್ಯವನ್ನು ಕಲಿಯುತ್ತಿದ್ದರು. ಕರ್ನಾಟಕದ ರಾಣಿಯರಾದ ಶಾಂತಲಾ, ಚಂದಲಾ, ಪದ್ಮಲಾ ಮುಂತಾದವರು ಬಹಿರಂಗವಾಗಿ ರಾಜನಮುಂದೆ ನೃತ್ಯಮಾಡಿ. ಸಂತುಷ್ಟನಾದ ರಾಜನಿಂದ ಬಹುಮಾನವಾಗಿ ಪಡೆದ ಗ್ರಾಮಗಳನ್ನೂ, ದೇವಬ್ರಾಹ್ಮಣರಿಗೆ ದಾನಮಾಡಿದಂತೆ ಶಾಸನಗಳು ಹೇಳುವುವು. ಸತ್ಕುಲದವರು ಅಭಿನಯ ಮಾಡಿದರೆ ಗೌರವಕ್ಕೆ ಕುಂದು ಎಂಬಭಾವನೆ ೧೪ನೆಯ ಶತಮಾನದವರೆಗೂ ಇರಲಿಲ್ಲ." (ಭಾ. ಸಂ. ಪುಟ ೩೦೬).

ನಾಟ್ಯಶಾಲೆ :

ನಾಟ್ಯಕ್ಕೆ ರಂಗಸ್ಥಳವು ಅವಶ್ಯಕ. ಭರತನ ನಾಟ್ಯಶಾಸ್ತ್ರದಲ್ಲಿ ಚತುರಸ್ರ ತ್ರಿಕೋಣ, ಮಂಡಲಾಕಾರ, ಅರ್ಧಚಂದ್ರಾಕಾರಗಳಾದ ರಂಗಸ್ಥಳವನ್ನು ನಿರ್ಮಿಸುವ ರೀತಿಯನ್ನು ವರ್ಣಿಸಿದೆ. ಹಿಂದಿನ ಕಾಲದಲ್ಲಿ ಸಾರ್ವಜನಿಕ ನೃತ್ಯಪ್ರದರ್ಶನಗಳು ನಡೆಯುವುದಕ್ಕೆ ಪ್ರತ್ಯೇಕ ನಾಟ್ಯಶಾಲೆಗಳಿರುತ್ತಿದ್ದುವೇ ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆತಿಲ್ಲ. ಆದರೆ ದೇವಾಲಯಗಳಲ್ಲಿ ನೃತ್ಯಪ್ರದರ್ಶನಗಳು ನಡೆಯುತ್ತಿದ್ದುವು ಎಂಬುದಕ್ಕೆ 'ವಿರೂಪಾಕ್ಷವಸಂತೋತ್ಸವ ಚಂಪು' 'ಪ್ರಭುಲಿಂಗಲೀಲೆ' ಎಂಬ ಕೃತಿಗಳಲ್ಲಿ

ದೊರೆಯುವ ವೈಭವದ ವರ್ಣನೆಗಳೇ ಸಾಕ್ಷಿ. ಇವತ್ತಿಗೂ ಅನೇಕ ದೇವಾಲಯಗಳಲ್ಲಿ 'ರಂಗಮಂಟಪ'ಗಳಿರುವುದನ್ನು ಕಾಣಬಹುದು.

ವಿಜಯನಗರದ ಅರಸರ ಪಟ್ಟಾಭಿಷೇಕ ಮಹೋತ್ಸವಗಳೆಲ್ಲ ಸಾಮಾನ್ಯವಾಗಿ ದೇವಾಲಯಗಳಲ್ಲಿ ಬಹುಮಟ್ಟಿಗೆ ವಿರೂಪಾಕ್ಷನ ದೇವಾಲಯದಲ್ಲೇ ನಡೆಯುತ್ತಿದ್ದವು. ಆಸಂದರ್ಭದಲ್ಲೂ ಸಂಗೀತ, ನೃತ್ಯ, ಕಲಾಪ್ರದರ್ಶನಗಳು ನಡೆದಿರಬಹುದು. ಕೃಷ್ಣದೇವರಾಯನು ತನ್ನಪಟ್ಟಾಭಿಷೇಕದ ನೆನಪಿನಕುರುಹಾಗಿ ಹಂಪೆಯ ವಿರೂಪಾಕ್ಷದೇವಾಲಯಕ್ಕೆ ಒಂದು ರಂಗಮಂಟಪವನ್ನೂ ಗೋಪುರವನ್ನೂ ಕಟ್ಟಿಸಿದಂತೆ ತೋರುವುದು.

ಪ್ರವಾಸಿ ಅಬ್ದುಲ್ ರಜಾಕನು ವಿಜಯನಗರದಲ್ಲಿ ವೈಭವದಿಂದ ನಡೆಯುತ್ತಿದ್ದ ಮಹಾನವಮಿ ಹಬ್ಬದ ಸಂದರ್ಭದಲ್ಲಿ ಸಂಗೀತ, ನೃತ್ಯ, ಕಲಾಪ್ರದರ್ಶನಗಳಿಗೆ ಭವ್ಯವಾದ ರಂಗಮಂಟಪಗಳನ್ನು ವಿಶಾಲವಾದ ಬಯಲಿನಲ್ಲಿ ರಚಿಸುತ್ತಾರೆ ಎಂದು ಹೇಳಿ ಆ ರಂಗ ಮಂಟಪದ ರಚನಾ ಕೌಶಲವನ್ನೂ ಕಲಾವೈಭವವನ್ನೂ ಅಮೋಘವಾಗಿ ವರ್ಣಿಸಿದ್ದಾನೆ.

ಕೆಲವು ಮಂಟಪಗಳನ್ನು ಯಾವರೀತಿ ನಿರ್ಮಿಸಿರುತ್ತಾರೆಂದರೆ ಅವನ್ನು ಬೇಕೆಂದರೆ ಕ್ಷಿಪ್ರದಲ್ಲಿ ತಿರುಗಿಸಿ ಬೇರೊಂದು ಮುಖ ತೋರಿಸಬಹುದು. ಒಂದೊಂದು ಕ್ಷಣಕ್ಕೆ ಒಂದೊಂದು ತರಹ ಕೋಣೆ ಅಥವಾ ಪಜಾರ ಕಾಣಿಸಿಕೊಳ್ಳುತ್ತದೆ. ಪ್ರ.ಕಂ.೯ಂ ೨ ಪು. ೧೬೫ ಈ ಪ್ರವಾಸಿ ಹೇಳಿಸುವ ಕ್ಷಿಪ್ರದಲ್ಲಿ ತಿರುಗುವ ಬದಲಾಗುವ ರಂಗಮಂಟಪದ ರಚನಾ ಕೌಶಲ ಈಗಿನ 'ರಿವಾಲ್ವಿಂಗ್ ಸ್ಟೇಜ'ನ್ನು ಬಹುಮಟ್ಟಿಗೆ ಹೋಲುವುದೆಂದು ಹೇಳಬಹುದು. ಇದು ಆಗಿನವರಿಗಿದ್ದ ರಂಗಮಂಟಪದ ರಚನಾ ಕೌಶಲವನ್ನು ಸಾರಿ ಹೇಳುವಂತಿದೆ. ಆದರೆ ಮುಖ್ಯವಾಗಿ ನಾವು ಇಲ್ಲಿ ಗಮನಿಸಬೇಕಾಗಿರುವುದು ಆಗಿನ ಕಾಲದಲ್ಲಿ ನಾಟಕ, ನೃತ್ಯ ಮುಂತಾದ ಸಾರ್ವಜನಿಕ ಕಲಾಪ್ರದರ್ಶನಗಳಿಗೆ ವಿಶಾಲ ಪ್ರದೇಶದಲ್ಲಿ ದೊಡ್ಡರಂಗ ಮಂಟಪವನ್ನು ರಚಿಸುತ್ತಿದ್ದರು ಎಂಬುದನ್ನು ರತ್ನಾಕರನು ನವರಾತ್ರಿ ವೈಭವವನ್ನು ವರ್ಣಿಸುವಾಗ ಈ ವಿಷಯವನ್ನು ಪ್ರತ್ಯಕ್ಷವಾಗಿ ಹೇಳದಿದ್ದರೂ ಅರಮನೆಯ ಮುಂದಿದ್ದ ವಿಶಾಲವಾದ ಬಯಲಿನಲ್ಲಿ ಈ ಪ್ರದರ್ಶನಗಳೆಲ್ಲ ನಡೆಯುತ್ತಿದ್ದವು ಎಂದು ಹೇಳಿದ್ದಾನೆ. "ನಗರಿಗೊಡೆಯನ ಗೃಹದಮುಂದೆ ಗಾವುದ ಹಗಲಾಯ್ತು ಕಾಕಿಣಿಯಿಂದ. ಬೊಂಬೆಗಳಾಟವಲ್ಲಲ್ಲಿ. ಪಾತ್ರ ನಿಕಂಬಿಸಿಜನಗಳಲ್ಲಲ್ಲಿ. ಆಡುವನೃತ್ಯವಲ್ಲಲ್ಲಿ. ." (ಭ. ವೈ. ೨೦–೩೪ ರಿಂದ ೪೯).

ಸಾರ್ವಜನಿಕ ನೃತ್ಯ ಪ್ರದರ್ಶನಗಳೇ ಅಲ್ಲದೆ, ಅರಮನೆಗಳಲ್ಲೂ ನೃತ್ಯ–ನಾಟಕ ಮುಂತಾದ ಕಲಾಪ್ರದರ್ಶನಗಳೇರ್ಪಡುತ್ತಿದ್ದವು. ಈ ಪ್ರದರ್ಶನಗಳಿಗೆಂದೇ ಅರಮನೆಯಲ್ಲಿ ಚಿತ್ರಶಾಲೆ, ವಿನೋದಶಾಲೆ, ಕಲಾಶಾಲೆ ಎಂಬ ಅನೇಕ ಕಲಾಶಾಲೆಗಳಿದ್ದವು: "ಚಿತ್ರಶಾಲೆ ನಾಟಕಶಾಲೆಗಳೊಳು ಓಲಗಶಾಲೆ ವಿನೋದಶಾಲೆಗಳೊಳು ಲೋಲ ಲೋಚನೆ ತೊಳಲಿದಳು" (ರಾ. ಚ. ೨೪–೨೩).

ಈ ಕಲಾ ಶಾಲೆಗಳಲ್ಲಿ ನಾಟ್ಯಶಾಲೆಯೂ ಒಂದು. ಇದನ್ನು ನಾಟಕ ಶಾಲೆ, ನರ್ತನ ಶಾಲೆ ಎಂದೂ ಕರೆಯುತ್ತಿದ್ದರು. ಈ ನಾಟ್ಯ ಶಾಲೆಯ ವೈಭವವರ್ಣನಾತೀತ. ಅದು ಶ್ರೀಮಂತಿಕೆಯ ಸಂಕೇತ ಒಂದೇ ಅಲ್ಲದೆ ಕುಶಲ ಕರದ ಬೀಡೂ ಹೌದು. ಸಿಂಹ ಭೂಪಾಲನು ಲಾಸ್ಯ ರಂಜನದಲ್ಲಿ (೧–೩೦) ನಾಟ್ಯ ಮಂದಿರವು ಚಿನ್ನರತ್ನಗಳ ಕಾಂತಿ ಯಿಂದಲೂ, ನೂತನ ಪುಷ್ಪ ಗುಚ್ಛಗಳ ಮಾಲೆಯಿಂದಲೂ. ಪ್ರಕಾಶಿಸುವ ಚಿತ್ರ ಗಳಿಂದಲೂ ಅನೇಕ ಚಿತ್ರಗಳಿಂದ ಕೂಡಿದ ರೇಶಿಮೆಯ ಮೇಲು ಕಟ್ಟಿನಿಂದಲೂ ಕೂಡಿರ ಬೇಕೆಂದು ಹೇಳುವನು. ರತ್ನಾಕರ ಕೊಡುವ ನಾಟ್ಯ ಶಾಲೆಯ ಈ ವರ್ಣನೆಯನ್ನು ನೋಡಿ; ॥ಮಿಸುನಿಗಂಬಗಳಿಂದ ಮೀಸುಗೋಡೆಗಳಿಂದ। ಪಸುಮಣೆಗಳ ತೊಲೆಯಿಂದ। ಮುಸುಕಳದಿರುಳುಪಗಲೆನ್ನದೆ ತಣ್ಣನ। ಬಿಸಿಲ ಕರೆವುದೇನೆಂದೆ. (ಭವೈ. ೧೨–೧೩) ಸರ್ವವೂ ಸ್ವರ್ಣಮಯವಾಗಿತ್ತು. ರತ್ನಾಕರನು ವಿಜಯನಗರದ ಅರಮನೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಈ ವರ್ಣನೆಯನ್ನು ಕೊಟ್ಟಿರಬಹುದು ಎಂದುದಕ್ಕೆ ವಿಜಯ ನಗರದ ಅರಮನೆಗೆ ಭೇಟಿ ಇತ್ತ ಪ್ರವಾಸಿ ಪಾಯೇಸನ ಈ ವರ್ಣನೆ ಪೂರಕವಾಗಿದೆ. "In the place where the King places himself to watch them dancing, all the floors and walls where he sits are covered with gold (FE. 288-9)ನಾಟ್ಯಶಾಲೆಯಲ್ಲಿ ಉದ್ದಕ್ಕೂ ಸಾಲುಸಾಲಾಗಿ ರನ್ನಗನ್ನಡಿಗಳನ್ನು ಹಾಕಿದ್ದರು. ಗೋಡೆಗಳ ಮೇಲೆಟ್ಟಿನಲ್ಲಿ ಜೋಡಿಸಿದ್ದ ಬೊಂಬೆಗಳು ಆ ಕನ್ನಡಿಗಳಲ್ಲಿ ಪ್ರತಿಫಲಿತವಾಗಿ ಪೊಸಬರು ಭ್ರಾಂತರಾಗಿ। ಭೂಮಿಯೊಳು ಇಟ್ಟಣಿಸಿದ್ದುದು ಜನ ವೆಂದು ಮುಟ್ಟದೆ ನಿಲ್ಲರಂಜಿನೋಳು ॥ ಕಂಭಗಳಲ್ಲಿ ಲೋವೆಗಳಲ್ಲಿ ಲುನಾ। ಸ್ತಂಭಿತ ಮಣಿ ಪ್ರತಿಮೆಗಳು। ರಂಭೆ ಮೇನಕೆಯರು ನಿಂದರೊಯೆನೆ ಬಿತ್ತ। ಜೃಂಭಣೆಗಳ ಮಾಡುತಿಹವು. (ಭವೈ ೧೨–೨೦) "ನೋಡುವ ಮನಿದಷ್ಟಮೋರೆ ದೊಗೆವ ಕಾಲ್ಗೆ। ಕೂಡೆರಗುವ ತಿಳಿವಂತೆ। ಮಾಡಿದ ಪೆಣ್ಗಂಡುಗಳ ರೂಪುರಂಜಿಸಿ। ಗೋಡೆಯೊಳಿದ್ದು ವೆನೆಂಬೆ"(ಭ ವೈ ೧೨–೨೧)"ಗಿಳಿಯ ನೋಡಿಸುವಂತೆ ವೀಣೆಯ ನುಡಿಸುವ। ತೊಳೆವು ಪಾತ್ರವನಾಡುವಂತೆ। ಹಳಹಳಚನೆ ಪೆಣ್ಣುರೂಪಿನ ಚಿಲ್ಲುಮ। ತ್ತಳಿಗಳೆಸದವು ಚಿತ್ತಿ ಯೊಳು" (ಭವೈ ೧೨–೨೨).

ನೃತ್ಯದಲ್ಲಿ ಸುಪ್ರಸಿದ್ಧನಾಮಗಳಾದ ರಂಭೆ. ಮೇನಕೆಯರನ್ನು ಹೆಸರಿಸಿ ಅವರ ಭಾವ ಭಂಗಿಗಳ ನೆನಪನ್ನು ಈ ಶಿಲಾ ಬಾಲಿಕೆಯರು ಮಾಡಿಕೊಡುತ್ತಿದ್ದರು ಎಂಬ ಧ್ವನಿ ಕವಿಯ ಈ ವರ್ಣನೆಯಲ್ಲಿದೆ. ಬೇಲೂರು, ಹಳೇ ಬೀಡುಗಳ ಶಿಲಾ ಬಾಲಿಕೆಯರ ನೃತ್ಯ ಭಂಗಿಗಳನ್ನು ಅಭ್ಯಸಿಸಲು ಇವತ್ತಿಗೂ ಅನೇಕ ನಾಟ್ಯಾಚಾರ್ಯರುಗಳು ಬಂದು ಕುತೂಹಲದಿಂದ ವೀಕ್ಷಿಸುತ್ತಾರೆ ವಿಜಯನಗರದ ಅರಮನೆಗಳಲ್ಲಿದ್ದ ನಾಟ್ಯಶಾಲೆ ಗಳಲ್ಲೂ ಇಂತಹ ನೃತ್ಯ ಭಂಗಿಯ ಶಿಲಾಮೂರ್ತಿಗಳನ್ನು ರಚಿಸಿ ನಿಲ್ಲಿಸಿದ್ದರೆ ಆಶ್ಚರ್ಯ ವೇನಿಲ್ಲ. ರತ್ನಾಕರನ ನಾಟ್ಯಶಾಲೆಯ ವರ್ಣನೆಯಲ್ಲಿ ಕಂಡು ಬರುವ ಸಮಕಾಲೀನ ಪ್ರಜ್ಞೆ

ಯೆಂಬುದನ್ನು ಕುರಿತು ವಿದ್ವಾಂಸರೊಬ್ಬರು ಹೇಳಿರುವ ಮಾತು ಮನನೀಯ: ರತ್ನಾಕರನು ವರ್ಣಿಸಿರುವ ನಾಟಕ ಶಾಲೆ ರಾಜಾಸ್ಥಾನಕ್ಕೆ ಸಂಬಂಧಪಟ್ಟಿದ್ದಾದರೂ ಒಟ್ಟಿನ ಮೇಲೆ ಅದು ಆಗಿನ ಕಾಲದ ನಾಟಕ ಶಾಲೆಯ ನಿರ್ದೇಶಿಸುತ್ತದೆ.

ಪ್ರವಾಸಿ ಪಾಯೇಸನು ಕೊಡುವ ವಿಜಯನಗರದ ಅರಮನೆಯ ನಾಟ್ಯ ಶಾಲೆಯ ವರ್ಣನೆಯನ್ನು ನೋಡಿ: "ನೃತ್ಯಶಾಲೆಯಲ್ಲಿ ಕಲ್ಲಿನಲ್ಲಿ ಕಡೆದ ಕಂಬಗಳು ಎಲ್ಲ ಕಂಬಗಳ ಮೇಲೂ ನರ್ತಕಿಯರ ಚಿತ್ರ ಕೆತ್ತಿದ್ದಾರೆ. ಒಂದೊಂದು ಚಿತ್ರವೂ ಒಂದೊಂದು ನೃತ್ಯ ಭಂಗಿಯನ್ನು ತೋರಿಸುತ್ತದೆ. ನರ್ತನಮಾಡುವವರು ಈ ಚಿತ್ರಗಳನ್ನು ನೋಡಿಕೊಂಡೇ ನರ್ತನಮಾಡಬಹುದು...ಮತ್ತೊಂದು ಕಡೆಯಲ್ಲಿ ರಾಜನು ಕುಳಿತುಕೊಳ್ಳುವ ಕಡೆ ೧೨ ವರ್ಷದ ಹುಡುಗಿ ನಾಟ್ಯಮಾಡುವ ಭಂಗಿಯಲ್ಲಿ ಒಂದು ಚಿನ್ನದ ವಿಗ್ರಹ ಮಾಡಿ ನಿಲ್ಲಿಸಿದ್ದಾರೆ" (ಪ್ರ ಕಂ ೯೦. ೨, ಪಾಯೇಸ್ ಪು ೩೮೩) ರತ್ನಾಕರನು ಕೊಡುವ ನಾಟ್ಯ ಶಾಲೆಯ ವರ್ಣನೆಗೂ ಹೆಚ್ಚು ಅಂತರವೇನೂ ಕಂಡುಬರುವುದಿಲ್ಲ. ನೃತ್ಯಶಾಲೆಯಲ್ಲಿ ಕಲಾವಿದರ ಅಭ್ಯಾಸಕ್ಕೆ ಅಲಂಕಾರಕ್ಕೆ, ವಿಶ್ರಾಂತಿಗೆಂದು ಒಂದು ಪ್ರತ್ಯೇಕ ಕೊಠಡಿ ಇರುತ್ತದೆ. ಪಾಯೇಸನು ಇದನ್ನು ಕೂಡ ಗಮನಿಸಿದ್ದಾನೆ. "ನೃತ್ಯ ಶಾಲೆಯ ಕೊನೆಯಲ್ಲಿ ಚಿತ್ರಿತವಾದ ವಿಶ್ರಾಂತಿ ಕೋಣೆ ಇದೆ. ನರ್ತನಾನಂತರ ನರ್ತಕೀಯರು ಇಲ್ಲಿ ಬಂದು ವಿಶ್ರಾಂತಿ ಪಡೆಯುವರು. ಶರೀರವು ಬಳ್ಳಿಯಂತೆ ಬಳುಕುವ ವಿಧಾನವನ್ನು ಇಲ್ಲಿ ಕಲಿಸುತ್ತಾರೆ. (ಪ್ರ ಕಂ ೯೦ ೨, ಪು. ೩೮೩).

ನಾಟ್ಯಾಲಂಕಾರ: ನಾಟ್ಯದಲ್ಲಿ ನಟರ ವೇಷಭೂಷಣಗಳು ಪಾತ್ರಕ್ಕನುಸಾರವಾಗಿ ಇರಬೇಕು. ಸಂಗೀತರತ್ನಾಕರವು ನಟರ ವೇಷಭೂಷಣಗಳನ್ನು ಕುರಿತು ಒಂದು ವಿವರಣೆಕೊಡುತ್ತಾ "ತಲೆಗೆ ಹೂವು, ಮೊಗ್ಗು ಮುತ್ತಿನ ಸರ ಮುಂತಾದವು; ಕಿವಿಗೆ ಮಕರ ಮುಖಿಗಳುಳ್ಳ ಕುಂಡಲ. ಲಲಾಟದಲ್ಲಿ ಕೇಸರ ಚಂದನ ಲಾಂಛನ, ಕಣ್ಣಿಗೆ ಅಂಜನ, ಕೈಗೆ ಕಂಕಣ, ಕೇಯೂರ, ಭುಜ ಕೀರ್ತಿ, ಕಂಠಕ್ಕೆ ಕಸ್ತೂರಿಕಾ ಪತ್ರದ ಚೂರ್ಣ, ಎದೆಯ ಮೇಲೆ ಹಾರಗಳು, ಉಂಗುರ, ಬಿಳಿ ಅಥವಾ ಗುಲಾಬಿ ಬಣ್ಣದ ಉತ್ತರೀಯ, ಸೀರೆಗಳು ಕಾಲಿಗೆ ಕಂಚಿನಗೆಜ್ಜೆ, ಸರ" ಇವುಗಳ ಹೆಸರನ್ನು ಹೇಳುತ್ತದೆ (ಸಂಗೀತರತ್ನಾಕರ. ೮, ೧೨೫೦-೭ ಉಲ್ಲೇಖ ತಾ. ಶ್ರೀ ಕಂಠಶಾಸ್ತ್ರಿ ಭಾರತೀಯ ಸಂಸ್ಕೃತಿ ಪು. ೩೯೯).

ನಾಟ್ಯಕ್ಕೆ ಸಿದ್ಧಳಾಗುವ ಹೆಣ್ಣು ಯಾವ ರೀತಿ ಸಾಲಂಕೃತಳಾಗಿ ಬರಬೇಕು ಎನ್ನುವ ಸೂಚನೆ ಬಸವಪುರಾಣದ ಒಂದು ಸಂದರ್ಭದಲ್ಲಿ ದೊರೆಯುತ್ತದೆ; "ಇಟ್ಟು ಜಡೆ ಬೊಲ್ಲೆಹವ ಮರ್ದಿಸಿ। ತೊಟ್ಟು ಕಂಚುಕ ಮುಂಡುಕೂಲವ। ನುಟ್ಟು ಚಲ್ಲಣ ಮಂಚಿಸಿ ಮಣಿ ರಚಿತ ಸಿಂಜಿಣಿಯ । ಕಟ್ಟಿಕೊಂಡು ಬೆಡಂಗಡರೆ ಸೆರೆ । ದಿಟ್ಟಿ ನೀನೀನಾಟಕಕ್ಕಳ। ವಟ್ಟು ರೀತಿಯೊಳೊಪ್ಪಿ ಸೋಮದೇವಿ ನಡೆತಾರೆ." (ಬಪು. ೧೨-೪೩).

ಚಂದ್ರಶೇಖರ ಕವಿಯು ಕೊಡುವ ನಾಟ್ಯ ಸುಂದರಿಯೊಬ್ಬಳ ಅಲಂಕಾರ ವರ್ಣನೆ ಮತ್ತೊಂದುರೀತಿಯದು. "ಶ್ರೀ ವಿರೂಪಾಕ್ಷನ ನಿರೂಪದಿಂ ಸಮ್ಮುಖದಲ್ಲಿ ಪಿಡಿದ ಪಟ್ಟಾವಳಿಯ ಜವನಿಕೆಯೊಳಗೆ ಸಮುಚಿತವಾದ ಭೂಮಿಕೆಯಂತಳೆವಲ್ಲಿ ದೇಸಿ ನೂಪರವಾಗದೆ ಸಮಕಟ್ಟಿನ ರತ್ನದೊಡುವಿನ ಮುತ್ತಿನ ಪೊಲೆಗಟ್ಟಿನ ಪೊಂಬಟ್ಟೆಯ ಜೆಲ್ಲಣದ ಸಿರಿಗಟ್ಟಿದಧೊರ್ಣರು ಕದಮಿರುಗುವ ಪೊನ್ನುಡೆ ನೂಲಿನ ಕಿರುಗೆಜ್ಜೆಯ." (ನಿಸ್ಥಾವ ೩೨-೮ ವಚನ).

ರತ್ನಾಕರನು ಒಂದು ವರ್ಣನೆಯಲ್ಲಿ ನಾಟ್ಯರಾಣಿಯರ ಅಲಂಕಾರ ಮುತ್ತಿನ **ಮಯವಾಗಿತ್ತೆಂದು ಹೇಳುತ್ತಾನೆ :**

"ಮುತ್ತಿನಬೊಟ್ಟು ಮುತ್ತಿನಸರ ತುರುಬಿನ । ಮುತ್ತಿನಜಡೆ, ಮುತ್ತಿನೋಲೆ, ತತ್ತಮೂಗುತಿಯಿಂದ ಮೊಗಗಳಿದ್ದುವು ತಾರೆ । ಮುತ್ತಿದ ಬಹುಚಂದ್ರರಂತೆ" (ಭವ್ಯ ೧೩-೫೨).

ಪಕ್ಕವಾದ್ಯ :

ನಾಟ್ಯ ಪ್ರಾರಂಭವಾಗುವುದಕ್ಕೆ ಮುಂಚೆ ಪಕ್ಕವಾದ್ಯಗಳವರುನಡೆಸುವ ಸಿದ್ಧತೆಯ ಕೆಲವು ಚಿತ್ರಗಳನ್ನು ನೋಡಿವರೆ, ನಾಟ್ಯದಲ್ಲಿ ಯಾವ ಯಾವ ಪಕ್ಕವಾದ್ಯಗಳನ್ನು ಉಪಯೋಗಿಸುತ್ತಿದ್ದರು ಎಂಬುದರ ಕಲ್ಪನೆ ಸ್ವಲ್ಪಮಟ್ಟಿಗೆ ಮೂಡುತ್ತದೆ.

"ಢಕ್ಕೆ ನಾಟ್ರಾನಕ ಚಂಪೆಕಿಂಕಿಣಿಡೌಡೆ ಕಕ್ಕರುತುಡುಮುರಿಂಟೆಯುವ ತಕಿಟ ತೋಕಿಟ ತೋಹಂಗಿ ತೊಧಿಕ್ಕಿಟಯೆನೆ ಕೇಳಿಸಿದರು" (ಭವ್ಯ ೧೨-೪೦).

"ಮುಖವೀಣೆ ವೇಣುವುಪಾಂಗ ಚೆನ್ನಿಗ ಶ್ರುತಿಸಖತನವಾಗಲೋಜೆಯೊಳು ಮುಖರಿಗಾಣರು ರಾಗರಸದೋರಿದರು" (ಭವ್ಯ ೧೨-೪೨).

"...ತ್ರಿತ್ರಿವಳಿ, ತಾಳದಂಡಿಗೆ ಮದ್ದಲೆ ಉತ್ತಮದಳಂಖಕಟ್ಟ ನಾದಗಳಿಂದ ಸುತ್ತಮುತ್ತಿನಾರಿಯರು ಕಥೈ ತ ಥೈಥಾಯೆಂದು ಆರ್ತಿಯಿಂದ ಕುಣಿಸುವರು ಪರವಸ್ತುವ ಹಿಡಿದು" (ಪು. ೪-೧೩೧).

"ವಾಸಗಳ ವಾವುಜದ ಕಹಳೆಯ । ಲೇಸೆನಿಪ ಮದ್ದಳೆಯ ತಾಳವ । ಭಾಸುರದ ಗಾಯಕಿಯರೊಗ್ಗಿನ ವಿವಿಧ ವೀಣೆಗಳ । ಹೂಸಿಹೊಮ್ಮುವ ಸರದುಪಾಂಗಃ । ವಾಸಮೇಳಾಪಗಳಲೊಯ್ಯನೆ । ದೇಸಿರಾಗವ ಮಾಯೆಯಾಳಾಪಿಸಿದಳೊಲವಿನಲಿ" (ಪ್ರಲೀ ೪-೫೨).

"ತಾಳಮೇಳವನನುಗೊಳಿಸಿ ಸಂಗೀತದ । ಬಾಲೆಯರಾಯೆಂದು ಕೂಡೆ ॥ ಆಳಪದೆಗೆದರು ಕಾಂಬೋಧಿರಾಗವನಾಲಿಸಿ ನೃಪತಲೆದೂಗಿ" (ಭವ್ಯ ೧೩-೧೧೩).

ಮೇಲಿನ ಕೆಲವು ನಿದರ್ಶನಗಳಿಂದ ನಾಟ್ಯದಲ್ಲಿ ಹಿಂದಿನ ಲಾಕ್ಷಣಿಕರು ಹೇಳಿರುವ ಚತುರ್ವಿಧವಾದ್ಯಗಳು ಹಾಗೂ ಸಿಂಹಭೂಪಾಲನು ಹೇಳಿರುವಂತೆ ಆಲಾಪದವರೂ ಪಕ್ಕವಾದ್ಯವಾಗಿ ಇರುತ್ತಿದ್ದರೆಂದು ತಿಳಿದುಬರುತ್ತದೆ. ಈ ಅಭಿಪ್ರಾಯದ ಸ್ಪಷ್ಟತೆಗಾಗಿ ಚೆನ್ನಬಸವಪುರಾಣದಲ್ಲಿನ ನೃತ್ಯದ ಈ ಮನೋಜ್ಞ ಚಿತ್ರವನ್ನು ನೋಡಿ :

"ಘನಸುಷಿರವಾನದ್ಧ ತತವೆಂಬ ವಾದ್ಯನಿ । ಸ್ವನದೊಳಂಗೋಪಾಲಗ ಪ್ರತ್ಯಂಗ ಘ್ರುಮರಿಘಾ । ವನೆ ಮಂಡಲಂಗಳಿಂ ಶುದ್ಧದೇಶಿಗಳೊಳವಡಿಸಿ ಲಕ್ಷಣಯುತ್ತದೆ । ಅನುಗೊಳಿಸಿ ಬಿಂದುಜಕ್ಕಡಿತೋಲಬಾರಿಗಳ್ । ವೊಸೆಗಾಲ್ ಕಳಾಸೆತ್ತೈಮರೆತಿಪ್ಪುಡೆ ಮುಡುಹುಮುಳ್ಳಿನಿತು ಭೇದಂಗಳಿಂನರ್ತಿಸುವ ನೃತ್ಯದ ಬಲಾಜನಂ" (ಚೆಬಪು.೨-೨೯).

ನಾಟ್ಯ ಆರಂಭವಾಗಿ ಸಾಗುತ್ತಿದ್ದ ರೀತಿ, ಆಗ ನಟ ನಟಿಯರು ತೋರುತ್ತಿದ್ದ ಹಾವಭಾವಗಳು, ಮುಖಭಂಗಿಗಳು, ಅಂಗವಿನ್ಯಾಸಗಳು. ಅದರಲ್ಲಿ ಕಂಡು ಬರುತ್ತಿದ್ದ ಶಾಸ್ತ್ರೀಯತೆ, ಪ್ರೇಕ್ಷಕರ ಮೇಲೆ ಪ್ರಭಾವ; ನಾನಾವಿಧವಾದ ನಾಟ್ಯಗಳು– ಇವುಗಳನ್ನು ಕುರಿತ ಕವಿಗಳ ವರ್ಣನೆಯನ್ನು ನೋಡಿದರೆ ಆಗಿನ ಕಾಲದಲ್ಲಿ ನೃತ್ಯ ಪ್ರದರ್ಶನಗಳು ಯಾವರೀತಿ ಶಾಸ್ತ್ರೀಯವಾಗಿ ಕಲಾತ್ಮಕವಾಗಿ ಶೋಭಿಸುತ್ತಿದ್ದವು ಎಂಬುದರ ಅರಿವಾಗುವುದು.

ನಾದಪೂಜೆ :

ನಾಟ್ಯ ಪ್ರಾರಂಭವಾಗುವುದಕ್ಕೆ ಮೊದಲು ಗಾಯಕರು ನಾದಪೂಜೆ ಮಾಡುತ್ತಿದ್ದರು. "ನಾದಪೂಜೆಯೊಳು ಪೂಜಿಸಿ ಭರತೇಶಗಾಮೋದತೋರಿದರು ಗಾಯಕರು" (ಭವೆ ೧೨೪೭) ಮೊದಲು ತಾಳಧಾರಿಯು 'ತಾಳವಿಡಿದು ನೃತ್ಯದ ತಾಳ ತೋರುವ ವೊಲುನಿಂದು...ಮಧ್ಯವಿಲಂಬದ್ರುತದ ನೆಲೆಯರಿದು ಸುಸಾಧ್ಯಶತಾಷ್ಟ ತಾಳಗಳ ಅಧ್ಯಕ್ಷವರಿದು ಕೇಳಿಸಿನಿಲ್ಲುತ್ತಿದ್ದನು. ಹಲವು ಕತ್ತರವ, ಕಳಾಸವರಿದು ಮದ್ದಳೆಗ ಮದ್ದಳೆಯನ್ನು ಬಾರಿಸತೊಡಗುತ್ತಿದ್ದನು. ಇದರ ಜೊತೆಗೆ ಅವುಜಕಾರಢಕ್ಕೆ, ನಾಟ್ಯಾನಕಜಂಪೆ, ಕಿಂಕಿಣಿ, ಡೌಡೆ, ಕುಕ್ಕುರು, ತುಡುಮು–ಮೊದಲಾದ ಲಯವಾದ್ಯ ಗಳನ್ನು ಕೊಳ್ಗಣಿಯೊಳಗೆ ಕೇಳಿಸಿದನು. (ಭವೈ ೧೨–೩೬. ೩೭, ೪೧). ಈ ವಾದ್ಯ ರಂಜನೆಯಾದ ಮೇಲೆ ಗಾಯಕರು ಬೇರೆ ಬೇರೆ ಶ್ರುತಿವಾದ್ಯಗಳೊಂದಿಗೆ ರಾಗಗಳನ್ನು ಆಳಾಪಿಸುತ್ತಿದ್ದರು. ಈ ಹಿನ್ನೆಲೆಯು ಗಾಯನನಾಟ್ಯಕ್ಕೆ ಮೆರಗುಕೊಡುತ್ತಿತ್ತು. (ಭ.ವೈ ೧೨-೪೧).

ತಾಳಧರ ಹಾಗೂ ಅವುಜಕಾರರ ವಾದ್ಯ ವೈವಿಧ್ಯವನ್ನು ಸಾರುವ ಚಂದ್ರಶೇಖರ ಕವಿಯ ಈ ವರ್ಣನೆಯನ್ನು ನೋಡಿ : "ನೃತ್ಯದ ಗೀತದ ವಾದ್ಯದ । ಬಿತ್ತರವಂ

ಮೊದಲೆ ಮನದೊಳವ ಗಾಹಿಸುತಂ । ಪತ್ತಿಸಿ ತಾಳಮನೋಜೆಯಿ । ನೊತ್ತಿತೆ ಕೇಳಿಸಿದನೀಶನಂ ತಾಳಧರಂ" (ವಿಸ್ಥಾವ ೨೮-೭೭).

"ರಕುರ್ಝುಂರ್ಝುಂರ್ಝುಣ ಕಿಟ ಕಿಟ । ರುಕುರ್ಝುಂಕಿಟ ರ್ಝುಂತರುರ್ಝುಂಕುರು ತಾಯೆಂಬೀಳ । ಬ್ಡಕಲಾಪವೊದವೆ ವಾದಕ । ನಿಕರ ಮನಾವಿಸಿಸುತಿರ್ದ ನಾವಾವು ಜಗಂ" (ವಿಸ್ಥಾವ ೩೧-೮೩).

ಹೀಗೆ ಗಾನವಾಗುತ್ತಿರುವಾಗ ಪಾತ್ರಧಾರಿಗಳು ತೆರೆಯು ಹಿಂದೆ ನಾಟ್ಯಕ್ಕೆ ಸಿದ್ಧರಾಗಿ ನಿಂತಿರುತ್ತಿದ್ದರು. ತಾಳಮೇಳಗಳಿಗೆ ತನ್ನ ಮೈ ಮನಗಳನ್ನು ಹದಗೊಳಿಸಿಕೊಂಡು ತೆರೆಯು ಹಿಂದೆ ನಾಟ್ಯಕ್ಕೆ ಸಿದ್ಧಳಾಗಿ ನಿಂತಿರುವ ನಟಿಯು ಚಿತ್ರವೊಂದನ್ನು ಚಂದ್ರಶೇಖರ ಕವಿ ಕೊಡುತ್ತಾನೆ: "...ನರ್ತಕಿ ಸಮುಚಿತವಾದ ಸಕಲವಾದ್ಯ ವೇಕಶ್ರುತಿಯಾಗಿ ಬಿವಾಸದೊಡನೆ ಕೂಡಿ. ಗಾಯಕಿಯರ ಗಾನದಿಂ ಸೊಗಸಂ ಬೀರುತಿರೆ. ತಾಳಧರರವಧಾನಂ ಚಿತ್ತಿಸೆ ಪಾತ್ರದ ಭರವಂ ಸೂಚಿಸಿ ಸೂತ್ರಧಾರ ಕಾಂಡ ಪಟಮಂ ಕೇಳ್ಕೈ ತೆಗೆಯೆ" (ವಿಸ್ಥಾವ ಪು. ೩೪).

ಸೂತ್ರಧಾರ :

ರಂಗಭೂಮೀ ನಾಟಕಗಳಲ್ಲಿ ನಾಟಕ ಪ್ರಾರಂಭವಾಗುವಮುನ್ನ ಸೂತ್ರಧಾರ ಒಂದು ಪುಷ್ಪಾಂಜಲಿ ಮಾಡಿ ಅಂದಿನ ನಾಟಕದ ಪರಿಚಯ ಮಾಡಿಕೊಡುವುದು ಪದ್ಧತಿ. ಅದೇರೀತಿಯಲ್ಲಿ ನಾಟ್ಯ ಪ್ರಾರಂಭವಾಗುವ ಮುನ್ನ ಅದಕ್ಕೆ ಸಂಬಂಧಿಸಿದವರು ಬಂದು ಸಭೆಗೆ ಅಂದಿನ ಪ್ರದರ್ಶನದ ಪರಿಚಯ ಮಾಡಿಕೊಡುವ ಪದ್ಧತಿ ನಾಟ್ಯ ಪ್ರದರ್ಶನಗಳಲ್ಲೂ ಇದ್ದಿರಬಹುದೆಂದು ರತ್ನಾಕರ ಕೊಡುವ ಈ ಒಂದು ಚಿತ್ರದಿಂದ ಊಹಿಸಬಹುದು :

"ತೆರೆಯ ಮುಂಗಡೆಯೊಳು ನಿಂದು ಮದ್ದಳಿಗನು । ಭರತ ಚಕ್ರಿಗೆ ಕೈಯ ಮುಗಿದು ಪರಿಕಿಟ ತದಿಕಿಟ ರಿಕ್ಕ ರಿಕ್ಕಟದಿಮಿ । ದಿರು ದಿಮಿಕೆಂದು ಕೇಳಿಸಿದ ।

"ಅವ್ರಜಕಾರ ಕೇಳಿಸಿದನು ಪಾತ್ರದ । ಭಾವಕಿಯರ ಪಜ್ಜೆನಲಿಯೆ । ರಿಂಬೆಯ ಚಿನುಚಂಪೆ ತಕ್ಕುರು ತುಡುಮುಪಾ । ವುಂಬೆಕಿಂಕಿಣಗಳನೆತ್ತಿ ಜೆಂಜೆಕು ತರದಿಕತೋದಿಗಿ ದಿಮಕೆಂದು । ರಂಜನೆ ಮಿಗೆ ಕೇಳಿಸಿದರು."

"ಅಂಗೈಯನೆತ್ತಿ ಸನ್ನೆಯೊಳಾಗ । ವಾದ್ಯರ ಬಂಗಳ ನಿಲಿಸಿ ಜೋಕೆಯೊಳು."

"ಗಡ್ಡ ತುಂಡಲಧೋತ್ರ ನಡುಸುತ್ತಿದಂಬರ । ದೊಡ್ಡಮುಂಡಾಸು ಚಂದನದ । ಅಡ್ಡಬೊಟ್ಟಪರಂಜಿ ಸೆಳೆವೆಪಿಡಿದು ಬಂದು । ಅಡ್ಡಬಿದ್ದನು ರಾಯನಡಿಗೆ."

"ಹದಿನಾರುಮಂದಿ ಮನುಗಳ ಸಂಪದವೆಲ್ಲ । ಪುದಿದೊಂದುಗೂಡಿನಿಂದಂತೆ । ಹದಿನಾರು ಪಾತ್ರವಿದ್ದ ಪುವವಧರಿಸಲೆ । ಹದಿನಾರನೆಯ ಮನುಮುಖ್ಯ."

"ನೀನಿಂದ್ರ ನಿನ್ನಮಂತ್ರಿಯು ಸುರಗುಪಾತ್ರ । ದಾನಾರಿಯರು ದಿವಿಜೆಯರು" ಈ ನಾಟ್ಯವಿಂದು ಮೋಹಿಸುವುದಂತಹ ನೋಳ್ಪೆ । ನಾನೆಂದು ಕೈಮುಗಿದು ಪೋದ" (ಭವೈ ೧೩–೧೩, ೧೫, ೧೬, ೧೭, ೧೯, ೨೨, ೨೩).

ಹೀಗೆ ನಾಟ್ಯಾಚಾರ್ಯ ತೆರೆಯಮುಂದೆ ಬಂದು ಪಾತ್ರದವರನ್ನು ಸಭೆಗೆ ಪರಿಚಯ ಮಾಡಿಕೊಟ್ಟು ಹೋದನಂತರ ತೆರೆಸರಿಯುತ್ತದೆ. ಮುಂದೆ ಕಂಜಾಕ್ಷಿಯರು ರಂಜಿಪ ತೋಳ್ಗಳನೆತ್ತಿ ಪುಷ್ಪಾಂಜಲಿ ಮಾಡಿದರು. ನಾಟ್ಯ ಪ್ರಾರಂಭವಾಯಿತು. ಆ ಪ್ರಾರಂಭ ಅದೆಷ್ಟು ಮನೋಜ್ಞವಾಗಿತ್ತು ಎಂಬುದಕ್ಕೆ ರತ್ನಾಕರನ ಈ ವರ್ಣರಂಜಿತ ಚಿತ್ರವೇ ಸಾಕ್ಷಿ :

"ನಡುವಟ್ಟ ತೆರೆಯಿದ್ದುದಾಗ ತೋಳ್ಗಳನೆತ್ತಿ । ಕಡೆಗಣ್ಗೊಳೊಳರಸನ ನೋಡಿ । ಬೆಡಗಿಂದ ಪುಷ್ಪಾಂಜಲಿ ಮಾಡಿದರು" (ಭವೈ ೧೩–೪೩).

"ಸಂಜೆಗೆಂಪ್ಪೊಲೆವಂತೆ ತೆರೆತೊಲಗಿತು ಮುಂದೆ । ಕಂಜಾಕ್ಷಿಯರು ಕಾಣಿಸಿದರು । ರಂಜಿತತೋಳ್ಗಳೆತ್ತಿ ಸುವರ್ಣ ಪು । ಷ್ಪಾಂಜಲಿ ಮಾಡಿದರೊಡನೆ" (ಭವೈ ೧೨–೫೬).

"ನಡುವಿನೊಳಿಟ್ಟ ಹಸ್ತಗಳು ಪಸರಿಸಿದ । ತೊಡೆಸಾರ್ದ ಮಡಗಳಿಂದಾಗ ವಿಡುಕವೆ ನಿಲುವಿನ ರೇಖೆ ದೋರಿದರು । ಮುಪ್ಪೊಡವಿಯಂದವ ತೋರುವಂತೆ" (ಭವೈ ೧೨–೫೬)

"ಒಬ್ಬರೊಬ್ಬರು ಬಲಮುರಿ ಎಡಮುರಿಯಾಗಿ । ಸಬ್ಬಪದೊಳು ಚಾರಿವರಿದು "ಇಬ್ಬರು ಸುಳಿದಾಡಿ ನಿಂದಳೊಬ್ಬಳು ಹಿಂದೆ । ಪ್ರೌಬ್ಬಳಾಡಿದಳು ರಂಗದೊಳು (ಭವೈ ೧೨–೬೪).

ನಾಟ್ಯ ಪ್ರಾರಂಭವಾದಾಗ ಮೊದಲ ದೃಶ್ಯದಲ್ಲಿ ಸಾಮಾನ್ಯವಾಗಿ ಕಾಣಬರುವ ಈ ಚಿತ್ರವನ್ನು ನಾಟ್ಯ ಕಲಾವಿಲಾಸಿಗಳು ಯಾರೇ ಆಗಲಿ ಕವಿಕೊಡುವ ಈ ಚಿತ್ರದಿಂದ ಕಲ್ಪಿಸಿಕೊಳ್ಳಬಹುದು".

ರಂಗಪ್ರವೇಶ : ನಾಟ್ಯದಲ್ಲಿ ರಂಗ ಪ್ರವೇಶವೆನ್ನುವುದು ಒಂದು ರಸಮಯ ಸನ್ನಿವೇಶ. ರಂಗ ಪ್ರವೇಶ ಮಾಡುವಾಗಲೇ ಸಭಿಕರ ಮೇಲೆ ಒಂದು ಬಗೆಯ ಸಮ್ಮೋಹ ನಾಸ್ತ್ರವನ್ನು ಬೀರುವ ಗಾರುಡಿಗತನ ಆ ನಟನಟಿಯರ ರಂಗ ಪ್ರವೇಶದಲ್ಲಿ ಅಡಗಿರುತ್ತದೆ. ಮಾಯೆ ಮಧುಕೇಶ್ವರಾಲಯದಲ್ಲಿ ನಾಟ್ಯ ಸೇವೆಗೆಂದು ಬಂದಾಗ ರಂಗಪ್ರವೇಶಮಾಡಿದ ರಸಮಯ ಚಿತ್ರವನ್ನು ಚಾಮರಸ ಇಲ್ಲಿ ಕೊಟ್ಟಿದ್ದಾನೆ.

"ಬಳಿಕ ಲೊಯ್ಯನೆ ಚರಣ ಚಾರಣ। ಜಳತೆಯು ನಿಜಹಸ್ತವಿಸ್ತರ। ದಳತೆಯುಲಿ ಝುಳಪಿಸುವ ಬೆರಳಿನ ಉಳಿಯು ಹವಣಿನಲಿ। ಘಲಿ ಘಲಿಸುವಂದುಗೆಯು ಕಂಕಣ| ಗಳಯ್ಯಣತಾರದಲಿ ಮಾಯಾ। ಲಲನೆ ರಂಗಂಬೊಕ್ಕು ನಿಂದಳು ನಿಜದ ಸಿರಿಗೆಯುಲಿ" (ಪ್ರ. ಲೀ ೪–೫೪) ಮುಂದೆ ಅವಳ ನಾಟ್ಯ ಸಾಗಿತು :

"ಪಸರಿಸಿದ ನಿರಿಪಾದಗಳು ಸಂ। ಧಿಸಿದ ಮಡಸಮುಲಾ ಗಿನಲಿಮೊ। ಒಸಿಯು ಲ್ಲದಪ, ಜಾನ ತೋರುವ ಜಂಘನ ಕುಚ ಕಳಶ। ಕುಸಿದು ಕೆಲಮಿಂದಿಬಾದ ಕಾಲಿನ। ಲೆಸವನಳಿ ತೋಳುಗಳ ಭಾವದ। ಸಕಿನದಲಿ ಸಮನಿಸಿದ ಕಣ್ಣೊಪ್ಪಿದವು ಮಾಯೆ ಯುಲಿ" (ಪ್ರಲೀ ೪–೫೫).

ಇದು ನಟಿಯು ಕ್ರಿಯಾಶೀಲ ಅಂಗಾಂಗಗಳ ವರ್ಣನೆಯಾದರೆ ಮುಂದಿನದು ಹಾವ ಭಾವಗಳ ವರ್ಣನೆ.

"ಸುಳಿವ ಹಸ್ತದ ಜಾತಿಭಾವದ। ಬಳಿಯುಲಾಡುವ ನೋಟದ। ಉಳಿಯುವೊಲು ತೆಗದತ್ತ ತಿರುಗುವ ಕೊರಳು ಕೊರಳಂತೆ| ಬಳುಕುತಿಹ ನಡು ನಡುವಿನಂದಕೆ। ಹೊಳೆವ ಪಾದದ ಪಾಡು ಪಾಡಿನ | ನಿಲುಕಡೆಯ ಸಿರಿಗೆಯುಲಿ ಮೆರೆದಳು ಮಾಯೆ ಲಾಸ್ಯದಲಿ" (ಪ್ರಲೀ ೪-೫೮) ಆ ನಟಿಯುದೇಹದ ಒಂದೊಂದು ಅಂಗವೂ ಅವಳ ಸಂಪೂರ್ಣ ಹತೋಟಿಗೆ ಒಳಗಾಗಿ ಆಡಿಸಿದಂತೆ ಆಡುವ ಸೂತ್ರದ ಬೊಂಬೆಗಳಂತಿದ್ದವು.

"ತಾಳದಲಿ ತರಹರಿಸಿ ಮೆಲ್ಲನೆ। ಮೇಳದಲಿ ಮೈಸಿಗುರಿ ಕರಸರಿ| ಬಾಳಿಯುಲಿ ಬಳಬಳಿಸಿ ತಿರುಪಿನ ಮಡುವಿನಲಿ ಮಣಿದು| ತೋಳ ಮೈಯುಲಿ ತೊನೆದು ನೋಟದ ಥಾಳದಲಿ ಧವಳಿಸಿಯೆವಿನುತ ಮ। ರಾಳಗತಿಯುಲಿ ಗಮನಿಸುತುವೊಪ್ಪಿದಳಾ ಮಾಯೆ " (ಪ್ರಲೀ ೪–೫೬).

"ಹಾವಭಾವ ವಿಲಾಸ ವಿಭ್ರಮಗಳನೆಲ್ಲ | ತೀವಿ ಮೊಗಚಿತ್ತಪದ ಪ್ರಬಿನೊಳ ಗಾವರಿಸಿ | ಭಾವಶುದ್ಧಿ ಅಭಿನಯಂಗಳ ತೋರಿಸುತ ನೋಳ್ಪ ವಿಟಜನ ಮೊತ್ತದ | ಜೀವಜಂತ್ರದ ನೃತ್ಯವಾಡಿದಂದದಿರೂಪ | ಜೀವಿಯು ವಿರಾಜಿಸುತಿರೆ" (ಪ್ರಲೀ ೯–೧೫).

'ವಿರೂಪಾಕ್ಷಾಸ್ಥಾನ ವರ್ಣನಂ' ನಲ್ಲಿ ದೊರೆಯುವ ನಾಟ್ಯದ ನಡೆಯ ವರ್ಣನೆ ವೈವಿಧ್ಯ ಪೂರ್ಣವಾಗಿ ಕೆಲವು ಆಟಗಳ ಹೆಸರನ್ನೂ ಹೇಳುತ್ತದೆ :

"ಮತ್ತೋರ್ವ ಳದೆಸಿಕಾರ್ತಿ ದೇಸಿಗೆತ್ತಕ್ಕ ಮೇಷವಳಪಟ್ಟಿರೆ ಮುಂಗಾಲ ಪೊಂಗಿರು ಗೆಜ್ಜೆಯುಲಿವುತ್ತಿರೆ ಕೊಂಕಿದ ಕೊನೆ ವೆರಲಿಂದಥೋರುಕದ ಚಲ್ಲಣಮನೆತ್ತಿ ಪಿಡಿವುತ್ತೆ ಕಡೆಗಣ್ಣ ಕಾಂತಿಯನತ್ತಿತ್ತ, ಚಿತ್ತರಿಸುತ್ತೆ ಕಿರುನಗೆಯಂ ಬೀರುತ್ತೆ ಮರುತದಿಂದದಿ ಮಿಡುತ್ತೆ ಆಳಾಪದಾರ್ಕೆಯಿಂದೆ...ಕಾಲರಚನೆಯಂ ತೋರಿಸಿ ಸೊಕ್ಕಾಗೆಯು ಕೋಕಿ ನಂತಡಿಯೊಳ್ ಮಾಯ ಮನಾಗಿ, ಪುಟಚೆಂಡಿನಂತೆ ಪುಟವೆಳ್ದುಲ್ಲಾಸ ಮನಾಗಿ

ಮಾತಂಗಿ ಶಬರಿಯೋಗಿಣೆ ಮುಂತಾದ ಆಟವುನಾಚಿ ನಾನಾದೇಶದ ವೇಷ ಭಾಷೆಗಳ ನೆಳವಡಿಸಿ ಚಾಂದು ಜಕ್ಕಡಿ ಕವಿಲುಗಜಲು ಭೈತುತುರಿಗೆ ಆಂದೋಳಪ ಮೊದಲಾದ ಆಟಗಳಿಂ ನೋಟಕರ ದಿಟ್ಟಿಗೆ ಮಧುರಮಾಗೆ ಮೆಚ್ಚಿನಚ್ಚೊತ್ತಿರ್ದಳು" (ವಿಸ್ಥಾವ, ೩೪-೯೦,ವ)೩೫-೯೨).

ಚಂದ್ರಶೇಖರ ಕವಿಯ ಈ ವರ್ಣನೆ ಭೀಮರಸನ ವರ್ಣನೆಗಿಂತ ಹೆಚ್ಚು ವಿಸ್ತಾರವಾಗಿದ್ದು ಕವಿ ನೃತ್ಯ ವೈವಿಧ್ಯಗಳನ್ನೂ ಕೆಲವು ಆಟಗಳ ಹೆಸರನ್ನೂ ಹೇಳುತ್ತಾನೆ. ನಾಟ್ಯದ ನಡೆಯನ್ನು ಕುರಿತು ಕವಿಗಳು ಕೊಡುವ ಈ ಚಿತ್ರಗಳು ಜೀವಂತವಾಗಿವೆ, ನೈಜವಾಗಿವೆ. ಕವಿಯ ನೃತ್ಯ ಪ್ರದರ್ಶನಗಳ ದರ್ಶನಾನುಭವವಿಲ್ಲದೆ, ಅವುಗಳನ್ನು ನೋಡಿರಸಾನಂದವನ್ನು ಪಡೆಯದೆ ಖಂಡಿತ ಇಂತಹ ನೈಜ ಚಿತ್ರಗಳನ್ನು ಮೂಡಿಸಲು ಸಾಧ್ಯವಾಗದು. ಕವಿಯು ತನ್ನ ನಾಟ್ಯಕಲಾಭಿಜ್ಞತೆಯನ್ನು ಕಲಾನುಭವವನ್ನು ಕಾವ್ಯದ ಎರಕಕ್ಕೆ ಹೊಯ್ದಿರುವುದರಿಂದ ಆವರ್ಣನೆಯಲ್ಲಿ ಕಳೆಯಿದೆ, ಸತ್ವವಿದೆ, ಸೌಂದರ್ಯವಿದೆ.

ನಾಟ್ಯ ವೈವಿಧ್ಯತೆ : ಸಂಗೀತದಲ್ಲಿ ಒಂದೊಂದು ರಾಗದಲ್ಲೂ ಒಂದೊಂದು ಬಗೆಯ ವೈವಿಧ್ಯತೆ ಕಂಡುಬರುವಂತೆ ನರ್ತನದಲ್ಲಿ ನಟನಟಿಯರು ತೋರುವ ಒಂದೊಂದು ಆಟದಲ್ಲೂ ಒಂದೊಂದು ವೈವಿಧ್ಯತೆ ಕಂಡುಬರುತ್ತದೆ. ಅವರು ನಾನಾ ವಿಧವಾದ ನಾಟ್ಯ ವನ್ನು ಪ್ರದರ್ಶಿಸಿ ಹೇಗೆ ಪ್ರೇಕ್ಷಕರನ್ನು ಉಲ್ಲಾಸಗೊಳಿಸಿ ಭಾವಪರವಶರನ್ನಾಗಿ ಮಾಡು ತ್ತಿದ್ದರು ಎಂಬುದಕ್ಕೆ ರಸಿಕ ಚಕ್ರಿ ರತ್ನಾಕರನು ಕೊಡುವ ಈ ಕೆಲವು ಚಿತ್ರಗಳನ್ನು ನೋಡಿ "ಕೊರವಂಜಿ ಕಟ್ಟಣೆಯನು ಕೇಳಿಸಿದರು ಸೈವೆರಗಾಗಿ ಸಭೆ ನಿಲುವಂತೆ" "ಕೊಲಚಾರಿಯ ಕೊಳವನ ಬಿಂದು ಮೊದಲಾದ ಲೀಲೆಯನೆಲ್ಲವ ತೋರಿ ಆಲಿದೆರೆದು ನೋಳ್ಪರ ಸಭೆಗೆ ಮೋಹನದಿಂದ್ರ ಜಾಲವ ಬೀಸಿದರವರು" (ಭ. ವೈ ೧೨-೯೦,೯೩).

ಹೀಗೆ ಒಬ್ಬೊಬ್ಬರೂ ಪ್ರತ್ಯೇಕವಾಗಿ ನಾಟ್ಯವಾಡಿದ ಮೇಲೆ ಎಲ್ಲರನ್ನು ಒಟ್ಟು ಗೂಡಿಸಿದಿಕ್ಕನ್ನಿಕಾನಾಟ್ಯ, ಜಲಕನ್ನಿಕಾನಾಟ್ಯ, ಹಂಸಮಂಡಳಿ ನಾಟ್ಯ. ಅಮರಕಾಂತಾ ನೃತ್ಯ, ನಾಗಕನ್ಯಾನೃತ್ಯ, ತಾರಾಂಗನಾನೃತ್ಯ, ದ್ಯುಮಣಿತಾಂಡವ, ಚಂದ್ರತಾಂಡವ, ಪುಷ್ಪಲತಾನೃತ್ಯ, ಕಲ್ಪಲತಾನೃತ್ಯ, ಬಾಷ್ಪವಿದ್ಯುಲ್ಲತಾನೃತ್ಯ, ದಶಪದ್ಮಲಾಸ್ಯ, ವಿಂಶತಿಪದ್ಮಲಾಸ್ಯ ಷೋಡಶಪದ್ಮಲಾಸ್ಯ ಮುಂತಾದ ಸಮೂಹನೃತ್ಯಗಳನ್ನು ಮೆರೆಯು ತ್ತಾರೆ (ಭ. ವೈ, ೧೩-೧೫೭ ರಿಂದ ೧೬೦)

ರತ್ನಾಕರನು ಕೊಡುವ 'ದಿಕ್ಕನ್ನಿಕಾನಾಟ್ಯ'ದ ಚಿತ್ರ ಇದೀ ರಂಗಮಂಟಪದ ತುಂಬ ನಟಿಯರು ದಿಕ್ಕು ದಿಕ್ಕಿಗೆ ಚದುರಿಸಿ, ಒಗ್ಗೂಡಿ ಮುಂದೆ ದೊರೆ ದಿಗ್ವಿಜಯಕ್ಕೆ ಹೊರಡು ವುದನ್ನು ಸೂಚಿಸುವಂತೆ ರೀತಿಯಿಂದ ನಡೆಯುವ ವೈಭವದ ಚಿತ್ರವನ್ನು ಕೊಡುತ್ತದೆ.

"ಚೊಕ್ಕಮೆಂಗಳು ಮತ್ತೆ ತಾವೆಲ್ಲ ತಮ್ಮೊಳು। ಲೆಕ್ಕಿಸಿಕೊಂಡೆಂಟುಮಂದಿ॥ ದಿಕ್ಕ ನ್ನಿಕಾ ನಾಟ್ಯಕೆಂದು ರಂಗವ ಬಂದು। ಹೊಕ್ಕರೇನೆಂಬನಾ ಸೊಬಗ"

"ಇಂದ್ರಮುಖತಾದ ದಿಕ್ಪಾಲರ ಭಾಗ್ಯರಾ| ಜೇಂದ್ರುಪಪಾರ್ದರ್॥ ದೊರೆಯೆನಿಸಿ ಇಂದ್ರಾಗ್ನಿ ಮೊದಲಾಗಿ ಎಂಟುದಿಕ್ಕಿನೊಳು ಮ್ಮ |ಗೇಂದ್ರ ಮಧ್ಯೆಯರಿದ್ದಾಗ."

"ಎಂಟು ಪಾತ್ರವ್ರಯೆಂಟು ದಿಕ್ಕಿನೊಳಗೆ ನಿಂದು । ನಾಂ ಟಿಲೋಬ್ಬೊಬ್ಬರ ನೋಡಿ॥ ಮಂಟಪದೊಳು ಸುತ್ತಿಸುಳಿದ ರೊಲ್ಮೆಯನಡೆ । ಗೊಂಟೆಯೆಂಬ ರೀತಿ ಯೋಳು॥ "ಸುತ್ತ ನರಿದು ನಾಟ್ಯ ಶಾಲೆಯೊಳೆಲ್ಲರು । ಮೊತ್ತವಾಗಿರೆ ಕಂಡು ತಮ್ಮ । ಮೊತ್ತದಿಂದೊಬ್ಬರಿಬ್ಬರು ಮುಂದೆ ನಡೆದೊಂದು| ಚಿತ್ರವೆನೆ ನಟಿಸಿದರು."

"ನಡೆವರು ಭರತೇಶ ಮುಂದೆ ದಿಗ್ವಿಜಯತೆ। ನಡೆವುದ ಸೂಚಿಸುವಂತೆ" (ಭ.ವೈ ೧೩-೭೮-೮೧).

ಪಾತ್ರದ ಹೆಂಗಳು ಸೂತ್ರವ ಮಿಡಿದರೆ ಬೊಂಬೆಗಳೆಲ್ಲ ತನ್ಮಾತ್ರದಿ ಕುಣಿವಂತೆ ನೃಪನ ನೇತ್ರಗಳೊಲಿದತ್ತಲಿಲ್ಲ ಆಡುತ್ತಿದ್ದರು. ಹೀಗೆ ವೈಭವದಿಂದ ನಡೆಯುತ್ತಿದ್ದ ನಾಟ್ಯ ಪ್ರದರ್ಶನಗಳು ಸಭಿಕರ ಮೇಲೆ ಯಾವ ರೀತಿ ಪ್ರಭಾವ ಬೀರುತ್ತಿದ್ದವೆಂದರೆ 'ಸೀರೆ ತನ್ನ ತೊಳೆತ್ತಿ ಕೊಲ್ಲಣೆಸುತಿದ್ದರೆ ನೋಡುವವರೆದೆ ಹಾರುತ್ತಿತ್ತು' ಆ ನಟಿಯರು ನೋಟಕರನ್ನು ನೋಟದೊಳಗೆ ಕೊಂದರೊಮ್ಮೆ.

ಪ್ರೇಕ್ಷಕರಿಂದ ಪ್ರಶಂಸೆ : ನಾಟಿಸಿ ನಸು ನಗೆಯಿಂದ ಲೂಟಿ ಮಾಡಿದರು. ತಮ್ಮ ಮೈಯೊಲದಾಟದಿಂದ ಎದೆಗೋಟೆಯನ್ನೆಕೊಂಡು ಹೃದಯವನ್ನೇ ಲೂಟಿ ಮಾಡಿದರು. ಪ್ರೇಕ್ಷಕ ವರ್ಗದಿಂದ ಯಾವ ರೀತಿ ಪ್ರಶಂಸೆಗಳು ಬರುತ್ತಿದ್ದವು ಎಂಬುದು ಅವರು ನಾಟ್ಯವನ್ನು ನೋಡುವಾಗ ಮಧ್ಯಮಧ್ಯೆ ತೋರುತ್ತಿದ್ದ ಪ್ರಶಂಸೋಕ್ತಿಗಳಿಂದ ತಮ್ಮ ತಮ್ಮಲ್ಲೇ ಆಡಿಕೊಳ್ಳುತ್ತಿದ್ದ ಮಾತುಗಳಿಂದ ವ್ಯಕ್ತವಾಗುತ್ತದೆ. "ಇದು ಲೇಸು ಲೇಸು ಮಾಮಾ 'ಇದು ಪೊಸತಯ್ಯಯ್ಯ' ಭಾಪುನಚ್ಚಣಿಯೆಂದೊದ ವಿದಭಾವಮನಾ ಸಭೆ ಮಾಣದೆಬಣ್ಣಿಸಿ" (ವಿಸ್ಥಾಪ ೩೩-೪೭) ಹೀಗೆ ನಾಟ್ಯದಲ್ಲಿ ಒಂದುಕಡೆ ಕಲಾವಿದ ರಿಂದ ಉತ್ತಮ ಪ್ರದರ್ಶನ ಮತ್ತೊಂದುಕಡೆ ಪ್ರೇಕ್ಷಕರಿಂದ ರಾಜರಿಂದ ಪ್ರಶಂಸೆ ಇವೆರಡೂ ಕಲಾ ಪ್ರಪಂಚದಲ್ಲಿ ಪರಸ್ಪರ ಪೂರಕಗಳಾಗಿ ನಡೆದು ಬಂದಿವೆ.

ನಾಟ್ಯದಲ್ಲಿ ಶಾಸ್ತ್ರೀಯತೆ : ಆಗ ನಡೆಯುತ್ತಿದ್ದ ನಾಟ್ಯಗಳು ಕೇವಲ ಮನೋರಂಜನೆಗಾಗಿ ಮಾತ್ರ ಇರದೆ ನಾಟ್ಯ ಶಾಸ್ತ್ರದ ನಿಯಮಗಳನ್ನು ಅನುಸರಿಸಿ ಕ್ರಮಬದ್ಧವಾದ ಶಾಸ್ತ್ರೀಯ ನೃತ್ಯಗಳಾಗಿರುತ್ತಿದ್ದವು. ಆಂಗಿಕ ಆಹಾರ್ಯಕ (ವೇಷ ಭೂಷಾಪರಿಕರಗಳು) ಸಾತ್ವಿಕ, ವಾಚಕಗಳೆಂಬ ಶಾಸ್ತ್ರಗಳು ಹೇಳುವ ನಾಲ್ಕು ತೆರೆದ ಅಭಿನಯಗಳಿಂದ, ಸ್ಥಾಯೀಭಾವವನ್ನು ನೆಲೆಗೊಳಿಸುತ್ತ, ಸಂಚಾರಿಯನ್ನು ಸುಳಿಸುತ್ತ, ಸಾತ್ವಿಕಮಂ ಸಂತೈಸುತ್ತ, ವಿಭಾವವನ್ನು ಸೊಬಗುವಡಿಸುತ್ತ, ಅನುಭಾವವನ್ನು ಅಂದ ವಡಿಸುತ್ತ ಅಂಗ, ಹಾರ. ಕರಣ. ಸ್ಥಾನಕ ಚಾರಿಗಳಿಂದ ಚಾತುರಮನ್ನೆಸಗುತ್ತ ಶೃಂಗಾರದೀ ಮೊದಲಾದ ಎಂಟು ರಸಗಳನ್ನು ರಸಿಕರ ಚಿತ್ತದಲ್ಲಿ ಬಿತ್ತಿ ಬೆಳೆಸುತ್ತ ನಾನಾ

ವಿಧವಾದ ನಾಟ್ಯವನ್ನು ಅಭಿನಯಿಸಿ ತೋರಿಸುತ್ತಿದ್ದರು. (ವಿಸ್ಥಾವ ೩೩–೮೭) ಹಾಗೆಯೇ ಆಂಗಿಕಾದಿ ಅಭಿನಯಗಳಲ್ಲೂ ಕೂಡ ಶಾಸ್ತ್ರೀಯತೆ ಎದ್ದು ಕಾಣುತ್ತಿತ್ತು. "ನೂರೆಂಟು ಕರಣ ನೂರೆಂಟು ನಿಲುವು ಹದಿಮೂರು ಶಿರೋಭೇದವರಿದು ಬೇರೆಬೇರೆ ಐವತ್ತುನಾಲ್ಕು ಭೇದದ ಹಸ್ತದೋರಿ ನರ್ತಿಸಿದಳು…"

"ಚಾರಿ ಮೂವತ್ತೆರಡನುಚರಿಸಿರಲಂಗ | ಹಾರ ಮುವತ್ತೆರಡೆಸೆಯೆ ॥ ಸೇರಿ ಮೂವತ್ತಾರು ನೋಟ ರಂಜಿಸೆ ನಾಟ್ಯ | ಸಾರಗಾಣಿಸಿ ನಟಿಸಿದಳು."

"ಭಾವವಿಭಾವಾನುಭಾವ ಮುಂತಾದಕ । ಲಾವಿರಚನೆರೇಖದೋರಿ ಭಾವಕರೆಲ್ಲರ ಚಿತ್ತರಂಜಿಸಲಾಡಿ | ಭಾವೆಹಿಂಗಡೆ ಸಾರಿದಳು" (ಭ.ವೈ. ೧೨–೬೯, ೭೦, ೭೧)

ರತ್ನಾಕರನು ಕೊಡುವ ಈ ನೃತ್ಯದವರ್ಣನೆ ಭರತನ ನಾಟ್ಯಶಾಸ್ತ್ರದ ಅನೇಕ ವಿವರಣೆಗಳಿಗೆ ಹೊಂದಿಕೊಂಡಿದೆ. ಉದಾಹರಣೆಗೆ ನಾಟ್ಯ ಶಾಸ್ತ್ರವು ೧೦೮ ಕರಣಗಳನ್ನು ಹೇಳುತ್ತದೆ. ಹಾಗೆಯೇ ನರ್ತನದಲ್ಲಿ ಬಹುಮುಖ್ಯ ಭಾಗವಾದ 'ಚಾರಿ'ಗಳನ್ನು ಕುರಿತು ನಾಟ್ಯ ಶಾಸ್ತ್ರದಲ್ಲಿ ಪ್ರಸ್ತಾಪಿಸಿರುವುದನ್ನು ರತ್ನಾಕರನೂ ಹೇಳುತ್ತಾನೆ : "ಚಾರಿಮೂವ ತ್ತೆರಡನುಚರಿಸಲಂಗ । ಹಾರ ಮೂವತ್ತಡೆಸೆಯೆ ಸೇರಿ ಮೂವತ್ತಾರು ನೋಟರಂಜಿಸೆ ನಾಟ್ಯ । ಸಾರಗಾಣಿಸಿ ನಟಿಸಿದಳು"(ಭ.ವೈ ೧೨–೭೦). ಹೀಗೆ ನಾಟ್ಯಗಳು ನಾಟ್ಯಶಾಸ್ತ್ರದ ರೀತಿ ನಿಯಮಗಳನ್ನು ಅನುಸರಿಸಿ ಶಾಸ್ತ್ರೀಯವಾಗಿ ನಡೆಯುತ್ತಿದ್ದವು.

ನಾಟ್ಯ ಮುಗಿದ ನಂತರ ರಾಜನೃತ್ಯ ಕಲಾವಿದರನ್ನು ನಾಟ್ಯಾಚಾರ್ಯರನ್ನೂ ಕುರಿತು ಅಭಿನಂದಿಸುತ್ತಿದ್ದ ಒಂದು ಸಂಸ್ಕೃತ ಪದ್ಧತಿಯನ್ನು ರತ್ನಾಕರ ಹೇಳುತ್ತಾನೆ. ನಾಟ್ಯ ಮುಗಿಸಿ ಬಂದ ಆ ನಟಿಯರನ್ನು ರಾಜ ಕಂಡಾಗ ಅವರ ಅಂಗ ಬೆಮರಿತ್ತು, ಇಟ್ಟ ತಿಲಕ ಕಲಕಿತ್ತು, ಮುಖಕ್ಕೆ ಬಳಿದು ಕೊಂಡಿದ್ದ ವರ್ಣ ಥಾಳಿಸಿತ್ತು. ರಾಜನು ಮೆಚ್ಚಿ ನೀಡಿದ ಆ ವಸ್ತ್ರಭೂಷಣಗಳನ್ನೂ, ರತ್ನಾಭರಣಗಳನ್ನೂ ಪಾತ್ರ ಕಾಂತೆಯರು ಕಾಸೆಯ ಸೆರಗೊಡ್ಡಿ ಒಲುವಿನಿಂದ ಸ್ವೀಕರಿಸಿ ಕಣ್ಣಿನಲ್ಲಿಯೇ ಧನ್ಯತೆಯನ್ನು ಪೂಜಿಸಿದರು (ಭ.ವೈ ೧೨-೧೧೪–೧೧೬)

'ಅರಮನೆಗಳಲ್ಲಿ ರಾಜರು ಕಲಾಪ್ರದರ್ಶನಗಳನ್ನು ಮೆಚ್ಚಿ' ಕಲಾವಿದರಿಗೆ ಹೊರ ವಷ್ಟು ಧನ ಕನಕ ವಸ್ತುಗಳನ್ನು ನೀಡಿ ಗೌರವಿಸಿದರೆ. ದೇವಾಲಯಗಳಲ್ಲಿ ಕಲಾವಿದರು ಬಂದು ತಮ್ಮ ಭಕ್ತಿಯ ಕೈಂಕರ್ಯವನ್ನು ಸಲ್ಲಿಸಿದಾಗ ಅರ್ಚಕರು ಆಶೀರ್ವದಿಸಿ ನೀಡುವ ಪ್ರಸಾದವೇ ಅವರಿಗೆ ಮೆಚ್ಚು.

ಕಲಾವಿದರಿಗೆ ಗೌರವ : ಮಾಯೆ ಮಧುಕೇಶ್ವರಾಲಯದಲ್ಲಿ ಹಲವು ಪ್ರಕಾರಗಳಲ್ಲಿ ಒಲುವಿನಿಂದ ಸೇವೆ ಸಲ್ಲಿಸಿದಾಗ, ಸರ್ವೋಪಚಾರಗಳನ್ನು ವಿಸ್ತಾರವಾಗಿ ಮಾಡಿದ ಮಾಯೆಗೆ ಉಚಿತದಲ್ಲಿ ಶಿವಲಿಂಗ ಪ್ರಸಾದದ, ತಳಿತ ಹೂವಿನ ದಂಡೆಯನ್ನು ಪೂಜಾರಿ

ಪುಂಗವನು ಹರಸುತ್ತ ಕೊಟ್ಟನು (ಪ್ರ.ಲೀ ೪-೬೨). ಇವತ್ತಿಗೂ ದೇವಾಲಯಗಳಲ್ಲಿ ಭಕ್ತಿಯಿಂದ ಕೈಂಕರ್ಯ ಸಲ್ಲಿಸಿದವರಿಗೆ ಈ ಪ್ರಸಾದ ಗೌರವವುಂಟು. ದೇವಸ್ಥಾನ ಮುಂತಾದ ಸ್ಥಳಗಳಲ್ಲಿ ಸಾರ್ವಜನಿಕ ಕಲಾಪ್ರದರ್ಶನಗಳು ನಡೆದಾಗ ಪ್ರೇಕ್ಷಕರು ಕಿಕ್ಕಿರಿದು ತುಂಬಿರುತ್ತಿದ್ದರು. ಮಾಯೆ ಮಧುಕೇಶ್ವರಾಲಯದಲ್ಲಿ ನಾಟ್ಯಸೇವೆ ಸಲ್ಲಿದಾಗ: ಮೃತ್ತಿಕೆಯ ಮಾಟದರೂಹಿನ ಪುತ್ತಳಿಗಳನ್ನು ದೇಗುಲಕ್ಕೆ ಚಿತ್ರಿಸಿದರೆ ಎಂಬಂತೆ ದೇವಾಲಯದ ಸುತ್ತಮುತ್ತಿನ ಗವಾಕ್ಷ ರಂಧ್ರದ ಭಿತ್ತಿಯಲ್ಲಿ ಚಿತ್ರಜಗ್ರಹ ಸೋಂಕಿದಂತೆ ಆ ನೋಟಕರು ಕೀಲಿಸಿದ್ದರು ಎಂದು ಚಾಮರಸ ವರ್ಣಿಸುತ್ತಾನೆ.

ಹೀಗೆ ಕನ್ನಡ ಕಾವ್ಯಗಳಲ್ಲಿ ಸಂಗೀತ ನೃತ್ಯ ಕಲೆಗಳ ಬಗೆಗೆ ಬೆರಗುಗೊಳಿಸುವಂತಹ ವಿಸ್ತಾರವಾದ ವೈವಿಧ್ಯ ಪೂರ್ಣ ಮನೋಜ್ಞ ವರ್ಣನೆಗಳನ್ನು ನಮ್ಮ ಕವಿಗಳು ನೀಡಿದ್ದಾರೆ.

ಡಿವಿಜಿಯವರ ಅಂತಃ ಪುರಗೀತೆ: ಹಳಗನ್ನಡ ನಡುಗನ್ನಡ ಕಾವ್ಯಗಳಲ್ಲಿ ಸಂಗೀತ, ನೃತ್ಯ ಕಲೆಗಳಿಗೆ ಸಂಬಂಧಿಸಿದಂತೆ ಅನೇಕ ಉಪಯುಕ್ತ ವಿಷಯಗಳು ದೊರಕಿದರೂ ಆಧುನಿಕ ಕಾವ್ಯಗಳಲ್ಲಿ ಅಷ್ಟಾಗಿ ದೊರೆಯುವುದಿಲ್ಲ. ಆದರೂ ಅಲ್ಲೊಂದು ಇಲ್ಲೊಂದು ರತ್ನಗಳು ಅಲ್ಲೂ ಮಿನುಗುತ್ತಿವೆ. ಅಂತಹ ರತ್ನಗಳಲ್ಲಿ ಒಂದು ಡಿವಿಜಿಯವರ 'ಅಂತಃಪುರಗೀತ'. ಬೇಲೂರಿನ ಚೆನ್ನಕೇಶವ ದೇವಾಲಯದ ಶಿಲಾಬಾಲಿಕೆಯರ ನಾಟ್ಯವೈಭವದ ಮನೋಜ್ಞವರ್ಣನೆ ಈ ಕೃತಿಯ ತುಂಬ ತುಂಬಿಹರಿದಿದೆ. ಅಲ್ಲಿನ ಒಂದೆರಡು ಚಿತ್ರಗಳನ್ನು ನೋಡಿ :

ಇದು ನಟಿಯೊಬ್ಬಳ ಅಲಂಕಾರ ವೈಭವದ ಚಿತ್ರ : "ಕಾಶ್ಮೀರಾಗರು ತೈಲವಾಸನೆಗಳ ಕಟ್ಟಿ । ಕೇಶರಾಶಿಯನಾಗಪಾಶವಸುತ್ತಿ" "ಕಾಳಿರುಳಿನ ಕಪ್ಪುಕುರುಳು ಗುಂಗುರಿನೊಪ್ಪು। ನೀಳಾಗಿ ಹೆಣೆಲಿಟ್ಟು ಸುತ್ತಿದಕೊಪ್ಪು । ನೋಳ್ಪರಕಣ್ಮನ ಕಹುದು ಮೋಹದ ಕಪ್ಪು" (ಅಂಗೀ ॥).

'ಮುರಜಾಮೋದ' ಎಂಬ ಒಂದು ವರ್ಣನೆಯಲ್ಲಿ ಮುರಜವನ್ನು ಬಾರಿಸಿಕೊಂಡು ಮೈಮರೆತು ನಟಿಸುತ್ತಿರುವ ನಟಿಯೊಬ್ಬಳ ಮನೋಜ್ಞ ಚಿತ್ರವಿದೆ : "ಮನಮೋದ-ವಿನೀಮೌರಜನಾದ ಢಕ್ಕೆಯ ಶಿರಕೆತ್ತಿ ತಾಳಗೋಲಿನಿಂತಟ್ಟಿ। ತಕ್ಕಿಟ ಧಿಮಿಕಿಟ ತಡರಝಣರೆನಿಸಿ। ಕುಕ್ಕುತೆ ಚರಣವ ಕುಲುಕುತೆ ಕಾಯುವ। ಸೊಕ್ಕಿದ ಕುಣಿತವ ಕುಣಿವೆ ನೀನೆಲೆ ಬಾಲೆ" (ಅಂಗೀ ಪದ್ಯ ೩೬).

ತಾಂಡವೇಶ್ವರಿ ಎಂಬ ಮತ್ತೊಂದು ವರ್ಣನೆಯಲ್ಲಿ ಮದ್ದಳೆ ಬಾರಿಕೊಂಡು ನಟಿಸುವ ನಟಿಯೊಬ್ಬಳ ಹಾವಭಾವ ವಿಲಾಸದ ಚಿತ್ರವಿದೆ:

"ಡಂಗುರ ಹೊಯ್ಯುವದೇನೆ ಜನಜಂಗುಳಿಗೆಲ್ಲ ನಿಂ ಸಾರ್ವುದದೇನೆ" ಎಂದು ಕವಿ ಆ ನಟಿಯನ್ನು ಪ್ರಶ್ನಿಸಿ" ಹವಣೆಯ ತಟ್ಟು ಕಲಿರುವ-ಗೆಜ್ಜೆ ಹವಣಿಂದ ಮೆಯ್ಯ

ನೀಂಕುಲು ಕಿಸಿಮೆರೆವೆ ಸವಿನಗುವನು ನಗುತಿರುವೆ ಓ ಯುವತೀ ನಿನ್ನಿಂಚರದೊಳಗೇ ನಿಟ್ಟಿರುವೆ?" ಎಂದು ಅವಳ ನಾಟ್ಯ ಭಂಗಿಗೆ ಬೆರಗು ಹೋಗಿ ಮುಂದೆ ಅವಳ ನಾಟ್ಯ ನಡೆದ ರೀತಿಯನ್ನು ಬಣ್ಣಿಸುತ್ತಾರೆ:

"ತದ್ಧಿಮಿ ತಕಧಿಮಿಯಣತಾ ಥೈಯ |
ತತ್ತೋಂ ತದ್ಧಿಮ್ಮಿತತಕಝುಣುರಣಿತಾ
ಮದ್ದಲೆ ತಾಳದ ಕುಣಿತಾ-ಅದು ನಿದ್ರಿಪ ಚೆನ್ನಕೇಶವಗೆ ಜಾಗರಿಕಾ ||
(ಅಂಗೀ ಪದ್ಯ ೧೪)

ಹೀಗೆ ಆಧುನಿಕ ಕವಿಗಳಲ್ಲೂ ವಿರಳವಾಗಿ ಸಂಗೀತ ನೃತ್ಯ ಕಲೆಗೆ ಸಂಬಂಧಿಸಿದಂತಹ ಸುರಮ್ಯ ವರ್ಣನೆಗಳು ದೊರೆಯುತ್ತವೆ.

ಆಧಾರ ಗ್ರಂಥಗಳು :

ಕಾವ್ಯಗಳು	ಸಂಕ್ಷೇಪ
೧. ಆದಿಪುರಾಣ—ಪಂಪ.	(ಆ. ಪು)
೨. ಪ್ರಭುಲಿಂಗಲೀಲೆ—ಚಾಮರಸ	(ಪ್ರ. ಲೀ)
೩. ವಿರೂಪಾಕ್ಷಾಸ್ಥಾನ ವರ್ಣನಂ—ಚಂದ್ರಶೇಖರ ಕವಿ	(ವಿ. ಸ್ಥಾ. ವ)
೪. ಭರತೇಶ ವೈಭವ—ರತ್ನಾಕರ	(ಭ. ವೈ)
೫. ಚೆನ್ನಬಸವ ಪುರಾಣ—ವಿರೂಪಾಕ್ಷ ಪಂಡಿತ	(ಚೆ. ಬ. ಪು)
೬. ಪುರಂದರದಾಸರ ಕೀರ್ತನೆಗಳು—	(ಪು. ಕೀ)
೭. ಬಸವಪುರಾಣ—ಭೀಮಕವಿ	(ಬಪು)
೮. ರಾಮನಾಥ ಚರಿತೆ—ನಂಜುಂಡ	(ರಾಚ)
೯. ಅಂತಃಪುರಗೀತೆ—ಡಿವಿಜಿ	(ಅಂಗೀ)

ಇತರ ಗ್ರಂಥಗಳು

೧. Forgotten Empire —Robert Sewell. (F.E)

೨. ಪ್ರವಾಸಿ ಕಂಡ ಇಂಡಿಯಾ ಭಾಗ ೨
—ಎಚ್. ಎಲ್. ನಾಗೇಗೌಡ (ಪ್ರಕ. ೩೦-೩)

೩. ಭಾರತೀಯ ಸಂಸ್ಕೃತಿ—ಡಾ. ಶ್ರೀಕಂಠ ಶಾಸ್ತ್ರಿ (ಭಾ. ಸಂ)

೪. ಕನ್ನಡ ಶಾಸನಗಳ ಸಂಸ್ಕೃತಿಕ ಅಧ್ಯಯನ
—ಡಾ. ಎಂ. ಚಿದಾನಂದ ಮೂರ್ತಿ

೫. ಕರ್ನಾಟಕ ಸಂಸ್ಕೃತಿಕ ಸಮೀಕ್ಷೆ—ತಿಪ್ಪೇರುದ್ರಸ್ವಾಮಿ

೬. ಸಂಗೀತ ರತ್ನಾಕರ—ಸಂ. ಆರ್. ಸತ್ಯನಾರಾಯಣ
ಮೈ. ವಿ. ವಿ. ಪ್ರಕಟಣೆ

೭. ಲಾಸ್ಯರಂಜನ—ಸಿಂಹಭೂಪಾಲ (T 6)

ಕನ್ನಡಕ್ಕಾಗಿ ದುಡಿದ ಮಹಾತ್ಮ

ಕರ್ನಲ್ ಮೆಕೆಂಜಿ

● ಪುರುಷೋತ್ತಮ ಬಿಳಿಮಲೆ

ಕನ್ನಡನಾಡು ಹಾಗೂ ನುಡಿಗಾಗಿ ಅನೇಕ ಮಹನೀಯರು ತಮ್ಮ ಜೀವನವನ್ನೇ ಪಣವಾಗಿಟ್ಟು ದುಡಿದಿದ್ದಾರೆ. ಹಾಗೆ ದುಡಿದವರು ತಮ್ಮ ಮಾತೃಭಾಷೆ ಮತ್ತು ಮಾತೃ ಭೂಮಿಗಾಗಿ ದುಡಿದಿದ್ದರೆ ಅದು ಅಚ್ಚರಿಯ ಮಾತಾಗುತ್ತಿರಲಿಲ್ಲ. ಮಾತೃ ಭಾಷೆ ಕನ್ನಡವಲ್ಲದಿದ್ದರೂ ಕನ್ನಡವನ್ನು ಕಲಿತು, ಕನ್ನಡಕ್ಕಾಗಿ ದುಡಿದ ನಿಸ್ವಾರ್ಥಿಗಳು ಹಲವರಿದ್ದಾರೆ. ಮೊತ್ತಮೊದಲು ಕನ್ನಡ ಸಾಹಿತ್ಯ ಚರಿತ್ರೆಯನ್ನು ಇಂಗ್ಲೀಷಿನಲ್ಲಿ ಬರೆದ ಇ. ಪಿ. ರೈಸ್. ಕನ್ನಡಕ್ಕೊಂದು ನಿಘಂಟು ಕೊಟ್ಟ ಕಿಟ್ಟೆಲ್. ಮೊದಲಾದವರನ್ನು ಕನ್ನಡಿಗರು ಮರೆಯುವಂತಿಲ್ಲ.

ಕರ್ನಲ್ ಮೆಕೆಂಜಿಯೂ ಭಾರತಕ್ಕೆ ಕಡಲಾಚೆಯಿಂದ ಬಂದವನು. ಹಿಂದಣ ಕವಿ ಕೃತಿಗಳನ್ನು, ನಾಣ್ಯಗಳನ್ನು, ಶಿಲಾ ಶಾಸನಗಳನ್ನು ಮತ್ತು ಕೈಫಿಯತ್ತುಗಳನ್ನು ಸಂಗ್ರಹಿಸಿ ರಕ್ಷಿಸಿದ ಇವನಿಗೆ ದಕ್ಷಿಣ ಭಾರತದ ಅಧ್ಯಯನದ ಚರಿತ್ರೆಯಲ್ಲಿ ವಿಶಿಷ್ಟವಾದ ಸ್ಥಾನವೊಂದು ಲಭಿಸುತ್ತದೆ.

ಮೆಕೆಂಜಿಯ ವೈಯುಕ್ತಿಕ ಬದುಕಿನ ಬಗ್ಗೆ ನಮಗೆ ದೊರೆಯುವ ವಿವರಗಳು ಕಡಿಮೆ. ಮೆಕೆಂಜಿಯ ಸಂಗ್ರಹಗಳನ್ನೆಲ್ಲಾ ಪರಿಶೀಲಿಸಿ ಅದಕ್ಕೊಂದು ಸೂಚಿಕೆ (CATALOGUE) ಯನ್ನು ಸಿದ್ಧಪಡಿಸಿದ ವಿಲ್ಸನ್ನನು ಮೆಕೆಂಜಿಯ ಬಗೆಗೆ ಕೆಲವು ವಿವರಗಳನ್ನು ಒದಗಿಸುತ್ತಾನೆ [ವಿಲ್ಸನ್, ೧೮೮೨; ಪುಟ ೧–೨೪]. ಮೆಕೆಂಜಿಯ ಜೀವನ ಚರಿತ್ರೆಯನ್ನು ಬರೆದ ಡಬ್ಲ್ಯು. ಸಿ. ಮೆಕೆಂಜಿಯು ಅನೇಕ ವಿವರಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾನೆ [ಮೆಕೆಂಜಿ, ೧೯೫೨].

ಕ್ರಿ. ಶ. ೧೭೫೪ ರಲ್ಲಿ ಮೆಕೆಂಜಿಯು ಸ್ಕಾಟ್ಲೆಂಡಿನ ಲೂಯಿ ದ್ವೀಪದಲ್ಲಿ ಜನಿಸಿದ. ಆತನ ತಂದೆ ಸ್ಟಾರ್ನವೇಯ ಪ್ರಥಮ ಪೋಸ್ಟು ಮಾಸ್ಟರ್ ಆಗಿದ್ದ ಮರ್ಡೋಕ್

ಮೆಕೆಂಜಿ. ತಾಯಿ ಬಾರ್ಬರಾ ಮೆಕೆಂಜಿ. ಅಣ್ಣ ಅಲೆಕ್ಸಾಂಡರ್ ಮೆಕೆಂಜಿಯಾದರೆ ತಮ್ಮನ ಹೆಸರು ಕೆನ್ನೆತ್ ಮೆಕೆಂಜಿ ಮತ್ತು ತಂಗಿ ಮೇರಿ ಮೆಕೆಂಜಿ.

ಮೆಕೆಂಜಿಯ ಬಾಲ್ಯದ ಬಗ್ಗೆ ಯಾವ ವಿವರಗಳೂ ದೊರಕುವದಿಲ್ಲ. ಆದರೆ ಆತ ಭಾರತಕ್ಕೆ ಬಂದಂದಿನಿಂದ ಅನೇಕ ವಿವರಗಳು ದೊರಕಿವೆ.

ಲಘುಗಣಕ [LOGARITHMS] ವನ್ನು ಕಂಡು ಹಿಡಿದ ಜಾನ್ ನೇಪಿಯರ್‌ನ ಬಗೆಗೆ ಭಾರತದಲ್ಲಿ ಉಪಲಬ್ಧವಿರುವ ಮಾಹಿತಿಯನ್ನು ಸಂಗ್ರಹಿಸಲು ಫ್ರಾನ್ಸಿಸನು [FRANCIS, THE Vth LORD OF MERCHISTON] ಮೆಕೆಂಜಿಯನ್ನು ಕ್ರಿ. ಶ. ೧೭೮೩ ರಲ್ಲಿ ಭಾರತಕ್ಕೆ ಕಳುಹಿಸಿದ [ವಿಲ್ಸನ್, ೧೮೮೨, ಪು. ೪]. ಲಘುಗಣಕ ವನ್ನು ಮುಖ್ಯ ಗಮನದಲ್ಲಿಟ್ಟುಕೊಂಡು ಭಾರತದಲ್ಲಿ ಗಣಿತ ಶಾಸ್ತ್ರದ ಬಗೆಗೆ ದೊರಕುವ ಎಲ್ಲ ವಿವರಗಳನ್ನು ಸಂಗ್ರಹಿಸುವ ಉದ್ದೇಶದಿಂದಲೇ ಮೆಕೆಂಜಿಯು ಭಾರತಕ್ಕೆ ಬಂದ ನೆಂದು ಜಾನ್‌ಸ್ಟನ್ ಹೇಳಿದ್ದಾನೆ [JORAS-1 ೧೮೩೪; ಪು ೩೩೪]. ಮೆಕೆಂಜಿ ಭಾರತಕ್ಕೆ ಬಂದೊಡನೆ ಅತ್ತ ಇಂಗ್ಲಂಡಿನಲ್ಲಿ ಫ್ರಾನ್ಸಿಸ್ ತೀರಿಕೊಂಡ. ಮೆಕೆಂಜಿಯನ್ನು ನಡುನೀರಿನಲ್ಲಿ ಕೈಬಿಟ್ಟಹಾಗಾಯಿತು. ಬುದ್ಧಿವಂತನಾದ ಮೆಕೆಂಜಿ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯವರೊಂದಿಗೆ ಸೇರಬಯಸಿದ. ಲಾರ್ಡ ಮೆಕಾರ್ಟ್ನೆ [LORD-MACARTNEY, Governor of Madras] ಯವರನ್ನು ಮತ್ತು ಫ್ರಾನ್ಸಿಸರ ಮಗಳಾದ ಹೆಸ್ಟರ್ ಜಾನ್ಸ್ಟನ್ [HESTOR Johnston] ರವರನ್ನು ಕಂಡು, ತನ್ನ ಉದ್ದೇಶವನ್ನು ವಿವರಿಸಿ, ಕೊನೆಗೆ ಮದರಾಸು ಸರಕಾರದ ಸಾರ್ವಜನಿಕ ಕಾಮಗಾರಿಕೆ ಇಲಾಖೆಯಲ್ಲಿ "ಕ್ಯಾಡೆಟ್ ಆಫ್ ಇಂಜಿನೀಯರ್" ಆಗಿ ಸೇರಿಕೊಂಡ.

ಹೆಸ್ಟರ್ ಜಾನ್‌ಸ್ಟನ್‌ಳು ಆಗ ಮಧುರೆಯ ಹಿಂದೂ ಕಾಲೇಜಿನಲ್ಲಿ ಪ್ರಧಾನಾ ಧ್ಯಾಪಿಕೆಯಾಗಿದ್ದಳು. ಆಕೆಯ ಪತಿ ಸ್ಯಾಮ್ಯುವೆಲ್ ಜಾನ್‌ಸ್ಟನ್ನನು ಈಸ್ಟ್ ಇಂಡಿಯಾ ಕಂಪೆನಿಯವರ ಸಿವಿಲ್ ಸರ್ವೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ. ಈ ದಂಪತಿ ಗಳು ಮೆಕೆಂಜಿಯನ್ನು ಮಧುರೆಯಲ್ಲಿದ್ದ ತಮ್ಮ ಮನೆಗೆ ಆಮಂತ್ರಿಸಿದರು. ಹಿಂದೂ ಧಾರ್ಮಿಕ ಕೇಂದ್ರವೊಂದರಿಂದ ಬಂದ ಆಮಂತ್ರಣವನ್ನು ಮೆಕೆಂಜಿ ಸ್ವೀಕರಿಸಿ ಅಲ್ಲಿಗೆ ಭೇಟಿಯಿತ್ತ. ಜಾನ್‌ಸ್ಟನ್ ದಂಪತಿಗಳ ಜೊತೆಗೆ ಮೆಕೆಂಜಿ ಅನೇಕ ಶ್ರೇಷ್ಠ ಬ್ರಾಹ್ಮಣ ಪಂಡಿತರುಗಳನ್ನು ಭೇಟಿಮಾಡಿದ. ಆ ಬ್ರಾಹ್ಮಣ ಪಂಡಿತರುಗಳೊಡನೆ ಮಾತಾಡು ತ್ತಿರುವಾಗಲೇ ಮೆಕೆಂಜಿಗೆ ಭಾರತದ ಚರಿತ್ರೆಯಲ್ಲಿ ಆಸಕ್ತಿ ಹುಟ್ಟಿರಬೇಕು. "The visit to Madhura dates the commencement of many years of research in the Antiquities of India" [ಮೆಕೆಂಜಿ, ೧೯೫೨: ಪು. ೧೭] ಹೀಗೆ ಕ್ರಿ. ಶ. ೧೭೮೩ ರ ಆದಿಯಲ್ಲಿ ಮೆಕೆಂಜಿಯು ಬ್ರಾಹ್ಮಣ ಪಂಡಿತರುಗಳಿಗಾದರೂ ತಿಳಿದ ವಿಷಯಗಳನ್ನು ಸಂಗ್ರಹಿಸಲು ಮನಸ್ಸು ಮಾಡಿರಬೇಕು.

ಹೆಸ್ಟರ್ ಜಾನ್‌ಸ್ಟನ್‌ಳು ಸಹಾ ಜಾನ್ ನೇಪಿಯರನ ಜೀವನ ಚರಿತ್ರೆಯನ್ನು ಬರೆಯಲು ವಿಷಯ ಸಂಗ್ರಹಿಸುತ್ತಿದ್ದಳು. ಅದಕ್ಕಾಗಿ ಆಕೆ ಕೆಲವು ಬ್ರಾಹ್ಮಣ ಪಂಡಿತರನ್ನು ತನ್ನ ಸಹಾಯಕ್ಕೆ ನೇಮಿಸಿಕೊಂಡಿದ್ದಳು. ಮೆಕೆಂಜಿಯೂ ಇದೇ ಉದ್ದೇಶದವನಾದ್ದರಿಂದ ಇಬ್ಬರಲ್ಲೂ ವಿಚಾರ ವಿನಿಮಯ ಅನಿವಾರ್ಯವಾಯಿತು. ಮೆಕೆಂಜಿಯೂ ತನ್ನೊಡನೆ ಕೆಲವು ಶ್ರೇಷ್ಠ ಬ್ರಾಹ್ಮಣ ಪಂಡಿತರುಗಳನ್ನು ಸಹಾಯಕ್ಕೆ ಕರೆದುಕೊಂಡ "Maekenzies intercourse with the Brahmins impressed him with the idea that the most valuable matter for a history of India might be collected in different parts of the peninsula and during his residence at Madhura, he first conceived and formed its plan of making that collection, which afterwards became the favourite object of his life, and which is now the most valuable collection of historical documents relating to India that was ever made by any one individual in Europe or in Asia [WILSON, 1882, P, VIII]

ಉದ್ಯೋಗದಲ್ಲೂ ಅತಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದ ಮೆಕೆಂಜಿಗೆ ಆಗಾಗ ಭಡ್ತಿದೊರಕಿದೆ. ಅದರ ವಿವರ ಈ ರೀತಿ ಇದೆ—

16th May 1789	:	Second Lieutenant in Madras
6th May 1793	:	First Lieutenant
16th August 1793	:	Captain
1st January 1806	:	Major
25th October 1809	:	Breut Lieutenant-Colonel
15th November 1810	:	Regimental Lieutenant-Colonel
12th August 1819	:	Colonel

ಕ್ರಿ. ಶ. ೧೭೮೩ರ ಅಂತ್ಯದಿಂದ ೧೭೯೬ರ ವರೆಗೆ ಮೆಕೆಂಜಿ ಸೈನ್ಯದಲ್ಲಿಯೇ ಕೆಲಸ ಮಾಡಿದನು. ೧೭೮೩ರಲ್ಲಿ ಕೊಯಮತ್ತೂರು ಮತ್ತು ಡಿಂಡಿಗಲ್ ಪ್ರಾಂತಗಳಲ್ಲಿಯೂ, ಅನಂತರ ಕೆಲವು ವರ್ಷಗಳನ್ನು ಗುಂಟೂರು, ನೆಲ್ಲೂರು, ಪ್ರಾಂತಗಳಲ್ಲಿಯೂ ಕಳೆದ. ಕ್ರಿ. ಶ. ೧೭೯೦ರಿಂದ ೧೭೯೨ರ ವರೆಗೆ ಆತ ಮೈಸೂರು ಯುದ್ಧಗಳಲ್ಲಿ ಭಾಗವಹಿಸಿದ ೧೭೯೩ರಲ್ಲಿ ಕಾರ್ನವಾಲೀಸನು ಮೆಕೆಂಜಿಯನ್ನು ಹೈದರಾಬಾದಿನ ನಿಜಾಮನಿಂದ ಈಸ್ಟ ಇಂಡಿಯಾ ಕಂಪನಿಗೆ ದೊರೆಕಿದ ಭೂಮಿಯನ್ನು ಅಳೆಯಲು ನೇಮಿಸಿದ. ಅದನ್ನು ಅಳೆದು ವರದಿ ಸಲ್ಲಿಸಿದ ಮೇಲೆ ಆತ ಭೂ ವೀಕ್ಷಣೆಗಾಗಿ ಸಿಂಹಳಕ್ಕೆ

ಹೋದ. ೧೭೯೬ರಲ್ಲಿ ಆತ ಸಿಂಹಳದಿಂದ ಭಾರತಕ್ಕೆ ಹಿಂದಿರುಗಿದ. ಹೀಗೆ ೧೭೮೩ರ ರಿಂದ ೧೭೯೬ರ ವರೆಗಿನ ೧೩ ವರ್ಷಗಳ ಉದ್ದಕ್ಕೂ ಒಂದು ಆಧಿಪತ್ಯದಿಂದ ಇನ್ನೊಂದು ಆಧಿಪತ್ಯಕ್ಕೆ ಮೆಕೆಂಜಿಯು ಸುತ್ತುತ್ತಲೇ ಇದ್ದುದರಿಂದ ಅವನಿಗೆ ಸಂಶೋಧನೆ ಮತ್ತು ಹಸ್ತಪ್ರತಿಗಳ ಸಂಗ್ರಹಣೆ ಕೆಲಸ ಮಾಡುವುದು ಸಾಧ್ಯವಿಲ್ಲವಾಯಿತು.

ಸಿಂಹಳದಿಂದ ವಾಪಸಾದ ಅನಂತರ ಮೆಕೆಂಜಿ ದಕ್ಷಿಣ ಭಾರತದ ಭೂಪಟ ವೊಂದನ್ನು ಸಿದ್ಧಪಡಿಸಿ, ೧೮೦೭ರಲ್ಲಿ ಅದನ್ನು ಸರಕಾರಕ್ಕೆ ಒಪ್ಪಿಸಿದ.[೧] ಈ ಭೂಪಟ ವನ್ನು ತಯಾರಿಸುವ ಸಂದರ್ಭದಲ್ಲಿ ಮೆಕೆಂಜಿ ಸಾವಿರಾರು ಹಸ್ತಪ್ರತಿಗಳನ್ನು, ಶಾಸನ ಗಳನ್ನು ಸಂಗ್ರಹಿಸಿದ್ದಾನೆ. ಕೈಫಿಯತ್ತುಗಳನ್ನು ಬರೆಸಿ ಸಂಗ್ರಹಿಸಿದ್ದಾನೆ. ದಕ್ಷಿಣ ಭಾರತದ ಇತಿಹಾಸವನ್ನು ಪುನರ್ನಿರ್ಮಿಸ ಬೇಕಾದ ಎಲ್ಲ ವಿಚಾರಗಳನ್ನು ಆತ ಕೂಡಿಸಿದ್ದಾನೆ. ಹೀಗೆ ಸಂಗ್ರಹಿಸುವಾಗ ಆತ ಅನುಭವಿಸಿದ ಕಷ್ಟ ನಷ್ಟಗಳನ್ನು ವಿಲ್ಸನ್ನನು ತನ್ನ ಸೂಚಿಕೆ ಯಲ್ಲಿ ವಿವರಿಸಿದ್ದಾನೆ. [ವಿಲ್ಸನ್, ೧೮೨೮ ಪು. ೧–೧೬].

ಕ್ರಿ. ಶ. ೧೭೯೯ರಲ್ಲಿ ಮೆಕೆಂಜಿಯು ಟಿಪ್ಪುಸುಲ್ತಾನನ ವಿರೋಧವಾಗಿ ಪ್ರಚಾರ ಮಾಡಲು ಮೈಸೂರು ಪ್ರಾಂತದಲ್ಲಿ ಸುತ್ತಾಡಿದ ಶ್ರೀರಂಗ ಪಟ್ಟಣದ ಪತನವಾದ [೪ ಎಪ್ರಿಲ್ ೧೭೯೯] ಅನಂತರ ಆತ ಮೈಸೂರು ಪ್ರಾಂತದ ಭೂವೀಕ್ಷಣೆಗೆ ತೊಡಗಿದ. ಪರಿಣಾಮವಾಗಿ ಸುಮಾರು ೪೨.೦೦೦ ಮೈಲುಗಳಷ್ಟು ಪ್ರದೇಶವನ್ನು ಆತ ಸುತ್ತ ಬೇಕಾಯಿತು. ಈ ಸಮಯದಲ್ಲಿ ಅವನಿಗೆ ತನ್ನ ಸಂಗ್ರಹ ಕಾರ್ಯವನ್ನು ತೃಪ್ತಿಕರವಾಗಿ ಮಾಡಲು ಸಾಧ್ಯವಾಯಿತು. ಕ್ರಿ. ಶ. ೧೮೧೧ರಲ್ಲಿ ಸೈನ್ಯದ ಕೆಲಸ ನಿಮಿತ್ತವಾಗಿ ಜಾವಾ ದ್ವೀಪಗಳಿಗೆ ತೆರಳುವಲ್ಲಿಯವರೆಗೂ ಮೆಕೆಂಜಿಯು ಸಂಗ್ರಹ ಕಾರ್ಯ ಸುಸೂತ್ರವಾಗಿ ಮುಂದುವರಿಯಿತು. ಜಾವಾದ್ವೀಪಗಳಲ್ಲಿಯೂ ಆತ ಅನೇಕ ಹಸ್ತ ಪ್ರತಿಗಳನ್ನು ಸಂಗ್ರ ಹಿಸಿದ್ದಾನೆ.

ಕ್ರಿ. ಶ. ೧೮೧೬ರಲ್ಲಿ ಜಾವಾದಿಂದ ಹಿಂದಿರುಗಿದಾಗ ಮೆಕೆಂಜಿಗೆ ದುರ್ದಶೆ ಆರಂಭ ವಾಗಿತ್ತು. ಆತ ಉದ್ಯೋಗದ ನಿಮಿತ್ತವಾಗಿ ಮದರಾಸನ್ನು ಬಿಟ್ಟು ಕಲ್ಕತ್ತದಲ್ಲಿ ನೆಲಸ ಬೇಕಾಯಿತು. ೧೮೧೭ರಲ್ಲಿ ಆತ ಕಲ್ಕತ್ತಾಕ್ಕೆ ಹೋಗುವಾಗ ತನ್ನ ಪ್ರತಿನಿಧಿಗಳಾಗಿ ಮದರಾಸಿನಲ್ಲಿ ಕೆಲವರನ್ನು ನಿಲ್ಲಿಸಿ, ಚಾರಿತ್ರಿಕ ದಾಖಲೆಗಳನ್ನು ಸಂಗ್ರಹಿಸಲು ಮತ್ತು ಮುಖ್ಯವಾದ ಸಂಗ್ರಹಗಳನ್ನು ಇಂಗ್ಲಿಷಿಗೆ ಭಾಷಾಂತರಿಸಲು ಅನುವುಮಾಡಿ ಕೊಟ್ಟೇ ಹೋದನು. ಆದರೆ ಮದರಾಸಿನಲ್ಲಿ ಕೆಲಸ ಸರಿಯಾಗಿ ನಡೆಯಲಿಲ್ಲ ಆತನ ಸಹಾಯಕ ರಲ್ಲಿ ಕೆಲವರು ರೋಗದಿಂದ ತೀರಿಕೊಂಡರು. ಇದರಿಂದ ನೊಂದುಕೊಂಡ ಮೆಕೆಂಜಿ ಅದುವರೆಗೆ ತಾನು ಸಂಗ್ರಹಿಸಿದ ಗ್ರಂಥಗಳ ಮತ್ತು ಇತರ ಹಸ್ತ ಪ್ರತಿಗಳ ಸೂಚಿಕೆ ಯನ್ನು ಸಿದ್ಧಗೊಳಿಸಲು ಉದ್ಯುಕ್ತನಾದ. ಆದರೆ ವೃದ್ಧಾಪ್ಯದ ತೀವ್ರ ಬಳಲಿಕೆ ಯಿಂದ ಮತ್ತು ಕೆಲಸದ ಒತ್ತಡದಿಂದಾಗಿ ಆತನ ಆರೋಗ್ಯಕೆಟ್ಟು ತನ್ನ ೬೮ನೇ ವಯಸ್ಸಿ

ನಲ್ಲಿ (ಮೇ ೮, ೧೮೨೧) ಕಲ್ಕತ್ತದ ತನ್ನ ಮನೆಯಲ್ಲಿ ತೀರಿಕೊಂಡ. ಸೂಚಿಕೆಯನ್ನು ಸಿದ್ಧಗೊಳಿಸುವ ಅವನ ಕೆಲಸ ಅರ್ಧದಲ್ಲಿಯೇ ಉಳಿದಿದ್ದರಿಂದ ಆತನ ಸಂಗ್ರಹದ ಬಗೆಗೆ ಕೊನೆಯ ಮಾತನ್ನಾಡುವುದು ಸಾಧ್ಯವಿಲ್ಲವಾಗಿದೆ.

ಮೆಕೆಂಜಿ ಸಂಗ್ರಹ ಕಾರ್ಯ ಮತ್ತು ಅವನ ಸಹಾಯಕರು :

ಮೆಕೆಂಜಿಯು ತನ್ನ ಸಂಗ್ರಹ ಕಾರ್ಯಕ್ಕೆ ಸಹಾಯಕವಾಗುವಂತೆ ಅನೇಕ ದೇಶೀಯ ಪಂಡಿತರನ್ನು ನೇಮಿಸಿಕೊಂಡಿದ್ದಂತೆ ತಿಳಿದು ಬರುತ್ತದೆ. ಅವರಲ್ಲಿ ಕೆಲವರ ಹೆಸರು ಮಾತ್ರ ಇಂದು ದೊರಕುತ್ತವೆ. ಪುಲಿಗಡ್ಡ ಮಲ್ಲಯ್ಯ, ವೆಂಕಟರಾವ್, ನಾರಾಯಣ ರಾವ್, ವಿಠ್ಠಲರಾವ್. ಬಾಬೂರಾವ್, ಆನಂದರಾವ್ ಮೊದಲಾದವರು ಬಹು ಭಾಷಿಗಳಾಗಿದ್ದು ಮೆಕೆಂಜಿಯ ಜೊತೆಯಲ್ಲಿಯೇ ಇದ್ದರೆಂದು ವಿಲ್ಸನ್ನನು ಹೇಳುತ್ತಾನೆ. (ವಿಲ್ಸನ್, ೧೮೮೨. ಪು. ೧೩) ಕಾವಲಿ ವೆಂಕಟಬೋರಯ್ಯ, ವೆಂಕಟಲಕ್ಷ್ಮಯ್ಯ, ಮತ್ತು ವೆಂಕಟರಾಮಸ್ವಾಮಿಯವರನ್ನು ಮೆಕಂಜಿಯೇ ಅಲ್ಲಲ್ಲಿ ಸ್ಮರಿಸಿಕೊಂಡಿದ್ದಾನೆ.

ಈ ಸಹಾಯಕರಿಗೆಲ್ಲಾ ಮೆಕೆಂಜಿ ತನ್ನ ಸಂಬಳದ ಹಣದಿಂದಲೇ ವೇತನವನ್ನಿಯುತ್ತಿದ್ದ [ಮೆಕೆಂಜಿ, ೧೯೫೨, ಪು.೧೩೬].

ಕಾವಲಿವೆಂಕಟ ಬೋರಯ್ಯನು ಮೆಕೆಂಜಿಯ ಅತಿ ಹತ್ತಿರದ ಹಾಗೂ ಆತ್ಮೀಯ ಪಂಡಿತನಾಗಿದ್ದ. ಬೋರಯ್ಯನ ಅಪಾರ ವಿದ್ವತ್ತನ್ನು ತೀಕ್ಷ್ಣಮತಿತ್ವ, ಮತ್ತು ಸಂಶೋಧಕ ಪ್ರವೃತ್ತಿಯನ್ನು ಮೆಚ್ಚಿಕೊಂಡಿದ್ದ ಮೆಕೆಂಜಿಯು ಅವನ್ನು ತನ್ನ ಹೆಡ್‌ಕ್ಲಾರ್ಕ್ ಆಗಿ ನೇಮಿಸಿಕೊಂಡ. ೧೭೯೯ರಲ್ಲಿ ಮೆಕೆಂಜಿಗೆ ಸಹಾಯಕನಾಗಿ ಟಿಪ್ಪುವಿನ ಮೇಲೆ ಆತ ಕವನಗಳನ್ನು ಬರೆದಿದ್ದ. ಇದರಿಂದ ಬಹಳ ಜನ ಟಿಪ್ಪುಸುಲ್ತಾನದ ಎದುರುಬಿದ್ದು ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯಕರಾಗಿ ಬಂದರು. (ಶ್ರೀಧರ. ೧೯೭೬ ಪು ೩೬) ಬೋರಯ್ಯನು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಅಪಾರವಾದ ವಿದ್ವತ್ತೆಯನ್ನು ಪಡೆದಿದ್ದ ಆದರೆ ಎಳೆವಯಸ್ಸಿನಲ್ಲಿ ಬೋರಯ್ಯನು ತೀರಿಕೊಂಡದ್ದರಿಂದ ಮೆಕೆಂಜಿಯು ಬಹಳ ಕಷ್ಟಗಳನ್ನು ಎದುರಿಸಬೇಕಾಯಿತು. ಬೋರಯ್ಯನು ಮೆಕೆಂಜಿಗೆ ಸಲ್ಲಿಸಿದ ಸೇವೆ ಅಪಾರ. ಅವನೇ ಒಂದು ಪತ್ರದಲ್ಲಿ– "The connection then formed with one person, a native, a brahmin (The Lamented C. V. Boraiah) ever the first stop of my introduction into the portal of Indian knowledge. Devoid of any genius of the language myself, I owe to the happy genius of this Individual the encouragement and the means of obtaining what I had so long sought. From the moment the talents of lamented Boraiah were applied, a new

avenue of Hindu knowledge was opened and Thought I was deprived of him at on ealry age, his example and instructions were so happily followed up by his brothers and deciples. . ." ಎಂದು ಬರೆದಿದ್ದಾನೆ [ಮೆಕೆಂಜಿ, ೧೯೫೪; ಪು. ೬೯].

ಬೋರಯ್ಯನ ಮರಣಾನಂತರ ಅವನ ತಮ್ಮನಾದ ಲಕ್ಷ್ಮಯ್ಯನು ಮೆಕೆಂಜಿಯ ಸಹಾಯಕ್ಕೆ ಬಂದನು. ತನ್ನ ಪಾಂಡಿತ್ಯದಿಂದ ಅಣ್ಣನ ಸ್ಥಾನವನ್ನು ತುಂಬಿದ. ಕೃತಜ್ಞನಾದ ಮೆಕೆಂಜಿ ಮೇ ೩, ೧೮೧೧ ರಲ್ಲಿ ಬರೆದ ಉಯಿಲಿನಲ್ಲಿ ತನ್ನ ಒಟ್ಟು ಸಂಪಾದನೆಯ ಹತ್ತನೇ ಒಂದಂಶದಷ್ಟು (೧೦%) ಆಸ್ತಿಯನ್ನು ಲಕ್ಷ್ಮಯ್ಯನಿಗೆ ಕೊಡಬೇಕೆಂದು ಬರೆಯುವದರ ಮೂಲಕ ಈ ದೇಶೀ ಪಂಡಿತನಿಗೆ ಗೌರವ ಸಲ್ಲಿಸಿದ-"To my servent cauelly V. Laxmaiah, Boraiah and his youger brother Ramaswamy . . In some compensation for the useful services of the said Laxmaiah and of his late brother C. Boraiah. I desire that my brother, sister and friends regarding the value, I had for these persons will try no means to attempt to lessen or defeat my intention in this respect, which I wish them to consider sacred and iuviolable" (ಶ್ರೀಧರ, ೧೯೭೬, ಪು. ೩೭).

೧೮೧೫, ಫೆಬ್ರುವರಿ ೧೮ರಂದು ಬರೆದ ಇನ್ನೊಂದು ಉಯಿಲಿನಲ್ಲೂ ಮೆಕೆಂಜಿಯು ಲಕ್ಷ್ಮಯ್ಯನನ್ನು ಮನದುಂಬಿ ಹೊಗಳಿದ್ದಾನೆ.

ಇವರೆಲ್ಲರ ಸಹಾಯದಿಂದ ಮೆಕೆಂಜಿ ಮತ್ತಿನ್ನಾರೂ ಸಂಗ್ರಹಿಸಿರದಷ್ಟು ಹಸ್ತಪ್ರತಿಗಳನ್ನು ಸಂಗ್ರಹಿಸಿದ ವಿವಿಧ ಭಾಷೆಗಳಲ್ಲಿ ಆತನ ಸಂಗ್ರಹ ಇಷ್ಟಿದೆ–

ಹಸ್ತ ಪ್ರತಿಗಳು	೧೫೬೮೨
ಕೈಫಿಯತ್ತುಗಳು	೨,೦೭೦
ಶಾಸನಗಳ ನಕಲುಗಳು	೮,೦೭೦
ನಕ್ಷೆಗಳು	೭೦೧
ಚಿತ್ರಗಳು	೨,೬೩೦
ನಾಣ್ಯಗಳು	೬,೨೧೮
ಪುರಾತನ ವಿಗ್ರಹಗಳು	೧೦೬

ಇವುಗಳೆಲ್ಲದರ ಮೇಲೆ ಅವಕಾಶವಿದ್ದಾಗಲೆಲ್ಲಾ ಕೆಲವು ಉಪಯುಕ್ತ ಟಿಪ್ಪಣಿಗಳನ್ನು, ಲೇಖನಗಳನ್ನು ಬರೆದಿದಿದ್ದಾನೆ. ಅವುಗಳ ಒಟ್ಟು ಸಂಖ್ಯೆ ೪೦ (ಮೆಕೆಂಜಿ. ೧೯೫೨ ಪು ೧೪-೧೫).

ಮೆಕೆಂಜಿ ಸಂಗ್ರಹದಲ್ಲಿ ಈ ಕೆಳಗಿನ ವಿಷಯಗಳು ಅಡಕವಾಗಿರುತ್ತವೆ:

೧. ಶಾಸನಗಳು ೨. ಕೈಫಿಯತ್ತುಗಳು ೩. ಸಾಮಾನ್ಯ ವಿವರಗಳು ೪. ವಂಶಾವಳಿಗಳು ೫. ಪ್ರಖ್ಯಾತ ಯುದ್ಧಗಳು ೬. ಐತಿಹಾಸಿಕ ಘಟನೆಗಳು ೭. ಕುಲಗಳ ಉತ್ಪತ್ತಿ ವಿಚಾರ ೮. ನಿರೂಪಗಳು ೯ ಆದಿ ವೃತ್ತಾಂತಗಳು ೧೦. ಭಟಾಂಗಿನಿಗಳು ೧೧. ಶಾಪವಚನಗಳು ೧೨. ಸಕ್ಷೆಗಳು ೧೩. ಚಿತ್ರಗಳು ೧೪. ಸ್ಥಳಪುರಾಣಗಳು ೧೫. ಗ್ರಂಥಗಳು ೧೬. ಲೆಕ್ಕಗಳು ೧೭. ಬಖೈರುಗಳು ೧೮. ನಾಣ್ಯಗಳು ೧೯. ಅಳ್ವಿಕೆಗಳು ೨೦. ಪಟ್ಟಿಗಳು ೨೧. ಪತ್ರಗಳು ೨೨. ವೈದ್ಯ ವಿಚಾರ ೨೩. ರತ್ನ ಮಾಲಿಕೆ ಮತ್ತು ೨೪. ಬಾಬುಗಳು.[೩]

ಒಂದು ದೊಡ್ಡ ಸಂಸ್ಥೆ ಮಾಡಬೇಕಾದ ಕೆಲಸವನ್ನು ಮೆಕೆಂಜಿ ಏಕಾಂಗಿಯಾಗಿ ಸಾಧಿಸಿದ್ದಾನೆ.

ಮೆಕೆಂಜಿ ಸಂಗ್ರಹದ ಅವಸ್ಥೆ: ಮೆಕೆಂಜಿಗೆ ತನ್ನ ಸಂಗ್ರಹದ ಸೂಚಿಕೆಯನ್ನು ಸಿದ್ಧಪಡಿಸಲಾಗಲಿಲ್ಲ. ಅವನ ಮರಣಾನಂತರ ಅಲೆಕ್ಸಾಂಡರ್ ಜಾನ್‌ಸ್ಟನ್ ಎಂಬವನು ಮೆಕೆಂಜಿ ಸಂಗ್ರಹವನ್ನು ಪರಿಶೀಲಿಸಿ, ಅಲ್ಲಿ ದೊರೆತ ಕಲವು ಕಾಗದ ಪತ್ರಗಳ ಆಧಾರ ದಿಂದ, ಮೆಕೆಂಜಿಯು ಈ ಸಂಗ್ರಹಕ್ಕೆ ಸುಮಾರು ೧೫ ಸಾವಿರ ಪೌಂಡುಗಳನ್ನು ವ್ಯಯಿಸಿರಬೇಕೆಂದು ಅಂದಾಜು ಮಾಡಿದನು [JORAS-1; ೧೮೩೪; ಪು. ೩೩೭]. ಅಷ್ಟು ಹಣಕೊಟ್ಟು ಮೆಕೆಂಜಿ ಸಂಗ್ರಹವನ್ನು ಸರಕಾರ ತೆಗೆದುಕೊಳ್ಳಬೇಕೆಂದೂ, ಅದು ಹಾಳಾಗದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯವೆಂದೂ ಜಾನ್‌ಸ್ಟನ್ನನು ಸರಕಾರಕ್ಕೆ ಬರೆದನು. ಈ ಬೇಡಿಕೆಯನ್ನು ಮನ್ನಿಸಿದ ಸರಕಾರ ಕೊನೆಗೆ ಹತ್ತು ಸಾವಿರ ಪೌಂಡುಗಳಿಗೆ ಮೆಕೆಂಜಿ ಸಂಗ್ರಹವನ್ನು ಮೆಕೆಂಜಿಯ ಪತ್ನಿಯಿಂದ ಖರೀದಿಸಿತು. ಈ ಸಂಗ್ರಹದ ಸೂಚಿಕೆಯನ್ನು ವಿಲ್ಸನ್ ಎಂಬವನು ಕಾವಲಿ ವೆಂಕಟಲಕ್ಷ್ಮಯ್ಯನ ಸಹಾಯದಿಂದ ತಯಾರಿಸಿ ೧೮೨೮ ರಲ್ಲಿ ಕಲ್ಕತ್ತದಿಂದ ಪ್ರಕಟಿಸಿದ.[೪]

ಮೆಕೆಂಜಿ ಸಂಗ್ರಹದಲ್ಲಿದ್ದ ಮುಖ್ಯ ದಾಖಲೆಗಳನ್ನು ಮತ್ತು ಹಸ್ತಪ್ರತಿಗಳನ್ನು ೧೮೨೩ ರಲ್ಲಿ ಮತ್ತು ೧೮೨೫ ರಲ್ಲಿ ಎರಡು ಬಾರಿ ಇಂಗ್ಲಂಡಿಗೆ ಸಾಗಿಸಿದಂತೆ ವಿಲ್ಸನ್ ಸೂಚಿಸಿದ್ದಾನೆ [ವಿಲ್ಸನ್, ೧೮೮೨; ಪು. ೧೨]. ಆತನ ಪ್ರಕಾರ ಇಂಗ್ಲಂಡಿಗೆ ಸಾಗಿಸಿದ 'ಸಂಗ್ರಹ'ದ ವಿವರ ಇಂತಿದೆ.

೧ ತಮಿಳಿನಿಂದ ಒಟ್ಟು ೧೯೨ ಹಸ್ತ ಪ್ರತಿಗಳು.

a)	Pauranic and Legendary history	44	manuscripts
b)	Local history and Biography	39	,,
c)	Plays, tales, poems, including relegions and ethical compositions	72	,,
d)	Philology	10	,,
e)	Astronomy and Astrology	14	,,
f)	Medicine	10	,,
g)	Arts	3	,,
		192	

೨ ತೆಲುಗು ಭಾಷೆಯಿಂದ ಒಟ್ಟು ೧೫೬ ಹಸ್ತಪ್ರತಿಗಳು .

a)	Pauranic and Legendary Literature	36	manuscripts
b)	Local history, Biography etc.	23	,,
c)	Poetry, plays, tales etc.	82	,,
d)	Philology	9	,,
e)	Astrology, medicine and machanics	6	,,
		156	

೩ ಕನ್ನಡದಿಂದ ಒಟ್ಟು ೯೯ ಹಸ್ತಪ್ರತಿಗಳು.

a)	Pauranic and Legendary history	48	manuscripts
b)	Local history and Biography	17	,,
c)	Tales, Poems, ethical etc.	18	,,
d)	Philology, Astrology	16	,,
		99	

(ವಿಲ್ಸನ್, ೧೮೮೨, ಪು. ೧೨)

ಹೀಗೆ ವಿಲ್ಸನ್ನನ ಪ್ರಕಾರ ಇಂಗ್ಲೆಂಡಿಗೆ ಸಾಗಿಸಲಾದ ಮುಖ್ಯ ಹಸ್ತಪ್ರತಿಗಳ ಒಟ್ಟು ಸಂಖ್ಯೆ ೪೪೭. ವಿಲಿಯಂ ಟೇಲರ್ ಎಂಬವನು ಇತರ ಭಾಷೆಗಳಿಂದ ಸಾಗಿಸಲಾದ ಹಸ್ತ ಪ್ರತಿಗಳ ವಿವರಗಳನ್ನು ಕೊಟ್ಟಿದ್ದಾನೆ–

೧. ಕನ್ನಡದಿಂದ	೩೧	ದಾಖಲೆಗಳು	(ಸಂಕೀರ್ಣ	ಸಂಪುಟಗಳು)
೨. ಮಲೆಯಾಳಂನಿಂದ	೬	,,	,,	,,
೩. ಓರಿಯಾದಿಂದ	೨೩	,,	,,	,,
೪. ಮರಾಠಿಯಿಂದ	೧೨	,,	,,	,,
೫. ಹಿಂದಿಯಿಂಪ	೧೨	,,	,,	,,

(ಟೇಲರ್,. ೧೮೩೮, ಪು. ೧೨–೧೩)

ಮೆಕೆಂಜಿ ಸಂಗ್ರಹದ ಅತಿ ಮುಖ್ಯ ದಾಖಲೆಗಳನ್ನು ಆರಿಸಿ ಇಂಗ್ಲೆಂಡಿಗೆ ಸಾಧ್ಯ ವಿದ್ದಷ್ಟು ಸಾಗಿಸಿದ್ದಾರೆ.

ಇಂಗ್ಲೆಂಡಿಗೆ ಸಾಗಿಸಿ ಅಳಿದುಳಿದು ಹಸ್ತಪ್ರತಿಗಳನ್ನು ಸರಕಾರ ಮದರಾಸು ಪ್ರೆಸಿಡೆನ್ಸಿ ಕಾಲೇಜಿನ ಲೈಬ್ರರಿಯಲ್ಲಿ ಹಾಕಿಟ್ಟಿತು. ಕ್ರಿ. ಶ. ೧೮೩೦ರ ವರೆಗೆ ಅದನ್ನು ಯಾರೂ ಗಮನಿಸಲಿಲ್ಲ. ಇದನ್ನು ಗಮನನಿಸಿದ ಮದರಾಸಿನ ಲಿಟರರಿ ಸೊಸೈಟಿ ಯವರು ಮೆಕೆಂಜಿ ಸಂಗ್ರಹವನ್ನು ತಮಗೆ ಒಪ್ಪಿಸಿದಲ್ಲಿ ಅದರ ಸಾರಾಂಶವನ್ನು ಪ್ರಕಟಿಸು ವುದಾಗಿಯೂ. ಅದರಲ್ಲಿಯೂ ಶಾಸನಗಳಿಗೆ ಹೆಚ್ಚಿನ ಆದ್ಯತೆ ನೀಡುವುದಾಗಿಯೂ ಸರಕಾರಕ್ಕೆ ಬರೆದರು.[೫] ಇದೇ ಸಮಯದಲ್ಲಿ ಕಾವಲಿ ವೆಂಕಟಲಕ್ಷ್ಮಯ್ಯನು, ತಾನು ಮೆಕೆಂಜಿಯ ಕೆಲಸವನ್ನು ಮುಂದುವರಿಸುತ್ತೇನೆಂದೂ, ಅದಕ್ಕೆ ಸರಕಾರ ಧನಸಹಾಯ ಮಾಡಬೇಕೆಂದೂ ಸರಕಾರಕ್ಕೆ ಬರೆದನು. ಸರಕಾರ ಲಿಟರರಿ ಸೊಸೈಟಿಯವರ ಬೇಡಿಕೆ ಯನ್ನು ಮನ್ನಿಸಿತು. ಆದರೆ ದುರ್ದೈವದಿಂದ ಲಿಟರರಿ ಸೊಸೈಟಿಯವರು ಬೇಡಿಕೆಯನ್ನು ಒಂದೆರಡು ಲೇಖನಗಳನ್ನು ಪ್ರಕಟಿಸಿದ್ದಲ್ಲದೆ ಬೇರೇನನ್ನೂ ಮಾಡಲಿಲ್ಲ.

ಇದೇ ಪರಿಸ್ಥಿತಿ ಕ್ರಿ. ಶ. ೧೮೩೭ರವರೆಗೆ ಬಂದಾಗ ಪ್ರೆಸಿಡೆನ್ಸಿ ಕಾಲೇಜಿನ ಲೈಬ್ರರಿ ಯಲ್ಲಿದ್ದ ಮೆಕೆಂಜಿ ಸಂಗ್ರಹಗಳು ಹಾಳಾಗುತ್ತ ಬಂದಿದ್ದವು. ಅಕ್ಷರಗಳು ಮಾಸುವುದರ ಜೊತೆಗೆ ಒಂದು ಸಂಗ್ರಹದ ಪುಟಗಳು ಇನ್ನೊಂದರೊಡನೆ ಸೇರಿ ಸ್ಪಷ್ಟತೆ ಇಲ್ಲ ವಾಯಿತು. ಹಲವು ದಾಖಲೆಗಳನ್ನು ಕೀಟಗಳು, ಇಲಿಗಳು ತಿಂದವು. ಇದನ್ನು ಕಂಡು ನೊಂದ ವೆಂಕಟಲಕ್ಷ್ಮಯ್ಯನು, ಮೆಕೆಂಜಿ ಇದನ್ನು ಸಂಗ್ರಹಿಸಲು ಪಟ್ಟ ಶ್ರಮವನ್ನು ವಿವರಿಸಿ ಸರಕಾರಕ್ಕೆ ದೀರ್ಘ ಪತ್ರವೊಂದನ್ನು ಬರೆದು ಹೇಗಾದರೂ ಮಾಡಿ ಅದನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿಕೊಂಡನು. ಸರಕಾರ ೧೮೩೭ರಲ್ಲಿ ವಿಲಿಯಂ ಟೈಲರ್ ಎಂಬ ವನನ್ನು ಅದರ ಮೇಲ್ವಿಚಾರಕನನ್ನಾಗಿ ನೇಮಿಸಿತು. ಆತ ೧೮೩೭ರ ಜುಲೈ ತಿಂಗಳಲ್ಲಿ ತನ್ನ ಕೆಲಸ ಆರಂಭಿಸಿ, ಅಳಿದುಳಿದ ಪ್ರತಿಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಮುಖ್ಯವಾದ ವಿಷಯಗಳನ್ನು ಆಯ್ದು ಐದು ಸಂಪುಟಗಳಲ್ಲಿ ಪ್ರಕಟಿಸಿದ. ೧೮೩೮ನೇ ಸೆಪ್ಟೆಂಬರವಲ್ಲಿ ಟೇಲರ್ ನಿವೃತ್ತನಾದ.

ಮೆಕೆಂಜಿ ಸಂಗ್ರಹಕ್ಕೆ ಮತ್ತೆ ದುರ್ದೆಶೆ ಆರಂಭವಾಯಿತು. ೧೮೪೭ರ ವರೆಗೆ ಅದು ಅನಾಥವಾಯಿತು. ಈ ಸಮಯದಲ್ಲಿ ಸುಮಾರು ೨,೦೦೦ ಹಸ್ತ ಪ್ರತಿಗಳಾದರೂ ನಾಶವಾಗಿ ಹೋದವು (ಸುಂದರ ಶಾಸ್ತ್ರಿ, ೧೯೨೬, ಪು. ೧೮೦) ಉಳಿದವು ಅತ್ಯಂತ ಹೀನಾವಸ್ಥೆಗೆ ಬಂದವು. ಸುದೈವದಿಂದ ೧೮೪೭ರಲ್ಲಿ ಕರ್ನಲ್ ಸಿ. ಪಿ. ಬ್ರೌನ್ ಎಂಬ ಸಾಹಸೀ ತರುಣನು ಇದರ ಮಹತ್ವವನ್ನು ಅರಿತುಕೊಂಡು ಅವುಗಳನ್ನು ರಕ್ಷಿಸಲು ಏರ್ಪಾಟು ಮಾಡಿದನು. ಹಾಳಾಗಿ ನಶಿಸುತ್ತಿದ್ದ ಪ್ರತಿಗಳನ್ನೆಲ್ಲಾ ಮತ್ತೆ ಕಲೆ ಹಾಕಿ ಪ್ರತಿಮಾಡಿಸಿದನು. ೬೨ ಸಂಪುಟಗಳಲ್ಲಿರುವ ಸಂಗ್ರಹದ ಸುಮಾರು ೫೦,೦೦೦ ಪುಟಗಳನ್ನು ತಾನೇ ಓದಿ ತಿದ್ದಿ ಟಿಪ್ಪಣಿಗಳನ್ನು ಬರೆದನು. ಇಂದಿಗೆ ಕೂಡಾ ಬ್ರೌನ್ ಬರೆದ ಟಿಪ್ಪಣಿಗಳು ವಿಶೇಷ ಪ್ರಯೋಜನಕಾರಿಯಾಗಿವೆ. ಬ್ರೌನನ ಸಾಧನೆ ಅಚ್ಚರಿಗೊಳಿಸುವಂಥದ್ದು.

ಬ್ರೌನನ ಸಮಕಾಲೀನನಾದ ವಾಲ್ಟರ ಇಲಿಯಟ್‌ನು ಮೆಕೆಂಜಿ ಸಂಗ್ರಹವನ್ನು ಅಚ್ಚುಹಾಕಿಸಬೇಕೆಂದು ಸರಕಾರವನ್ನು ಒತ್ತಾಯಪಡಿಸಿದರೂ ಸರಕಾರ ಅದಕ್ಕೆ ಕಿವಿಗೊಡಲಿಲ್ಲ.

ಮುಂದೆ ೧೮೫೮ ರಲ್ಲಿ ಸರಕಾರವು ಮದರಾಸು ಸರಕಾರದ ಪ್ರಾಚ್ಯ ಗ್ರಂಥಮಾಲೆ (Madras Oriental Manuscripts Library) ಎಂಬ ಹೆಸರಿನಿಂದ ಮೆಕೆಂಜಿ ಸಂಗ್ರಹವನ್ನು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇರಿಸಿ ಅದರ ಮೇಲ್ವಿಚಾರಣೆಯನ್ನು ಅದೇ ಕಾಲೇಜಿನ ಸಂಸ್ಕೃತ ಪ್ರೊಫೆಸರರಿಗೆ ಒಪ್ಪಿಸಿತು. ಹಾಗೆ ಒಪ್ಪಿಕೊಂಡ ಮೊದಲ ಪ್ರೊಫೆಸರರೇ ಗಸ್ಟವ್ ಒಪರ್ಟ್. [Dr. GUSTOV OPPERT]. ಇವರು ಮೊದಲಬಾರಿಗೆ ಮೆಕೆಂಜಿ ಸಂಗ್ರಹವನ್ನು ಭಾಷೆಗಳಿಗನುಗುಣವಾಗಿ ವಿಭಜಿಸಿ. ವಿಸ್ತಾರವಾದ ಸೂಚಿಕೆಯನ್ನು ರಚಿಸಿದರು. ಇವರ ಅನಂತರ ಮೆಕೆಂಜಿ ಸಂಗ್ರಹಕ್ಕೆ ಯಾವುದೇ ಧಕ್ಕೆ ಒದಗಿ ಬಂದಂತಿಲ್ಲ. ೧೯೦೧ ರಲ್ಲಿ ಸರಕಾರವು ಪ್ರಾಚ್ಯ ಗ್ರಂಥಮಾಲೆಯನ್ನು ಮುಚ್ಚಬಯಸಿದಾಗ, ಮೆಕೆಂಜಿ ಸಂಗ್ರಹದ ಮೇಲ್ವಿಚಾರಕರಾಗಿದ್ದ ಶ್ರೀ ರಂಗಾಚಾರ್ಯರು ಅದನ್ನು ಕಪ್ಪಪಟ್ಟು ಉಳಿಸಿಕೊಂಡರು. (ಸುಂದರಶಾಸ್ತ್ರಿ. ೧೯೨೬, ಪು. ೧೮೬).

ಇಂದು ಬೇರೆ ಭಾಷೆಯ ಮೆಕೆಂಜಿ ಸಂಗ್ರಹವೆಲ್ಲಾ ಉತ್ತಮ ಸ್ಥಿತಿಯಲ್ಲಿ ಇಡಲ್ಪಟ್ಟು, ಅಧ್ಯಯನಾಸಕ್ತರಿಗೆ ಅವಕಾಶವನ್ನು ಮಾಡಿಕೊಡಲಾಗಿದೆ. ಇಂಗ್ಲಂಡಿಗೆ ಹೋಗಿ ಇಲಿ, ಗೆದ್ದಲುಗಳು ತಿಂದೂ ಸುಮಾರು ೮,೦೦೦ ಹಸ್ತ ಪ್ರತಿಗಳು ಇಂದಿಗೂ ಮೆಕೆಂಜಿ ಸಂಗ್ರಹದಲ್ಲಿ ಉಳಿದುಕೊಂಡಿವೆ. ಶಾಸನಗಳ ಮತ್ತು ಇತರ ದಾಖಲೆಗಳ ಸಂಗ್ರಹಗಳ ಸಂಖ್ಯೆ ಹತ್ತು ಸಾವಿರವನ್ನು ಮೀರುತ್ತವೆ.

ಮೈಸೂರಿನ ಇತಿಹಾಸ ಮತ್ತು ಮೆಕೆಂಜಿ ಸಂಗ್ರಹ :

ದಕ್ಷಿಣ ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಮೆಕೆಂಜಿ ಸಂಗ್ರಹಿಸಿದರೂ ಅದರಲ್ಲಿ ಕರ್ನಾಟಕದ್ದೇ ಸಿಂಹಪಾಲು. ಆದರೆ ಮೈಸೂರಿನ ಚರಿತ್ರೆ

ಯನ್ನು ಬರೆದವರು ಮೆಕೆಂಜಿ ಸಂಗ್ರಹವನ್ನು ಪರಿಶೀಲಿಸಿಲ್ಲ. ಮಾರ್ಕ್ ವಿಲ್ಕ್ಸನು ಮಾತ್ರ ಕೈಫಿಯತ್ತುಗಳನ್ನು ಗಮನಿಸಿದ್ದಾನೆ–"Colin Mark wilks was largely indebted to the Mackenzie collection for avthentic information which he found useful in preparing his "HISTORY OF KARNA TAKA" for the press. Several of the earlier chapters of his work were chiefly compibol from matcrials placed at his disposal by C. Mackenzie." [wilson, 1882; XIV]. "Writen documentry are not only more copious but also more impoitant than Antiquities" ಎಂದು ಗೆಜೆಟಿಯರುಗಳಲ್ಲಿ ಹೇಳಿದ್ದರೂ ಅಲ್ಲಿ ಕೈಫಿಯತ್ತುಗಳನ್ನು ಗಮನಿಸಲಿಲ್ಲ [ಹಯವದನ ರಾವ್, ೧೯೩೦: ಪು. ೩.]. ೧೯೪೬ ರಲ್ಲಿ ಮೊದಲಬಾರಿಗೆ ರಾಮರಾಜನ ಬಖೈರನ್ನು ಇಂಗ್ಲಿಷಿಗೆ ಭಾಷಾಂತರಿಸಿ ಪ್ರಕಟಿಸಲಾಯಿತು.[೩]

ಎಪಿಗ್ರಾಫಿಯಾ ಕರ್ನಾಟಕಾ ಬರುವುದರ ಸುಮಾರು ನೂರು ವರ್ಷಗಳಷ್ಟು ಹಿಂದೆಯೇ ಮೆಕೆಂಜಿಯು ೪.೭೯೪ ಶಾಸನಗಳನ್ನು ಸಂಗ್ರಹಿಸಿದ್ದಾನೆಂದರೆ ಅವನ ಸಾಧನೆ ಯೇನೆಂಬುದು ಅರ್ಥವಾದೀತು. ಇಂದಿಗೆ ಅಳಿದುಳಿದ 'ಮೆಕೆಂಜಿ ಸಂಗ್ರಹ'ವೇ ಆತನ ಕನ್ನಡ ಸೇವೆಗೊಂದು ವಾಖ್ಯಾನ.

ಕರ್ನಾಟಕದ ಇತಿಹಾಸವನ್ನು ಗಮನದಲ್ಲಿಟ್ಟುಕೊಂಡು ಮೆಕೆಂಜಿ ಸಂಗ್ರಹವನ್ನು ಈ ರೀತಿ ವಿಭಾಗಿಸಬಹುದು :

- ಮೆಕೆಂಜಿ ಸಂಗ್ರಹ
  - ಬರೆಹಗಳು
    - ಗ್ರಂಥಗಳು
    - ಕೈಫಿಯತ್ತುಗಳು
      - ರಾಜಕೀಯ ವಿಚಾರಗಳು
      - ಧಾರ್ಮಿಕ ವಿಚಾರಗಳು
      - ಸಾಮಾಜಿಕ ವಿಚಾರಗಳು
      - ಪ್ರಾಕೃತಿಕ ವಿಚಾರಗಳು
  - ಪ್ರಾಚ್ಯ ಆಧಾರಗಳು
    - ನಾಣ್ಯಗಳು
    - ಶಾಸನಗಳು
    - ನಕ್ಷೆಗಳು
    - ಇತರ

ನಿಸ್ವಾರ್ಥದಿಂದ ಇಷ್ಟು ಕೆಲಸ ಮಾಡಿದರೂ ಮೆಕೆಂಜಿಗೆ ಸಲ್ಲಬೇಕಾದ ಗೌರವ ಸಂದಿಲ್ಲ. "ರೈಸ್, ಫ್ಲೀಟ್, ಕಿಟೆಲ್‌ರಂಥ ಕೆಲವರನ್ನು ಬಿಟ್ಟರೆ ಉಳಿದವರು ಸ್ವಂತದ

ಉದ್ದೇಶಕ್ಕಾಗಿ, ಎಂದರೆ ಸ್ವಮತ ಪ್ರಸಾರಕ್ಕಾಗಿ ಕನ್ನಡದಲ್ಲಿ ಕೆಲಸಮಾಡಿದ್ದಾರೆ" (ಶ್ರೀನಿವಾಸ ಹಾವನೂರು, ೧೯೭೪; ಪು. ೫೫೪) ಎಂಬ ಅಪವಾದಕ್ಕೆ ಮೆಕೆಂಜಿ ಗುರಿಯಾಗುವುದು ಸಾಧ್ಯವಿಲ್ಲ. ಇತರ ಭಾಷೆಗಳಲ್ಲೂ ಮೆಕೆಂಜಿಗೆ ಸಲ್ಲಬೇಕಾಗಿದ್ದ ಗೌರವ ಸಂದಿಲ್ಲ.[೭]

ಮೆಕೆಂಜಿ ಸಂಗ್ರಹವನ್ನು ಒಟ್ಟಾಗಿ ಅಧ್ಯಯನ ಮಾಡಿದಾಗ ಕೆಲವಾರು ಆಶ್ಚರ್ಯಕರ ವಿಷಯಗಳು ಹೊರಬಂದಾವು.

ಅಡಿಟಿಪ್ಪಣಿಗಳು

೧ ಈ ಭೂಪಟ ಈಗ ಬ್ರಿಟಿಷ್ ಮ್ಯುಸಿಯಂನಲ್ಲಿದೆಯೆಂದು ಡಾ॥ ಶ್ರೀಧರಬಾಬು ಹೇಳುತ್ತಾರೆ. ನೋಡಿ-ಶ್ರೀ ವೆಂಕಟೇಶ್ವರ ಯುನಿವರ್ಸಿಟಿ ಓರಿಯಂಟಲ್ ಜರ್ನಲ್, ತಿರುಪತಿ. ಸಂಪುಟ ೨೧, ೧೯೭೬, ಪು. ೩೯

೨ ಈ ಹಸ್ತಪ್ರತಿಗಳು ಸಂಸ್ಕೃತ, ತಮಿಳು, ಕನ್ನಡ, ತೆಲುಗು, ಮಲೆಯಾಳ, ಒರಿಯಾ, ಮರಾಠಿ, ಹಿಂದಿ, ಪರ್ಸಿಯನ್, ಅರೇಬಿಕ್, ಹಿಂದೂಸ್ತಾನಿ, ಜಾವಾನೀಸ್ ಮತ್ತು ಬರ್ಮಿಸ್ ಭಾಷೆಗಳಲ್ಲಿವೆ.

೩ ಹೀಗೆ ವಿಂಗಡಿಸಬಹುದೆಂದು ಸಲಹೆ ನೀಡಿದವರು ಡಾ॥ ವಿ. ಶಿವಾನಂದ ವಿರಕ್ತಮಠ ಇವರು.

೪ ಈ ಗ್ರಂಥದ ಎರಡನೇ ಮುದ್ರಣ ೧೮೮೨ ರಲ್ಲಿ ಮದರಾಸಿನಿಂದ ಹೊರಬಂತು. ಅದರಲ್ಲಿ ಮೆಕೆಂಜಿಯ ಜೀವನ ಚರಿತ್ರೆಯನ್ನು ಸೇರಿಸಲಾಗಿತ್ತು,

೫ Letter from the secretary, Asiatic Department, Madras literature Society, to Government datey 9-3-1830.

೬ ಅನುವಾದಕ ಪ್ರೊ. ಎಂ. ಮರಿಯಪ್ಪ ಭಟ್, ನೋಡಿ : Further suources of vijayanagar history vol III, 1946.

೭ ತಮಿಳಿನಲ್ಲಿ ಈಚೆಗೆ ಬಂದ ಮಹಾ ಪ್ರಬಂಧವೊಂದರಲ್ಲಿ ೨೮ ಯುರೋಪಿಯನ್ ವಿದ್ವಾಂಸರ ವಿವರ ಕೊಟ್ಟು ಮೆಕೆಂಜಿಯ ಬಗ್ಗೆ ಚಕಾರವೆತ್ತಿಲ್ಲ. ನೋಡಿ : The Contribution of Enropean Scholars to Tamil. University. of Madras; Author : K. Meenakshi Sundaram.

ಆಧಾರ ಗ್ರಂಥಗಳು

೧	ಶ್ರೀನಿವಾಸ ಹಾವನೂರ	: ೧೯೭೪	ಹೊಸಗನ್ನಡ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ; ಮೈಸೂರು.
೨	ಸುಂದರ ಶಾಸ್ತ್ರಿ ಪಿ.	: ೧೯೨೬	**ಮದರಾಸು ಸರಕಾರದ ಪ್ರಾಚ್ಯ ಗ್ರಂಥಮಾಲೆ,** ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ; ಸಂ. ೧೧ ಪು. ೧೭೫–೧೯೦.
3	Alexander Johnston	: 1834	Journal of Royal Asiatic Society, vol I; London.
4	Hayavadana Rao	: 1930	Mysore Gagetteer vol II; Part I; Bangalore.
5	Mackenzie W. C.	: 1952	Colonel colin Mackenzie First Surveyor General of India, W and R chamber Ltd; London.
6	Shridhar	: 1976	**Colin Mackenzie–A Dynamic Indianist,** Shri Venkateshwara University oriental Journal; Tirupati. vol XIX.
7	Taylor, willian	: 1838	Examination and Analysis of Mackenzie Manuscripts Madras.
8	Wilson H. H.	: 1882	Wilsons Mackenzie Collection, Hand Co. Madras

ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಸಲಹೆ ನೀಡಿದ ಡಾ॥ ಕೆ. ಕುಶಾಲಪ್ಪ ಗೌಡರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಕಾವ್ಯ ವಿಚಾರ

ಮೂಲ— ವ್ಯಾಸಿಲಸ್ ವಿಟ್ಸ್ಯಾಕ್ಸಿಸ್
ಅನುವಾದ— ವಿನಾಯಕ ನಾಯಿಕ

ಮಾನವನು ತನ್ನ ಸಹಜೀವಿಗಳೊಂದಿಗೆ ಸಂವಹನ ನಡೆಸುವದಕ್ಕಾಗಿ ಮಾಡುವ ಅಂತರಂಗದ ಒತ್ತಡದ ಅಭಿವ್ಯಕ್ತಿಯೇ ಕಲಾತ್ಮಕ ಸೃಷ್ಟಿಯು; ಕೇವಲ ತಿಳಿಯುವದು ಮತ್ತು ತಿಳಿಯಲ್ಪಡುವದಷ್ಟೇ ಅಲ್ಲ, ಅನುಭವಿಸುವದು ಮತ್ತು ಅನುಭವಿಸಲ್ಪಡುವದು, ಹಂಚಿಕೊಳ್ಳುವದು ಮತ್ತು ಭಾಗವಹಿಸುವದೂ ಕೂಡ ಕಲೆಯೇ. ಆದುದರಿಂದ ಕಲೆಯು ಮೂಲಭೂತವಾಗಿ ಸಾಮಾಜಿಕ ವ್ಯಾಪಾರ; ಅದು ಓರ್ವನ ಮತ್ತು ಅನೇಕರಲ್ಲಿಯ ಪ್ರತಿಯೋರ್ವನ ಕೂಡ ಒಂದು ಮೌನ ಸಂಭಾಷಣೆ. ಮತ್ತೊಂದು ಮಾನವ ಹೃದಯವನ್ನು ತಲುಪಿಸಲು ಕಟ್ಟಿರುವ ಅಗೋಚರವಾದ ಸೇತುವೆ.

ನಿಜವಾದ ಮಹತ್ವವುಳ್ಳದ್ದಾಗಬೇಕಾದರೆ ಈ ಸೇತುವೆಯು ದ್ವಿಮುಖ ಸಂಚಾರಕ್ಕೆ ಅನುವು ಮಾಡಿಕೊಡಬೇಕು, ಅದು ಇಬ್ಬದಿಯ ಸಂಚಾರವನ್ನು ನಡೆಸುವಂತೆ ಮಾಡಬೇಕು. ಕಲೆಯು ಸ್ವಗತಭಾಷಣದ ಬಂಜರು ಭೂಮಿಯ ಮೇಲೆಂದೂ ಬೆಳೆಯಬಾರದು. ಕಲೆಯ ಒಂದು ಪ್ರಕಾರವಾಗಿರುವ ಕಾವ್ಯವೂ ಕೂಡ ಈ ವಿಚಾರಗಳಲ್ಲಿ ಸಮಾವೇಶವಾಗಿದೆ. ಆದುದರಿಂದ ಅದರ ಏಕಮಾತ್ರವಲ್ಲದಿದ್ದರೂ ಪ್ರಮುಖ ಕ್ಷೇತ್ರವಾಗಿರುವ ಭಾವ, ಭಾವನೆಗಳ ಮುಕ್ತವಲಯದಲ್ಲಿ ಅದು ಬರುವಂತೆ ಮತ್ತು ಉಳಿಯುವಂತೆ ಮಾಡುವದು ಮತ್ತು ಒಂದು ಹೃದಯದಿಂದ ಮತ್ತೊಂದು ಹೃದಯಕ್ಕೆ ಅನಿರ್ಬಂಧವಾಗಿ ಹರಿಯುವಂತೆ ಮಾಡುವದು ಅತ್ಯಾವಶ್ಯವಾಗಿದೆ.

ಗದ್ಯಕ್ಕೆ ನಿಕಟವಾಗಿ ಸಂಬಂಧಿಸಿದುದು ಎಂದು ಆಗಾಗ್ಗೆ ಪರಿಗಣಿಸಲ್ಪಟ್ಟರೂ ಕೂಡ, ವಾಸ್ತವವಾಗಿ ಕಾವ್ಯವು ಗದ್ಯದೊಡನೆ ಸಂಬಂಧಿತವಾಗಿಲ್ಲ.

ಕಲೆಯ ಈ ಎರಡೂ ಪ್ರಕಾರಗಳು ಬೇರೆ ಬೇರೆ ರೀತಿಯಲ್ಲಿ ಆದರೂ ಕೂಡ ಭಾಷೆಯನ್ನು ತಮ್ಮ "ಉಪಕರಣ"ದಂತೆ ಅಥವಾ "ವಸ್ತು"ವಿನಂತೆ ಉಪಯೋಗಿಸುತ್ತವೆ ಎಂಬುದು ನಿಜ. ಏನೇ ಆಗಲಿ, ಎರಡರ ನಡುವಿನ ಸಾಮ್ಯವು ಇದಕ್ಕಿಂತ ಹೆಚ್ಚಿಗೆ ಮುಂದುವರೆಯುದಿಲ್ಲ.

ಗದ್ಯವು ತರ್ಕ ಮತ್ತು ವ್ಯಾಕರಣದ ನಿರ್ದಿಷ್ಟ ನಿಯಮಗಳಿಗನುಸಾರವಾಗಿ ರಚಿಸಿದ "ವಾಕ್ಯಗಳನ್ನು" ಬಳಸುತ್ತದೆ. ಬಹುತೇಕ ಉದಾಹರಣೆಗಳಲ್ಲಿ ಅದು ವಿಚಾರಗಳನ್ನು ಅಭಿವ್ಯಕ್ತಗೊಳಿಸುತ್ತದೆ ಮತ್ತು ಮೂಲತಃ ಬುದ್ಧಿಯೊಡನೆ ವಿಶೇಷವಾಗಿ ಅದರ ಅರ್ಥೈಸುವ ಕಾರ್ಯಕ್ಕೆ ಸಂಬಂಧಿಸಿದುದಾಗಿದೆ.

ಗದ್ಯವು ಭಾವಗಳನ್ನು ತಿಳಿಯಪಡಿಸುವ ಅಥವಾ ಭಾವನೆಗಳನ್ನು ಸೃಷ್ಟಿಸುವ ಪ್ರಯತ್ನ ಮಾಡಿದರೆ, ಅದು ಅಪ್ರತ್ಯಕ್ಷ ರೀತಿಯಲ್ಲಿ ಹೀಗೆ ಮಾಡುತ್ತದೆ. ಈ ಒಂದು ಪ್ರಕ್ರಿಯೆನ್ನು ನಾನು ಮಾನಸಿಕ ರೂಪಾಂತರ (Psycho Metabolism)ವೆಂದು ಹೆಸರಿಸುತ್ತೇನೆ.

ಇಂಥ ಉದಾಹರಣೆಗಳಲ್ಲಿ ಬುದ್ಧಿಯು ಸಂದೇಶಗಳನ್ನು–ಸಾಮಾನ್ಯವಾಗಿ ವರ್ಣನಾತ್ಮಕ ಸ್ವರೂಪದವು ಯಾವವು ವಾಕ್ಯಗಳಲ್ಲಿ ಅಡಕವಾಗಿವೆಯೊ–ಸ್ವೀಕರಿಸಿದ ನಂತರ ಅವುಗಳನ್ನು ಭಾವನಾತ್ಮಕ ಪ್ರೇರಣೆಗಳನ್ನಾಗಿ ಪರಿವರ್ತಿಸುತ್ತದೆ. ಇವು ಕ್ರಮೇಣ ಅಂತರಂಗಿಕವಾಗಿ ಆತ್ಮವನ್ನು ಘೋಷಿಸುತ್ತವೆ.

ಕಾವ್ಯವು ಬಳಸುವ ವಸ್ತು "ಶಬ್ದ". ಯಾರೆ ಆಗಲಿ ಶಬ್ದಗಳಿಂದ ಆಕರ್ಷಿತವಾಗದ ಹೊರತು ನಿಜವಾದ ಕವಿ ಅಥವಾ ಪ್ರಾಮಾಣಿಕ ಕಾವ್ಯಪ್ರೇಮಿಯಾಗಲಾರ. ಆತನು ಕಾವ್ಯಕ್ಷೇತ್ರದಲ್ಲಿ ವಿಶಿಷ್ಟ ಪಾತ್ರವನ್ನು ಹೊಂದಿರುವ ನಾನು ಸದ್ಯದಲ್ಲಿಯೇ ವಿವರಿಸು ಮತೆ **ಕೇವಲ ಅವುಗಳ ಅರ್ಥದಿಂದಷ್ಟೇ ಅಲ್ಲ: ಅವುಗಳ ಧ್ವನಿ, ಸಂಗೀತ, ಸ್ವರಗಳ ಲಯ ಮತ್ತು ಭಾಷಾತ್ಮ ರಚನೆಗಳ ಅಂತರಂಗಿಕ ಸಮ್ಮಿಳನದಿಂದಲೂ ಆಕರ್ಷಿತನಾಗುತ್ತಾನೆ.**

ಕಾವ್ಯದಲ್ಲಿ ಶಬ್ದದ ಕಾರ್ಯವು ಬರಿಯ ಅರ್ಥವನ್ನು ಕೊಡುವದಾಗಿರದೆ ಒಂದು ಪರಿಣಾಮವನ್ನು ಬೀರುವದಾಗಿದೆ. ಇದನ್ನು ನಾವು ಕಲ್ಪನೆಯ ದಿಗಂತದಲ್ಲಿ ಸ್ಫೋಟಗೊಂಡ ಸಿಡಿಮದ್ದಿಗೆ ಹೋಲಿಸಬಹುದು. ಅದರ ವ್ಯಾಕರಣಾತ್ಮಕ ಅಥವಾ ಸಿಡಿಮದ್ದಿನ ವಿವಿಧ ವರ್ಣಗಳ ತಾರೆಗಳನ್ನು ಹೊರಹೊಮ್ಮಿಸುವ ಟ್ರಿಗರ್ ಅಲ್ಲದೇ ಮತ್ತೇನೂ ಅಲ್ಲ. ಅದು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಒಂದು ನಿರ್ದಿಷ್ಟವಾದ ಶಬ್ದದೊಂದಿಗೆ ಸಂಬಂಧಿತವಾದ ವೈಯಕ್ತಿಕ ಮತ್ತು ಆತ್ಮೀಯ ಅನುಭವಗಳ ಸ್ಮರಣೆಯೇ ಆಗಿದೆ.

ಗದ್ಯದಲ್ಲಿ "ಒಂದು ನದಿ" ಎಂದರೆ ಸಾಮಾನ್ಯವಾಗಿ **ನದಿಯೇ**. ಕಾವ್ಯದಲ್ಲಿ ಅದು **ನನ್ನ ನದಿ** ಅಥವಾ **ನಿಮ್ಮ ನದಿ**…ಅದರೊಂದಿಗಿನ ನಮ್ಮ ಪ್ರಥಮ ದರ್ಶನ, ಅದರ ತೀರದಲ್ಲಿ ನಾವು ಆಡಿದ ಆಟಗಳು, ಅದು ನಮ್ಮಲ್ಲಿ ಹುಟ್ಟಿಸಿದ ಭೀತಿ, ನಮ್ಮ ಪ್ರಥಮ ಪ್ರೇಮವನ್ನು ಮರೆಮಾಡಿದ ಅದರ ತೀರದ ಮೇಲಿರುವ ಗಿಡಗಂಟಿಗಳು, ನಮ್ಮೆಲ್ಲರಿಗೆ

ಸಂಬಂಧಿಸಿಗ ಸಾವಿರಾರು ವಿಷಯಗಳು—ಇಷ್ಟಾದರೂ ಕೂಡ ಇವು ಎಷ್ಟೊಂದು ವೈಯಕ್ತಿಕ ಮತ್ತು ಆತ್ಮೀಯವಾಗಿ ಉಳಿಯುತ್ತವೆ...ಮೋಡ ಕೋಗಿಲೆ. ಉಲ್ಕೆ... ಎಲ್ಲವೂ "ನಮ್ಮವೇ" ಆದರೂ ಖಂಡಿತವಾಗಿ **ನನ್ನವು** ಮತ್ತು **ನಿಮ್ಮವು**.

ಹೀಗೆ ಕಾವ್ಯವು ಯಾವುದೋ ಒಂದು ಸಾಮಾನ್ಯ ಅನುಭವಗಳ ಪಾತಳಿಯ ಮೇಲೆ ಮನುಷ್ಯರ ಹೃದಯಗಳನ್ನು ಒಟ್ಟಿಗೆ ತರುವದರ ಜೊತೆಗೆ, ಪ್ರತಿಯೊಂದಕ್ಕೂ ತನ್ನದೇ ಆದ ಸ್ವಂತ ಆಕಾಶದಲ್ಲಿ ಉಡ್ಡಾಣಿಸಲು ಪ್ರೋತ್ಸಾಹ ನೀಡುತ್ತದೆ.

ಕಾವ್ಯವು ನೇರವಾದ ಭಾವನಾತ್ಮಕ ಪ್ರತಿಕ್ರಿಯೆಯನ್ನು ಹುಡುಕುತ್ತದೆ ಮತ್ತು ಪಡೆಯುತ್ತದೆ. ಶಬ್ದವು ನಾನೀಗಾಗಲೇ ತೋರಿಸಿದಂತೆ ನಮ್ಮ ಅನುಭವಗಳನ್ನು ಬಡಿದೆಬ್ಬಿಸುವ ಮತ್ತು ಪ್ರಚೋದಿಸುವ ವೇಗವರ್ಧಕದ ಪಾತ್ರವನ್ನು ಮಾತ್ರ ವಹಿಸುತ್ತದೆ. ನಮ್ಮ ಹೃದಯಾಂತರಾಳದಲ್ಲಿ ಅಡಗಿದ, ಸಾಮಾನ್ಯವಾಗಿ ಮರೆತು ಹೋಗಿರುವಂಥ ಈ ಅನುಭವಗಳು ಕಾವ್ಯದ ಪ್ರಭಾವದಿಂದ ಪ್ರಚೋದಿತನಾಗಿ ಕತ್ತಲೆಯ ಮೊತ್ತದಿಂದ ತೂರಿಬರುವ ನಕ್ಷತ್ರಗಳಂತೆ ಒಮ್ಮೆಲೇ ಮೇಲ್ಮೈಗೆ ಬರುತ್ತವೆ. ಇವು ಎಷ್ಟೊಂದು ಗಾಢವಾಗಿ "**ನಮ್ಮ**"ವು ಎಂದರೆ ಅವು ಅನಿರ್ವಚನೀಯವಾಗಿ ಮಾರ್ಪಟ್ಟಿವೆ.

ಕವನದಲ್ಲಿ ಶಬ್ದಗಳು ಹೊಸ ಆಯಾಮವನ್ನು ಪಡೆದುಕೊಳ್ಳುತ್ತವೆ; ಅವು ಕೇವಲ ಅಕ್ಷರ ಸಂಯೋಜನೆಯ ಪರಿಧಿಯನ್ನು ಮೀರಿ ನಿಲ್ಲುತ್ತವೆ. ಮತ್ತು ಅಂತರಂಗದ ಪಯಣದ ಪರಿಶೋಧನೆಯ, ನಮ್ಮದೇ ಯಾವ ಪುನದರ್ಶನವನ್ನು ನಾವು ವಿಚಲಿತರಾಗದೇ ಮತ್ತು ಏಕಾಕಿಯಾಗಿ ಉಳಿದಾಗ್ಯೂ ಕವಿಯ ಸಾಹಚರ್ಯದಲ್ಲಿ ಪಡೆಯುತ್ತೇವೊ, ಅದರ ಅದ್ಭುತ ಸಂವಾಹಕಗಳಾಗುತ್ತವೆ.

ಡೇ ಲೂಯಿ ಬರೆದ ಪುಸ್ತಕದಿಂದ ಒಂದು ಸುಂದರ ದೃಷ್ಟಾಂತವನ್ನು ತೆಗೆದುಕೊಳ್ಳುವದಾದರೆ– "ಒಂದು ದಿನ ಸಾಗರತೀರದಲ್ಲಿ ತಿರುಗಾಡುತ್ತಿರುವಾಗ, ಕಾಲಗತಿಯಲ್ಲಿ ಸಿಕ್ಕು ಸವೆದು ಹೋದ, ಕಪ್ಪಾದ ನಾಣ್ಯವನ್ನು ಎತ್ತಿಕೊಳ್ಳುತ್ತೀರಿ. ಒಂದೆರಡುಕ್ಷಣ ಅದನ್ನು ಹಸಿ ಉಸುಕಿನಿಂದ ಬಲವಾಗಿ ಉಜ್ಜುತ್ತೀರಿ. ಆ ಮೇಲೆ ಆ ನಾಣ್ಯವು ಇದೇ ತಾನೆ ಟಂಕಸಾಲೆಯಿಂದ ಹೊರಬಂದಿದೆ ಏನೋ ಎಂಬಂತೆ ಹೊನ್ನಿನ ಹೊಳಪನ್ನು ಪಡೆದದ್ದನ್ನು ಕಾಣುತ್ತೀರಿ."

ಅಂತೆಯೇ, ಹಸಿಉಸುಕು ನಾಣ್ಯದ ಮೇಲೆ ಬೀರಿದ ಪ್ರಭಾವವನ್ನೇ ಕಾವ್ಯವು ಶಬ್ದಗಳ ಮೇಲೆ ಬೀರುತ್ತದೆ. ಅಸಂಖ್ಯಾತ ಸಲ ಬಳಸಿದ ಶಬ್ದಗಳು. ದಿನನಿತ್ಯದ ಬಳಕೆಯಿಂದ ಕಂದಿದ, ಕುಂದಿದ ಶಬ್ದಗಳು ಮೊದಲ ಸಲ ಉಚ್ಚರಿಸಲ್ಪಟ್ಟವೋ ಅಥವಾ ಕೇಳಲ್ಪಟ್ಟವೋ ಎಂಬಂತೆ ಹೊಳೆಯುತ್ತವೆ, ಬೆಳಗುತ್ತವೆ.

ಆದ್ದರಿಂದ, **ಕಾವ್ಯವು ಭಾಷೆಯ ನಿರಂತರವಾದ ಪುನಸ್ಸೃಷ್ಟಿ** ಅದು ಹೊಸ ಕ್ಷೇತ್ರಗಳನ್ನು ಗೆಲ್ಲುವದಕ್ಕಾಗಿ ಹೊಸಮಾರ್ಗಗಳ ಪರಿಶೋಧನೆಗಾಗಿ ಸದಾ ತೆರೆದಿರುತ್ತದೆ. ಆ ಕೆಲಸವನ್ನು ಅದು ಹಲವು ಬಗೆಯಲ್ಲಿ ಮಾಡುತ್ತದೆ. ಹೊಸ ಶಬ್ದಗಳನ್ನು ಸೃಷ್ಟಿಸುವದರಿಂದ: ಹಾಗೆಯೇ ಬಹುತೇಕ ಮತ್ತು ಪ್ರಾಮುಖ್ಯವಾಗಿ ಶಬ್ದಗಳನ್ನು ಹೊಸಪ್ರಯೋಜನಕ್ಕೆ ಒಳಪಡಿಸುವದರಿಂದ; ಕೇವಲ ಅರ್ಥ ಕೊಡುವದನ್ನೇ ಗುರಿಯಾಗಿಟ್ಟುಕೊಳ್ಳದೇ ಅವುಗಳ ಪ್ರಭಾವದಿಂದ ನಮ್ಮ ಎದೆಯಲ್ಲಿ ಸುಪ್ತವಾದ ಭಾವನಾ ಸಮುದ್ರವನ್ನು ತಟ್ಟುವದರಿಂದ ಮತ್ತು ಯಾವುದೇ ಬೌದ್ಧಿಕ ಪ್ರಕ್ರಿಯೆಯ ಮುಖಾಂತರ ತಲುಪಲು ಅಥವಾ ಪಡೆಯಲು ಸಾಧ್ಯವಾಗದ ರಸಾನುಭವವನ್ನು ಉಂಟುಮಾಡುವದರಿಂದ ಸದ್ಯಕ್ಕೆ, ಉದಾಹರಣೆಗಾಗಿ, ನಿಮಗೊಂದು "ಅರ್ಥಹೀನ"ವಾದ ಒಂದು ಚಿಕ್ಕ ಕವನ ನಾನಿವನ್ನು ಬರೆದಾಗ ನನಗೆ ಬಹಳ ಆನಂದವನ್ನುಂಟು ಮಾಡಿದ್ದುವನ್ನು ಕೊಡುತ್ತೇನೆ. "ಚಿಟ್ಟೆ" ಎಂದು ಅದರ ಶೀರ್ಷಿಕೆ.

ಚಿಟ್ಟೆ

ಮಳೆಸುರಿದು ನಿಂತಾಗ
ಅದು ಮೆಲ್ಲನೆ ರೆಕ್ಕೆಗಳನು ಹರಡಿ
ಮೇಲಕೆ ಚಿಮ್ಮಿತು
ಸೆನೆದ ಗರಿಕೆಯ ಮೇಲಿಂದ

ಬಾಂದಳದಿ
ಮೇಲೆ ಮೇಲಕೆ ನೆಗೆಯಿತು
ರೆಕ್ಕೆಗಳು ದಣಿಯೆ ಸೋತಿತು
ಆಗ ಕುಳಿತಿತದು ಮಳೆಬಿಲ್ಲ ಮೇಲೆ

ನಸುವಿಶ್ರಮಿಸಲು
ಮುರಿಯಿತಯ್ಯೋ ಆ ಮಳೆಬಿಲ್ಲು !
ತಡೆಯಲಾರದೆಯೇ ಚಿಟ್ಟೆಯಾ
ಭಾರವನ್ನು !

ಸಾಮಾನ್ಯವಾಗಿ ಗದ್ಯದಲ್ಲಿ ಆಗುವದಕ್ಕೆ ಬದಲಾಗಿ, **ಕವಿಯು "ನಾನು" ಎಂದು ಹೇಳಿದಾಗ ಅವನು ಇಡೀ ಜಗತ್ತಿನ ಪರವಾಗಿ ಮಾತನಾಡುತ್ತಾನೆ.** ಅವನು ತನಗಾಗಿ, ನಿಮಗಾಗಿ ಮತ್ತು ನನಗಾಗಿ ಕೂಡ ಮಾತನಾಡುತ್ತಾನೆ. ವೈಯಕ್ತಿಕತೆಯ ಸ್ಪರ್ಶವನ್ನು ಪಡೆದ ಸಾರ್ವತ್ರಿಕತೆಯು ನಿಜವಾದ ಕಾವ್ಯದ ಸ್ವರೂಪ ಅದು ಎಲ್ಲರಿಗೂ ಸಂಬೋಧಿತವಾದರೂ ಕೂಡ, ಪ್ರತ್ಯೇಕವಾಗಿ ಪ್ರತಿಯೊಬ್ಬನಿಗೂ ಸಂಬೋಧಿತನಾಗಿರುತ್ತದೆ.

"ಮೂಢನೆ! ನಾನು ನೀನಲ್ಲವೆಂದು ಯಾರು ನಂಬುತ್ತಾನೆ..." ನಾನೊಮ್ಮೆ ಒಂದು ಕವನ ಸಂಕಲನದ ಕವರಿನ ಮೇಲೆ ಇದನ್ನು ಅಚ್ಚು ಹಾಕಿಸಲು ಬಯಸಿದೆ. ಸುಪ್ರಸಿದ್ಧ ಫ್ರೆಂಚ ಕವಿ ಲಾತ್ರೆಮಾಂಟ **"ಕಾವ್ಯವು ಒಬ್ಬನಿಂದಲ್ಲ ಎಲ್ಲರಿಂದ ಮಾಡಲ್ಪಟ್ಟಿದೆ"** ಎಂದು ಹೇಳುವಲ್ಲಿ ಮತ್ತು ಎಲ್ಯುಆರ್ಡ ಘೋಷಿಸಿದಂತೆ **"ನಿಜವಾದ ಕವಿಯು ಸ್ಫೂರ್ತಿತನಾದವನಲ್ಲ, ಸ್ಫೂರ್ತಿಗೊಳಿಸುವಾತ"** ಎಂಬ ಹೇಳಿಕೆಯಲ್ಲಿ ಇಂಥದೇ ಭಾವನೆಯು ವ್ಯಕ್ತವಾಗಿದೆ.

ಕಾವ್ಯ ಪ್ರಯೋಜನವೇನು ? ಯಾರ ಒಳಗಣ್ಣು ಸೌಂದರ್ಯದ ಪ್ರಕಾಶಕ್ಕೆ ತೆರೆದುಕೊಂಡೇ ಇಲ್ಲವೊ ಅಂಥ ಕೆಲವು ದುರ್ದೈವಿಗಳು ಈ ಪ್ರಶ್ನೆಯನ್ನು ಆಗಾಗ್ಗೆ ಕೇಳಿದ್ದಾರೆ.

ಇಂಥ ಪ್ರಶ್ನೆಗೆ ನಾನು, "ಮಳೆಬಿಲ್ಲಿನ ಪ್ರಯೋಜನವೇನು?" ಎಂಬ ಇನ್ನೊಂದು ಪ್ರಶ್ನೆಯ ಮೂಲಕವೇ ಉತ್ತರಿಸಲಿಚ್ಛಿಸುತ್ತೇನೆ. ಅದು ಕೇವಲ ಸುಂದರವಾದುದು ಎಂಬ ಒಂದು ಕಾರಣವೇ ಅದರ ಅಸ್ತಿತ್ವಕ್ಕೆ ಸಾಕು. ಇದು ವ್ಯಾಪಕವಾದ ವಿಶ್ವದ ಅಸ್ತಿತ್ವಕ್ಕೆ ಪ್ರಬಲವಾದ ಕಾರಣವಾಗಿರದಿದ್ದರೂ ಕೂಡ, ನಿಜವಾಗಿಯೂ ಅತ್ಯಂತ ಮಹತ್ವವಾದ ಕಾರಣ.

ಕಾವ್ಯವು ಕಲೆಯಾದುದರಿಂದ ಅದು ಸೌಂದರ್ಯದ, ಬಗ್ಗೆ ಅಥವಾ ಪ್ಲೇಟೊ ಹೇಳಿದಂತೆ ಮೂರ್ತವಾದ ಸತ್ಯದ ಬಗ್ಗೆ ಮಾನವನ ನಿರಂತರವಾದ ಹಂಬಲದ ಅಭಿವ್ಯಕ್ತಿ.

ಎಷ್ಟಾದರೂ, ತತ್ವಗಳು ಅತೀಂದ್ರಿಯ ಸ್ವರೂಪದವಾಗಿರುವರಿಂದ, ಅವು ಅನಂತತೆಯಲ್ಲಿವೆ ಮತ್ತು ಅವುಗಳನ್ನು ತಲುಪಲೆಳಸುವದು ಆಶಾಭಂಗವಾಗುವಂತಹದ್ದಾಗಿದೆ.

ಸಾಮಾನ್ಯವಾಗಿ ಸ್ಫೂರ್ತಿ ಎಂದು ಕರೆಯಲ್ಪಡುವ, ವಿಶೇಷ ಕ್ಷಣಗಳಲ್ಲಿ ತನ್ನ ಹೃದಯದಲ್ಲಿ ಹೊತ್ತಿದ ಕಿಡಿಗಳನ್ನು, ತನ್ನ ಹೃದಯದಲ್ಲಿ ಮಾರ್ದನಿಗೊಳ್ಳುತ್ತಿರುವ ಅಶ್ರಾವ್ಯವಾದ ದನಿಗಳನ್ನು ಕವಿಯು ಎಂದೂ ಸಂಪೂರ್ಣವಾಗಿ ಶಬ್ದಗಳಲ್ಲಿ ಅಭಿವ್ಯಕ್ತಗೊಳಿಸಲಾರ. ಆದರೂ ಅವನ ಕಾವ್ಯವನ್ನು ಬಿಟ್ಟರೆ, ಅವನ ಈ ಬೆಳಕಿನ ಪ್ರತಿಫಲನ, ಈ ದನಿಗಳ ಪ್ರತಿಧ್ವನಿ ಎಂದೆಂದಿಗೂ ಕಳೆದು ಹೋಗಬಹುದು. ಆದ್ದರಿಂದ ಪ್ರತಿಯೊಂದು ಕವನವೂ, ಅಂತೆಯೇ ಪ್ರತಿಯೊಂದು ಕಲಾಕೃತಿಯೂ "ಉಪಸಮ"ವೆಂದು ಹೇಳಬಹುದು ಅಥವಾ ಅದನ್ನು ಇನ್ನು ಹೆಚ್ಚು ಸರಿಯಾಗಿ ಹೇಳುವದಾದರೆ ಅಗಮ್ಯವಾದುದನ್ನು ತಲುಪುವ ಪ್ರಯತ್ನದಲ್ಲಿ ಒಂದು "ಸುಂದರ ವೈಫಲ್ಯ"ವೆನ್ನಲೂಬಹುದು.

ಎಟುಕಲಾರದ ಪರಿಪೂರ್ಣತೆ, ಎಂದೆಂದಿಗೂ ದೊರೆಯದಿದ್ದರೂ ಕೂಡ ಸಮಗ್ರ ಸೌಂದರ್ಯ ಬಗೆಗಿನ ತುಡಿತವು ನಿರಂತರವಾಗಿ ಕಂಡೂ ಕಾಣದಿರುವ ದೂರದ ಗುರಿ. ಇದನ್ನು ನಾವು ನಮ್ಮ ಹೃದಯದಲ್ಲಿ ನೆಲೆಗೊಂಡಿರು ದೈವೀ ತೃಷೆಯಿಂದ, ಅಂತರಂಗದ ಬಲವಾದ ಒತ್ತಡದಿಂದ ಪ್ರೇರಿತರಾಗಿ ಅನುಸರಿಸುತ್ತೇವೆ. ನಮ್ಮ ಭೌತಿಕ ಜೀವನದ ಕತ್ತಲೆಯಲ್ಲಿ ಚಿರಂತನ ಮೌಲ್ಯಗಳ ಕಡೆಗೆ ಮುನ್ನಡೆಸಲು ಇವು ದೀಪಸ್ತಂಭಗಳಾಗಿವೆ. ಆದರೂ ಮಾನವನ ಶೋಧನೆಗೆ ಅರ್ಥ ದೊರೆಯುವದು ಪಯಣದ ಕೊನೆಯಲ್ಲಲ್ಲ, ಆ ಪಯಣದಲ್ಲಿಯೇ.

ಆ ಭೋಗಪ್ರಪಂಚದ, ಮಾರ್ಗಾಂತ್ಯದಲ್ಲಿರುವ ರಮ್ಯಸೌಧಗಳು, ನಾವು ಕೈಚಾಚಿ ಅವುಗಳತ್ತ ಧಾವಿಸುತ್ತಿರುವಂತೆಯೇ ಅವು ಮಂಜಿನಲ್ಲಿ ಮರೆಯಾದರೇನು, ಅಸಂಖ್ಯಾತ ಪಯಣಿಗರು ಮಾನವದೌರ್ಬಲ್ಯಗಳ ಬಂಡೆಯ ಬಳಿ ಕುಸಿದರೇನು, ವಿಫಲರಾದರೇನು, ಆ ದಾರಿಯೇ ನಿಜವಾದ ಮತ್ತು ಸಂಪಾದಿಸಲರ್ಹವಾದ ಗುರಿ. “ಎಲ್ಲ ಕವನಗಳು ವೈಫಲ್ಯಗಳಾದರೂ ಕಾವ್ಯ ಮಾತ್ರ ವೈಫಲ್ಯವಲ್ಲ”

ನನ್ನ ಕವನಗಳ ಒಂದಾದ “ಮಾರ್ಕಂಡೇಯನ ಸ್ವಗತ”ದಲ್ಲಿ ಈ ದಾರಿಯನ್ನು ಉಲ್ಲೇಖಿಸಿದ್ದೇನೆ. ಮತ್ಸ್ಯಪುರಾಣದ ಪ್ರಕಾರ ಮಾರ್ಕಂಡೇಯನು ಒಬ್ಬ ಪಾವನ ಜೀವಿ, ಚಿರಂಜೀವಿ. ಜಗತ್ತಿನ ಆದರ್ಶ ದರ್ಶನವನ್ನು ಹುಡುಕುತ್ತ ವಿಷ್ಣುವಿನ ಸ್ವಪ್ನ ದೇಹದಲ್ಲಿ ಅಲೆಯುತ್ತಿದ್ದವನು. ಆದುದರಿಂದ ಅವನು ನನಗೆ ಅಂತಿಮ ಸತ್ಯಕ್ಕಾಗಿ ಹಿಂಗಲಾರದ ಮಾನವತೃಷೆಯ ಪರಿಪೂರ್ಣ ಸಂಕೇತವಾಗಿ ಕಂಡುಬಂದನು.

ಅವುಗಳದೇ ಆದ ದೋಷಗಳಿದ್ದರೂ, ಕೆಲವೊಮ್ಮೆ ಬುದ್ಧಿಗೆ ಮಾತ್ರ ಆರೋಪಿಸಬಹುದಾದಂಥ ಕೆಲವು ನಿರ್ದಿಷ್ಟ ಕ್ಷೇತ್ರಗಳಲ್ಲಿ ಕಾವ್ಯ ಗ್ರಂಥಗಳು ಹೆಚ್ಚಿನ ಮನಂಬುಗುವ ಶಕ್ತಿಯನ್ನು ಪಡೆದಿವೆ ಮತ್ತು ಅನೇಕ ದೃಷ್ಟಿಯಲ್ಲಿ ಗದ್ಯಕ್ಕಿಂತಲೂ ಹೆಚ್ಚು ಬಲಿಷ್ಠವೂ ಪರಿಣಾಮಕಾರಿಯಾದವೂ ಆಗಿವೆ. ಸೌಂದರ್ಯದ ಅಂತಿಮಸ್ವರೂಪ ಅಂದರೆ ಸಾರ್ವತ್ರಿಕ ಸತ್ಯದೊಂದಿಗೆ ಸಂಬಂಧಿತವಾದವುಗಳು ಅಂಥ ಕ್ಷೇತ್ರಗಳು.

ಕಾವ್ಯಕ್ಕೆ ಹೃದಯಗಳನ್ನು, ಆತ್ಮಗಳನ್ನು ಉಜ್ವಲಗೊಳಿಸುವ ಮತ್ತು ಕೆಲವೊಮ್ಮೆ ಕಾವ್ಯವಿತಾನದ ಸಹಾಯ ಅಥವಾ ಆಧಾರವಿಲ್ಲದೇ ಬುದ್ಧಿಯೊಂದರಿಂದಲೇ ಗ್ರಹಿಸಲ ಸಾಧ್ಯವಾದ ಉನ್ನತ ವಲಯಗಳಿಗೆ ಆತ್ಮವನ್ನೆತ್ತುವ ಸಾಧ್ಯತೆ ಇದೆ.

ನಾವು ಈಗಾಗಲೆ, ಸರಿಯಾಗಿ ಗಮನಿಸಿದಂತೆ ಈ ಪರಮಸತ್ಯವನ್ನು ಅನ್ವೇಷಿಸಿದಂಥ ವಿಶೇಷ ಮನುಷ್ಯ ಜೀವಿಗಳು ಗದ್ಯವನ್ನು ಬಳಸದೇ, “ಅಂತಸ್ಥ”ವಾದುದನ್ನು ಬಗೆದು ತಾನು ಗ್ರಹಿಸಿದ ಚಿರಂತನ ಬೆಳಕಿನ ಕಿರಣಾನುಭವಗಳನ್ನು ಜಗತ್ತಿಗೆ ಮುಟ್ಟಿಸುವಾಗ

ಕಾವ್ಯವನ್ನೇ ಉಪಯೋಗಿಸಿದ್ದಾರೆ. ಉಪನಿಷತ್ತಿನ ಜನಕರಾದ ದ್ರಷ್ಟಾರರು, ಪ್ಲೇಟೋ ತನ್ನ ಸಂವಾದಗಳಲ್ಲಿ ಕಾವ್ಯಮಯ ಭಾಷೆಯನ್ನುಪಯೋಗಿಸಿದಂತೆ, ಕಾವ್ಯವನ್ನೇ ಬಳಸಿದ್ದಾಗೆ ಎಂಬ ಸತ್ಯವನ್ನು ಒತ್ತಿ ಹೇಳುವದು ಅನವಶ್ಯಕವೆಂದು ನಾನು ತಿಳಿಯುತ್ತೇನೆ. ಇದು ಬರಿ ಆಕಸ್ಮಿಕವಲ್ಲ. ಕಾವ್ಯಮಯ ಭಾಷೆಯು ನಾನು ಮೊದಲೇ ಹೇಳಿದಂತೆ ಹೆಚ್ಚು ಚಲನಶೀಲವಾದುದು ಮತ್ತು ಸಾಮಾನ್ಯ ಭಾಷೆಯ ಆಚೆಗೆ ಹೋಗಬಲ್ಲದು.

ರಿಛಿಮರನು ಯೋಚಿಸುವದನ್ನು "ಧ್ವನಿರಹಿತವಾದ ಅಂತರಂಗದ ಮಾತು" ಎಂದು ವ್ಯಾಖ್ಯಾನಿಸಿದನು. ಆದ್ದರಿಂದ, ಯೋಚನೆಯು ಭಾಷೆಯಿಂದ ಸೀಮಿತವಾಗಿದೆ. ಯಾವುದು ಚಲಾವಣೆಯಲ್ಲಿರುವ ಶಬ್ದಗಳು ಮತ್ತು ಸಾಂಪ್ರದಾಯಿಕ ಅಕ್ಷರ ಸಂಯೋಜನೆಗಳಿಂದ ರೂಪುಗೊಳ್ಳಲಾರದೋ ಅದು ಪ್ರಸ್ತುತ ಆಲೋಚನೆಯಲ್ಲಿ ಅಸ್ತಿತ್ವದಲ್ಲಿ ಇರಲಾರದು, ಇರುವದಿಲ್ಲ. ಆದ್ದರಿಂದ ಉಜ್ವಲವಾದ ಮನಸ್ಸು ಹೇಳಲಾಗದುದನ್ನು ಭೇದಿಸಲು ಮತ್ತು ಅದೆಲ್ಲವನ್ನು ನೋಡಲು ವಿಶೇಷವಾದ ಪ್ರಯತ್ನಬೇಕು; ಆಮೇಲೆ ಒಂದು ಶಬ್ದವನ್ನು ಸೃಜಿಸಿ, ಅಥವಾ ಭಾಷೆಯನ್ನೇ ಪುನಸ್ಸೃಷ್ಟಿಸಿ ಅದನ್ನು ಭಾಷೆಯ ವಲಯಕ್ಕೆ ಮರಳಿ ತರಲು ಮತ್ತೊಂದು ಪ್ರಯತ್ನಬೇಕು; ಕಾವ್ಯ ಮಾತ್ರ ಮಾಡಬಲ್ಲ ವ್ಯಾಕರಣಾತ್ಮಕ ಮತ್ತು ತಾರ್ಕಿಕ ಅತಿಕ್ರಮಣವನ್ನು ಕಾವ್ಯವೇ ಅರ್ಥಪೂರ್ಣವಾಗಿ ಸಾಧಿಸಬಲ್ಲದು. ಅದು ಉತ್ತೇಜಿಸುವ ಭಾವನೆಯಿಂದ, ಆತ್ಮೋದ್ದೀಪನದಿಂದ, ಪವಿತ್ರವಾದ ಗೂಢತರಂಗಗಳನ್ನುಂಟು ಮಾಡುವದರಿಂದ ಮನುಷ್ಯನನ್ನು ಉನ್ನತವಾದ ವೈಚಾರಿಕ ಶಿಖರವನ್ನೇರುವದಕ್ಕೆ ಅಣಿಗೊಳಿಸುತ್ತದೆ. ಕಾವ್ಯಮಯ ಕನಸು ತರುವಂಥ ಗೂಢವಾದ ಹರ್ಷೋತ್ಕರ್ಷವು ಮನಸ್ಸನ್ನು ಭಾರವಾದ ಸಂಕೋಲೆಗಳಿಂದ ಮತ್ತು ಶೀತಲ ತರ್ಕದ ನಿಷ್ಪಾರದರ್ಶಕ ಕಣ್ಕಾಪಿನಿಂದ ಮುಕ್ತಗೊಳಿಸುವದನ್ನು ಸರಳಗೊಳಿಸಿ, ಶುದ್ಧ ಅರಿವಿನ ಅಂಗಣದಲ್ಲಿ ಹಾರಲು ಅನುವು ಮಾಡಿಕೊಡುತ್ತದೆ.

ಲಯ ಮತ್ತು ಪ್ರಾಸಗಳು ಕಾವ್ಯಕ್ಕೆ ಆವಶ್ಯಕವೇ? ಆಸಕ್ತ ವಲಯಗಳಲ್ಲಿ ಪುನರಾವೃತ್ತವಾದ ಮತ್ತು ಚರ್ಚಿತವಾದ ಈ ಪ್ರಶ್ನೆಯು ನನಗನಿಸುವಂತೆ ನಿಜವಾದ ಪ್ರಶ್ನೆಗೆ ತಪ್ಪು ಮಾರ್ಗವನ್ನು ಸೂಚಿಸುತ್ತದೆ.

ಕಾವ್ಯತ್ವವೊಂದನ್ನು ಬಿಟ್ಟು ಕಾವ್ಯಕ್ಕೆ ಯಾವುದೂ ಅನಿವಾರ್ಯವಲ್ಲ! ಹಾಗಾದರೆ ಕಾವ್ಯವೆಂದರೇನು?

ಯಾವುದು ಸ್ವರೂಪ ಮಾತ್ರದಿಂದ ವ್ಯಾಖ್ಯೆಯನ್ನು ಧಿಕ್ಕರಿಸುತ್ತದೊ, ಅದನ್ನು ಮೀರಿ ನಿಲ್ಲುತ್ತದೊ ಅದರ ವ್ಯಾಖ್ಯೆಯನ್ನು ನೀಡುವ ಸಾಹಸವನ್ನು ನನ್ನಿಂದ ಅಪೇಕ್ಷಿಸದಿರಿ. ಆದಾಗ್ಯೂ ಯಾವನೇ ಒಬ್ಬನು ತನಗೆ ಕೊಟ್ಟ ಪಾಠವನ್ನು 'ಕಾವ್ಯಮಯ'ವೆಂದು ಯಾವ ಹಿಂಜರಿಕೆಯೂ ಇಲ್ಲದೇ ಗುರ್ತಿಸಬಲ್ಲನು. ಸಾಮಾನ್ಯವಾಗಿ ಮೇಲು ನೋಟಕೆ

ಕಾಣುವ ಕೆಲವು ಲಕ್ಷಣಗಳಿಂದ ಅವನು ಹೀಗೆ ಮಾಡುತ್ತಾನೆ; ಇವು ಯಾವವೆಂದರೆ, ಅವರ ವಿಶಿಷ್ಟವಾದ ಭಾಷೆ, ಅದು ಪ್ರತಿಫಲಿಸುವ ಮತ್ತು ಸೃಷ್ಟಿಸುವ ವಿಶಿಷ್ಟ 'ಮೂಡ್' (ಮನಸ್ಥಿತಿ) ಮತ್ತು ಶಬ್ದಗಳ ಲಯ, ಗೇಯತೆ ಇತ್ಯಾದಿ.

ವಿಶೇಷವಾಗಿ ಲಯವನ್ನು ಕುರಿತಾದ ಪ್ರಶ್ನೆ ಅದು ಅತ್ಯಾವಶ್ಯಕವೇ ಎಂಬುದಾಗಿರದೆ, ಕಾವ್ಯದ ಮೋಡಿಯಲ್ಲಿ ಅದರ ಪಾತ್ರವೇನು ಎಂಬುದಾಗಿದೆ. ಈ ದೃಷ್ಟಿಯಿಂದ ಗಮನಿಸಿದರೆ ಯಾವುದರ ರಹಸ್ಯತತ್ವವು ಲಯವೇ ಆಗಿದೆಯೋ ಅಂಥ ಸೌಂದರ್ಯದೊಂದಿಗೆ ಕಾವ್ಯವನ್ನು ಜೋಡಿಸುವ ಒಳಬೆಸುಗೆ ಲಯವೇ ಆಗಿದೆ. ನಮ್ಮ ಜೀವನವೇ ಅದರ ಒಂದು ಭಾಗವಾಗಿರುವ, ಸರ್ವವ್ಯಾಪಿಯಾದ ವಿಶ್ವಲಯದೊಂದಿಗೆ ನಮ್ಮ ಆತ್ಮವನ್ನು ಮತ್ತೊಂದು ತರದ ಅನುರಣನಕ್ಕೀಡು ಮಾಡುವದರಿಂದ ಶಬ್ದಗಳ ಮತ್ತು ಸ್ವರಗಳ ಸಾಮರಸ್ಯದ ಪ್ರವಾಹವು ಮತ್ತೊಂದು ಸ್ವರೂಪದ ಸಂದೇಶಗಳನ್ನು ಗ್ರಹಿಸಲು ಹೃದಯವನ್ನು ಅಣಿಗೊಳಿಸುತ್ತದೆ ಮತ್ತು ನಿಯಂತ್ರಿಸುತ್ತದೆ. ನಮ್ಮ ಹೃದಯದ ಬಡಿತದಿಂದ ನಾವು ನಿರಂತರವಾಗಿ ಅದರ ಸ್ಮೃತಿಯನ್ನು ಪಡೆಯುತ್ತಿಲ್ಲವೇ?

ಹಿಂದೆ ಧಾರಾಳವಾಗಿ ಬಳಸಲಾಗುತ್ತಿದ್ದ ಆದರೆ ಸಮಕಾಲೀನ ಕಾವ್ಯದಲ್ಲಿ ತಕ್ಕಮಟ್ಟಿಗೆ ತ್ಯಕ್ತವಾದ ಪ್ರಾಸ ಇಂಥದೇ ಪಾತ್ರವನ್ನು ನಿರ್ವಹಿಸುತ್ತದೆ. ಒಂದು ನಿರ್ದಿಷ್ಟ ನುಡಿಯ ಕೊನೆಯ ಸಾಲಿನಲ್ಲಿ ಬರುವ ಪ್ರಾಸವು ಚಕ್ರಪರಿಭ್ರಮಣ ಅಥವಾ ಆಂತರಂಗಿಕ ಪುನರಾವರ್ತನವೆಂಬ ಮತ್ತೊಂದು ಅತೀಂದ್ರಿಯ ಸತ್ಯದೊಡನೆ ಕಾವ್ಯವನ್ನು ಒಂದುಗೂಡಿಸುತ್ತದೆ.

ರಸಾನುಭವವೆಂದು ನಾವು ಅನುಭವಿಸಿದುದು–ಇದು ಬಹುತೇಕ ಈ ತರದ ಪ್ರತಿಯೊಂದು ಅನುಭವದ ಬಗ್ಗೆ ದಿಟವಾದುದು–ವಾಸ್ತವವಾಗಿ ಯಾವುದನ್ನು ನಮ್ಮ ಬುದ್ಧಿಯು ಇದುವರೆಗೂ ತಲುಪಿಲ್ಲವೊ ಅಥವಾ ತಲುಪಲಾರದೋ ಅಂಥ ಒಂದು ಸತ್ಯದೊಡನೆ ನಮ್ಮ ಆತ್ಮದ ಸುಖಾನುಸಂಧಾನ.

ಕೆಲವೇ ಚಿಕ್ಕ ಪಂಕ್ತಿಗಳಲ್ಲಿ ಪರಿಶೀಲಿಸಲಾಗದಂಥ ಬಹುವ್ಯಾಪಕವಾದ ವಿಷಯದ ಬಗ್ಗೆ ಬರೆಯುತ್ತಿದ್ದೇನೆಂಬುದರ ಅರಿವು ನನಗಿದೆ. ಆದರೂ ಕೂಡ ಈ ದಿಸೆಯಲ್ಲಿ ನಿಮ್ಮ ಲಕ್ಷ್ಯವನ್ನು ಸೆಳೆಯುವಲ್ಲಿ ಇದು ಸೂಚನೆ ಮಾತ್ರ ಎಂದು ತಿಳಿಯುತ್ತೇನೆ. ಗೇಯತೆ, ಪ್ರಾಸ, ಸ್ವರಗಳ ಪುನರಾವೃತ್ತಿ, ಅಗದ್ಯಾತ್ಮಕ ಅಥವಾ ಅವ್ಯಾಕರಣಾತ್ಮಕ ಪದ ಜೋಡಣೆ ಇವು ಕಾವ್ಯದ ಅಲಂಕಾರಗಳು ಮಾತ್ರವಲ್ಲ; ಅವು ಅದರ ಅಂತಸ್ಸತ್ವದ ಅವಿಭಾಜ್ಯ ಅಂಗಗಳು.

ಇವಷ್ಟೇ ಮಾತ್ರವಲ್ಲ, ಕಾವ್ಯವು ಇವುಗಳಿಲ್ಲದೆಯೂ ಇರಬಹುದು. ನಮ್ಮ ಕೈ–ಕಾಲ್ಗಳು ನಮ್ಮ ದೇಹಕ್ಕೆ ಅಲಂಕಾರ ಮಾತ್ರವಲ್ಲ; ಆದರೂ ಅವುಗಳಿಲ್ಲದೇ ನಾವು

ಇರಬಲ್ಲವು. ಇಂಥ ಅಸ್ತಿತ್ವವು ಕಠಿಣತರವಾಗಬಹುದು, ಜಟಿಲತರವಾಗಬಹುದು. ಆದರೆ ಇಂಥ ಆಹ್ವಾನವು ಎಲ್ಲಕ್ಕಿಂತ ಹೆಚ್ಚು ಮಹತ್ವದ್ದಾಗುತ್ತದೆ ಮತ್ತು ತನ್ಮೂಲಕ ಪಡೆದ ಯಶಸ್ಸು ಎಲ್ಲಕ್ಕಿಂತ ಹೆಚ್ಚು ಪ್ರಶಂಸಾಪಾತ್ರವಾಗುತ್ತದೆ. ಕೊನೆಯಲ್ಲಿ ಕವಿಯ ಬಗ್ಗೆ ಒಂದು ಮಾತು. ಅವನೊಬ್ಬ ನಾಯಕನಾಗಬೇಕು.

ಈ ಪಾತ್ರದಲ್ಲಿ ಅವನು "ದಿನನಿತ್ಯದ ಬೆಳಕಿಗೆ" ಅಭೇದ್ಯವಾದ ಪ್ರದೇಶಗಳಲ್ಲಿ ಹೊಸ ಮಾರ್ಗಗಳನ್ನು ಶೋಧಿಸಬೇಕು. ಅವನು ಕತ್ತಲೆಯಲ್ಲಿ ನಡೆಯಬೇಕಾಗ ಬಹುದು. ಇದರ ಅರ್ಥ ಅವನು ಸಂದಿಗ್ಧನಾಗಬೇಕೆಂದಲ್ಲ. ಅವನು ಕತ್ತಲೆಯನ್ನು ಬೆಳಗಬೇಕೇ ಹೊರತು, ಸೌಂದರ್ಯದ ಮಾರ್ಗದಲ್ಲಿ ಕತ್ತಲೆ ಕವಿಯುವಂತೆ ಮಾಡಬಾ ರದು. ಸಂದಿಗ್ಧತೆ ಕಾವ್ಯದ ಯೋಗ್ಯತೆಯನ್ನೇನೂ ಹೆಚ್ಚಿಸುವದಿಲ್ಲ.

ಗಾಢಾಂಧಕಾರದ ಇರುಳಿನಲ್ಲಿಯೂ ಕಾವ್ಯ ಪ್ರತಿಭೆಯು "ಕಣ್ಣನ್ನು ವಿಶಾಲವಾಗಿ ತೆರೆದಿರುವ ದೇವತೆ"ಯಾಗಿ ಉಳಿಯತಕ್ಕದ್ದು.

ಕಾಂಚೀಪುರದ ವರದ ರಾಜಸ್ವಾಮಿ ದೇವಾಲಯ ರಚನಾಕ್ರಮ

● ಜಿ. ಆರ್. ಕುಪ್ಪುಸ್ವಾಮಿ

ಕಾಂಚೀಪುರದ ವರದರಾಜಸ್ವಾಮಿ ದೇವಾಲಯವನ್ನು ದಕ್ಷಿಣ ಭಾರತದ ಇತರ ಬೃಹತ್ ದೇವಾಲಯಗಳಂತೆ (ತಿರುವಣ್ಣಾಮಲೈ, ಮಧುರೈ, ಚಿದಂಬರಂ) ಏಕಾಕಾಲದಲ್ಲಿ ರಚಿಸಲಿಲ್ಲ. ಅನೇಕ ಶತಮಾನಗಳ ಪ್ರಯಾಸದ ಫಲವಾಗಿ ಈ ದೇವಸ್ಥಾನವು ಬೆಳೆದು ಬಂತು. ಈ ದೇವಸ್ಥಾನದ ಆವಾರದಲ್ಲಿ ಕಂಡುಬರುವ ಶಾಸನಗಳು ಪ್ರತಿಯೊಂದು ವಿಭಾಗದ ರಚನೆ ಮತ್ತು ಕಾಲಾವಧಿಯನ್ನು ತಿಳಿಸಿ ಕೊಡುತ್ತವೆ. ಅಲ್ಲದೆ ಮನವಾಳ ಮಹಾಮುನಿ ಹಾಗೂ ಅಪ್ಪಯ್ಯ ದೀಕ್ಷಿತರು ಮೊದಲಾದ ಶ್ರೀ ವೈಷ್ಣವ ಹಾಗೂ ಶೈವ ಸಾಹಿತಿಗಳ ಕೃತಿಗಳು ಕೂಡ ನೆರವು ನೀಡುತ್ತವೆ.

ವರದರಾಜಸ್ವಾಮಿ ದೇವಸ್ಥಾನವು ಇಂದು ಅನೇಕ ಇಮಾರತಿಗಳ ಉಗಮಸ್ಥಾನವಾಗಿದೆ. ಅದರ ವಿಸ್ತೀರ್ಣವು ೩೭೭.೪೦ ಉದ್ದ ಹಾಗೂ ೨೧೧.೬೫ ಮೀಟರ್ ಅಗಲವಿರುತ್ತದೆ. ದಕ್ಷಿಣ ಭಾರತದ ಅತಿದೊಡ್ಡ ದೇವಸ್ಥಾನಗಳಲ್ಲೊಂದಾಗಿದೆ. ಈ ದೇವಸ್ಥಾನಕ್ಕೆ ಎರಡು ಮಹಾದ್ವಾರಗಳಿವೆ. ಪಶ್ಚಿಮ ದ್ವಾರವು ಪ್ರಮುಖದ್ವಾರವಾಗಿದೆ. ಮೂಲಸ್ವಾಮಿಯ ವಿಗ್ರಹವು ಪಶ್ಚಿಮದಿಕ್ಕಿಗೆ ಮುಖ ಮಾಡಿರುವುದರಿಂದ ಪಶ್ಚಿಮದ್ವಾರವು ಮಹತ್ವಪಡೆದಿದೆ. ಪೂರ್ವದ್ವಾರವನ್ನು ಸಾಮಾನ್ಯವಾಗಿ ಮುಚ್ಚಿಡಲಾಗಿದೆ. ಗರ್ಭಗೃಹವು 'ಹಸ್ತಿಗಿರಿ' ಅಥವಾ ಒಂದು ಎತ್ತರವಾದ ವೇದಿಕೆಯ ಮೇಲಿದೆ. ಅದರ ಸುತ್ತಲೂ ೪ ಪ್ರಾಕಾರಗಳಿವೆ. ದೇವಸ್ಥಾನದ ಸುತ್ತಲೂ ಹರಡಿರುವ 'ಮಾಡ' ಬೀದಿಯನ್ನು ೫ನೇಯ ಪ್ರಾಕಾರವೆಂದು ಶ್ರೀವೈಷ್ಣವರು ಕರೆಯುವ ವಾಡಿಕೆಯಿದೆ. ಗರ್ಭಗೃಹದ ಸುತ್ತಲೂ ಇರುವ ಸಣ್ಣ ಪ್ರದಕ್ಷಿಣೆಯನ್ನು ಪ್ರಾಕಾರಗಳ ಪಟ್ಟಿಯಲ್ಲಿ ಸೇರಿಸಿರುವುದಿಲ್ಲ. ಅದಕ್ಕೆ ತಿರುವಣ್ಣಾಲಿಗೈಯೆಂದು ಕರೆಯಲಾಗಿದೆ. ಕ್ರಮವಾಗಿ ಮೊದಲನೆಯ ಪ್ರಾಕಾರವನ್ನು ವಯ್ಯಾಮಾಳಿಗೆ, ಎರಡನೆಯದನ್ನು ಸೇನೆಯಾರ್ ಕೊನ್ ತಿರುಮುರ್ರಮ್, ಮೂರನೆಯದನ್ನು ಏಮುಸ್ಸೈ ಕುರ್ರೈವರ್ ತಿರುಮುರ್ರಮ್ ಹಾಗೂ ನಾಲ್ಕನೆಯದನ್ನು ಆಳ್ವಾರ್ ಪ್ರದಕ್ಷಿಣೆಯೆಂದು ಹೆಸರಿಸಲಾಗಿದೆ. ಮೊದಲನೆಯ ಪ್ರಾಕಾರವು ಗರ್ಭಗೃಹ, ಅಂತ

ರಾಳ ಮಹಾಮಂಟಪ ಮತ್ತು ಇತರ ಮಂಟಪಗನ್ನೊಳಗೊಂಡಿದೆ. ಗರ್ಭಗೃಹದಲ್ಲಿ ವರದಾದರಾಜಸ್ವಾಮಿಯ ಮೂಲವಿಗ್ರಹವನ್ನು ಪತಿಷ್ಠಾಪಿಸಲಾಗಿದೆ. ಗರ್ಭಗೃಹವನ್ನು ದ್ವಿಕಾಳವಿಮಾನವು ಅಲಂಕರಿಸಿದೆ. ಭಕ್ತಾದಿಗಳು ಈ ವಿಮಾನವನ್ನು ಪೂಜಿಸಿ ಅನೇಕ ವರವನ್ನು ಪಡೆಯುವ ಕಾರಣ ಪುಣ್ಯಕೋಟಿ ವಿಮಾನವೆಂದು ಕೂಡ ಕರೆಯಲಾಗಿದೆ. ಬಹುಶಃ ಈ ವಿಭಾಗವನ್ನು ಚೋಳರ ಕಾಲದಲ್ಲಿ ರಚಿಸಿರಬೇಕು. ಎರಡನೆಯ ಪ್ರಾಕಾರದಲ್ಲಿ ವಿಷ್ವಕ್ಸೇನರ ಮೂರ್ತಿ ಇರುವುದರಿಂದ ಅದನ್ನು ಸೇಸ್ಸಿಯಾರ್ ಕೊನ್ ತಿರುಮುರ್ರಮ್ ಎಂದೂ, ಹಸ್ತಗಿರಿಯನ್ನು ಪ್ರದಕ್ಷಿಣೆ ಮಾಡುವುದರಿಂದ 'ಮಲೈ' ಪ್ರದಕ್ಷಿಣೆಯೆಂದು ಕರೆಯಲಾಗಿದೆ. ಈ ಪ್ರಕಾರದಲ್ಲಿ ಯೋಗಾನರಸಿಂಹ, ಧನ್ವಂತರಿ, ಗಣೇಶ, ಆಂಡಾಳ್ ಹಾಗೂ ಮಳೆಯಾಳನಾಚ್ಚಿಯಾರ್ ವಿಗ್ರಹಗಳಿವೆ. ಚೇರ ರವಿವರ್ಮ ಕುಲಶೇಖರನು ಕಾಂಚಿಯನ್ನು ೧೩೧೬ ರಲ್ಲಿ ಗೆದ್ದ ಅವಧಿಯಲ್ಲಿ ಮಳೆಯಾಳ ನಾಚ್ಚಿಯಾರ್ ವಿಗ್ರಹವನ್ನು ದಾನ ಮಾಡಿರಬೇಕು. ಚೇರಕುಲವಲ್ಲಿನಾಚ್ಚಿಯಾರ್ ಎಂದು ಕೂಡ ಕರೆಯಲಾಗಿದೆ. ಶ್ರೀರಂಗದಲ್ಲಿಯೂ ಕೂಡ ಇದೇ ರೀತಿ ಚೇರ ಅರಸನು ತನ್ನ ಮಗಳಾದ ಚೇರಕುಲವಲ್ಲಿಯನ್ನು ರಂಗನಾಥರಿಗೆ ಮದುವೆಮಾಡಿಕೊಟ್ಟನು. ಅಲ್ಲಿಯೂ ಕೂಡ ಕುಲಶೇಖರ ಕಿರುವೀದಿ ಎಂಬ ಪ್ರಾಕಾರವಿದೆ. ಬಹುಶಃ ಆಂಡಾಳ್ ಮತ್ತು ಮಳೆಯಾಳ ನಾಚಿಯಾರ್ ವಿಗ್ರಹಗಳನ್ನು ೧೬ನೇ ಶತಮಾನವಲ್ಲಿ ಪ್ರತಿಷ್ಠಾಪಿಸಲಾಯಿತು.

ಮೂರನೆಯ ಪ್ರಾಕಾರಕ್ಕೆ ಗೋಪುರದ್ವಾರವಿದೆ. ಈ ಪ್ರಾಕಾರದಲ್ಲಿ ಪಾಕಶಾಲೆಯು ಇರುವುದರಿಂದ ಇದಕ್ಕೆ ಮಡಪಳ್ಳಿ ಪ್ರಾಕಾರವೆಂದು ಕೂಡ ಕರೆಯಲಾಗಿದೆ. ಪೆರುಂದೇವಿ ಕಾಯಾರ್ ಅಥವಾ ವರದರಾಜಸ್ವಾಮಿಯ ಪಟ್ಟಮಹಿಷಿಯ ಸನ್ನಿಧಿಯು ಕೂಡ ಇದೇ ಪ್ರಾಕಾರದಲ್ಲಿದೆ. ವಾಡಿಕೆಯ ಪ್ರಕಾರ ಭಕ್ತಾಧಿಗಳು ಮೊದಲು ತಾಯಾರ್ ಸನ್ನಿದಿಗೆ ಸೇವೆ ಸಲ್ಲಿಸಿ ವರದರಾಜಸ್ವಾಮಿಯನ್ನು ಸಂದರ್ಶಿಸಬೇಕು. ಇದರ ವಿಮಾನವನ್ನು ಎಟ್ಟೂರು ಕುಮಾರತಾತಾಚಾರ್ಯರು ೧೬೧೪ರಲ್ಲಿ ಕಟ್ಟಿಸಿದರು. ಈ ವಿಮಾನವನ್ನು ಚಿನ್ನದ ಹೊದಿಕೆಯಿಂದ ಹೊದಿಸಲಾಗಿದ್ದು, ಈಗ ಕೇವಲ ತಾಮ್ರದ ಹೊದಿಕೆಯಿದೆ. ತಾಯಾರ್ ಸನ್ನಿಧಿಯ ಪೂರ್ವಕ್ಕೆ ಅಳಗಿಯ ಮಣಪಾಳಜೀಯರ್ ೧೬ನೇ ಶತಮಾನವಲ್ಲಿ ಕಟ್ಟಿಡ ಮಹಾಮಂಟಪವಿದೆ. ಇದೇ ಮಂಟಪದಲ್ಲಿ ಮಹಾನವಮಿ ದಿವಸ ವರದರಾಜಸ್ವಾಮಿ ಹಾಗೂ ಕಾಯಾರ್ ಉತ್ಸವ ವಿಗ್ರಹಗಳನ್ನು ಕೂಡಿಸಲಾಗುವುದು. ಇದೇ ಪ್ರಾಕಾರದಲ್ಲಿ ತಾಯಾರ್ ಸನ್ನಿಧಿಗೆ ಸೇರಿದಂತೆ ಸುಂದರವಾದ ಊಂಜಲ್ ಅಥವಾ ಉಯ್ಯಾಲೆ ಮಂಟಪವಿದೆ. ೪ನೇ ಪ್ರಾಕಾರವು ಈ ದೇಸ್ಥಾನದ ಕಡೆಯ ಪ್ರಾಕಾರವಾಗಿದೆ. ತೊಂಡರ್ ಅಡಿಪ್ಪೊಡಿ ದ್ವಾರಗೋಪುರದಿಂದ ಪ್ರವೇಶಪಡೆಯಬೇಕು. ಆದರೆ ಈ ದ್ವಾರದ ನಿಜವಾದ ಹೆಸರು ತೋದರ್‌ಮಲ್ ವಾಸಲ್ (ಬಾಗಿಲು) ಮತ್ತು ಅದರ ದ್ವಾರದಲ್ಲಿ ಅವನ ಪ್ರತಿಮೆಯಿದೆ. ಈ ಪ್ರಾಕಾರದಲ್ಲಿ ಆಳ್ವಾರ್ ವಿಗ್ರಹಗಳಿರುವುದರಿಂದ. ಇದನ್ನು ಆಳ್ವಾರ್ ತಿರುಬೀದಿಯೆಂದು ಕೂಡ ಕರೆಯುವ ವಾಡಿಕೆಯಿದೆ. ಈ ಪ್ರಾಕಾರವು ಅತಿ ದೊಡ್ಡ ಪ್ರಾಕಾರವಾಗಿದೆ. ಇದರ ಆವಾರದಲ್ಲಿ ಅನೇಕ ಕೆರೆಗಳು. ದೇವತಾಸ್ಸನ್ನಿಧಿಗಳು,

ಮಂಟಪಗಳು. ಧ್ವಜಸ್ತಂಭ ಮತ್ತು ಬಲಿಪೀಠವಿವೆ. ಈ ಪ್ರಾಕಾರವನ್ನು ೪ ವಿಭಾಗಗಳಾಗಿಸಬಹುದು. ಮೊದಲನೆಯ ವಿಭಾಗದಲ್ಲಿ ನಮ್ಮಾಳ್ವಾರ್ ಸನ್ನಿಧಿ ಹಾಗೂ ಅಂತರಾಳ ಮಹಾಮಂಟಪವಿದೆ. ನಮ್ಮಾಳ್ವಾರ್ ಕಂಚಿನವಿಗ್ರಹವಿದೆ ಮತ್ತು ಕ್ರಮವಾಗಿ ಉತ್ಸವಾದಿಗಳು ನಡೆಯುತ್ತವೆ. ಎರಡನೆ ವಿಭಾಗವನ್ನು ವಿಜಯನಗರದ ಕಾಲದಲ್ಲಿ ಕಟ್ಟಲಾಗಿದ್ದು, ತಿರುಮಂಗೈ ಆಳ್ವಾರ್ ಹಾಗೂ ಮಣವಾಳ ಮಹಾಮುನಿಗಳ ಸನ್ನಿಧಿಗಳಿವೆ. ತಿರುಮಂಗೈ ಆಳ್ವಾರ್ ಸನ್ನಿಧಿಗೆ ಕೂಡಿದಂತೆ ತಿರುಮಲ್ಶೈಸಿ ಮತ್ತು ರಾಮಾನುಜರ ಸನ್ನಿಧಿಗಳಿವೆ. ಚೋಳರ ಕಾಲದಲ್ಲಿ ಈ ವಿಗ್ರಹಗಳ ಪ್ರತಿಷ್ಠಾಪನೆಯಾಗಿರಬೇಕು. ರಾಮಾನುಜರ ವಿಗ್ರಹದನಂತರ ಮುದಲ್ ಆಳ್ವಾರುಗಳ ಸನ್ನಿಧಿಗಳಿದ್ದು ಅವುಗಳನ್ನು ಮುಚ್ಚಿಡಲಾಗಿದೆ. ಮೂರನೆಯ ವಿಭಾಗದಲ್ಲಿ ವಾಹನ ಮಂಟಪವು ಕಲ್ಯಾಣ ಮಂಟಪದ ಮಾದರಿಯಲ್ಲಿ ಅಶ್ವಾರೂಢ ಪ್ರತಿಮೆಗಳ ಕಂಬಗಳನೊಳಗೊಂಡಿದೆ ಈ ಮಂದಿರದಲ್ಲಿ ವೇದಾಂತದೇಶಿಕ ಮತ್ತು ಲಕ್ಷ್ಮೀಕುಮಾರ ತಾತಾಚಾರ್ಯರ ಸನ್ನಿಧಿಗಳಿವೆ. ಇವುಗಳನ್ನು ವಿಜಯನಗರದ ಕಾಲದಲ್ಲಿ ಕಟ್ಟಲಾಯಿತು. ವೈಶಾಖ ಉತ್ಸವ ಕಾಲದಲ್ಲಿ ವಾಹನಾರೂಢರಾದ ಉತ್ಸವ ಮೂರ್ತಿಗಳನ್ನು ಹಿಂತಿರುಗಿ ಬರುವಾಗ ಇದೇ ಮಂದಿರದಲ್ಲಿ ಜಿಜಯುಂಗೈಸಿ, ಪೂಜಿಸಲಾಗುವುದು. ವೇದ ಹಾಗೂ ಪ್ರಬಂಧದ ಕಡೇ ಭಾಗಗಳನ್ನು ಪಠಿಸಲಾಗುವುದು. ಇವಲ್ಲದೆ ಎರಡು ತುಲಾಭಾರ ಮಂಟಪಗಳಿವೆ ಅಚ್ಯುತರಾಯನು ತುಲಾಭಾರ ವಿಧಿಯನ್ನು ಅನುಸರಿಸುವ ಕಾಲದಲ್ಲಿ ಈ ಮಂಟಪಗಳನ್ನು (೧೫೩೨) ಕಟ್ಟಿಸಿರಬೇಕು. ತುಲಾಭಾರವನ್ನು ನಡೆಸಿ ಇಡೀ ನಿಧಿಯನ್ನು ದೇವಸ್ಥಾನಕ್ಕೆ ನೀಡಲಾಯಿತು. ಪಶುಸಂಗೋಪನೆ ಹಾಗೂ ಅಶ್ವಾಲಯಕ್ಕಾಗಿ ಮಂಟಪವನ್ನು ಕಟ್ಟಲಾಯಿತು. ಆದರೆ ಅವು ಇಂದು ನಿರುಪಯುಕ್ತವಾಗಿವೆ. ಅದರ ಪಕ್ಕದಲ್ಲಿ ವಸಂತ ಮಂಟಪವಿದೆ. ಈಶಾನ್ಯ ಹಾಗೂ ಕಡೆಯ ವಿಭಾಗದಲ್ಲಿ ಅನೇಕ ಸನ್ನಿಧಿಗಳು, ಮಂಟಪಗಳು ಮತ್ತು ಕೊಳಗಳಿವೆ. ಅನಂತಸರಸ್ಸು ಅತಿಪುರಾತನ ಕೊಳವಾಗಿದೆ. ೧೩ನೇ ಶತಮಾನದಲ್ಲಿ ರಚಿಸಲ್ಪಟ್ಟ **ಗುರುಪುರಂಪರೈ** ಮತ್ತು **ವೇದಾಂತ ದೇಶಿಕರ ಮಹಾತ್ಮೆ**ಯಲ್ಲಿ ಈ ಕೊಳವನ್ನು ಸ್ಮರಿಸಲಾಗಿದೆ. ಭಕ್ತಾದಿಗಳು ದೇವಸ್ಥಾನದ ಪ್ರವೇಶವನ್ನು ಪಡೆಯುವುದಕ್ಕೆ ಮುಂಚೆ ಈ ಕೊಳದಲ್ಲಿ ಶುಚಿರ್ಭೂತರಾಗಬೇಕು. ಈ ಕೊಳದ ಮಧ್ಯದಲ್ಲಿ ೧೬ ಸ್ತಂಭಗಳನ್ನೊಳಗೊಂಡ ನೀರಲಿ ಮಂಟಪವಿದೆ. ೪ ಸ್ತಂಭಗಳನ್ನೊಳಗೊಂಡ ಮತ್ತೊಂದು ಮಂಟಪದಲ್ಲಿ 'ಆದಿ ಅತ್ತಿ' ವರದರ ಗ್ರಹವನ್ನು ಇಡಲಾಗಿದೆ. ಕೊಳದ ಪಶ್ಚಿಮ ಭಾಗದಲ್ಲಿ ಶ್ರೀ ಕೃಷ್ಣ ಹಾಗೂ ವರಾಹ ಸನ್ನಿಧಿಗಳಿವೆ. ಕೃಷ್ಣ ಸನ್ನಿಧಿಯು ಪಾಂಡ್ಯರ ಕಾಲಕ್ಕೆ ಸೇರಿದ್ದು ಇಂದು ಶಿಥಿಲವಾಗಿದೆ. ಅದೇ ರೀತಿ ವರಾಹ ಮತ್ತು ಇತರ ಸನ್ನಿಧಿಗಳು ಭಗ್ನವಾಗಿವೆ. ಅನಂತಸರಸ್ಸಿನ ಉತ್ತರ ದಂಡೆಯ ಮೇಲೆ ರಂಗನಾಥರ ಸನ್ನಿಧಿಯಿದೆ. ರಂಗನಾಥರ ವಿಗ್ರಹವು ಸುಂದರವಾಗಿದೆ, ನರಲೋಕವೀರನ ಶಾಸನವೊಂದರಲ್ಲಿ (೧೧ ನೇ ಶತಮಾನ) ಉಲ್ಲೇಖಿಸಿರುವ ವಿಗ್ರಹವು ಇದೇ ಇರಬಹುದೇನೋ ಎಂದು ತೋರುತ್ತದೆ. ಅನಂತಸರಸ್ಸಿನ ಪೂರ್ವದಂಡೆಯ ಮೇಲೆ ಚಕ್ರತ್ತಾಳ್ವಾರ್ ಅಥವಾ ಸುದರ್ಶನ ವಿಗ್ರಹ ಹಾಗೂ ಸನ್ನಿಧಿಯಿದೆ. ೧೧೯೧ರಲ್ಲಿ ಚೋಳ ಕುಲೋತ್ತುಂಗದ ಕಾಲದಲ್ಲಿ ಇಳೈಆಳ್ವಾರ್ ಕಳಿಂಗರಾಯನ್ ಈ ಸನ್ನಿಧಿಯನ್ನು ಕಟ್ಟಿಸಿ

ದಸು. ನಮ್ಮಾಳ್ವಾರ್ ಸನ್ನಿಧಿಯ ಹಿಂದೆ ಪೊರ್ರಾಮರೈ ಕೊಳವಿದೆ. ೧೫೪೪ರಲ್ಲಿ ಚೆನ್ನಯ್ಯಂಗಾರ್ ಎಂಬುವರು ಈ ಕೊಳವನ್ನು ದುರಸ್ತಿ ಮಾಡಿಸಿದರು. ಚಕ್ರತ್ತಾಳ್ವಾರ್ ಸನ್ನಿಧಿಯ ಪೂರ್ವಕ್ಕೆ ಒಂದು ದೊಡ್ಡ ಪುಷ್ಪವನವಿದೆ. ಈ ವನದಲ್ಲಿ ಮಲ್ಲಿಗೆ ಗುಲಾಬಿ, ನಂದಬಟ್ಟಲು ಮತ್ತು ಅನೇಕ ಹಣ್ಣಿನಗಿಡಗಳನ್ನು ಬೆಳೆಸಲಾಗಿದೆ. ಇಲ್ಲಿಯೇ ಪೆರುಂದೇವಿ ತಾಯಾರ್ ಶುಕ್ರವಾರ ಮಂಟಪವಿದೆ. ಪ್ರತಿ ಶುಕ್ರವಾರ ಪೆರುಂದೇವಿ ತಾಯಾರ್ ಅವರ ವಿಗ್ರಹವನ್ನು ಇಲ್ಲಿಗೆ ಬಿಜಯಂಗೈಸಿ ವಿಶ್ರಮಿಸಲಾಗುವುದು. ವಿಜಯನಗರದ ಕಾಲದಲ್ಲಿ ಇದೇ ವನದಲ್ಲಿ ಸ್ಥಾಪಿಸಲಾಗಿದ್ದ ಪೆರಿಯಾಳ್ವಾರ್, ತೊಂಡರಡಿಪ್ಪೊಡಿಯಾಳ್ವಾರ್ ಮತ್ತು ತಿರುಪ್ಪಾಣ್ ಆಳ್ವಾರ್ ಸನ್ನಿಧಿಗಳು ಶಿಥಿಲಸ್ಥಿತಿಯಲ್ಲಿವೆ. ಅನಂತಸರಸ್ಸಿನ ದಕ್ಷಿಣ ಭಾಗದಲ್ಲಿರುವ ಸಹಸ್ರಸ್ತಂಭ ಕಲ್ಯಾಣಮಂಟಪವು ಇಡೀ ಪ್ರಾಕಾರದಲ್ಲಿಯೇ ಅತಿಮೋಹಕವಾದ ಕಟ್ಟಡವಾಗಿದೆ. ಪ್ರಮುಖದ್ವಾರದ ಪೂರ್ವಕ್ಕೆ ಕಟ್ಟಲಾಗಿದೆ. ಮಧ್ಯಭಾಗದಲ್ಲಿ ಉತ್ಸವವಿಗ್ರಹಗಳನ್ನು ಸ್ವಾಗತಿಸಲು ಎತ್ತರವಾದ ವೇದಿಕೆಯನ್ನು ಕಟ್ಟಲಾಗಿದೆ. ಈ ಕಟ್ಟಡವು ವಿಜಯನಗರ ಕಾಲದ ಕೊಡುಗೆ. ಸ್ಥಂಭಗಳು ಎತ್ತರವಾಗಿಯೂ ಅನೇಕ ಕೆತ್ತನೆ ಕೆಲಸಗಳಿಂದ ರಾರಾಜಿಸುತ್ತವೆ. ಕುದುರೆಸವಾರರ ಸಾಲುಗಳೂ, ವೈಷ್ಣವ ದೇವತಗಳು, ಪೌರಾಣಿಕ ಕಥೆಗಳು-ಅಳಗಿಯಮನವಾಳ ಜೀಯರ ಕಾಲದಲ್ಲಿ ಶಿಲೆಯಲ್ಲಿ ಕೆತ್ತಲಾಗಿದೆ. ಅವರ ಶಿಲಾಪ್ರತಿಮೆಯನ್ನು ಕೂಡ ಅಳವಡಿಸಲಾಗಿದೆ.

ದೇವಸ್ಥಾನಕ್ಕೆ ಇರುವ ಎರಡು ಮಹಾದ್ವಾರಗಳಲ್ಲಿ, ಪಶ್ಚಿಮದ್ವಾರವೇ ಪ್ರಮುಖ ದ್ವಾರವಾಗಿದೆ. ಬಲಿಪೀಠ, ಗರುಡಗಂಬ ಹಾಗೂ ಧ್ವಜಸ್ಥಂಭವನ್ನೂ ಇಲ್ಲಿಯೇ ಕಾಣುತ್ತೇವೆ. ಪಶ್ಚಿಮ ಗೋಪುರವು ೧೬೦ ಅಡಿ ಎತ್ತರ; ಪೂರ್ವ ದ್ವಾರಕ್ಕಿಂತ ೭೦ ಅಡಿ ಕಡಿಮೆ. ಆದರೂ ಕೂಡ ನೋಟಕ್ಕೆ ಸುಂದರವಾಗಿಯೂ ಇದೆ. ಎರಡು ಘನವಾದ ಶಿಲಾವೇದಿಕೆಯ ತಳಹದಿಯ ಮೇಲೆ ಇಟ್ಟಿಗೆ ಗಾರೆಯನ್ನು ಕೂಡಿಸಿ, ೭ ಹಂತಗಳಲ್ಲಿ ಈ ದ್ವಾರವನ್ನು ಕಟ್ಟಲಾಗಿದೆ. ವಿಜಯನಗರದ ಕಾಲದಲ್ಲಿ ರಚಿಸಲ್ಪಟ್ಟಿದ್ದರೂ ಚೋಳ ಶೈಲಿಯಲ್ಲಿದೆ. ಆದರೆ ಪೂರ್ವ ಗೋಪುರವು ಏಕಾಂಬರೇಶ್ವರ ದೇವಸ್ಥಾನದ ಗೋಪುರದ ಮಾದರಿಯಲ್ಲಿದೆ. ಮನವಾಳ ಮಹಾ ಮುನಿಗಳು **ಕಾಂಚಿ ದಿವ್ಯದೇಶ ಸಂಗ್ರಹ** ಶ್ಲೋಕ ಮಾಲಿಕೆಯಲ್ಲಿ[೨] ಸ್ಮರಿಸಿರುವ ದೇವಸ್ಥಾನದ ವಿಭಾಗಗಳನ್ನು ಇಂದಿಗೂ ಕೂಡ ಕಾಣುತ್ತೇವೆ. ಅವರ ಕಾಲದಲ್ಲಿ ಪಶ್ಚಿಮ ದ್ವಾರ ಮಾತ್ರವಿದ್ದಿರಬೇಕು ಮತ್ತು ಪೂರ್ವ ದ್ವಾರವನ್ನು ೧೬ ನೇ ಶತಮಾನದಲ್ಲಿ ಕಟ್ಟಲಾಯಿತು. ಅಲ್ಲದೆ ಕಲ್ಯಾಣಮಂಟಪ ಮತ್ತು ವಾಹನಮಂಟಪವನ್ನು ಕೂಡ ನಂತರ ಅಂದರೆ ೧೬ ನೇ ಶತಮಾನದಲ್ಲಿ ಕಟ್ಟಲಾಯಿತೆಂದು ಅವರ ಗ್ರಂಥದಿಂದ ಕಂಡುಬರುತ್ತದೆ. ಪೆರುಂದೇವಿ ತಾಯಾರ್ ಸನ್ನಿಧಿ ಮತ್ತು ಕಲ್ಯಾಣಕೋಟಿ ವಿಮಾನವನ್ನು ಕೂಡ ಉಲ್ಲೇಖಿಸಿಲ್ಲ. ಇವು ೧೭ ನೇ ಶತಮಾನಕ್ಕೆ ಸೇರಿದ ಕಟ್ಟಡಗಳಾಗಿವೆ. ಮನವಾಳ ಮುನಿಗಳ ಕಾಲದಲ್ಲಿ ದೇವಸ್ಥಾನವು ಆಧುನಿಕ

ರೂಪವನ್ನು ಪಡೆಯಿತು. ೭ ನೇ ಶತಮಾನದಲ್ಲಿ ಅಂದರೆ ಪೂದತ್ತಾಳ್ವಾರ್ ಕಾಲದಲ್ಲಿ ಅದೊಂದು ಸಾಮಾನ್ಯ ಕಟ್ಟಡವಾಗಿತ್ತು. ೧೧ ನೇ ಶತಮಾನದ ವೇಳೆಗೆ ಬೃಹತ್ ಆಕಾರವನ್ನು ಪಡೆದು ಉತ್ತಮ ಕಟ್ಟಡವಾಗಿ ಪರಿವರ್ತನೆಗೊಂಡಿತು. ಚೋಳರ ಕಾಲದಲ್ಲಿ ಗರ್ಭಗುಡಿ ಹಾಗೂ ನರಸಿಂಹ ಸನ್ನಿಧಿಯು ರೂಪಗೊಂಡವು. ಮತ್ತೆರಡು ಪ್ರಾಕಾರಗಳನ್ನು ಮೊದಲನೆಯ ಕುಲೋತ್ತುಂಗನ ಕಾಲದಲ್ಲಿಯೂ ನಂತರ ೩ ಹಾಗೂ ೪ ನೆಯ ಪ್ರಕಾರಗಳನ್ನು ಅಲ್ಲದೆ ಅನೇಕ ಕಟ್ಟಡಗಳನ್ನು ೧೨ ಮತ್ತು ೧೩ ನೇ ಶತಮಾನದಲ್ಲಿಯೂ ರೂಪಿಸಲಾಯಿತು. ಅವುಗಳಲ್ಲಿ ಕರಿಮಾಣಿಕ್ಯ ಪೆರುಮಾಳ್, ಅಭಿಷೇಕ ಮಂಟಪ, ತಾಯಾರ್ ಸನ್ನಿಧಿ ಪ್ರಮುಖವಾದವು. ಅನಂತಸರಸ್ಸು ಹಾಗೂ ಸುದರ್ಶನ ಸನ್ನಿಧಿಯನ್ನು ಪುನರ್ರಚಿಸಲಾಯ್ತು. ಇದೇ ಕಾಲದಲ್ಲಿ ಅನೇಕ ಸ್ಥಂಭಗಳನ್ನೊಳಗೊಂಡ ಮಂದಿರಗಳು, ಸನ್ನಿಧಿಗಳು ಹಾಗೂ ಕೆಲವು ಇತರ ಕಟ್ಟಡಗಳು ರೂಪಗೊಂಡವು. ಪೂರ್ವಗೋಪುರ, ಕಲ್ಯಾಣಮಂಟಪ, ವಾಹನಮಂಟಪ, ತುಲಾಭಾರ ಮಂಟಪ, ಉಯ್ಯಾಲೆಮಂಟಪ, ವಸಂತಮಂಟಪ ಮತ್ತು ಆಳ್ವಾರ್ ಹಾಗೂ ಆಚಾರ್ಯರಿಗಾಗಿ ಪ್ರತ್ಯೇಕ ಸನ್ನಿಧಿಗಳು–ಇವುಗಳು ವಿಜಯನಗರದ ಕಾಲದಲ್ಲಿ ರೂಪಿಸಲ್ಪಟ್ಟವು. ವಿಜಯನಗರದ ಕಾಲವು ಈ ದೇವಸ್ಥಾನದ ಇತಿಹಾಸದ ಒಂದು ಸುವರ್ಣಯುಗವಾಗಿದೆ.

ಅಡಿಟಿಪ್ಪಣೆಗಳು

೧ ಡಾ. K. V. Raman ಅವರು ರಚಿಸಿರುವ "Sri Varadarajaswami Temple of Kanchi" ಗ್ರಂಥವನ್ನು ಆಧಾರವಾಗಿಟ್ಟುಕೊಂಡು ಈ ಲೇಖನವನ್ನು ಬರೆಯಲಾಗಿದೆ. ನಾನು ಅವರಿಗೆ ಚಿರಋಣಿ.

೨ ಮಣವಾಳ ಮುನಿಗಳು ರಚಿಸಿರುವ ಶ್ಲೋಕವು ಹೀಗಿದೆ :—
ಶ್ರೀಮತ್ ದ್ವಾರಮ್ ಮಹದ್ವಿಬಲಿಪೀಠಗ್ರಿಯಮ್ ಪಣೀಂದ್ರಹೃದಮ್ ಗೋಪಿನಾಮ್
ರಮಣಮ್ ವರಾಹಮಪ್ರಮ್ ಶ್ರೀ ಭಟ್ಟನಾಥಮ್ ಮುನಿಮ್ ಶ್ರೀ ಶ್ರೀ ಮಂಕಮ್
ಶಠಮಾರಿಣಮ್ ಕಲಿರಿಪುಮ್ ಶ್ರೀ ಭಕ್ತಿಸಾರಮ್ ಮುನಿಮ್ ಪೂರ್ಣಮ್ ಲಕ್ಷ್ಮೀ
ಯೋಗಿನಮ್ ಮುನಿವರನ್ ಅಧ್ಯನ್ ಅಥಪ್ವರಪನ್ ಶ್ರೀಮನ್ ಮಂಜನ ಮಂಡಪಂ
ಸರಸಿಜಮ್ ಹೇರೇಶ ಭೋಗೀಶ್ವರಮ್ ರಾಮಮ್ ನೀಲಮಣಿಮ್ ಮಹಸಪವನಮ್
ತಾರ್ಕಸ್ಸ್ನೃಸಿಂಹ ಶ್ರೀಯಮ್ ಸೇನಾನ್ಯಕರಿ ಭೂಕರಮ್ ದಕದುರ್ಪ ಶ್ರೀಪುಣ್ಯ
ಕೋಟ್ಯಾಮ್ ಹರಿಮ್ ದಕಸ್ಮೃತ್ಯೈ ವರದಮ್ ರಮಸಹಸ್ರಂ ವಂದೇ ಕದಿಯೆವುಕಮ್"
K. V. Raman, PST. Fn. 34.

ಶ್ರೀಮತ್‌ದ್ವಾರವರ್–ದ್ವಾರ
ಮಹಾಬಲಿಪೀಠ–ಬಲಿಪೀಠ
ಫಣೀಂದ್ರಹೃದವರ್–ಅನಂತರಸ್ಸು
ಗೋದೀನಾಂರಮಣಂ–ವೇಣುಗೋಪಾಲ
ಭಟ್ಟನಾಥ–ಪಟ್ಟರ್ಪಿರಾನ್, ಪೆರಿಯಾಳ್ವಾರ್
ವರಾಹವಪುಷಂ–ಜ್ಞಾನಪಿರಾನ್
ಶಠವಾರಿಣವರ್–ನಮ್ಮಾಳ್ವಾರ್
ಕಲಿರುಪವರ್–ಕಲಿಯನ್(ತಿರುಮಂಗೈ)
ಭಕ್ತಿಸಾರ–ಭಕ್ತಿಸಾರರ್, ತಿರುಮಳ್ಳೈಸಿ
ಲಕ್ಷ್ಮಣಯೋಗಿ–ರಾಮಾನುಜ
ಮುನಿವರನ್–ಮುದಲ್ಆಳ್ವಾರ್
ಆದ್ಯನ್ ದ್ವಾರಪನ್–ದ್ವಾರಪಾಲಕರು

ಮಜ್ಜನಮಂಡಪ–ಅಭಿಷೇಕಮಂಟಪ
ಪರನಿಜಾಂ–ಪೆರುಂದೇವಿತಾಯಾರ್
ಹೇರೇಶ ಆನಂದಾಳ್ವಾರ್
ಭೋಗೀಶ್ವರ–ಚಕ್ರತಾಳ್ವಾರ್
ರಾಮ - ರಾಮ
ನೀಲಮಣಿ–ಕರಿಯಮಾಣಿಕ್ಯಪೆರುಮಾಳ್
ನೃಸಿಂಹ–ನೃಸಿಂಹ
ತಾರ್ಕ್ಷ್ಯಂ–ಗರುಡ
ಶ್ರೀಯಂ–ಆಂಡಾಳ್
ಸೇನಾನ್ಯಂ–ಸೇನೈನಾಥರ್
ಕರಿಭೂಧರ–ಕರಿಗಿರಿ
ಪುಣ್ಯಕೋಟಿಂಹರಿ–ಪುಣ್ಯಕೋಟಿ ವಿಮಾನ

ಹತ್ತೊಂಬತ್ನೂರಾ ಎಪ್ಪತ್ತೊಂಬತ್ತರ ಕನ್ನಡ ಕಾದಂಬರಿಗಳು

● ವಸಂತ ಕುಷ್ಟಗಿ

ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಪ್ರಕಾರವೇ ಜನಪ್ರಿಯವಾದದ್ದು. ಏಕೆಂದರೆ ಅಕ್ಷರಸ್ಥರಲ್ಲಿ ನೂರಕ್ಕೆ ತೊಂಬತ್ತು ಜನರು ಕಾದಂಬರಿಗಳನು ಓದುತ್ತಾರೆ. ಅವರಲ್ಲಿ ಅನೇಕರು ಮನರಂಜನೆಗಾಗಿ ಓದಿದರೂ ಲೋಕಜೀವನದ ಬಗೆಗೆ ಅನೇಕ ವಿಚಾರಗಳನ್ನು ಪಡೆದು ತಮ್ಮ ಜೀವನೋತ್ಕರ್ಷಕ್ಕೆ ಹೊಸ ಆಯಾಮವನ್ನೇ ನಿರ್ಮಿಸಿಕೊಳ್ಳುತ್ತಾರೆ. ಆದ್ದರಿಂದಲೇ ಏನೋ ೧೯೭೯ರಲ್ಲಿಯೂ ಸಾಹಿತ್ಯದ ಇತರ ಪ್ರಕಾರಗಳಿಗಿಂತ ಕಾದಂಬರಿ ಫಸಲಿನ ಪ್ರಮಾಣ ಹೆಚ್ಚು. ನನ್ನ ನೋಡಿಕೆಗೆ ೧೦೬ ಕಾದಂಬರಿಗಳು ಕಣ್ಣಿಗೆ ಬಿದ್ದಿವೆ. ಆದರೆ ಇನ್ನೂ ಹಲವು ವಿಶೇಷ ಪ್ರಚಾರ ಪಡೆಯದೇ ಬಿಟ್ಟು ಹೋಗಿರಲೂಬಹುದು. ದಾಖಲೆಯ ದೃಷ್ಟಿಯಿಂದ ಅವು ಮಹತ್ವದವೂ ಆಗಿರಬಹುದು.

'ಕಾದಂಬರಿ' ಪ್ರಕಾರದಲ್ಲಿ, ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ಮನೋವೈಜ್ಞಾನಿಕ, ವೈಜ್ಞಾನಿಕ, ಕೌಟುಂಬಿಕ ಎಂದೇನೋ ವಿಭಾಗಮಾಡಬಹುದಾದರೂ ಆಯಾ ಕಾಲದ ಸಾಮಾಜಿಕ ಸಮಸ್ಯೆಗಳನ್ನೇ ಸ್ಥೂಲವಾಗಿ ಎಲ್ಲ ಕಾದಂಬರಿಗಳೂ ಬಿಡಿಸಲು ಪ್ರಯತ್ನಿಸುತ್ತವೆ. ಒಂದು ದೃಷ್ಟಿಯಿಂದ ನೋಡಿದರೆ, ನಿಗೂಢವಾಗಿ, ಆ ಸಮಸ್ಯೆಗಳೆಲ್ಲೆಲ್ಲ ಗಂಡು-ಹೆಣ್ಣಿನ ಸಮಸ್ಯೆಯು ಒಂದಿಲ್ಲೊಂದು ರೀತಿಯಲ್ಲಿ ತಳಕುಗೊಂಡಿರುತ್ತದೆ. ಸಾಮಾನ್ಯವಾಗಿ ವಸ್ತುಸ್ಥಿತಿ ಹೀಗಿದ್ದರೂ, ವೈವಿಧ್ಯ ಕಂಡು ಬಾರದೇ ಇರುವುದಿಲ್ಲ. ಅಂತೆಯೇ ೧೯೭೯ರಲ್ಲಿಯೂ ವಿಶಿಷ್ಟವಾದ ವೈವಿಧ್ಯಗಳನ್ನು ಕಾಣಬಹುದಾಗಿದೆ. ರಾವ ಬಹಾದ್ದೂರ ಅವರ 'ಗೌಡರ ಕೋಣ'ವು ಸಾಮಯಿಕ ರಾಜಕೀಯ ಪ್ರಭಾವದ ಸಂಕೇತವಾದರೆ, ರಾ. ಶಿ. ಅವರ 'ಬುದ್ಧೋಜಿ'ಯು ಇಂದು ಜಗತ್ತು ನಂಬುತ್ತಿರುವ ಜೀವನ ಮೌಲ್ಯಗಳ ತಾಜಾಖಬರ್ ಅನ್ನು ನೀಡುತ್ತದೆ. ಸತ್ಯಕಾಮ ಅವರ "ಪಂಚ 'ಮ'ಗಳ ನಡುವೆ" ತಾಂತ್ರಿಕ ಜಗತ್ತಿನ ಅಪೂರ್ವ ರೋಮಾಂಚಕಾರಿ ಅನುಭವ ಸಾಹಿತ್ಯದ ಕೊರತೆಯನ್ನು ಕಿಂಚಿತ್ತಾದರೂ ತುಂಬಿಕೊಡುತ್ತದೆ. ಶ್ರೀರಂಗ 'ಉತ್ತರವಿಲ್ಲದ ಪ್ರಶ್ನೆ', ಶಾಂತಿನಾಥ ದೇಸಾಯಿಯವರ 'ಸೃಷ್ಟಿ', ಅರ್ಚಿಂ ಅವರ 'ದ್ವಂದ್ವ', ಸುಂದರ ನಾಡ

ಕರ್ಣಿ ಅವರ 'ಅವರ ನಡುವೆ', ಟಿ. ಜಿ. ರಾಘವ ಅವರ 'ಮನೆ' ಮೊದಲಾದುವು ಮೆಚ್ಚಬಹುದಾದ ಕಾದಂಬರಿಗಳು. ವಿಶುಕುಮಾರ ಅವರ 'ಕಾಮುಕರು' ಸಾಮಾಜಿಕ ಕಾದಂಬರಿಯೇ ಆಗಿದ್ದರೂ ಅದು ವಿಶಿಷ್ಟವಾಗಿ ಕಾಮದ ಮೌಲ್ಯವನ್ನು ನಿರ್ಧರಿಸುವ ಸ್ವಾಮ್ಯವನ್ನು ಓದುಗನಿಗೆ ಬಿಟ್ಟು ಕೊಡುವುದು ಅದರ ಮಹತ್ವ. ಆದ್ದರಿಂದ ಅದನ್ನು ಪ್ರತ್ಯೇಕವಾಗಿ ಪರಿಗಣಿಸಬಹುದು. ಅದರಂತೆ ಬಸವರಾಜ ಕಟ್ಟೀಮನಿಯವರ 'ಹರಿಜನಾಯಣ'ವು ಹರಿಜನರ ಸಮಸ್ಯೆಗಳ ಮೇಲೆ ವಿಶೇಷ ಬೆಳಕು ಬೀರುವುದಲ್ಲದೆ ಜನರಲ್ಲಿ ವಿವೇಚನಾಶಕ್ತಿಯನ್ನು ಬೆಳೆಸಿ ಸಮಾಜದಲ್ಲಿಯ ಬಿರುಕನ್ನು ಕೂಡಿಸುವಲ್ಲಿ ವಿಶೇಷ ಪರಿಣಾಮನ್ನು ಬೀರುವ ವೈಶಿಷ್ಟ್ಯವನ್ನು ಪಡೆದಿದೆ. ಇವುಗಳಲ್ಲದೆ ೧೯೭೪ರ ಹೆಸರನ್ನು ಸದಾ ಹಸುರಾಗಿಡುವ, ನೆನಪಿಡಲೇ ಬೇಕಾದ ಕೃತಿಗಳಲ್ಲಿ ಯಶವಂತ ಚಿತ್ತಾಲ ಅವರ 'ಶಿಕಾರಿ', ಎಸ್. ಎಲ್. ಭೈರಪ್ಪನವರ 'ಪರ್ವ' ಹಾಗೂ ಶಿವರಾಮಕಾರಂತರ 'ಗೆದ್ದ ದೊಡ್ಡಸ್ತಿಕೆ'ಗಳು ಬಹು ಮುಖ್ಯವಾದುವು.

ರಾವಬಹಾದ್ದೂರ ಅವರ 'ಗೌಡರ ಕೋಣ'ವು, ದುಷ್ಟ ರಾಜಕೀಯ ಶಕ್ತಿಗಳು ಮುಗ್ಧ ಜನರನ್ನು ಶೋಷಿಸುವ ಬಗೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸುವುದರ ಜೊತೆಗೆ ಶೋಷಿತರ ಸಂಘಟನೆಯಿಂದ ದುಷ್ಟಶಕ್ತಿಗಳನ್ನು ಹೇಗೆ ಬಗ್ಗುಬಡಿಯಬಹುದೆಂಬುದರ ಬಗೆಗೆ ನೇರವಾದ ಪರಿಹಾರವನ್ನು ನೀಡುತ್ತದೆ. ಶಂಕರಗೌಡರ ವೈಯಕ್ತಿಕ ಜೀವನ ಚಿತ್ರಣವೇ ಈ ಕಾದಂಬರಿಯ ಕೇಂದ್ರ ಕಥಾವಸ್ತು. ರಾಮಯ್ಯನೆಂಬವನು ಶಂಕರಗೌಡರನ ಸಮಾನ ಶಕ್ತಿಯುಳ್ಳ ಪಾತ್ರ. ಆದರೆ ಆತನ ಬಗೆಗೆ ಲೇಖಕರ ದೃಷ್ಟಿಯು ಇನ್ನಷ್ಟು ನಿಚ್ಚಳವಾಗಬೇಕಿತ್ತು. ಅಪ್ರತಿಮ ಕರುಣಾಳು ಜನತೆಯಿಂದಾಗಿ ಶಂಕರಗೌಡರ ಮನಸ್ಸು ಕೊನೆಯಲ್ಲಿ ಪರಿವರ್ತನೆಯಾಗುವುದರ ಕಡೆಗೆ ವಿಶೇಷಗಮನವನ್ನು ಅವರು ನೀಡಿದುದೇ ಇದಕ್ಕೆ ಕಾರಣವಾಗಿರಬೇಕು. ಒಟ್ಟಾರೆ ಲೇಖಕರ 'ಗ್ರಾಮಾಯಣ'ವನ್ನೂ, ಇದನ್ನೂ ನೋಡಿದಾಗ ಅವರು ಹಳ್ಳಿಯ ಜೀವನವನ್ನು ಹಾಸುಹೊಕ್ಕಾಗಿ ಕಂಡವರೆಂದು ಸ್ಪಷ್ಟವಾಗುತ್ತದೆ. ಈ ಕಾದಂಬರಿಯು ಗೌಡರ ಕೋಣವನ್ನು ಬಳಸುವಂತೆ, ಇಂದು ಭಾರತದಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬರೂ ತನ್ನ ಹೊಣೆಗಾರಿಕೆಯನ್ನು ಮರೆತು, ರಾಜಕೀಯ ಪ್ರಭಾವವನ್ನು ತನ್ನ-ತನ್ನವರ ಹೆಗ್ಗಳಿಕೆಗೆ ಬಳಸುತ್ತಿರುವ ದುಃಸ್ಥಿತಿಯನ್ನು ಬಹು ಮಾರ್ಮಿಕವಾಗಿ ಚಿತ್ರಿಸುತ್ತದೆ ಈ ಕಾದಂಬರಿ.

ಇಂದಿನ ಚಮತ್ಕಾರ ಪ್ರಪಂಚದಲ್ಲಿ ವ್ಯಾಪಾರ, ದೇಶಸೇವೆ, ಸರಕಾರ ಅಧಿಕಾರಿಗಳ ಸೇವೆ-ಇವೆಲ್ಲವುಗಳನ್ನು ಹಾಕಪ್ಪನವರು ಹೇಗೆಲ್ಲ ಉಪಯೋಗಿಸಿಕೊಂಡು ಅಂತೂ ಇಂತೂ ಅಸಾಮಾನ್ಯರಾದ ಸಾಮಾನ್ಯ ಪ್ರಜೆಗಳಿಗೆ ಸುಸೂತ್ರ ಜೀವನವನ್ನೇ ಶೂನ್ಯವಾಗಿಸಿರುವ ರೀತಿಯನ್ನು ಬಹಳ ಪ್ರಭಾವಕಾರಿಯಾಗಿ ರಾ. ಶಿ.ಅವರು'ಬುದ್ಧೋಜಿ'ಯಲ್ಲಿ ಚಿತ್ರಿಸಿದ್ದಾರೆ. ಈಗಿನ ಬಿಳಿ ಛಾಯೆಯ ಶುಗರಕೋಟಿನ ಜನರಿಗಿಂತಲೂ ಹಿಂದೆ ಜೀವನವನ್ನೂ ಮತ್ತು ಮಾನವನ್ನೂ ಮುಡಿಪಿಟ್ಟು ಕಳ್ಳತನ ಮಾಡುತ್ತಿದ್ದವರು ಚಿನ್ನ ಚೆಲುವ

ರೆಂಬ ರಾಶಿಯುವರ ಅಭಿಪ್ರಾಯದ ಸುಂದರ ಚಿತ್ರಣ ಈ 'ಬುದ್ಬೋಜಿ'. ಇಂದು ನಮ್ಮ ದೇಶವಲ್ಲಿ ಎಂಥೆಂಥ ಗ್ಯಾಂಗುಗಳು ಬೆಳೆದು ಬಾಳುತ್ತಿವೆಯೆಂಬುದನ್ನೂ ಅವು ನಮ್ಮ ಬಳಿಯಲ್ಲಿಯೇ ಬಾಳಿ ಬದುಕುತ್ತಿದ್ದರೂ ನಮ್ಮಂತಹ ಮುಖಹೀನರಿಗೆ ಅವರ ಸುಳಿವೇ ತಾಗದಂತೆ, ಸೋಜಿಗವಾಗಿ ಒಳಿತನ್ನೆಲ್ಲ ಶೋಷಿಸತೊಡಗಿದೆ ಎಂಬುದಕ್ಕೆ ಇದು ಕನ್ನಡಿಯನ್ನು ಹಿಡಿದಿದೆ. ಇಲ್ಲಿ ಬರುವ ಬಿಡ್ಡಣ್ಣ ಮತ್ತು ಆತನ ಗೆಳತಿಯರ ಪಾತ್ರಗಳೂ, ಅವರ ಸಂಭಾಷಣೆಗಳೂ ರಸವತ್ತಾಗಿಯೂ, ಮೇಲಿನ ಮಾತಿಗೆ ಪೋಷಕವಾಗಿಯೂ ಬರುತ್ತವೆ. ಬಿಡ್ಡಣ್ಣನು ಸಂದರ್ಭಕ್ಕೆ ತಕ್ಕಂತೆ ತಾಳುವ ಪಾತ್ರಗಳಂತೂ ಓದುಗರ ಕುತೂಹಲವನ್ನು ಕೆರಳಿಸಿ ಸೊಗಸನ್ನು ನೀಡಿವೆ. ಒಟ್ಟಾರೆ ಇಲ್ಲಿ ಬರುವ ಚಿತ್ರಗಳು ಬೇರೆ ಬೇರೆ ಎನ್ನಿಸಿದರೂ, ಅವು ಕಥೆಯ ಒಂದೇ ಸೂತ್ರಕ್ಕೆ ಹೆಣೆದುಕೊಂಡು ಬಂದು ಒಂದು ಕಾದಂಬರಿಯ ರೂಪವನ್ನು ತಾಳಿದೆ.

ಸತ್ಯಕಾಮರ, "ಪಂಚ 'ಮ'ಗಳ ನಡುವೆ" ಎಂಬುದು ೧೯೭೯ರ ವಿಶೇಷ ಗಮನವನ್ನು ಸೆಳೆಯುವ ವೈಶಿಷ್ಟ್ಯಪೂರ್ಣ ಕಾದಂಬರಿ. ಏಕೆಂದರೆ ನಮ್ಮಲ್ಲಿ 'ತಂತ್ರ' ವಿಷಯ ಜಗತ್ತನ್ನು ಚಿತ್ರಿಸುವ ಸಾಹಿತ್ಯವೇ ಕಡಮೆ. ಆದರೆ ಆ ಕೊರತೆಯನ್ನು ಇದು ತುಂಬಿಕೊಟ್ಟಿದೆ. ನಾವು ತಂತ್ರದ ಬಗೆಗೆ ಹಲವಾರು ರೋಚಕ, ರೋಮಾಂಚಕಾರಿ ಸಂಗತಿಗಳನ್ನು ಕೇಳುತ್ತೇವೆ. ಆದರೆ ಅವು ಎಷ್ಟು ಸತ್ಯ ? ಎಷ್ಟು ಸುಳ್ಳು ? ಎಂದು ಒರೆಗೆ ಹಚ್ಚುವ ಗೊಡವೆ ಹೆಚ್ಚು ಜನರಲ್ಲಿ ಕಾಣೆ. ಈ ಕೆಲಸವನ್ನು ಸತ್ಯಕಾಮರು ಯಶಸ್ವಿಯಾಗಿ ಮಾಡಿದ್ದಾರೆ. ಅವರ ಅನುಭವದ ನೆಲೆಗಟ್ಟೇ ಈ ಕಾದಂಬರಿ. ಇದೊಂದು ಅವರ ದೀರ್ಘಸ್ವಗತ. ತಾಂತ್ರಿಕರ ಜಗತ್ತನ್ನು ಬೆನ್ನಟ್ಟಿ ಸಾಧನೆ–ಸಿದ್ಧಿಗಳ ಹಾದಿಯಲ್ಲಿ ನಡೆದ ಸಾಧಕನ ನೇರ ನಿರೂಪಣೆ ಒರೆಗೆ ಹಚ್ಚಿ ನೋಡುವ ದೃಷ್ಟಿಯಿಂದಾಗಿ, ವಸ್ತುನಿಷ್ಠೆಯಿಂದ ಕೂಡಿದ ಅಪೂರ್ವ ಕೃತಿ. ವಿಚಿತ್ರ ಪರಿಸರ, ನಿಗೂಢ ವಿದ್ಯುಕ್ತ ಕ್ರಿಯೆಗಳು, ಅತೀಂದ್ರಿಯ ಶಕ್ತಿಯ ಪವಾಡಗಳು, ಭೋಗ ಬಯಸಿ ಬಂದು ಸೋತ ಸಾಧಕರ ಭಗ್ನ ಜೀವನ ಮೊದಲಾದ ಒಂದು ಅಪೂರ್ವ ಅನುಭವ ಪ್ರಪಂಚವೇ ಓದುಗನ ಕಣ್ಣಿನ ಮುಂದೆ ಹಚ್ಚಿಕೊಳ್ಳುತ್ತದೆ. ಇಂತಹ ಕಾಣ್ಕೆಗಾಗಿ ಸತ್ಯಕಾಮರು ಅಭಿನಂದನಾರ್ಹರು. ಅವರು ಹೇಳುವ ದೇವರನ್ನು ಕಡಿಮೆ ಒಪ್ಪಿದವ ಹೆಚ್ಚು ಸುಖಿ : ದುಡಿಯದವನ ಜೊತೆಗೆ ದೇವರ ಒಗೆತನವಿಲ್ಲ. ಮೌಲ್ಯಗಳು ಜೀವನದ ನೆತ್ತರ ಕುಡಿಯುವ ಜಿಗಣೆಗಳಲ್ಲಿ' ಎಂಬ ಮಾತುಗಳು ನಿಜವಾಗಿಯೂ ಶಿಲಾನಿಕ್ಷೇಪ್ಯಾಕ್ಷರಗಳು: ಅಶೋಕನ ಶಾಸನಗಳಂತೆ.

೧೯೭೯ರ ಐತಿಹಾಸಿಕ ಕಾದಂಬರಿಗಳನ್ನು ಗಮನಿಸಿದರೆ. ತೀರ ಕಡಮೆ ಸಂಖ್ಯೆಗಳಲ್ಲಿ ಕಾಣುತ್ತವೆ. ಅವುಗಳಲ್ಲಿ ಸು. ರುದ್ರಮೂರ್ತಿಶಾಸ್ತ್ರಿಯವರ 'ಅಶೋಕ'ನನ್ನು ಮೆಚ್ಚಿಕೊಳ್ಳಬಹುದು. ಇದನ್ನು ಓದಿ ಮುಗಿಸಿದ ಮೇಲೆ ಅಶೋಕನ ಉದಾತ್ತ ಚಿತ್ರವೊಂದು ಮಾಸದೇ ಓದುಗನ ಮನದಲ್ಲಿ ಉಳಿಯುತ್ತದೆಂದು ಹೇಳಬಹುದು. ಇದರಂತೆ–

ಸಂಗಮೇಶ ಸವದತ್ತಿಮಠ ಅವರ 'ಚಿನ್ನಚಿನ್ಮಯಿ'ಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇವುಗಳಲ್ಲದೆ ಕೆಲವು ಸುಂದರ ಅನುವಾದಗಳೂ ಬಂದಿವೆ. ಪಿ. ರಾಜಗೋಪಾಲ ನಾಯ್ಡು ಅವರು ಬರೆದ "ರಾಮಾನುಜರ ಪ್ರತಿಜ್ಞೆ"ಯು ಅನುವಾದ ಅಂತಹದು. ಅದನ್ನು ರಘುಸುತರು ಕನ್ನಡಕ್ಕೆ ತಂದುಕೊಟ್ಟಿದ್ದಾರೆ.

ಐತಿಹಾಸಿಕ ಕಾದಂಬರಿಗಳ ಅನುವಾದಗಳಲ್ಲದೆ ಇನ್ನಿತರ ಕೆಲವು ಅನುವಾದಗಳು ಬಂದಿವೆ. ಅವುಗಳಲ್ಲಿ ಪಿ. ಆನಂದರಾಮರ 'ಅಂಕಿತ'ವನ್ನು ಕೆ. ಆರ್. ಪದ್ಮಜೆಯವರು, ವಾಸರಡ್ಡಿ ಸೀತಾದೇವಿಯವರ 'ಅರ್ಚನ'ವನ್ನು ಯು. ಜಿ. ಭೀಮರಾವ್ ಅವರು, ರಾಮಜೀ ಉಪಾಧ್ಯಾಯರ 'ಎರಡು ಹಕ್ಕಿಗಳು' ಎಂಬುದನ್ನು ಯು. ಕೃಷ್ಣರಾವ್ ಅವರು, ರಾಜೇಂದ್ರಸಿಂಗ್ ಬೇದಿಯವರ 'ಮಲಿನ ಚಾದರ'ನ್ನು ಲಿಂಗಸೂಗೂರ ವಿಠ್ಠಲರಾವ್ ಅವರು ಕನ್ನಡಕ್ಕೆ ತಂದುಕೊಟ್ಟಿರುದುದನ್ನು ವಿಶ್ವಾಸದಿಂದ ನೆನೆಯಬೇಕು.

ಸಾಮಾಜಿಕ ಸಮಸ್ಯೆಗಳನ್ನು ಕುರಿತಾದ ಕಾದಂಬರಿಗಳನ್ನು ಉಳಿದ ಪ್ರಕಾರಗಳ ಸಂಖ್ಯೆಗಿಂತ ಹೆಚ್ಚು ಸಂಖ್ಯೆಯಲ್ಲಿ ಕಾಣಬಹುದು. ಆದರೆ ಅವುಗಳಲ್ಲಿ ಕೆಲವೇ ಗಮನಾರ್ಹತೆಯನ್ನು ಪಡೆದಿವೆ. ಅವುಗಳಲ್ಲಿ ಕೆಲವನ್ನು ಗುರುತಿಸಲು ಪ್ರಯತ್ನಮಾಡಲಾಗಿದೆ: ಬುದ್ಧಿವಂತಿಕೆ-ಮತ್ತು ತರ್ಕಗಳಿಗೆ ಇತಿಮಿತಿಯನ್ನು ಸೂಚಿಸುವ ಶ್ರೀರಂಗರ 'ಉತ್ತರವಿಲ್ಲದ ಪ್ರಶ್ನೆ' ಎಂಬ ಕಾದಂಬರಿಯನ್ನು ಸಮೀಕ್ಷಿಸೋಣ. ಇಲ್ಲಿ ಬರುವ ಮಾಧವ, ಶ್ರೀನಿವಾಸ, ರಂಗಣ್ಣ ಈ ಮೂವರು ಸಹಪಾಠಿಗಳು, ಉತ್ತಮ ಸ್ನೇಹಿತರು, ಅನೇಕ ವಿಷಯಗಳನ್ನು ಸ್ವತಂತ್ರವಾಗಿ ವಿವೇಚಿಸುವಲ್ಲಿ ಶಕ್ತಿವಂತರು. ಜೀವನದಲ್ಲಿ ಬೇರೆ ಬೇರೆ ಜೀವನ ಪಥಗಳಿಗೆ ಅಂಟಿಕೊಂಡಮೇಲೂ ಪರಸ್ಪರ ಸ್ನೇಹಕ್ಕಾಗಿ ಹಾತೊರೆಯುವ ಜೀವಿಗಳು. ಇಂತಹರ ಮಧ್ಯದಲ್ಲಿಯೂ ಒಂದು ಹೆಣ್ಣು ಬಂದು ನಡೆಯಬಾರದ ಒಂದು ಆಚಾತುರ್ಯ ನಡೆದು ಬಿಡುತ್ತದೆ. ಮಾಧು ತರ್ಕದ ನಿರ್ಣಯವನ್ನು ಅವಲಂಬಿಸಿ ಅನಿರೀಕ್ಷಿತ ಅಂತ್ಯವನ್ನು ಹೊಂದಿ ಬಿಡುವ ಕೊನೆಯ ಭಾಗ ಹೃದಯಸ್ಪರ್ಶಿಯಾಗಿ ಚಿತ್ರಿತವಾಗಿದೆ. ಆದರೆ ಮೊದಲಿನ ಕ ಭಾಗವು ಗೆಳೆಯರ ಸಂವಾದಗಳಲ್ಲಿಯೇ ಕಳೆದುಹೋಗಿ, ಸಾಮಾನ್ಯ ಓದುಗನ ಕುತೂಹಲಕ್ಕೆ, ಸಮಾಧಾನಕ್ಕೆ ನಿಲುವು ದೊರೆಯುವುದು ಕೊನೆಯಲ್ಲಿ ಮಾತ್ರ. ಲೇಖಕರು ನಡೆದ ಘಟನೆಯನ್ನೇ ಚಿತ್ರಿಸಿರುವುದರಿಂದ ಲೆಕ್ಕಣಿಕೆಯಲ್ಲಿ ಬಹಳ ಜಾಗರೂಕತೆಯನ್ನು ವಹಿಸಿರುವುದೇ ಇದಕ್ಕೆ ಕಾರಣವಿರಬಹುದು. ಒಟ್ಟಾರೆ ಇದೊಂದು ವಿಚಾರ ಪ್ರಧಾನ ನಿರ್ದಿಷ್ಟ ಸಮಸ್ಯೆಯನ್ನು ಕುರಿತಾದ ಕಾದಂಬರಿ.

ಈ ನಿಟ್ಟಿನಲ್ಲಿ ಶಾಂತಿನಾಥ ದೇಸಾಯಿಯವರ 'ಸೃಷ್ಟಿ' ಗಮನ ಸೆಳೆಯುವ ಮತ್ತೊಂದು ಕಾದಂಬರಿ. ಬದುಕಿನ ಆಶ್ಚರ್ಯಗಳನ್ನು ಕುತೂಹಲಗಳನ್ನು ಬಹು ಸೂಕ್ಷ್ಮವಾಗಿ ಇಲ್ಲಿ ನಿರೂಪಿಸಲಾಗಿದೆ. ಸುರೇಶ, ಜಮುನಾಬೇನ್, ನವನೀತ, ದೇವಧರ,

ಗೌರಿ ಶಕುಂತಲಾ —ಇವರೆಲ್ಲ ಸಮಾಜದ ಹಲವು ಹಾಸು ಹೊಕ್ಕುಗಳಲ್ಲಿ ಅಡ್ಡ ತಿಡ್ಡಗಳಲ್ಲಿ ಹೊಕ್ಕು ಅವುಗಳಲ್ಲಿ ತಮಗೆ ಹಿತವಾಗುವಂತೆ–ಬಿಡಿಸುವ ಪಾತ್ರಗಳು. ಅಥವಾ ಸಮಾಜದಲ್ಲಿಯ ಜೀವಂತ ವ್ಯಕ್ತಿಗಳು. ಅವರೆನ್ನೆಲ್ಲ ಜೋಡಿಸಿಕೊಂಡು, ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸುವಾಗ ಹೆಣ್ಣು–ಗಂಡು, ಅಧಿಕಾರ–ಕೀರ್ತಿ, ಇವು ಎಂತಹ ನೈತಿಕ ಮಟ್ಟದ ಕಣ್ಣುಮುಚ್ಚಾಲೆಯಾಡುತ್ತವೆಯಲ್ಲವೆಂದು ಹಳಹಳಿಸಬೇಕಾಗುತ್ತದೆ. ಅಷ್ಟೇ ಅಲ್ಲ, ಧರ್ಮ–ಅರ್ಥ–ಕಾಮ–ಮೋಕ್ಷಗಳಲ್ಲಿ ಕಾಮಕ್ಕೆ ಪ್ರಧಾನ ಸ್ಥಾನವೇನೋ ? ಅದನ್ನು ನೋಡುವ ದೃಷ್ಟಿ ಎಂತಹದಾಗಬೇಕೆಂಬುದರ ಬಗೆಗೆ ಏನೇನೋ ವಿಚಾರಗಳೂ ಮೂಡತೊಡಗುತ್ತವೆ. ಹೀಗೆ ಈ ಕಾದಂಬರಿಯು ಸೃಷ್ಟಿಕ್ರಿಯೆ ಹಾಗೂ ಅದರ ಸ್ಥಿತ್ಯಂತರಗಳನ್ನು ಧ್ವನಿಯುಕ್ತವಾಗಿ ನಿರೂಪಿಸುವ ಶೀರ್ಷಿಕೆಯನ್ನು ಸಾರ್ಥಕಪಡಿಸಿಕೊಳ್ಳಲು ಹವಣಿಸಿದೆ. ತಾಂತ್ರಿಕ ನವ್ಯತೆಯಿಂದ ಮುಗ್ಧಗೊಳಿಸುವ ಮಹತ್ವದ ಕೃತಿ ಇದು. ಇಲ್ಲಿ ಬರುವ ಸಾಮಾಜಿಕನ ಪಾತ್ರಗಳು ಬಾದಲ್ ಸರಕಾರ ಹಾಗೂ ಶ್ರೀರಂಗರ ನಾಟಕಗಳನ್ನು ನೆನಪಿಗೆ ತಂದುಕೊಡುತ್ತವೆ.

ಸುಂದರ ನಾಡಕರ್ಣಿಯವರ 'ಮಂದಿ ಮನೆ' ಹಾಗೂ 'ಅವರ ನಡುವೆ' ಎಂಬ ಕೊಡುಗೆಗಳು ಈ ದಿಸೆಯಲ್ಲಿ ನಮ್ಮ ಮನಸ್ಸನ್ನು ಸೆಳೆಯುತ್ತವೆ. 'ಮಂದಿ ಮನೆ'ಯು ಸಂಜೀವರಾಯ ನಿವೃತ್ತ ನೌಕರ. ವೃದ್ಧಾಪ್ಯವೇತನದ ಬಾಬತ್ತನ್ನೇ ಪರೋಪಕಾರಕ್ಕಾಗಿ ಮೀಸಲಿಟ್ಟ ಭೋಳಾಶಂಕರ. ಅಂತೆಯೇ ಆತನು ಶೋಷಕರ ಬಲಿಪಶುವಾಗುತ್ತಾನೆ. ಈತನಿಗೆ ತೀರ ವಿರುದ್ಧ ನರಸಿಂಗರಾಯ. ಎಲ್ಲ ಪಾತ್ರಗಳಲ್ಲಿ ಅತ್ಯಂತ ಮೆಚ್ಚಿಗೆ ಪಡೆಯುವ ಪಾತ್ರ ದುಗ್ಗಮ್ಮನದು. ತಂದೆಯ ಆಶಯವನ್ನು ಪೂರ್ಣಮಾಡಲು ತನ್ನ ಜೀವನವನ್ನೆ ಅಡವಾಗಿಟ್ಟವಳಿವಳು. ಇಲ್ಲಿ ಪಾತ್ರಪೋಷಣೆಯು, ಚೆನ್ನಾಗಿ ಬಂದಿದ್ದರೂ ಕಾದಂಬರಿಯ ಉದ್ದೇಶವು ಪ್ರಶ್ನಾರ್ಥಕವಾಗಿಯೇ ಉಳಿಯುತ್ತದೆಯೆಂದು ಎನ್ನಿಸದೇ ಇರದು. ಇವರ 'ಅವರ ನಡುವೆ'ಯು ಹಳ್ಳಿಯ ಜೀವನದ ವಾಸ್ತವಿಕ ಜೀವನವನ್ನು ಚಿತ್ರಿಸುವದರ ಕಡೆಗೆ ಗಮನ ಸೆಳೆಯುತ್ತದೆ. ಇಲ್ಲಿಯ ನಾಯಕ 'ರಾಜೀವ' ಮುಂಬಯಿ ಬಿಟ್ಟು ಹಳ್ಳಿಗೆ ಸ್ವತಂತ್ರವಾಗಿ ಬದುಕಲು ಬರುತ್ತಾನೆ. ಅಲ್ಲಿರುವ ಅಡ್ಡಕಳ್ಳರ ಉಪಟಳ, ತಿಪ್ಪಜತ್ಯಾಲಿಯರ ಸಾವು, ಮಗಳ ಪ್ರೇಮ ವಿವಾಹ–ಏನೆಲ್ಲ ಸಾಮಾಜಿಕ ಸಮಸ್ಯೆಗಳು ನಾಯಕನಿಗೆ ಮೇಸಿಗೆಯನ್ನು ತರಿಸುತ್ತವೆ. ಕತೆಯು ಆಕರ್ಷಕವಾಗಿದ್ದರೂ ಲೇಖಕರು ಅವಸರವಸರವಾಗಿ ಮುಕ್ತಾಯ ಮಾಡಿದರೆಂಬ ಭಾವನೆಯು ಬಾರದಿರದು. ಆದರೆ ಇವೆರಡೂ ಕಾದಂಬರಿಗಳು ಉತ್ತರ ಕನ್ನಡದ ಕಡಲತೀರದ ಪ್ರಾದೇಶಿಕ ಭಾಷೆಯ ಸುಖವನ್ನು ತೃಪ್ತಿಕರವಾಗಿ ನೀಡಿವೆ.

ಸಾಮಾಜಿಕ ಪ್ರಜ್ಞೆಯುಳ್ಳ ಮನೋವೈಜ್ಞಾನಿಕ ಕಾದಂಬರಿ 'ಮನೆ' ಎಂಬುದನ್ನು ಟಿ. ಜಿ. ರಾಘವ ಅವರು ನೀಡಿದ್ದಾರೆ. ಏಕೆಂದರೆ ಇಲ್ಲಿ ತೀರ ವೈಯಕ್ತಿಕವಾದ ಭಾವನೆಗಳು ಸಾಮಾಜಿಕವಾಗಿಬಿಡುವುದನ್ನು ಕಾಣಬಹುದು. ಅದನ್ನು ಎಳೆ ಎಳೆಯಾಗಿ ಬಿಡಿಸುವ

ಪ್ರಯತ್ನ ಇಲ್ಲಿವೆ. ಅಲ್ಲದೆ ಇಲ್ಲಿ ಅಂತರಂಗದ ಶೋಧನೆ ಹಾಗೂ ಪರಿಸರದ ಪ್ರಭಾವ ಗಳು ಸೇರವಾಗಿಮೂಡಿವೆ. ವಿಶೇಷವಾಗಿ ನಗರ ಜೀವನದ ಯಾಂತ್ರಿಕತೆಯು ಘನಘೋರ ಗಳನ್ನು ತೀರ ಸ್ವಾಭಾವಿಕವಾಗಿ ನಿರೂಪಿಸುವ ಎಡೆಗೆ ಈ 'ಮನೆ' ಒಂದು ಹೆಸರು. ನಗರ ಜೀವನದ ಮನೆಗಳ ಸಮಸ್ಯೆಯ ಅರಿವು ಯಾರಿಗಾದರೂ ಬೇಕೆನ್ನಿಸಿದರೆ ಈ ಕಾದಂಬರಿಯು ಒಂದು ಗೈಡು. ಇಲ್ಲಿ ಬರುವ ನಾಲ್ಕೈದು ಕವಿತೆಗಳನ್ನು ನೋಡಿದಾಗ ಕತೆಯ ನಡಿಗೆಗೆ ಚೇಪುವಿನ ಮೆರಗು ಬಂದಿದೆಯೋ ಎನ್ನಿಸುತ್ತದೆ. ಇದು ಅವರ ಮೊದಲ ಕಾದಂಬರಿಯಾದರೂ ಅವರು ಭರವಸೆಯನ್ನು ನೀಡಿದ್ದಾರೆ.

ಕೆ. ಎಸ್. ನರಸಿಂಹಮೂರ್ತಿಯವರ 'ಸೇಡಿನ ತೆರೆ' ರೂಪವೇ ಸರ್ವಸ್ವವೆಂದು ತಿಳಿದ ರೂಪಸಿಯು,ಬಡತನದ ಒತ್ತಡಕ್ಕೆ ದಾರಿ ಕಾಣದೆ ಕುರೂಪಿಯನ್ನು ಮದುವೆಯಾಗಿ ಅನುಭೋಗಿಸುವ ಸುಖ ದುಃಖಗಳನ್ನೂ ಪಶ್ಚಾತ್ತಾಪಗಳನ್ನೂ ನಿರೂಪಿಸುವ ಒಂದು ಓದಬಹುದಾದ ಕಾದಂಬರಿ. ಅ. ಪು. ದೇವಣ್ಣನವರ 'ಪತಂಗ' ಇಂತಹದೆ ಇನ್ನೊಂದು ತೆರನ ಸಮಸ್ಯೆಯನ್ನು ಚಿತ್ರಿಸುತ್ತದೆ. ಇಲ್ಲಿ ಒಲ್ಲದ ಗಂಡನ್ನು ಮದುವೆಯಾದ ಹೆಣ್ಣು ಕಾಲುಜಾರಿ ಪಟ್ಟಣಸೇರಿ ಮತ್ತೆ ಮತ್ತೆ ಜಾರುವುದು ಅವಳ ಸ್ವಭಾವವಾಗಿ ಬಿಡುತ್ತದೆ. ಹೀಗಾಗಿ ಭಾವನೆಗಳ ತೊಳಲಾಟ ಹೆಚ್ಚಿ ಶೈಲಿಯಲ್ಲಿ ಆದೇತನವು ಬಂದಿದೆ.

ಗ್ರಾಮೀಣ ಬದುಕಿನ ಗಾಢವಾದ ಚಿತ್ರವನ್ನು ನಾ. ಮೊಗಸಾಲೆಯವರ 'ಪಲ್ಲಟ'ವು ನೀಡಿದೆ. ಇದು ಅವರ ಎರಡನೆಯ ಕೃತಿ. ಉಳುವವನಿಗೇ ಹೊಲ ಎಂಬ ಶಾಸನದ ಪರಿಣಾಮದ ಸ್ವಾಭಾವಿಕ ಚಿತ್ರವೇ ಇದರ ವೈಹರವು. ಇಲ್ಲಿಯ ಶೈಲಿ, ನೋಡಿದರೆ ಲೇಖಕರು ಇನ್ನೂ ಒಳ್ಳೆಯ ಕೃತಿಗಳನ್ನು ನೀಡಬಹುದೆಂದು ಆಸೆಯನ್ನು ಹುಟ್ಟಿಸು ತ್ತಾರೆ.

ಅ. ರಾ. ಸೇ. ಅವರು "ಸೋಗದಿರುಳು ನಲ್ವಗಲು" ಎಂಬ ತಮ್ಮ ಮೊದಲ ಕಾದಂಬರಿಯನ್ನು ಓದುಗರ ಉಡಿಯಲ್ಲಿ ಈ ವರ್ಷ ಹಾಕಿದ್ದಾರೆ. ಇಲ್ಲಿಯ ತಿಳಿಹಾಸ್ಯ ಸೃಜನಶೀಲ ಬರವಣಿಗೆ ಆಕರ್ಷಣೀಯವಾಗಿದ್ದರೂ ಕಲ್ಪನೆಯಲ್ಲಿ ಗೋದಲವು ಕಂಡು ಬರುತ್ತದೆ. ಸಹಜವಾಗಿ ತಮ್ಮಲ್ಲಿರುವ ಸಾಮರ್ಥ್ಯವನ್ನು ಇವರು ದುಡಿಸಿಕೊಂಡರೆ ಭರವಸೆಯನ್ನು ಹುಟ್ಟಿಸಬಲ್ಲರು. ಶ್ರೀನಿವಾಸಗೌಡರ 'ದರ್ಶನ' ಅಪ್ಪನಂತೆ ಮಗನೆಂದು ಚಿತ್ರಿಸವುದೇ ದರ್ಶನ: ಆದರೆ ಲೇಖಕರ ಕೈ ಮತ್ತು ಮನಸ್ಸುಗಳು ಇನ್ನೂ ಮಾಗ ಬೇಕೇನೊ ? ಪಿ. ವಿ. ನಾರಾಯಣ ಅವರ 'ಸಾಮಾನ್ಯ' ಎಂಬುದು ಒಬ್ಬ ಅಧ್ಯಾಪಕ ಹಾಗೂ ಆತನ ವಿದ್ಯಾರ್ಥಿನಿಯ ನಡುವಿನ ಪ್ರೇಮದ ಕತೆಯನ್ನು ನಿರೂಪಿಸುತ್ತದೆ. ಹೆಣ್ಣು ಕೇವಲ ಭೋಗದ ವಸ್ತುವಲ್ಲ. ಆಕೆಗೂ ಗಂಡಿನಂತೆ ಅಪೇಕ್ಷೆಗಳಿರುತ್ತವೆ ಎಂಬುದೇ ಇಲ್ಲಿ ಸುತ್ತುವರಿಯುವ ಸಂಗತಿಗಳು: ಜೆ. ಎಂ. ಹನಸೋಗೆ ಅವರ 'ಬೆಳ್ಳಿ ಮೂಡಿತು' ಎರಡೇ ಪಾತ್ರಗಳಿರುವ ಹಳ್ಳಿಯ ಜೀವನವನ್ನು ಪ್ರತಿನಿಧಿಸುವ ಕಾದಂಬರಿ. ಪ್ರಾದೇಶಿಕ

ಶಬ್ದಕೋಶವಿರುವುದೊಂದು ಇದರ ವೈಶಿಷ್ಟ್ಯ. ವೀರಣ್ಣಗೌಡ ಯಡಳ್ಳಿಯವರ 'ಪ್ರತಿಬಿಂಬ' ಅವರ ಮೊದಲ ಪ್ರಯತ್ನದ ಪ್ರತಿಬಿಂಬವಾಗಿದೆ. ವೆಂಕಟಗಿರಿ ಕಡೇಕಾರ ಅವರ 'ಅತೃಪ್ತೆ' ವ್ಯಾಖ್ಯಾನದ ರೀತಿಯಲ್ಲಿ ಪ್ರಣಯದ ಅತೃಪ್ತತೆಯನ್ನು ನಿರೂಪಿಸಿದೆ. ಚ. ನಂ. ವಿಜಯ ಕುಮಾರರವರ 'ಬಿಲ್ವಬೆಳವಲ' ಸ್ವಾಮಿಜಿಯವರೊಬ್ಬರ ಬಗೆಗೆ ಲೇಖಕರ ವೈಯಕ್ತಿಕ ಟಿಪ್ಪಣಿಗಳಾಗಿವೆ. ಇವರದೇ ಇನ್ನೊಂದು ಕಾದಂಬರಿ 'ಇದ್ದವರ ನೋವು'. ಜಿ. ಎಚ್. ಹನ್ನೆರಡುಮಠ ಅವರ 'ಕಾಮಪ್ರೇಮಸೋಮ' ಒಂದು ಓದಬಹುದಾದ ದರ್ಶನಾತ್ಮಕ ಕಾದಂಬರಿ.

ಇವುಗಳಲ್ಲದೆ ಬಿ. ವೈಕುಂಠರಾಜು ಅವರ 'ಆಕ್ರಮಣ', ರಾಮದಾಸರ 'ಇವಳು', ತ್ರಿವಿಕ್ರಮರ 'ಕಾಮನ ಬಿಲ್ಲು', ಎಸ್. ವಿ. ಶ್ರೀನಿವಾಸರಾವ್ ಅವರ 'ಸ್ವಾತಿಹನಿ', ಜಿ. ಪಿ. ಶಿವಾನಂದರ 'ಬೆತ್ತಲಾದ ಬದುಕು', ದುರ್ಗದರಾಜೇಗೌಡರ, 'ಹಸಿರುನದಿ', ಎಂ. ಎಸ್. ಅನಂತರಾಮರ 'ವಿಶ್ವರೂಪ', ವಿಜಯತೇಲಕರ ಅವರ 'ತ್ಯಾಗ ಶಾಪವಾಯಿತು.' ಟಿ. ಕೆ. ರಾಮರಾವ್ ಅವರ 'ಸೀಳು ನಕ್ಷತ್ರ', ಬಿ. ಎಸ್. ಸ್ವಾಮಿಯವರ 'ನೀಲಾಂಜನ', ಚಿಕ್ಕೆಯ ಯವರ 'ಬೆತ್ತಲೆ', ಡಿ.ವಿ. ಉಪಾಧ್ಯಾಯರ 'ದೇವರಿಗೂ ಕಣ್ಣಿಲ್ಲ' ಮೊದಲಾದ ಕಾದಂಬರಿ ಗಳು ಹಲವಾರು ಸಾಮಾಜಿಕ ಸಮಸ್ಯೆಗಳತ್ತ ತಮ್ಮ ಬೆಳಕನ್ನು ಬೀರಿರುವುದನ್ನು ನೆನಪಿಸಿ ಕೊಳ್ಳಬಹುದು.

ಮಾಮೂಲಿಯಾಗಿ ಈ ವರ್ಷವೂ, ಕೆಲವು ಪತ್ತೇದಾರಿಗಳು ಬಂದಿದ್ದರೂ ಎಚ್. ಕೆ. ಅನಂತರಾವ್ ಅವರ 'ಅಂತ' ಮಾಮೂಲಿ ರಂಜನೆಗಿಂತಲೂ ವಿಶಿಷ್ಟವಾದ ಪರಿಣಾಮವನ್ನು ಬೀರಿದೆ. ಭ್ರಷ್ಟಾಚಾರದ ಹಲವಾರು ರೀತಿ ರಿವಾಜುಗಳಿಗೆ ಯಾವ ಗಲಾಟೆಯೂ ಇಲ್ಲದೆ ಲೇಖಕರು ಕನ್ನಡಿಯನ್ನು ಹಿಡಿದು ಸಫಲರಾಗಿದ್ದಾರೆ. ಇದರ ಅಂತ್ಯದ ಸೊಗಸಂತೂ ಮೆಚ್ಚಿಕೊಳ್ಳುವಂತಹದು.

ನಮ್ಮಲ್ಲಿ ವಿಜ್ಞಾನದ ಬಗೆಗೆ ಗಮನವನ್ನಿಟ್ಟು ಬರೆದಿರುವ ಕಾದಂಬರಿಗಳಿಗೆ ಕೊರತೆ ಬಹಳ. ಸೇವ ನಮಿರಾಜಮಲ್ಲರು ಬರೆದಿರುವ 'ತಲ್ಲಣಿಸದಿರು' ಎಂಬುದು ಈ ದಿಸೆ ಯಲ್ಲಿ ನಮ್ಮ ಗಮನವನ್ನು ಸೆಳೆದಿದೆ. ಇದು ಭೂಕಂಪ ವಿಜ್ಞಾನದ ಬಗೆಗೆ ಚಿತ್ರಿಸುವ ಕಾದಂಬರಿ. ಅಂತಹ ಒಂದು ಘಟನೆಯ ಒಸ್ನೆಲೆಯಲ್ಲಿ ಅಣ್ಣಪ್ಪ, ತಾರಾ, ಜೋಶಿ, ಶೇಷಾದ್ರಿ, ಸೇಠ, ಆತ್ಮಾರಾಮ, ಡಿಕುಞ, ಗ್ರೇಸಿ, ಜೇಕಬ್, ಮೊದಲಾದವರ ವಿವಿಧ ಮನೋಧರ್ಮಗಳನ್ನು ಚೆನ್ನಾಗಿ ಚಿತ್ರಿಸಿದೆ.

ಸಶಕ್ತವಾದ ಗದ್ಯದ ಬರವಣಿಗೆಯ ದೃಷ್ಟಿಯಿಂದ ಜಿ. ಎಸ್. ಅವಧಾನಿಯವರ 'ಕ್ವಾಸಾರ್' ಸಹೃದಯನ ಮನಸ್ಸನ್ನು ಸೆಳೆಯುತ್ತದೆ. ಸಂಪ್ರದಾಯವನ್ನೇ ನಂಬಿರುವ ಅವರ ತಂದೆತಾಯಿಗಳ ಸಂಪ್ರದಾಯವನ್ನು ವಿರೋಧಿಸುವ ಜಯರಾಂ, ತಂಗಿ ಶಮ್ಮಿ

ಗಳು ಇವರ ಸುತ್ತ ಕಥೆ ಹೆಣೆದುಕೊಂಡು ಒಂದು ನೀಳ್ಗತೆಯಾಗಿದೆ. ಆದರೆ ಇಲ್ಲಿರುವ ಸಮಸ್ಯೆಗಳನ್ನು ಇನ್ನೂ ಸಮರ್ಥವಾಗಿ ಬಿಡಿಸಬಹುದಿತ್ತು. ಇದರಂತೆ ಜಿ. ಕೆ. ಗೋವಿಂದ ರಾವ್ ಅವರ, 'ಈಶ್ವರ ಅಲ್ಲಾ' ಶೈಲಿಯ ದೃಷ್ಟಿಯಿಂದಲೂ ಅನುಭವಗಳನ್ನು ಚತುರತೆಯಿಂದ ಹಿಡಿದಿರುವ ಕಲೆಯ ದೃಷ್ಟಿಯಿಂದಲೂ ಗಮನಿಸಬಹುದಾದ ಕಾದಂಬರಿ.

ಕಾಮವು ಚತುರ್ವಿಧ ಪುರುಷಾರ್ಥಗಳಲ್ಲೊಂದು ಎಂಬುದನ್ನು ಮರೆಯುವುದು ಸರಿಯಲ್ಲ. ಆ ದೃಷ್ಟಿಯಿಂದ ಇಲ್ಲಿ ಎದ್ದು ಕಾಣುವ ಕೃತಿ ವಿಶುಕುಮಾರ ಅವರ 'ಕಾಮುಕರು'. ಕಾಮವು ಒಂದು ಹೆಣ್ಣು ಮತ್ತೆ ಒಂದು ಗಂಡಿನ ಪಿತ್ರಾರ್ಜಿತ ಆಸ್ತಿ ಎಂಬುದನ್ನು ಇದು ಸಾಧಿಸುವಂತಿದೆ. ನಿರ್ದಾಕ್ಷಿಣ್ಯವಾಗಿ ನಿಸ್ಸಂಕೋಚವಾಗಿ ಹರೆಯದ ಹುಡುಗ ಹುಡುಗಿಯರ ಮನಸ್ಸಿನ ಸ್ವರೂಪವನ್ನು ಇಲ್ಲಿ ಹೊರಗೆಡಹಲು ಪ್ರಯತ್ನಿಸಿದೆ. ಕಾಮವೇ ಬಹಳಷ್ಟು ಗಾಢವಾದರೆ ಪ್ರೀತಿಯಲ್ಲವೆ ? ಅದಕ್ಕೆ ಕಣ್ಣಿಲ್ಲವೆ? ಅಂತಃ ಕರುಣವೇ ಆ ಕಣ್ಣಲ್ಲವೆ ? ಹೀಗೆ ಇಂತಹ ಸುಂದರ ಭಾವನೆಗಳಿಗೆ ಉದ್ದೀಪನ ನೀಡಿದೆ. ಆದರೆ ಬಳಸಿರುವ ಭಾಷೆಯಲ್ಲಿ ವಿವರಣೆಯಲ್ಲಿ ಕಿಂಚಿತ್ ಸಂಯಮವನ್ನು ಉಪಯೋಗಿಸಿದ್ದರೆ ಚೆನ್ನಾಗಿತ್ತು. ಏಕೆಂದರೆ ಅನೇಕ ತರುಣರು ಮನಸ್ಸಿನ ಈ ಆಯಾಮವನ್ನೇ ಅರಿಯದೆ, ಈ ವಿಶ್ಲೇಷಣೆಯನ್ನೇ ಗಮನಿಸದೆ, ಸಂಯಮವಿಲ್ಲದ ಕಾಮುಕರಾಗಬಹುದೇನೊ ಎಂಬ ಹೆದರಿಕೆಗೆ ಸಮಾಧಾನವು ದೊರೆಯುವುದಿಲ್ಲ.

೧೯೭೯ ಅಂತರ ರಾಷ್ಟ್ರೀಯ ಮಕ್ಕಳ ವರ್ಷ. ಆ ದೃಷ್ಟಿಯಿಂದ ಸುಮತೀಂದ್ರ ನಾಡಿಗರ 'ಸಾಹಸ' ಒಂದು ಅಪರೂಪ ಕೊಡುಗೆ. ಶೀರ್ಷಿಕೆಯೇ ಸೂಚಿಸುವಂತೆ ಮಕ್ಕಳಿಗೆ ರುಚಿಸುವಂತಹ ಸಾಹಸದ ಕತೆಯಿದು. ರಿಕ್ಷಾವಾಲಾ ವಸಂತಕುಮಾರನ ಸಹಾಯದಿಂದ ರಾಜು ಮತ್ತು ಮಹೇಶ, ಹನುಮ ಮತ್ತು ಕಮಲಿಯರನ್ನು ದುಷ್ಟ ಕೂಟದಿಂದ ಬಿಡಿಸುವುದೇ ಈ ಕಾದಂಬರಿಯ ಗುರಿ. ಈ ಕಾದಂಬರಿಯಿಂದ ಕಿರಿಯ ಓದುಗರಿಗೆ ಬುದ್ಧಿಶಕ್ತಿ, ಧೈರ್ಯ, ಚಾಣಾಕ್ಷತನಗಳ ಬಗೆಗೆ ಪ್ರೇರಣೆಯು ದೊರೆಯುತ್ತದೆ. ಜೊತೆಗೆ ಇಂಥ ಕಾದಂಬರಿಗಳು ಇನ್ನೂ ಬೇಕು ಎಂಬ ತುಡಿತ ತುಡಿಯ ತೊಡಗುತ್ತದೆ. ಆ ದೃಷ್ಟಿಯಿಂದಲೂ ಇದೊಂದು ಮೈಲುಗಲ್ಲು.

ಇತ್ತೀಚೆಗೆ ಹೆಣ್ಣು ಮಕ್ಕಳು ಕಾದಂಬರಿಕಾರರಾಗಿ ಮುಂದೆ ಬಂದು ಹೆಚ್ಚಿನ ಸಂಖ್ಯೆಯಲ್ಲಿ ಬರೆಯುತ್ತಿರುವುದು ಪ್ರಗತಿಯ ಲಕ್ಷಣ. ಆ ದೃಷ್ಟಿಯಿಂದ ಇಲ್ಲಿ ಈಚನೂರು ಶಾಂತ ಅವರ 'ತಲ್ಲಣ ನೂರು ಬಗೆ', 'ಸ್ಪಂದನ', 'ಗೆಲವು', ಈಚನೂರು ಜಯಲಕ್ಷ್ಮಿಯವರ 'ಕಡಲಿನ ಒಡಲು' ವಿಜಯಶ್ರೀಯವರ 'ಸೌರಭಸೇತು' 'ತನ್ನ ಮನೆಯ ಕಿಚ್ಚು', 'ಭಾರತಿ', ವೈ. ಕೆ. ಸಂಧ್ಯಾ ಅವರ 'ಕವಣೆಗಿಟ್ಟ ಕಲ್ಲು', ಮಿಸ್ ಸಂಪತ್ ಅವರ 'ನಾಳಿನ ಬೆಳಕು', ನೀಲಾದೇವಿಯವರ 'ಬೀಸಿಬಂದ ಬಿರುಗಾಳಿ', ರೇವತಿ ಕಲ್ಯಾಣ ಅವರ 'ನೀ ಕೊಟ್ಟ ಕಾಣಿಕೆ', ಎಂ. ಪಿ. ಮಾಲತಿಯವರ 'ಹೊಸ ಹೆಜ್ಜೆ',

ಹೆಚ್. ಜಿ. ರಾಧಾದೇವಿಯವರ 'ಬಂಗಾರದ ಮೆಟ್ಟಲು', 'ಹಾಲುಕೊಳದ ಹಂಸ, ಕೆ. ಆರ್. ಪದ್ಮಜೆಯವರ 'ಸುಪ್ರಭಾತ', ಎಂ. ಪಿ. ಪದ್ಮಾ ಅವರ 'ಸ್ಮೃತಿ' ಮೊದಲಾದವುಗಳನ್ನು ನೆನಪಿಗೆ ತಂದುಕೊಳ್ಳಬಹುದು. ಅವುಗಳಲ್ಲಿ ಕೆಲವು ಕಾದಂಬರಿಗಳ ಬಗೆಗೆ ಒಂದೊಂದು ಮಾತು ಹೇಳಬೇಕು.

ಈಚನೂರು ಶಾಂತ ಅವರ 'ಸ್ಪಂದನ'ದಲ್ಲಿ ಬರೆಯಬೇಕೆಂಬ ಸ್ಪಂದನವನ್ನು ಕಾಣಬಹುದಾಗಿದೆ. ಆದರೆ ಸ್ಮಿತಾ, ಅನಿಲ, ದೀಪಾ, ಮೈಕೇಲ್‌ರಲ್ಲಿ ಪ್ರೇಮವು ಖೋಖೋ ಆಟದಂತೆ ಚಿತ್ರಿತವಾಗಿರುವುದು ಅಷ್ಟು ಸರಿಯೆನ್ನಿಸಲಾರದು. ಎಚ್. ಜಿ. ರಾಧಾದೇವಿಯವರ 'ಬಂಗಾರದ ಮೆಟ್ಟಲು' ಎಂಬುದರಲ್ಲಿ ಸುವರ್ಣ ಸಂಪನ್ನೆಯೊಬ್ಬಳು ಯೌವನದಲ್ಲಿಟ್ಟ ಆತುರದ ಹೆಜ್ಜೆಯಿಂದಾಗಿ ಇಡೀ ಜೀವನವನ್ನೆ ದುಃಖದಲ್ಲಿ ಕಳೆಯಬೇಕಾಗುತ್ತದೆ. ಅವರದೇ ಆದ 'ಹಾಲ'ಕೊಳದ ಹಂಸ'ದಲ್ಲಿ ಪತಿಯೇ ಸರ್ವಸ್ವವೆಂದು ಸಾಧಿಸಲು "ಜೈಸುತೋಷಿ ಮಾನ"ನ್ನುಪೂಜಿಸಲಾಗಿದೆ. ಎ. ಪಿ. ಮಾಲತಿಯವರ 'ಹೊಸ ಹೆಜ್ಜೆ" ಹದಿಮೂರು ವರ್ಷದ ಬಾಲಕನೊಬ್ಬನ ಬದುಕಿನ ಸುತ್ತ ರಚಿಸಿರುವ ಕತೆ. ಇಲ್ಲಿ ನಿರೂಪಣೆಯು ಸರಿಯಾಗಿ ಇರುವುದಾದರೂ ಸನ್ನಿವೇಶ ರಚನೆಯಲ್ಲಿ ಇನ್ನಷ್ಟು ಚಿಂತನೆಯು ಬೇಕೆನ್ನಿಸುತ್ತದೆ. ಈಚನೂರ ಜಯಲಕ್ಷ್ಮಿಯವರ 'ಕಡಲಿನ ಒಡಕು' ದತ್ತಕ ಪ್ರಕರಣದಿಂದಾಗಿ ಕುಟುಂಬದಲ್ಲಿ ಉತ್ಪನ್ನವಾಗಬಹುದಾದ ಸಮಸ್ಯೆಗಳನ್ನು ಬೇಸರ ಬಾರದಂತೆ ಚಿತ್ತರಿಸುವ ಕಾದಂಬರಿಯಿದು. ಆದರಂತೆ ಅದು ಆಸಕ್ತಿಯಿಂದ ಓದಿಸಿಕೊಂಡು ಹೋಗುತ್ತದೆ. ಎಂ. ಸಿ. ಪದ್ಮಾ ಅವರ 'ಸ್ಮೃತಿ'ಯಲ್ಲಿ 'ಕಥೆಯು' ಗಂಡು ಹೆಣ್ಣುಗಳ ಆಕರ್ಷಣೆಯಿಂದ ಆರಂಭವಾಗಿ ಮದುವೆಯಲ್ಲಿ ಮುಕ್ತಾಯವಾಗುತ್ತದೆ ಮಾಮೂಲಿನಂತೆ. ಆದರೆ ಈ ಕಾದಂಬರಿಯ ಭಾಷೆ ತೂಕದ್ದು, ಸಹಜವಾದದ್ದು. ಪ್ರಸಂಗಗಳನ್ನು ಲೇಖಕಿಯರು ಚೆನ್ನಾಗಿ ಜೋಡಿಸಬಲ್ಲರು. ರೇವತಿ ಕಲ್ಯಾಣ ಅವರ 'ನೀಕೊಟ್ಟ ಕಾಣಿಕೆ' ಮಕ್ಕಳಿಲ್ಲದ ಶ್ರೀಮಂತ ದಂಪತ್ತು, ಅನಾಥ ಮಗುವನ್ನು ಸಾಕಿದ ಕತೆ ಆ ಮಗು ಜಾರೆಯದೆಂದು ತಿಳಿದಾಗ ಬೇಸರಪಟ್ಟು ಮಗುವನ್ನು ವಾಪಸುಮಾಡಲು ಅದರ ತಾಯಿಯನ್ನು ಹುಡುಕಿದರೆ, ಅದು ಈ ಕಥಾನಾಯಕನದೇ ಎಂದು ತಿಳಿದು ಸಮಾಧಾನಗೊಳ್ಳುವಲ್ಲಿ ಇದರ ಮುಕ್ತಾಯ. ಹೀಗೆ ಇದರ ಕಥನ ರೀತಿಯನ್ನು ನೋಡಿದರೆ ಚಲನಚಿತ್ರಕ್ಕಾಗಿಯೋ ಈ ಕಾದಂಬರಿಯನ್ನು ರಚನೆ ಮಾಡಲಾಯಿತೇ ಎಂಬ ಶಂಕೆ ಮೂಡುತ್ತದೆ.

ಈ ಒಂದು ಅವಲೋಕನದಲ್ಲಿ ಮಹಿಳಾ ಲೇಖಕಿಯರ ದೃಷ್ಟಿ ಕಲಾತ್ಮಕವಾಗಿರುವುದೇನೋ ನಿಜ ಎಂದು ನನಗೆನ್ನಿಸಿದರೂ, ಅದಕ್ಕೆ ಅನುಭವಗಳ ಕವಚವು ಇನ್ನೂ ಬೇಕೆನ್ನಿಸುತ್ತದೆ. ಹಾಗಾದರೆ ಆ ಬೆಡಗೇ ಬೇರೆ. ಅಲ್ಲದೆ ಕಾದಂಬರಿಯನ್ನು ಬರೆಯಲು ಆರಂಭಿಸಿದಾಗಲೇ 'ಧಾರಾವಾಹಿ' ಹಾಗೂ ಚಲನಚಿತ್ರವಾಗಿ ತಮ್ಮ ಕತೆ ಮೂಡಿ ಬರಬೇ

ಕೆಂಬ ಕಲ್ಪನೆಯನ್ನು ಒಳ್ಳೆಯ ಕಾದಂಬರಿಯ ನಿರ್ಮಾಣದ ದೃಷ್ಟಿಯಿಂದ ಇಟ್ಟುಕೊಳ್ಳುವುದು ಹಿತವಲ್ಲ. ಕಾದಂಬರಿಯನ್ನು ಬರೆದು ಮುಗಿಸಿದ ಮೇಲೆ ಕಾದಂಬರಿಗಳು ಧಾರಾವಾಹಿಯಾಗಿ ಬರಲಿ, ಚಲನ ಚಿತ್ರವಾಗಲಿ. ಬೇಡವೆಂದವರ್‍ಯಾರು ?

ಈ ವರ್ಷದ ವಿಶೇಷಗಳಾದ ಗೆದ್ದ ದೊಡ್ಡಸ್ತಿಕೆ, ಹರಿಜನಾಯಣ, ಶಿಕಾರಿ ಹಾಗೂ ಪರ್ವಗಳನ್ನು ಕುರಿತು ನಾಲ್ಕು ನಾಲ್ಕು ಮಾತುಗಳನ್ನು ಈಗ ಹೇಳುವುದು ಯೋಗ್ಯ.

'ಗೆದ್ದ ದೊಡ್ಡಸ್ತಿಕೆ'–ಶಿವರಾಮ ಕಾರಂತರ ೧೯೭೯ ರ ಕೃತಿ. ಕೇವಲ ವ್ಯಕ್ತಿಗಳಿಂದ ಕೂಡಿದ ಚಿಕ್ಕ ಕತೆ. ಮೂರು ದಶಕಗಳ ಅವಧಿಯಲ್ಲಿ ನಡೆದ ಕಥಾನಕ. ಪ್ರತಿನಿಧಿಸುವ ಪರಿಸರ ಕನ್ನಡ ಪ್ರಾಂತದ ಸಾಕಷ್ಟು ದೊಡ್ಡ ತುಣಕು. ನಾಗೇಂದ್ರನು ಜೀವನ ಉಳಿಸಿದ ಹುಡುಗನ ದೊಡ್ಡ ಸಂಸಾರದಲ್ಲಿ ಒಬ್ಬನಾಗಿ ಬೆಳೆದು ಓದಿ ದೊಡ್ಡವನಾಗಿ, ಅಲ್ಲಿಯೇ ಕೆಲಸಕ್ಕೆ ಸೇರಿ, ಅದೇ ಮನೆಯ ಹೆಣ್ಣನ್ನು ಒಲಿಸಿಕೊಂಡು, ಮಿಥ್ಯಾಪವಾದಕ್ಕೆ ಗುರಿಯಾಗಿ, ಹೆದರದೆ ಮದುವೆಯಾಗುತ್ತಾನೆ. ಅನಂತರ ಹಿರಿಯರ ಕೋಪವು ಆರುವುದು. ಇದು ಕತೆಯ ಹರವು. ಇಲ್ಲಿ ರಾಜಕೀಯ ಮೌಲ್ಯಗಳು, ಸಾಮಾಜಿಕ ಭ್ರಷ್ಟಾಚಾರದ ವಿದ್ಯಮಾನಗಳು, ಅವುಗಳಿಂದ ಸಾತ್ವಿಕರಿಗೆ ಆಗುವ ಸಂತಾಪ ಮೊದಲಾದುವು ಪರಿಣಾಮಕಾರಿಯಾಗಿ ಮೂಡಿಬಂದಿವೆ. ಅದಕ್ಕೆ ತಕ್ಕಂತೆ, ಕಾರಂತರ ನಿರೂಪಣೆಯು ರೋಷಕ್ಕಿಂತ ನೋವಿನೊಡನೆ ತುಂಬಿದ್ದು ಪ್ರಭಾವಕಾರಿಯಾಗಿದೆ. ಅಲ್ಲದೆ ವಾಸ್ತವಿಕತೆಯ ಕ್ರೂರ ಚಿತ್ರವನ್ನು ಕೊಡುವಾಗಿನ ಕಟಕಿ ಮಾತುಗಳು ಒಂದು ಗಟ್ಟಿ ಆಧಾರದ ಮೇಲೆ ಬಂದಿರುವುದು ಬಹಳ ಯಶಸ್ವಿಯಾಗಿದೆ. ಅವರೇ ಹೇಳುವಂತೆ "ಬರಿಯ ಕಥೆಯನ್ನು ಉದ್ದೇಶಿಸಿ ಓದುವವರಿಗೆ ಅದು ಬೇಸರ ತರಿಸೀತೆಂಬ ಭಯ" ನಿಜ, ಆದರೆ ಇಂದಿನ ಸಾಮಾಜಿಕ ಜೀವನವು ಎಷ್ಟು ನಂಜುಗೊಂಡಿದೆಯೆಂಬುದರ ಕಳಕಳಿಯನ್ನು ನೀಡುವ ಅಮೌಲ್ಯ ಕಾದಂಬರಿ "ಗೆದ್ದ ದೊಡ್ಡಸ್ತಿಕೆ".

ಬಸವರಾಜ ಕಟ್ಟೀಮನಿಯವರ, 'ಹರಿಜನಾಯಣ'ವು ಹಲವಾರು ರೀತಿಗಳಿಂದ ಗಮನವನ್ನು ಸೆಳೆಯುವ ಈ ವರ್ಷದ ಇನ್ನೊಂದು ಕೃತಿ. ಹರಿಜನರ ಬಗೆಗೆ ತುಡಿತವಿರುವ ಈ ಲೇಖಕರು, ಅವರ ಸಮಸ್ಯೆಗಳನ್ನು ತೀರ ಪ್ರಾಮಾಣಿಕವಾಗಿ ಅರ್ಥಮಾಡಿಕೊಂಡು ಅವುಗಳನ್ನು ಹೇಗೆ ಬಿಡಿಸಬೇಕೆಂಬುದರ ಬಗೆಗೆ ಸೂಚ್ಯವಾದ ನಿರ್ದೇಶನವನ್ನು ಇಲ್ಲಿ ನೀಡಿದ್ದಾರೆ. ಹರಿಜನರ ಉದ್ಧಾರವು ಕೇವಲ ಸ್ವಾರ್ಥಹೇತುವಿನಿಂದ ಕೂಡಿದ ರಾಜಕೀಯ ಘೋಷಣೆಗಳಿಂದ ಸಾಧ್ಯವಿಲ್ಲ. ಆ ಬಗೆಗೆ ಪ್ರೇರಣೆಯು ಅವರಲ್ಲಿಯೇ ತೀವ್ರವಾಗಿ ಬೆಳೆಯಬೇಕೆಂಬುದೇ ಲೇಖಕರ ಹೆಬ್ಬಯಕೆ. ಹರಿಜನರಲ್ಲಿರುವ ತಲೆತಲಾಂತರದಿಂದ ಬಂದ ಮೌಲ್ಯಗಳು ಸರಿದು, ಜೀವನ ಮೌಲ್ಯಗಳು ಬೆಳೆದು, ಅವರೆಲ್ಲ ಸತ್ವಯುತವಾಗಿ ತಮ್ಮ ಕಾಲಮೇಲೆ ತಾವು ನಿಲ್ಲಲು ಕಲಿಯಬೇಕೆಂಬುದೇ ಈ ಕಾದಂಬ

ರಿಯ ಉದ್ದೇಶ. ಇದು ನಿಜಕ್ಕೂ ಶ್ಲಾಘನೀಯ. 'ತನ್ನರಿವೆ ತನ್ನ ಗುರು' ಎಂಬುದೇ ಈ ಹೊಸ ಆಯನದ ಮತಿತಾರ್ಥ. ಇದಕ್ಕಾಗಿ ಕಳ್ಳು, ಹೆಣ್ಣುಗಳ ಬಗೆಗೆ ಇರುವ ಕಿಲುಬಿದ ತಿಳುವಳಿಕೆಯು ಬದಲಾದಾಗ ಮಾತ್ರ ಈ ಆಯನದಲ್ಲಿ ನಿಜವಾದ ಬೆಳಕನ್ನು ಕಾಣಬಹುದಾಗಿದೆ. ಅಲ್ಲದೆ ಹರಿಜನ ವಿದ್ಯಾವಂತ ತರುಣರು, ರಾಜಕೀಯ ಧುರಂಧರರು, ಶಾಸಕರು, ಎಂತಹ ಶಿಸ್ತಿನ ಜೀವನದಲ್ಲಿ ತೊಡಗಬೇಕೆಂಬುದರ ಬಗೆಗೆ ನಿಶ್ಚಿತ ಸೂಚನೆಯು ಈ ಕಾದಂಬರಿಯಲ್ಲಿದೆ. ಆದ್ದರಿಂದ ಈ ಕೃತಿಗೆ ಅಪೂರ್ವವಾದ ಸ್ಥಾನವಿದೆ.

ಈ ವರ್ಷದ ಮತ್ತೊಂದು ಮಹತ್ವದ ಕಾದಂಬರಿ ಯಶವಂತ ಚಿತ್ತಾಲರ 'ಶಿಕಾರಿ'. ಇದು ಅವರ ಎರಡನೆಯ ಯಶಸ್ವಿ ಕಾದಂಬರಿ. ನಾಗಪ್ಪ ಇಲ್ಲಿಯ ಕೇಂದ್ರ ವ್ಯಕ್ತಿ. ಇಲ್ಲಿ ಆತನ ಸುತ್ತುಮುತ್ತಲೇ ಕಥೆಯ ಹರವು ಬೆಳೆದಿದೆ. ಹಿಂದೆಯೂ, ಇಂದೂ, ಮುಂದೆಯೂ, ಮನುಷ್ಯನ ಸಾಮಾಜಿಕ ರಾಜಕೀಯ ರೀತಿ–ನೀತಿಗಳನ್ನು ಅವಲಂಬಿಸಿ, ತಾನೇ ತನ್ನ ಯಾತನೆಗಳಿಗೆ ಕಾರಣನಾಗುತ್ತಾನೆಂಬುದನ್ನು, ಅಲ್ಲಿಯ ವಿಡುಕಾಟ. ಅನಂತರ ಸ್ವಯಂ ಪ್ರೇರಣೆಯ ಬದುಕಿನ ಗಟ್ಟಿತನದ ನಿಲುಗಡೆ, ಇವೆಲ್ಲ ಅರ್ಥಪೂರ್ಣವಾಗಿ ಶಿಕಾರಿಯಲ್ಲಿ ನಿರೂಪಿತವಾಗಿವೆ. ಇನ್ನೂ ಸಿಕ್ಕಿರದ ಅಣ್ಣ ತಂಗಿಯರನ್ನು ಹುಡುಕಿ ಹೊರಟ ನಾಗಪ್ಪ ಹಿತಾಸಕ್ತಿಗಳಿಗೆ ಕಟ್ಟುಬಿದ್ದು ಸುಳ್ಳಾದ ಎಲ್ಲ ಸಂಬಂಧಗಳನ್ನು ಕಡಿಯುತ್ತ ಆ ಮುಖಾಂತರವೇ ಗಟ್ಟಿಯಾಗುತ್ತ ನಡೆದ ರೀತಿ ಸಹಜ ರೀತಿಯಲ್ಲಿ ಚಿತ್ರಿತವಾಗಿದೆ. ಕೆಲಸದಲ್ಲಿ ಗಟ್ಟಿಗನಾದ ನಾಯಕನ ಸುತ್ತ ಅವಾಸ್ತವ ಆರೋಪಗಳ ಎಳೆಗಳು ಬಿಗಿಯುತ್ತ ಹೋದಂತೆ, ಆತನ (ನಾಗಪ್ಪನ) ಗಂಟಲು ಕಟ್ಟುತ್ತದೆ. ಅನಂತರ ಅವರಲ್ಲಿ ತನ್ನ ವ್ಯಕ್ತಿತ್ವಶೋಧನೆಯಾಗಿ ಮನಸ್ಸಿನ ಗಟ್ಟಿಗತನ ಮೂಡುತ್ತದೆ. ಆಗ ಅವನಲ್ಲಿ ಧೈರ್ಯ ಮರಳಿ ಬದುಕುತ್ತಾನೆ–ಇದುವೇ ಪುರುಷಾರ್ಥದ ಸಾಧನೆ. ಹೀಗೆ ನಾಗಪ್ಪನ ವ್ಯಕ್ತಿತ್ವದ ರೂಪಾಂತರ ಪ್ರಬುದ್ಧ ರೀತಿಯಲ್ಲಿ ಇಲ್ಲಿ ಚಿತ್ರಿತವಾಗಿದೆ. ಜೊತೆಗೆ ಕಥಾತಂತ್ರವು ಸಸ್ಪೆನ್ಸ್ ರೀತಿ ಆಗಿರುವುದರಿಂದ ಭಾರವೆನಿಸದೆ ಓದಿಸಿಕೊಂಡು ಹೋಗುತ್ತದೆ. ಅದರಲ್ಲಿ ಬರುವ ವಿಚಾರಣೆ ನಡೆಸುವ ಸನ್ನಿವೇಶಗಳು ಒಂದಕ್ಕಿಂತ ಒಂದು ಪ್ರಭಾವಶಾಲಿಯಾಗಿವೆ. ಅಲ್ಲದೆ ಆಗಾಗ ಬರುವ, ಒಂದೂ ಮಗನೆ, ಎರಡು ಮಗನೆ, ಎಂಬ ಮಾತುಗಳು ಕತೆ ಒದಿ ಮುಗಿಸಿದ ಮೇಲೂ, ಅದರ ಸೊಗಸು ನೆನಪಾಗಿ ನಗೆಯ ಎಸಳುಗಳು ತುಟಿಯ ಮೇಲೆ ಮಿಸುಗುತ್ತವೆ. ಒಟ್ಟಾರೆ ಸ್ವಹಿತ ರಕ್ಷಣೆಯನ್ನು ಸಾಧಿಸುವಲ್ಲಿ ಓದುಗರಿಗೆ ಶಿಕಾರಿಯು ಪ್ರೇರಣೆಯನ್ನು ನೀಡಿ ಯಶಸ್ಸನ್ನು ಸಾಧಿಸಿದೆ. ಅಷ್ಟೇ ಅಲ್ಲ, ಒಂದು ಹೊಸ ಅನುಭವದ ಪ್ರಪಂಚವನ್ನು ನಿರ್ಮಿಸುವ ಈ ಕಾದಂಬರಿ ಕನ್ನಡ ಸಾಹಿತ್ಯದ ಕಾದಂಬರಿ ಸಾಹಿತ್ಯಕ್ಕೆ ಒಂದು ಅಪರೂಪ ಘಟನೆ. ಅಮಾನವೀಯ ಜಗತ್ತಿನ ಯಶಸ್ವೀ ಚಿತ್ರಣ.

ಕೊನೆಯದಾಗಿ ವಿವೇಚಿಸಬೇಕಾದ ಕೃತಿ, ಎಸ್. ಎಲ್. ಭೈರಪ್ಪನವರ 'ಪರ್ವ'. ಇದು ೧೯೭೯ ರ ಅಪೂರ್ವ ಪರ್ವ. ಮಹಾಭಾರತವನ್ನು ಸಾಮಾಜಿಕ ಆಯ ಕಟ್ಟಿನ ಮೇಲೆ, ಸಹಜ ದೃಷ್ಟಿಯನ್ನು ಅವಲಂಬಿಸಿ ವೀಕ್ಷಿಸಲಾದ ಕೃತಿಯು ಇದು. ಅವರೇ ಹೇಳಿದಂತೆ ಇಲ್ಲಿ ಬರೆದಿರುವುದು, ಭಾರತದ ಪಾತ್ರದ ಕಥೆಗಳನ್ನಲ್ಲ. ಮಾನವ ಅನು ಭವದ ವಿವಿಧ ಮುಖ, ರೂಪ. ಮಾನವ ಸಂಬಂಧದ ಸ್ವರೂಪಗಳ ವಿವೇಚನೆಯನ್ನು ಅದು ಸಶ್ಯಕ್ತವಾದ ಕಥನ ಶೈಲಿಯಲ್ಲಿ ನಿರೂಪಿತವಾಗಿದೆ. ಮಹಾಭಾರತದ ಕಥೆಯನ್ನು ಮೇಲಿನ ರೀತಿಯಲ್ಲಿ ವೀಕ್ಷಿಸುವಾಗ ಐತಿಹಾಸಿಕ ಪ್ರಜ್ಞೆಯನ್ನು ಇಟ್ಟುಕೊಳ್ಳಲಾಗಿದೆ. ಅಂತೆಯೇ ಅನೇಕ ಅಲೌಕಿಕ ಘಟನೆಗಳನ್ನೆಲ್ಲ ತೆಗೆದುಹಾಕಿರುವುದು. ಅಂತೆಯೇ ಸುಂದರ ಮಾರ್ಪಾಟುಗಳಿಗೆ ಅವಕಾಶ ಒದಗಿಬಂದಿದೆ. ಅವುಗಳಲ್ಲಿ, ಪಾತ್ರಗಳ ವಯಸ್ಸು, ಕುಂತಿ ಕರ್ಣನನ್ನು ದುರ್ವಾಸರಿಂದ ಪಡೆದದ್ದು, ಬಕಾಸುರನ ವಧಾಪ್ರಸಂಗ, ದ್ರೌಪದಿ ಯರ ಅನುಭೋಗವನ್ನು 'ಹಣ್ಣು' ಎಂದಲ್ಲಿ ಹೆಣ್ಣೆಂದೇ ಐವರೂ ಪಡೆಯುವ ರೀತಿ, ಪ್ರಸಂಗಕ್ಕೆ ತಕ್ಕಂತೆ ಸರದಿಯ ಅವಕಾಶದಲ್ಲಿ ಬದಲಾವಣೆ, ದುರ್ಯೋಧನ ಅರ್ಜುನರು ದ್ವಾರಕೆಗೆ ಯುದ್ಧಕ್ಕೆ ಸಹಾಯ ಬೇಡಲು ಹೋದ ಪ್ರಸಂಗ–ಹೀಗೆ ಅನೇಕ ಕಡೆ ವಾಸ್ತ ವತೆಯನ್ನು ಮೂಡಿಸಲು ಮಾಡಿಕೊಂಡ ಬದಲಾವಣೆಗಳು ಸಮರ್ಪಕವಾಗಿವೆ. ನೈಜ ಕಲ್ಪನೆಗೆ ಅವಕಾಶನೀಡುವ ಪ್ರೇರಕಗಳಾಗಿವೆ. ಆದರೆ ಈ ಬಗೆಯನ್ನು ಹಳೆಯ ನಂಬಿಕೆಗಳಲ್ಲಿ ವಿಶ್ವಾಸವಿಟ್ಟವರು ನಂಬಲಿಕ್ಕಿಲ್ಲ, ಒಪ್ಪಲಿಕ್ಕಿಲ್ಲ. ಇಲ್ಲಿ ನಿರೂಪಿತವಾದ ಗಂಡು ಹೆಣ್ಣಿನ ಸಮಸ್ಯೆಗೆ ಮಾನವೀಯತೆಯ ಮೆರಗು ಬಂದಿದೆ. ಮನೆ ನಿಲ್ಲಬೇಕಾದರೆ ಸಂತತಿ ಬೇಕು. ಅದಕ್ಕೆ ಅನಿವಾರ್ಯಪ್ರಸಂಗದಲ್ಲಿ ನಿಯೋಗ ಪದ್ಧತಿಯು ಪಾಪವಲ್ಲ. ಇಂಥ ಅನೇಕ ವಿಷಯಗಳನ್ನು ಮನೋವಿಜ್ಞಾನದ ಅಂಶಗಳಿಂದ ಗಮನಿಸಲಾಗಿರುವುದು ಮೆಚ್ಚಿಗೆಯದು. ಅಂತೆಯೇ ಸಾಮಾನ್ಯವಾಗಿ ಇಲ್ಲಿಯ ಎಲ್ಲ ಪಾತ್ರಗಳಿಗೆ ಚೈತನ್ಯ ಬಂದಿದೆ. ಒಟ್ಟಾರೆ ಪರ್ವವು ಪುರಾಣದ ಎಲ್ಲ ಕಥೆಗಳನ್ನು ನೆಲದ ಕಥೆಗಳೆಂದು ಮತ್ತೊಮ್ಮೆ ವಿಶ್ಲೇಷಿಸಲು ಆದೇಶ ನೀಡುವ ಒಂದು ಪರ್ವವನ್ನೇ ಆರಂಭಿಸಿದೆ. ಒಂದು ಗಟ್ಟಿ ಮಾತು ಹೇಳಬೇಕೆಂದರೆ ನಮ್ಮ ಮೌಲ್ಯಗಳು ತೀರ ಪ್ರಾಮಾಣಿಕವಾಗಿರಬೇಕೆಂಬುದರ ಚಿಂತನೆಯಿಂದ ಕೂಡಿದ ಕುತೂಹಲಕಾರಿಯಾದ ಪ್ರಯತ್ನವೇ ಭೈರಪ್ಪನವರ ಈ ಬೃಹತ್ ಕಾದಂಬರಿ.

ಈವರೆಗೆ ಲೆಕ್ಕಕ್ಕೆ ತೆಗೆದುಕೊಂಡವುಗಳೆಲ್ಲ ಪುಸ್ತಕ ಪ್ರಕಾಶನ ಸಂಸ್ಥೆಗಳಿಂದ ಪ್ರಕಟ ವಾದ ಕಾದಂಬರಿಗಳು. ಇವುಗಳಲ್ಲದೆ ಅನೇಕ ಪತ್ರಿಕೆಗಳೂ ಕಾದಂಬರಿಗಳನ್ನು ಪ್ರಕಟಿಸುವ ವ್ಯವಸ್ಥೆಯನ್ನು ಇಟ್ಟುಕೊಂಡು ಗಮನಾರ್ಹವಾದ ಸೇವೆಯನ್ನು ಕಾದಂಬರಿ ಕ್ಷೇತ್ರದ ಬೆಳವಣಿಗೆಗಾಗಿ ಸಲ್ಲಿಸಿವೆ ಎಂಬುದನ್ನು ಇಲ್ಲಿ ನೆನೆಯಬೇಕು. ಅವುಗಳಲ್ಲಿ ಕೆ. ವಿ. ತಿರು ಮಲೇಶ ಅವರ 'ಆರೋಪ', ವಿಜಯ ಸಾಸನೂರ ಅವರ 'ಸಾಮ್ರಾಟ್', ಎಂ. ಎಸ್. ಕೆ. ಪ್ರಭು ಅವರ 'ಬೆತ್ತಲೆ ಅರಸನ ರಹಸ್ಯ', ವಿಶಾಲಾಕ್ಷಿ ದಕ್ಷಿಣಾಮೂರ್ತಿಯವರ 'ಭ್ರಮೆಯ

ಬದುಕಿನ ಸುತ್ತ', ಉಷಾ ನವರತ್ನರಾಮ ಅವರ 'ಜೀವನಾ-ಪಾವನಾ,' ನಾ. ಡಿಸೋಜಾ ಅವರ 'ಇಕ್ಕೇರಿಯಲ್ಲಿ ಕ್ರಾಂತಿ' ಮೊದಲಾದುವುಗಳನ್ನು ಇಲ್ಲಿ ಉದಾಹರಿಸಬಹುದು.

ಸಮೀಕ್ಷೆಯ ದೃಷ್ಟಿಯಿಂದ ಮರು ಮುದ್ರಣವಾಗಿರುವ ಕಾದಂಬರಿಗಳನ್ನು ಕುರಿತು ಒಂದು ವಾಕ್ಯ ಹೇಳಲೇಬೇಕು. ಇಂದು ಹೊಸ ಕಾದಂಬರಿಕಾರರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದು ಅವರ ಪುಸ್ತಕಗಳೇ ಹೆಚ್ಚು ಅಚ್ಚಾಗುತ್ತಿರುವ ಕಾಲ. ಇಂಥ ಸ್ಥಿತಿಯಲ್ಲಿ ಹಳೆಯ ಪುಸ್ತಕಗಳು ಮರು ಮುದ್ರಣ ಪಡೆಯುವುದೆಂದರೆ ಅದೊಂದ ಪುಣ್ಯವೇ ಸರಿ. ಹಾಗೇನಾದರೂ ಮರು ಮುದ್ರಣ ಕಂಡರೆ ಅದಕ್ಕೆ ಕಾರಣ ಓದುಗರ ರಸಿಕತೆ. ಅದರಂತೆ ಇತ್ತೀಚೆಗೆ ರಾಜ್ಯ ಗ್ರಂಥಾಲಯದವರು ಗ್ರಂಥಗಳ ಎಲ್ಕ್ ಪರ್ಚೇಜ್ ಮಾಡುವ ವಿಧಾನವೊಂದು. ಹೀಗಾಗಿ ಈ ಸಲ ಗಳಗನಾಥರ 'ಮರಾಠರ ಅಭ್ಯುದಯ', 'ವೆಂಕಟೇಶ ಮಹಾತ್ಮೆ,' ಶಿವರಾಮ ಕಾರಂತರ 'ಚೋಮನದುಡಿ', 'ಮೂಕಜ್ಜಿ'ಯ ಕನಸುಗಳು, 'ಅದೇ ಊರು ಅದೇ ಮರ' 'ಕನ್ನಡಿಯಲ್ಲಿ ಕಂಡಾತ' ಮೊದಲಾದುವು. ವಿ.ಕೃ. ಗೋಕಾಕರ ಬೃಹತ ಕಾದಂಬರಿ 'ಸಮರಸವೇ ಜೀವನ'ದ ಭಾಗಗಳು, ಶಾಂತಿನಾಥದೇಸಾಯಿ ಅವರ 'ಮುಕ್ತಿ', ಅ.ನ.ಕೃ. ಅವರ 'ನಗ್ನಸತ್ಯ', 'ಶನಿಸಂತಾನ', 'ಸಂಜೆಗತ್ತಲು', ಮೊದಲಾದುವು ಮರು ಮುದ್ರಣವನ್ನು ಈ ವರ್ಷ ಪಡೆದಿವೆ. ಅಲ್ಲದೆ 'ಕಸ್ತೂರಿ'ಯು ಶ್ರೇಷ್ಠವಾದ ಕಾದಂಬರಿಗಳನ್ನು ಸಂಕ್ಷಿಪ್ತಗೊಳಿಸಿ ಪ್ರಕಟಿಸಿ ಸಹೃದಯ ಲೋಕವನ್ನು ಸಂತೋಷಗೊಳಿಸುತ್ತಿರುವುದನ್ನು ನಾವಿಲ್ಲಿ ಕೃತಜ್ಞತೆಯಿಂದ ನೆನೆಯಬೇಕು.

ಈ ವರೆಗೆ ೧೯೭೯ರ ಕಾದಂಬರಿ ಪ್ರಪಂಚವನ್ನು ವಿಹಂಗಮನೋಟದಿಂದ ವೀಕ್ಷಿಸಿದ ಮೇಲೆ, ೧೯೭೯ ನಿರಾಶಾದಾಯಕವೇನಲ್ಲವೆಂದು ಧಾರಾಳವಾಗಿ ಹೇಳಬಹುದು. ಈ ವರ್ಷದ ಅನೇಕ ಗಮನಾರ್ಹ ಕಾದಂಬರಿಗಳ ಬಗ್ಗೆ ಅಲ್ಪಸ್ವಲ್ಪ ಈಗಾಗಲೇ ಹೇಳಲಾಗಿದೆ. ಈ ವರ್ಷವೂ ಹಳಬರಲ್ಲಿ ಕೆಲವರು ಮಹತ್ವಪೂರ್ಣ ಕೃತಿಗಳನ್ನು ನೀಡಿದ್ದಾರೆ. ಹೊಸಬರಲ್ಲನೇಕರು ತಮಗೆ ಒಳ್ಳೆಯ ಭವಿಷ್ಯವಿದೆ ಎಂಬುದನ್ನು ಸಿದ್ಧಪಡಿಸಿದ್ದಾರೆ.

ಕೊಡಗಿನ ಹಾಲೇರಿ ರಾಜರು
ಮತ್ತು
ಕನ್ನಡ ಭಾಷೆಯ ಬಳಕೆಯ ಪ್ರಯತ್ನಗಳು

—ವಿ. ಜಿ. ಮಾರೀಹಾಳ

"......ದೊಡ್ಡ ವೀರಪ್ಪ ಒಡೆಯರು ಮೊಂದು ಅರಮನೆಯನ್ನು ಕಟ್ಟಿಸಿ, ಅದರ ಸುತ್ತ ಕಂದಕ ಮುಂತಾಗಿ ತೆಗಿಸಿ, ಅವರನ್ನು ಅಲ್ಲಿ ಮಡಗಿ ಅದಕ್ಕೆ ನಂಜರಾಜ ಪಟ್ಟಣಯೆಂಬ ಹೆಸರು ಮಡಗಿ ಅವರ ಮೈಗಾವಲಿನ ಬಗ್ಗೆ ಯೇಳುನೂರು ಜನ ಕೊಡವರನ್ನು ನೇಮಿಸಿಕೊಟ್ಟು ಅವರು ಹೇಳಿದ ಮೇಲೆ ಹೇರಳ ದ್ರವ್ಯ ವೆಚ್ಚಾ ಮಾಡಿ ವೀರಭದ್ರು ದೇವಸ್ಥಾನವನ್ನು ಕಟ್ಟಿಸಿ ಅದರಲ್ಲಿ ವೀರಭದ್ರುದೇವರ ಪ್ರತಿಷ್ಠೆ ಮಾಡಿದರು."

—ರಾಜೇಂದ್ರನಾಮೆ

I ಪೀಠಿಕೆ :

ಕನ್ನಡ ನಾಡಿನಲ್ಲಿ ಬದುಕಿಹೋದ ಅನೇಕ ರಾಜಮನೆತನಗಳಲ್ಲಿ ಕೊಡಗಿನ ರಾಜ ಮನೆತನವೂ ಒಂದು. ಅವರನ್ನು 'ಹಾಲೇರಿ ರಾಜಮನೆತನ'ಎಂದು ಇತಿಹಾಸಕಾರರು ಕರೆದಿದ್ದಾರೆ. ಕ್ರಿ.ಶ. ೧೬೦೦ ರಿಂದ ಕ್ರಿ. ಶ. ೧೮೩೪ರ ವರೆಗೆ ಈ ರಾಜಮನೆತನವು ತನ್ನ ರಾಜ್ಯಭಾರವನ್ನು ಕೊಡಗಿನಲ್ಲಿ ನಿತ್ವರಿಸಿದೆ. ಅಂದಿನ ಭಾರತೀಯ ರಾಜಮನೆತನಗಳು ತಮ್ಮ ಅನುದಿನದ ರಾಜ್ಯಭಾರದಲ್ಲಿ ಆಸ್ಥಾನ ಭಾಷೆಯನ್ನು ಸ್ವೀಕರಿಸುವಲ್ಲಿ ಒಂದೇ ರೀತಿಯಲ್ಲಿ ನಡೆದುಕೊಂಡಿಲ್ಲ. ಕಿತ್ತೂರಿನ ಅರಸರು ಮರಾಠಿ (ಮೋಡಿಲಿಪಿ). ಪರ್ಶಿಯನ್ ಭಾಷೆಗಳಲ್ಲದೆ, ಕೆಲವು ಸಂದರ್ಭಗಳಲ್ಲಿ ಇಂಗ್ಲೀಷಿನಲ್ಲಿ ಪತ್ರ ವ್ಯವಹರಿಸಿದ್ದಾರೆ. ಕೆಳದಿ ಸ್ವಾದಿಯವರು ಪ್ರಾಮುಖ್ಯವಾಗಿ ಕನ್ನಡ, ಸಂಸ್ಕೃತ, ಪೋರ್ತುಗೀಜ್ ಭಾಷೆಗಳಲ್ಲಿ ತಮ್ಮ ವ್ಯವಹಾರಗಳನ್ನು ನಡೆಸಿದಂತಿದೆ.

ಆದರೆ, ಕೊಡಗಿನ ರಾಜಮನೆತನವು* ಸಂಪೂರ್ಣವಾಗಿ ಕನ್ನಡ ಭಾಷೆಯನ್ನೇ ಆಸ್ಥಾನ ಭಾಷೆಯನ್ನಾಗಿ ಮಾಡಿಕೊಂಡಿದೆ. ಈ ಭಾಷಾ ಉಪಯೋಗದ ದಾರಿಯಲ್ಲಿ ಬಂದ ತೊಡಕೆಂದರೆ ಪಾರಿಭಾಷಿಕ ಪದಗಳು. ಅವನ್ನು ಅವರು ಬಿಡಿಸಿದ ರೀತಿ ಒಂದು ದೃಷ್ಟಿಯಲ್ಲಿ ಕ್ರಾಂತಿಕಾರಿ. ಅಂದು ಪ್ರಚಲಿತವಿದ್ದ ಭಾಷೆಗಳಿಂದ ಕನ್ನಡಕ್ಕೆ ಸಾಕಷ್ಟು ಶಬ್ದಗಳನ್ನು ಎರವಲಾಗಿತಂದು ಅವು ನಮ್ಮವುಗಳಾಗಿ ಬೆಳೆಯುವಂತೆ ಅವುಗಳಿಗೆ ಚಲನೆಯನ್ನು ಕೊಟ್ಟಿದ್ದಾರೆ. ಈ ಶಬ್ದಗಳು ಇಂದಿಗೂ ನಡೆಯುವ ನಾಣ್ಯಗಳಾಗಿವೆ. ಅವುಗಳ ಉಪಯೋಗ ಕೇವಲ ರಾಜರಿಗೆ, ರಾಜ್ಯದಾಡಳಿತಕ್ಕೆ ಸೀಮಿತವಾಗದೆ, ಜನಸಾಮಾನ್ಯರ ಸ್ತರಕ್ಕೂ ಅವು ನಿಲುಕಿರುವುದು ಒಂದು ಅಗಾಧ ವಿಚಾರವಾಗಿದೆ.

ಕೊಡಗು ಜನತೆ ಮಾತನಾಡವುದು 'ಕೊಡವ' ಭಾಷೆಯಾಗಿದ್ದರೂ ರಾಜಭಾಷೆ, ಬರೆಹದ ಭಾಷೆ, ಸಂಪರ್ಕದ ಭಾಷೆಯಾಗಿ ಅಲ್ಲಿ ಕನ್ನಡವು ತಲೆ ಎತ್ತಿದ್ದು-ಐತಿಹಾಸಿಕ ಘಟನೆಯಾಗಿ ನಿಂತುಕೊಂಡಿದೆ. ಕನ್ನಡವನ್ನು ನಮ್ಮ ಜೀವನದ ಎಲ್ಲ ಸ್ತರಗಳಿಗೂ ಹೊಂದಿಸಲು ನಡೆದಿರುವ ಇಂದಿನ ಪ್ರಯತ್ನಗಳಿಗೆ ಈ ರಾಜರ ಪ್ರಯತ್ನಗಳು ಬುನಾದಿಗಳಂತೆ ಸಲ್ಲುತ್ತವೆ. ಅಲ್ಲಿ ಬರುವ ಅನೇಕ ಶಬ್ದಗಳಲ್ಲಿ–ಪರ್ಶಿಯನ್ ಎಷ್ಟು? ಅರ‍್ಯಾಬಿಕ್ ಎಷ್ಟು? ಪೋರ್ತುಗೀಜ್ ಎಷ್ಟು? ಇಂಗ್ಲೀಷ್ ಎಷ್ಟು? ಮತ್ತೆ ಬೇರೆ ಭಾಷೆಗಳಿಂದ ಬಂದ ಶಬ್ದಗಳೆಷ್ಟು?

ಕನ್ನಡ ಭಾಷೆಗೆ ಅಂದಿನ ಯುಗದಲ್ಲಿ ರಾಜಭಾಷೆಯ ಶಕ್ತಿಯನ್ನು ಕೊಡುವಲ್ಲಿ ಕೊಡಗಿನ ರಾಜರು ಕೃತಕೃತ್ಯರಾದರೆಂದೇ ಹೇಳಬೇಕು. ಅವರ ಆಸ್ಥಾನಕ್ಕೂ-ಬ್ರಿಟಿಷ್ ಅಧಿಪತ್ಯಕ್ಕೂ ನಡೆದ ಅನೇಕ ಪತ್ರವ್ಯವಹಾರಗಳು ಅಂದು ಕನ್ನಡದಲ್ಲಿ ನಡೆದದ್ದು-ಬಹಳ ಅಭಿಮಾನದ ವಿಷಯವೇ ಆಗಿದೆ.

ತಾವು ಕಟ್ಟಿಸಿದ ಅನೇಕ ಕಟ್ಟಡಗಳು 'Indo-Saracemic Style' ರೀತಿಯಲ್ಲಿ ಬಂದಂತೆ, ತಮ್ಮ ಕನ್ನಡ ಭಾಷೆಗೂ ವಿವಿಧ ಭಾಷೆಯ ಸಂಪರ್ಕವನ್ನು ಕಲ್ಪಿಸಿ, ಈ ಹಿಂದಿನ ಮಡಿವಂತಿಕೆಯನ್ನು ಕಳಚಿದುದು ಹೊಸಗನ್ನಡದ ಉದಯಕ್ಕೆ ಕಾರಣವಾಯಿತೇನೋ? ಇಂಗ್ಲೀಷ ಭಾಷೆಯ ಪ್ರಭುತ್ವ ಸಾಕಷ್ಟು ಬೇರುಬಿಟ್ಟು. ಪರ್ಶಿಯನ್‌ಭಾಷೆಯ ಹಿನ್ನೆಲೆ ಇನ್ನೂ ಅಳಿಸದಿದ್ದ ಕಾಲದಲ್ಲಿಯೇ ಕನ್ನಡಕ್ಕಾಗಿ ನಡೆದ ಈ ಪ್ರಯತ್ನ ವಿಶೇಷತೆಯನ್ನು ಪಡೆದಿದೆ.

ಕನ್ನಡದ ಈ ಹಿಂದಿನ ಭಾಷಾ ಬರೆವಣಿಗೆಯ ಪ್ರಯೋಗಗಳನ್ನು ದೂರೀಕರಿಸಿ, ಪರ್ಶಿಯನ್, ಇಂಗ್ಲೀಷ್ ಭಾಷೆಗಳ ವಾಕ್ಯರಚನಾ ಪದ್ಧತಿ, ಶಬ್ದಗಳ ಪ್ರಯೋಗಗಳನ್ನು ಧಾರಾಳವಾಗಿ ಮಾಡಿದುದು ಈಗ ಅಭ್ಯಾಸಯೋಗ್ಯವಾದ ವಿಷಯವಾಗಿದೆ. ಸಾಕಷ್ಟು

---

* ಕೊಡಗಿನ ರಾಜರು ಕಾಶಿಯಲ್ಲಿರುವ ಜಂಗಮವಾಡಿ ಮಠಕ್ಕೆ ಆಶ್ರಯ ಕೊಟ್ಟರು. ಅನೇಕ ಕಾಗದ ಪತ್ರಗಳು ಅಂದಿನ ಕೆಲವು ರಾಜರ ಭಾವಚಿತ್ರಗಳು, ಕೆಲವು ಸಮಾಧಿಗಳು ಈ ಮಠದಲ್ಲಿ ದೊರೆಯುತ್ತವೆ.

ಅಂದಿನ ಸಾಮಾಜಿಕ ಹಿನ್ನೆಲೆಯ ಅಭ್ಯಾಸವಿದ್ದವರಿಗೆ ಈ ಭಾಷಾ–ಪದ-ಪ್ರಯೋಗದ ಪ್ರಯತ್ನವು ಸಂತಸವನ್ನುಂಟು ಮಾಡದಿರಲಾರದು.

II ಚರಿತ್ರೆಗಳು :

ಕೊಡಗಿನ ರಾಜರ ಚರಿತ್ರೆಗಳು ಮೂಲ ಕನ್ನಡದಲ್ಲಿ ಬರೆಯಲ್ಪಟ್ಟಿವೆ. ಅಲ್ಲಿ ಬರುವ ವಾಕ್ಯರಚನಾಪದ್ಧತಿ, ಪದಪ್ರಯೋಗ, ವಿವಿಧ ಭಾಷೆಗಳಿಂದ ಎರವಲು ತಂದ ಶಬ್ದಗಳು ಮುಂತಾದವು ತಮ್ಮ ಬಳಕೆಯಿಂದ ವಿಶೇಷತೆಯನ್ನು ಪಡೆದಿವೆ. ಈ ರಾಜರಿಗೆ ಸಂಬಂಧಿಸಿದ ಚಾರಿತ್ರಿಕ ಸಾಹಿತ್ಯದಲ್ಲಿ 'ರಾಜೇಂದ್ರನಾಮೆ' ಮಹತ್ವದ ದಾಖಲೆಯಾಗಿದೆ.

ಅದರಲ್ಲಿ ಒಂದು ಸಂದರ್ಭವನ್ನು ಇಲ್ಲಿ ನೋಡಬೇಕು:

"……ಸ್ವಸ್ತಿ ಶ್ರೀ ವಿಜಯಾಭ್ಯುದಯ ಕಲಿಯುಗ ಸಂದ ವರುಷ ೧೮೯೮ ನೇ ಶಾಲಿವಾಹನ ಶಕ ಸಂದ ೧೭೧೮ ನೇ ವರ್ತಮಾನಕ್ಕೆ ಸಲ್ಲುವ ನಳ ಸಂವತ್ಸರದಲ್ಲು ಶ್ರೀ ಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮ ವೀರ ನರಪತಿ ಕೊಡಗಿನ ಸಂಸ್ಥಾನದ ಶ್ರೀ ರತ್ನಸಿಂಹಾಸನಾರೂಢರಾಗಿ ಪೃಥ್ವಿ ಸಾಮ್ರಾಜ್ಯಂ ಗೈಯ್ಯುತ್ತಿದ್ದ ಭಾರದ್ವಾಜ ಗೋತ್ರದ ಅಶ್ವಲಾಯನ ಸೂತ್ರದ ಋಕ್‌ಶಾಖಾನೂಪಾಧ್ಯಾಯ ವೀರಶೈವ ಮತಸ್ಥರಾದ ಅಪ್ಪಾಜಿ ರಾಜೇಂದ್ರರ ಪೌತ್ರರಾದ ಲಿಂಗರಾಜ ಒಡೆಯರವರ ಪುತ್ರರಾದ ವೀರರಾಜೇಂದ್ರ ಒಡೆಯರವರು ಕೊಡಗಿನ ಸಂಸ್ಥಾನದ ರಾಜ್ಯಾಧಿಪತ್ಯವನ್ನು ಮಾಡಿಕೊಂಡು ಇರುವಾಗ್ಗೆ ತಮ್ಮ ಕೊಡಗಿನ ಸಂಸ್ಥಾನದ ದೊರೆಗಳ ವಂಶಾವಳಿ ಪಾರಂಪರ್ಯವಾಗಿ ಪ್ರಾರಂಭ್ಯ ನಡೆದು ಬಂದಂಥಾ ವೃತ್ತಾಂತಗಳನ್ನು ಬರೆದ ಶಾಸನಗಳ ಜೀರ್ಣೋದ್ಧಾರ ಮಾಡಿ ಬರಸಿ……*"

ಈ 'ರಾಜೇಂದ್ರ ನಾಮೆ'ಯನ್ನು ನಂತರದಲ್ಲಿ ಲೆಫ್ಟಿನೆಂಟ್ ರಾಬರ್ಟ್ ಅಬರ್‌ಕ್ರಾಂಬಿ ಎಂಬ ಬ್ರಿಟಿಷ್ ಅಧಿಕಾರಿಯು ಇಂಗ್ಲೀಷಿಗೆ ಭಾಷಾಂತರಿಸಿದಂತಿದೆ. ಹಾಲೇರಿ ಅರಸು ಮನೆತನಕ್ಕೆ ಸಂಬಂಧಿಸಿದ ಅನೇಕ ವಿಷಯಗಳು ಈ ಚಾರಿತ್ರಿಕ ಗ್ರಂಥದಿಂದ ನಮಗೆ ದೊರೆಯುತ್ತವೆ.

ಇದಕ್ಕೆ ಪೂರಕವಾದ ಇನ್ನೊಂದು ಗ್ರಂಥವೆಂದರೆ— ಕೆಳದಿರಾಜರು ಬರೆಯಿಸಿದ "ಕೆಳದಿ ನೃಪವಿಜಯ" ಕೆಳದಿಯ ರಾಜಕುಮಾರನೊಬ್ಬನು ಕೊಡಗಿಗೆ ಹೋಗಿ, ಅಲ್ಲಿ ರಾಜ್ಯವನ್ನು ಸ್ಥಾಪಿಸಿದ ವಿಷಯವು ರಾಜೇಂದ್ರ ನಾಮೆಯಲ್ಲಿ ಬಂದಿದೆ. ಈ ಗ್ರಂಥ ಮತ್ತು 'ಕೆಳದಿ ನೃಪವಿಜಯ'ಗಳು ಐತಿಹಾಸಿಕವಾದ ಅನೇಕ ದಾಖಲೆಗಳಿಗೆ ಮೂಲ ಆಕರಗಳಾಗಿವೆ.

---

* ರಾಜೇಂದ್ರನಾಮೆಯಿಂದ ಉದ್ಧೃತ— ಈ ಗ್ರಂಥದಲ್ಲಿ ೧೬೦೦ ರಿಂದ ೧೮೦೭ ರ ವರೆಗಿನ ಕೊಡಗಿನ ಚರಿತ್ರೆ ಸಮಗ್ರವಾಗಿ ಬಂದಿದೆ. ಮೈಸೂರಿನ ಹೈದರ ಟೀಪು ಕಾಲದಲ್ಲಿ ಹಾಳಾಗಿದ್ದ ಅನೇಕ ಕಾಗದ ಪತ್ರಗಳನ್ನು ಮತ್ತೊಮ್ಮೆ ಬರೆಯಿಸಿದ ವಿಷಯ ಅಲ್ಲಿ ಗೊತ್ತಾಗುತ್ತದೆ.

ರಾಜೇಂದ್ರ ನಾಮೆ ಕನ್ನಡದಲ್ಲಿದ್ದರೂ ಅನೇಕ ಶಬ್ದಗಳು ಪರ್ಶಿಯನ್, ಅರ್‍ಯಾಬಿಕ್ ಭಾಷೆಗಳಿಂದ ಬಂದವುಗಳಾಗಿವೆ. ಸುಮಾರು ೧೮೬೦ ರ ವರೆಗೂ ಈ ದೇಶದಲ್ಲಿ ಉರ್ದು, ಪರ್ಶಿಯನ್ ಭಾಷೆಗಳು ಸಾರ್ವತ್ರಿಕ ಬಳಕೆಯ ಆಸ್ಥಾನಗಳ ಭಾಷೆಯಾಗಿದ್ದಾಗ ಅವುಗಳ ಪ್ರಭಾವ ಕನ್ನಡದ ಮೇಲೆ ಆದುದು ಸ್ವಾಭಾವಿಕ. ಕೆಲವು ಪದ ಪ್ರಯೋಗಗಳನ್ನು, ವಾಕ್ಯರಚನಾ ಪ್ರಯತ್ನಗಳನ್ನು ಇಲ್ಲಿ ನೋಡಬಹುದು:

"ನೀವು ನಮಗೆ ಸ್ವಕೀಯಸ್ಥರೇ ಹೊರತು ಬೇರೊಂದಿಲ್ಲ."

"ಇತ್ತಲಾಗಿ ತಮ್ಮ ತಂದೆಯವರಾದ ಲಿಂಗರಾಜೇಂದ್ರ ಒಡೆಯರವರ ದಿವಸ ಪರಿಯಂತ ಆದ ವಿದ್ಯಮಾನ ಬರದ ಸಾಧನಗಳು ಉಳಿದು ಇದ್ದದರಿಂದ ಅದರಲ್ಲಿ ಬರದು ಇದ್ದ ವಿವರ, ಮತ್ತು ತಮ್ಮ ಕಾಲದಲ್ಲಿ ನಡೆದಂಥಾ ರಾಜಕಾರ್ಯ ಕಾರಣಂಗಳ ಸಹ, ಸಮಸ್ತರು ತಿಳಿಯುವ ಬಗ್ಗೆ ನಳ ಸಂವತ್ಸರದ ಮಾಘ ಶು. ೧ ಮು ಭಾನುವಾರ ಅಪ್ಪಣೆ ಕೊಟ್ಟು ಬರಸಿದ ಕ್ರಮವೆಂತೆಂದರೆ."

"ಆ ಮೇಲೆ ಕಲಿಸಂದ ೪೭೮೫ ನೆಯ ಕ್ಷಯ ಸಂವತ್ಸರದಲ್ಲಿ ಮುದ್ದರಾಜ ಒಡೆಯರವರು ಶಿವಾಧೀನರಾದರು".

"ಈ ಮೇಲೆ ತಂಮ ತಂಮ ರಾಜ್ಯಭಾರ ಮಾಡಿಕೊಂಡು ಇದ್ದರು."

"ಪೆರಿಯಾ ಪಟ್ಟಣದ ನಂಜುಂಡ ಅರಸುಗಳ ಕಡೆಯ ಕೆಲವು ಚಾಕರಿ ಜನರು ಪಿತೂರಿಯಿಂದ, 'ಈಗ ನಿಮ್ಮ ಫವುಜು ಕಳುಹಿಸಿಕೊಟ್ಟರೆ ಈ ಕೋಟೆ ನಿಮ್ಮ ಕೈವಶ ಮಾಡಿಕೊಡುತ್ತೇವೆ."

"ಇವರ ಫವುಜು ತಯಾರು ಮಾಡಿಸುವ ಸಮಾಚಾರ ನಂಜುಂಡ ಅರಸುಗಳು ತಿಳಿದು ಪೆರಿಯಾ ಪಟ್ಟಣದ ಕೋಟೆಯಲ್ಲಿ ತಮ್ಮ ಮಗನಾದ ವೀರರಾಜರ ಮಡಗಿ ತಾವು ಫವುಜು ತಗೆದುಕೊಂಡು ಹೋಗುವ ಬಗ್ಗೆ ಮಡಕೇರಿಗೆ ಬಂದು ಈ ಸಮಾಚಾರವನ್ನು ದೊಡ್ಡ ವೀರಪ್ಪ ಒಡೆಯರಿಗೆ ಜಾಹೀರು ಮಾಡಿದಲ್ಲಿ ಅವರು ತಮ್ಮ ಕೊಡಗಂ ಮಂದಿ ಯಾವತ್ತೂ ಜಮಾಯಿಸುತ್ತ ಇದ್ದರು."

III ಸರಕಾರಿ ಆದೇಶಗಳು :

ಕೊಡಗಿನ ರಾಜರ ಆಡಳಿತ ಕ್ರಮವನ್ನು ತಿಳಿಯುವಲ್ಲಿ ಸರಕಾರದ ಆದೇಶಗಳು ಮಹತ್ವದ್ದಾಗಿವೆ. ಅವುಗಳನ್ನು "**ಹುಕುಮು**"ಗಳೆಂದು ಕರೆಯಲಾಗಿದೆ. ಕಂದಾಯ ಇಲಾಖೆಗೆ ಸಂಬಂಧಿಸಿ ಸರಿಯಾದ ಕಂದಾಯಗಳನ್ನೂ ನಿಗದಿಮಾಡಿ ಬರೆಸಿಟ್ಟ ಪುಸ್ತಕಕ್ಕೆ "**ಶಿಸ್ತು**" ಎಂದು ಹೆಸರು. ಈ "ಶಿಸ್ತು"ಗಳು ಕನ್ನಡದಲ್ಲಿ ಕೈಬರದದಲ್ಲಿವೆ. ಇವೆಲ್ಲ ಸುಮಾರು ೫೪ "ಹುಕುಮು"ಗಳ ರೂಪದಲ್ಲಿದೆ. ಸರಕಾರಿ ನೌಕರರು ನಡೆದುಕೊಳ್ಳುವ ಬಗ್ಗೆ, ರಾಜ್ಯದ ರೈತರ ಕರ್ತವ್ಯಗಳ ಬಗ್ಗೆ, ಭೂಮಿ ಕಂದಾಯ ಅದರ ಎತ್ತುವಳಿ ಬಗ್ಗೆ, ಮತ್ತು ನ್ಯಾಯ ವಿತರಣೆಯ ಬಗ್ಗೆ ವಿವರಗಳು ಇವೆ.

ಅದರ ಒಂದು ಮಾದರಿ:

"ಶ್ರೀ"

ಶ್ರೀ ರುದ್ರ ಮಹಾರಾಜ ಲಿಂಗರಾಜೇಂದ್ರ ಒಡೆಯರವರು ಸಂಸ್ಥಾನ ಕೊಡಗು.

ಸ್ವಸ್ತಿ ಶ್ರೀ ವಿಜಯಾಭ್ಯುದಯ ಕಲಿಸಂದ ೪೯೧೮ನೇ ಪ್ರಜೋತ್ಪತ್ತಿ ಸಂವತ್ಸರದ ಚೈತ್ರ ಶುದ್ಧ ೧ ರಲ್ಲು ಶ್ರೀ ಮತ್ತು ಮಡಕೇರಿ ಅರಮನೆ ದಿವಾನ್ ಕಚೇರಿ ತಾಲ್ಲೂಕು ಮಾಡಿ ಶ್ರೀ ಇರುವ ನಾಡು ಪಾರುಪತ್ಯಗಾರರಿಗೆ, ಶಾನುಭೋಗರಿಗೆ, ತಕ್ಕರಿಗೆ, ಗ್ರಾಮದ ತಕ್ಕರಿಗೆ, ಗವುಡರಿಗೆ ಮುಂತಾದ ಸಮಸ್ತ ಪ್ರಜೆಗಳಿಗೆ ಮುಖ್ಯವಾಗಿ ಅಪ್ಪಣೆ ಕೊಡಿಸಿದ ಬುದ್ಧಿ ಹುಕುಂ ನಾಮೆ ಕ್ರಮವೆಂತೆಂದರೆ–

... ...

ಈ ಮೇರೆ ದಿನದಲ್ಲು ಇಪ್ಪತ್ತು ಗಳಿಗೆ ರಾತ್ರಿಯಲ್ಲು ಏಳುವರೆ ಗಳಿಗೆ ಉಭಯ ದಿವಾರಾತ್ರಿಯಿಂದ ಸಹ ಇಪ್ಪತ್ತಯೇಳುವರೆ ಗಳಿಗೆ ಅರಮನೆ ಚಾಕ್ರಿ ಮಾಡಿ ಒಪ್ಪಿಸು ವದಾಗಿ–ಶ್ರೀ ವಿ. ಈ ಆದೇಶಗಳಲ್ಲಿ ಕೆಲವು ರೈತರಿಗೆ ಕಷ್ಟಕೊಡಬಾರದೆಂಬ ಸೂಚನೆ ಗಳಿಂದ ಕೂಡಿವೆ "ಜನರಿಗೆ ತಾಯಿಯೋಪಾದಿ ನಿಗೆವಾನಿ ಮಾಡುವುದು. ಇದು ಅರಮನೆ ಮುದ್ರೆ ಹೊತ್ತ ಜನರಿಗೆ ಯೋಗ್ಯವಾದಂಥಾದ್ದು. ಇದನರೀತು ಮೂರು ಕಲಮಿಗೆ ಲೇಶಾಂಶ ಹೆಚ್ಚು ಕಡಿಮೆ ಇಲ್ಲದೆ ನಡವಂಥಾವರಿಗೆ ಇಹದಲ್ಲಿ ಅವರ ಆಲ್ ಅವಲಾದಿನಾನಿಗಬಾನಿ ಅಬ್ರು ಹೆಚ್ಚಾದೀತು. ಪರದಲ್ಲಿ ಶುಭಗತಿ ಉಂಟಾದೀತು......." ಈ ಹುಕುಮುಗಳ ರಚನೆಯಲ್ಲಿ ಧಾರಾಳವಾಗಿ ಪರಭಾಷೆಗಳ ಶಬ್ದಗಳನ್ನು ಉಪ ಯೋಗಿಸಲಾಗಿದೆ. ಅಲ್ಲಿ ಬರುವ ಕೆಲವು ಶಬ್ದಗಳನ್ನು ಇಲ್ಲಿ ನೋಡಬಹುದಾಗಿದೆ.

ತಾಕೀತಿ, ಜವಾಬು, ಪುನಶ್ಚ, ಪಾರುಪತ್ಯ ನಶಿಯತ್ತು, ದಫ್ತರ, ಆಯಾಯಾ, ಕ್ರಯು, ಗವುಡ, ಫಸಲು ಇಂತಹ 'ಹುಕ್ಕಂ'ಗಳು ಒಟ್ಟು ೫೮ ಲಭ್ಯವಿದ್ದು ಅವುಗಳಿಂದ ಅಂದಿನ ರಾಜ್ಯ ವ್ಯವಸ್ಥೆಯೊಡನೆ, ಅದರ ಕಾರ್ಯಕ್ಕೆ ಒದಗಿದ ಕನ್ನಡದ ಬಳಕೆಯೂ ತಿಳಿಯುತ್ತದೆ.

ಈ ಆದೇಶಗಳಲ್ಲಿಯ ಕೆಲವು ಭಾಷಾವೈಶಿಷ್ಟ್ಯಗಳು:

"ವೀರರಾಜೇಂದ್ರ ವಡೆಯರು ಸಂವಿಧಾನದಲ್ಲು ಯಿದ್ದು ಸತ್ಕರ್ಮವಂನು। ವಿರಚಿಸಿ ಅಪ್ಪಣೆ ಪ್ರಕಾರಕ್ಕೆ ಮಹಾದೇವಪುರದಲ್ಲು ಕ್ರಿಯಾಸಮಾಧಿಯಂನು ಮಾಡಿಸಿ ದೇವ ಸ್ಥಾನವಂನು ರಚಿಸಿ ಆ ಸಮಾಧಿ ಮೇಲೆ ಬಸವೇಶ್ವರ ಪ್ರತಿಷ್ಠೆಯಂನು ಮಾಡಿಸಿ ಮುರಿಗೆ ಸಂಪ್ರದಾಯದ ಮಠವನ್ನು ಕಟ್ಟಿಸಿ ಸದಾಕಾಲದಲ್ಲು ಗಣಾರಾಧನೆ ಯಿ ದೇವ ತಾರಾಧನೆ ಉಧಿಶ್ಯ ಯಿ ಮಾದೇವ। ಪುರದ ಬುವಿ ಚಿಕಪರದೆ ಗ್ರಾಮ ಜಂಬೂರು

ಗ್ರಾಮ ಬೇಲೂರು ಬಸವನ ಹಳ್ಳಿ ಗ್ರಾಮಕ್ಕೆ ಸಹ ಲಿಂಗಮುದ್ರೆ ಶಿಲಾಪ್ರತಿಷ್ಠೆಯನ್ನು ಮಾಡಿಶಿರಿ............ಗುರುವರಕ್ಕೆ ಆಕೆರು ಆಗಿ ಯಿಥ"

ಶ್ರೀ ರುದ್ರ

"ಮಹಾರಾಜ ವೀರರಾಜೇಂದ್ರ ಒಡೆಯರು ಸಂಸ್ಥಾನ ಕೊಡಗು ಶ್ರೀಮತು ಅರಮನೆ ಶ್ರೀಮವಳಿತವಾದ ಬೇಂಗನಾಡ ಪಯ್ಕಿ ಬೇಂಗೂರ ಗ್ರಾಮದಲ್ಲು ಇರುವ ಪಟ್ಟಮಾಡ ಅಪುಗೆ ದಯಪಾಲಿಸಿದ ಸಾಧನದ ಬುದ್ಧಿ ನಿರೂಪ ಅದಾಗಿ, ನೀನು ಸ್ವಾಮಿಕಾರ್ಯದುರಂಧರನಾಗಿ ನಮ್ಮ ಉಪ್ಪಿಗೆ ಸರಿಯಾಗಿ ಆಪ್ತನಾಗಿರುವುದರಿಂದ ನಿನಗೆ ಅಪ್ಪಣೆ ಕೊಡಿಶಿಯಾಧೀತು. ಅರಮನೆ ಶೀಮೆಯಲ್ಲು ಕೊಡಗ ರೈತರು ಮಾಡುವ ಜಾಮ ಭೂಮಿಗೆ ಇಷ್ಟು ಉಂಬಳಿಗಾಣಿಕೆಯನ್ನು ಅರಮನೆಗೆ ಕೊಡುವುದು ಯೆಂಬು ದಾಗಿ ಮೊಕರರು ಮಾಡಿಸಿದೆಯಷ್ಟೆ."

IV ಪತ್ರವ್ಯವಹಾರ :

ಉಳಿದ ಬರವಣಿಗೆಗಳಂತೆ ಪತ್ರ ವ್ಯವಹಾರದಲ್ಲಿಯೂ ನಾವು ವಿಶಿಷ್ಟರೀತಿಗಳನ್ನು ಕಾಣುತ್ತೇವೆ. 'ಟೀಪುಸುಲ್ತಾನನು ತನ್ನ ಒಂದು ಪತ್ರವನ್ನು, ಬ್ರಿಟಿಷರ ವಿರುದ್ಧ ವೀರ ರಾಜೇಂದ್ರ ಒಡೆಯನ ಸ್ನೇಹ ಬಯಸಿ ಅವನಿಗೆ ಕಳಿಸುತ್ತಾನೆ.

"......ಮಹಾರಾಜರು ನಂಮ ಸ್ನೇಹದಿಂದ ಮೊಕಾ ತಿರಿಗಿಸಿ ಇಂಗ್ರೇಜಿಯವರ ಸಂಗಡ ಕೂಡಿ ಇದ್ದೀರಿ. ನಾವು ಸಮೀಪದಲ್ಲಿ ಇರುವಂಥಾವರು. ನಮ್ಮನ್ನು ದೂರ ಮಾಡಿ, ದೂರ ದೇಶದವರ ಸಂಗಡ ದೋಸ್ತಿ ಇಟ್ಟು ಇದ್ದೀರಿ. ಕಷ್ಟಕಾಲಕ್ಕೆ ಸಮೀಪದ ವರ ಹೊರ್ತು ದೂರ ದೇಶದವರ ಸ್ನೇಹ ಕೆಲಸಕ್ಕೆ ಬಾರದು."

ವೀರರಾಜೇಂದ್ರ ಒಡೆಯನು ಇಂಗ್ಲೀಷ ಅಧಿಕಾರಿಗಳಿಗೆ ಬರೆದ ಪತ್ರದಲ್ಲಿ:

"ಸಾಹೇಬ ಮೆಹರ್ಬಾನ ಬಂಗಾಳದ ದೊಡ್ಡ ಜನರಲ್ ಸಾಹೇಬರಿಗೆ ಜನರಲ್ ಮೆಡೋಸ್ ಸಹ ಕೊಡಗಿನ ಹಾಲೆರಿ ವೀರರಾಜ ಅರಸುಗಳವರು ಸಲ್ಲಾಂ ಸಾಂಪ್ರ ತಾಯಿ. ಕಡೆ ಬೊಂಬಾಯಿ ತಲಚೇರಿಯಲ್ಲಿ ನಿಂಮ ಸರಕಾರದ ಯಿಂಗ್ರೇಜಿಯವರ ವಿಚಾ ರಿಶಿದರೇ ನಾವು ನಿಮಗೆ ಆಪ್ತರು ಎಂಬುದ ಅವರ ಮುಖದಲ್ಲಿ ತಿಳಿಯಬರುವೇತ್ತಾ ದಕ್ಕೆ ವಿಷಯ ಬರೆಯಬೇಕೆಂಬುದು ಯೆನು ಯಿದೆ ಯಿೂ ವಿವರ ತಿಳಿದಿರಬೇಕು.... .....
......"ಶ್ರೀ ವಿ. ವೀರರಾಜೇಂದ್ರ ಒಡೆಯನ ಪಟ್ಟಾಭಿಷೇಕಕ್ಕಾಗಿ, ಬ್ರಿಟಿಷ್ ಅಧಿಕಾರಿಗೆ ಪತ್ರ ಬರೆಯಲಾಯಿತು:

"ನಾವು ಇಂಗ್ರೇಜ ಬಹಾದ್ದರ ಕಂಪನಿ ಸರಕಾರ ದೋಸ್ತದಾರರಾದ್ದರಿಂದ ಈ ಶುಭ ಕೆಲಸಕ್ಕೆ ತಾವೇ ಇಲ್ಲಿಗೆ ಬರಬೇಕು. ತಮಗೆ ಸರಕಾರದ ಜಾಬ್ರು ಇದ್ದು, ಬರುವುದಕ್ಕೆ ಅನುಕೂಲವಾಗದಿದ್ದರೆ ವಬ್ಬರು ಸರದಾರನನು ಯೆರಡು ಜನ ಸಾಹೇಬರನು ಕೆಲ, ಸರಕಾರ ಶಿಪಾಯಿಗಳನು ಸರಕಾರದ ನಿಶಾನಿ ಸಹಾ ಕಳುಹಿಸಬೇಕು."

ಇದಕ್ಕೆ ಉತ್ತರವಾಗಿ, ಬ್ರಿಟಿಷ್ ಅಧಿಕಾರಿ ಅಬರ್‌ಕ್ರಾಂಬಿಯು ಬರೆದ ಪತ್ರವೂ ಕನ್ನಡದಲ್ಲಿದೆ :

"............ಸರಕಾರದ ಜಂಬ್ರುವಾದ್ದರಿಂದ ನಮಗೆ ಬರುವುದಕ್ಕೆ ಸಂದರ್ಭ ಆಗದ್ದರಿಂದ ಈ ಶುಭ ಕೆಲಸ ಆಗು ಮಾಡುದ ಬಗ್ಗೆ ಸರದಾರರು ಅಲ್ಕ್ಶಾಂಡರ್ ಬೆಲ್ (Alexandar Bell) ಸಾಹೇಬರ ಸಂಗಡ ವಬ್ಬರು ಕಾಪಿತಾನೆ (Captain) ಸಾಹೇಬರನು ಒಂದು ಕಂಪನಿ ಶಿಪಾಯಿಗಳ ಇಂಗ್ರೇಜ ಬಹಾದ್ದರ ಕಂಪೆನಿ ಸರಕಾರದ ನಿಶಾನ ಸಹ ಕಳುಹಿಸಿ ಇದ್ದೇವೆ."

ಟೀಪೂಸುಲ್ತಾನನಿಗೆ ಸೋಲಾದ ಸಂದರ್ಭಲ್ಲಿ ವೀರರಾಜೇಂದ್ರನು ಬರೆದ ಪತ್ರ:

"ನಮ್ಮ ದುಷ್ಮಾನರು ದೂರವಾದರು. ನಮ್ಮ ಅಪೇಕ್ಷೆ ಮೀರಿ ಅನಂತ ದೇಶ ಕೋಶ ಐಶ್ವರ್ಯ ಪಟ್ಟಣದ ಕೋಟೆ ಮುಂತಾಗಿ ಇಂಗ್ರೇಜ ಬಹಾದ್ದರ ಸರಕಾರ ತಾಬೆ ಆಯಿತು. ಇದರ ತಾರೀಫು ಹತ್ತು ಪಾಲಲ್ಲಿ ಒಂದು ಪಾಲಾದರೂ ನಂಮಿಂದಾ ಆಗದು............"

ಟೀಪುಸುಲ್ತಾನನ ಸೋಲಿನ ನಂತರ ಗಡಿಗಳ ಹಂಚಿಕೆಗಾಗಿ ಬರೆದ ಪತ್ರ:

"ತಮ್ಮ ಶೀಮೆಗೆ ಹೊಸ ಸರಹದ್ದನು ಮೊಕರರು ಮಾಡಬೇಕು ಯಂತಾ ಭಾವಿಸಿ ಇದ್ದೀರಿ. ಈಗ ಮೈಸೂರು ಶೀಮೆ ಬಂದುಬಸ್ತು ಮೊಕರರು ಆಗಿ ಇರುವ ಕೈಫಿಯತು ತಾವು ತಿಳಿಯಲಿಲ್ಲವಾಗಿ ಇದ್ದೀತು."

ವೀರರಾಜೇಂದ್ರನ ತನ್ನ ಮಗಳ ಲಗ್ನದ ಬಗ್ಗೆ ಬರೆದ ಪತ್ರ :

"ಈ ವಳ್ಳೇ ಕಾಲವಲ್ಲಿ ತಾವು ಸರಫರಾಜಿ ಮಾಡಿ ಶ್ರೀರಂಗಪಟ್ಟಣದ ಅರಸಿಗೆ ವಿವಾಹ ಮಾಡಿಸಿದ್ದು ಈ ಖುಷಿ ವರ್ತಮಾನ ಈ ದೋಸ್ತಾರರ ಕಿವಿಗೂ ಕೇಳಬಂತು. ಇದರಿಂದಾ ನಂಮ ಮನಸಿನ ಅಂತರಂಗದಲ್ಲಿ ಇದ್ದ ಮಾತು ಹೊರಗೆ ಬಂತು."

V ದತ್ತಿಗಳು :

ಚಿಕ್ಕವೀರಪ್ಪ ಒಡೆಯರು ಶೃಂಗೇರಿ ಗುರು ಪೀಠಕ್ಕೆ ಭೂಮಿಯನ್ನು ದಾನಮಾಡಿದ ಸಂದರ್ಭದಲ್ಲಿ ಅವರು ಬಳಸಿದ ಭಾಷೆ ಸಂಸ್ಕೃತ ಭೂಯಿಷ್ಠ ಕನ್ನಡ :

"......ಭದ್ರಾತೀರವಾಸ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮಿಗಳೈಯನವರ ಕರ

ಕಮಲ ಸಂಜಾತರಾದ ಶೃಂಗೇರಿ ಶ್ರೀ ಮಠಾ|*ನವ ಸಚ್ಚಿದಾನಂದ ಭಾರತಿ ಸ್ವಾಮಿ ಯವರ ಮಠದ ಶ್ರೀ ವಿದ್ಯಾಶಂಕರಸ್ವಾಮಿ ಶಾರದಾಂಬಿಕೆ ಅಂಮನವರು ಶ್ರೀ ಚಂದ್ರ| ಮೌಳೀಶ್ವರ ಸ್ವಾಮಿಯವರ ಸನ್ನಿಧಿಯಲ್ಲೂ ಅಶ್ವೀಜ ಶು॥ ೧೦ ದಿವಸ ನಡೆಸುವ ಪೂಜೆ ಬ್ರಾಂಹ್ಮಣ ಸಂತರ್ಪಣೆ ದೀಪಾ|ರಾಧನೆ ಅಂಗರಂಗ ವೈಭವೋತ್ಸವ ಮುಂತಾದ ಸೇವೆ ಬಗ್ಗೆ ಕಾಶ್ಯಪ ಗೋತ್ರದ ಕೊಡಗಿನ ಹಾಲೇರಿ ವೀರಪ್ಪೊಡೇರೂ ಸ|ಮರ್ಪಿಸಿದ ಸ್ಥಳದ ಧರ್ಮಶಾಸನದ ಕ್ರಮವೆಂತೆಂದರೆ......"

ಕೊಡಗಿನ ರಾಜರು ಮಡಕೇರಿಯಲ್ಲಿ ಕಟ್ಟಿಸಿದ ಓಂಕಾರೇಶ್ವರ ದೇವಾಲಯಕ್ಕಾಗಿ ದತ್ತಿಶಾಸನ ಮಾಡಿದ್ದಾರೆ. ಗುಡಿಯ ಬಾಗಿಲುಗಳ, ಕಿಡಿಕೆಗಳ ಮಧ್ಯದ ಹಣೆಪಟ್ಟಿಗಳಲ್ಲಿ ಕನ್ನಡ 'ವಿ' (ವೀರರಾಜೇಂದ್ರ) 'ಲಿಂ' (ಲಿಂಗರಾಜೇಂದ್ರ) ಸಂಕೇತಗಳನ್ನು ಇರಿಸಿದ್ದಾರೆ. ಹಾಲೇರಿರಾಜರು ತಮ್ಮ ಮನೆತನದ ರಾಜಪರಿವಾರದವರನ್ನು ಲಿಂಗೈಕ್ಯರಾದ ಮೇಲೆ ಸಮಾಧಿಮಾಡಲು, 'ಗದ್ದುಗೆ ಪ್ರವೇಶ'ವೆಂದು ಈಗ ಕರೆಯಲ್ಪಡುವ ಮಡಿಕೇರಿಯ ಉತ್ತರ ದಿಕ್ಕಿನ ಸ್ಮಶಾನದಲ್ಲಿ ಅನೇಕ ಸಮಾಧಿಗಳನ್ನು ಮಾಡಿದ್ದು ಅವುಗಳ ಮೇಲೆ ಕನ್ನಡದಲ್ಲಿ ಪ್ರತಿಯೊಬ್ಬರ ವೃತ್ತಾಂತಗಳನ್ನು ಕಲ್ಲಿನಲ್ಲಿ ಕೆತ್ತಿಸಿದ್ದಾರೆ.

ಬಂಗಾಳದ ಆಗಿನ ಗವರ್ನರ್ ಜನರಲ್ ಲಾರ್ಡ ಮಾರ್ನಿಂಗ್‌ಟನ್ ವೀರ ರಾಜೇಂದ್ರನಿಗೆ ಬರೆದ ಪತ್ರವು ಕನ್ನಡದಲ್ಲಿದೆ :

"......ತಂಮ ಒಳ್ಳೇ ನಡತೆ ನಂಮಮನಸ್ಸಿಗೆ ಒಡಂಬಟ್ಟು ಸಂತೋಷವಾಗಿ ಇರು ವುದಂನು ಜಾಹೀರು ಆಗುವ ಬಗ್ಗೆ ವರುಷಂಪ್ರತಿಯಲ್ಲು ಕುಂಪಣಿ ಸರಕಾರಕ್ಕೆ ತಾವು ಕೊಡುವಂಥಾ ಖಂಡಣೆ ಹಣ ಸರಕಾರದಿಂದ ತಮಗೆ ಮಾಫು ಮಾಡಿ ಬರದು ಇದ್ದೇವೆ. ಇನ್ನು ಮುಂದೆ ತಾವು ಯೇನಾದರೂ ಒಂದು ಒಡವೆ ದೋಸ್ತಿ ನಿಶಾನಿ ಉದ್ದಿಶ್ಯ ವರುಷಂ ಪ್ರತಿಯಲು ಸರಕಾರಕ್ಕೆ ಕೊಡುತ್ತಾ ಬರಬೇಕು."

ತಲಕಾವೇರಿಯಲ್ಲಿ, ಭಾಗಮಂಡಲದ ಭಗಂಡೇಶ್ವರ ದೇವಾಲಯದಲ್ಲಿ ತಮ್ಮ ಹೆಸರಿಗೆ ಅಚಂದ್ರಾರ್ಕವಾಗಿ ನಂದಾದೀಪ ಉರಿಸುವಂತೆ ವ್ಯವಸ್ಥೆಯ ನಿರೋಪವು ಹೀಗಿದೆ :

ಶ್ರೀ ರುದ್ರ

"ಮಹಾರಾಜ ವೀರರಾಜೇಂದ್ರ ಒಡೆಯರು, ಸಂಸ್ಥಾನ ಕೊಡಗು ಶ್ರೀ ಮತ್ತು ಮಡಿಕೇರಿ ಅರಮನೆ ಕಚೇರಿ ತಾಲೂಕು ಶೀಮೆ ಸುಭೇದಾರ ಮಾದೈಯ್ಯ ಯರಡನೆ ಶುಭೇದಾರ ಸುಬ್ಬೈಯ್ಯ ಕರಣಿಕ ಸುಬ್ಬೈಯ್ಯನಿಗೆ ಸಹ ಅಪ್ಪಣೆ ದಯಪಾಲಿಸಿದ

* ಬರೆಹದಲ್ಲಿ ಮಧ್ಯ ಮಧ್ಯ ನಿಲ್ಲುವಾಗ '|'ಗೀಟು ಹಾಕಿ ಮುಂದೆ ಬರೆಯುವ ಕ್ರಮವನ್ನು ಇಲ್ಲಿ ಅನುಸರಿಸಲಾಗಿದೆ. ಬಹುತರ ಇದು ಒಂದು ರೀತಿಯ ವಿರಾಮ ಚಿಹ್ನೆಯೇ ಇರಬೇಕು.

ತಪ್ಪೀಕು ನಿರೂಪ ಆದಾಗಿ-ತಲಕಾವೇರಿಯಲ್ಲು ಅಗಸ್ತ್ಯೇಶ್ವರನ ಬಳಿಯಲ್ಲು ಕಾಸಾ ನಂಮ ಹೆಸರು ಜೋಡು ನಂದಾದೀಪ್ತಿಯು ಆಕಳ ತುಪ್ಪದಿಂದ ನಡೆದು ಬರುವಂತೆ ಶಾಶ್ವತ ವಾಗಿ ಆಚಂದ್ರಾರ್ಕವಾಗಿ ನಡೆದು ಬರುವ ಪ್ರಕಾರಕ್ಕೆ......"

ಲಿಂಗರಾಜೇಂದ್ರ ಒಡೆಯನು ಓಂಕಾರೇಶ್ವರ ದೇವಾಲಯದಲ್ಲಿ ಇರಿಸಿದ ತಾಮ್ರ ಶಾಸನ:

"ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೭೫೩ ಯೀಶ್ವರ ಸಂವತ್ಸರ ಜ್ಯೇಷ್ಠ ಬಹುಳ ಬಿದಿಗೆಯ ಭಾನುವಾರಕ್ಕೆ ಕಲಿದಿನ ೧೭೫೬ ೬೨ ಯೀ ಶುಭ ದಿವಸದಲ್ಲಿ ಚಂದ್ರವಂಶ ಕ್ಷೀರ ಪಾರಾವಾರ ಪಾರಿಜಾತಾಯಮಾನರಾದ ಭಾರದ್ವಾಜ ಗೋತ್ರ ಸಂಜಾತರಾದ ಅಶ್ವಲಾಯನ ಸೂತ್ರ ಋಕ್ ಸಾಕ್ಷಿಗಳಾದ ವೀರಶೈವ ಮತ ಧುರೀಣ ಪ್ರವೀಣರಾದ ಶ್ರೀಮತ್ ಕೊಡಗು ಸಂಸ್ಥಾನ ಸಂಸ್ಥಿತ ಸಮಾಧ್ಯಕ್ಷೀರನಗರ ಮಧ್ಯ ಪರಿಭ್ರಾಜಮಾನ......"

"ಅಂತು ವರುಷ ೧ಕ್ಕೆ ಓಂಕಾರೇಶ್ವರ, ಗಣಾಧೀಶ್ವರ ಕುಮಾರೇಶ್ವರ, ನಂದಿಕೇಶ್ವರ ದೇವರಿಗೆ ಸಹ ಆಚಂದಾರ್ಕವಾಗಿ ಶಾಶ್ವತದಿಂದ ನಡೆದು ಬರತಕ್ಕ ಬಗ್ಗೆ ನಿತ್ಯ ಕಟ್ಲೆ ಅಮೃತಪಡಿ ನಂದಾದೀಪ ವಿಶೇಷಕಟ್ಲೆ ಪಂಚಪರ್ವ ಸಂಬಳಗಾರ ಜನಕ್ಕೆ ಸಹ ಅಪ್ಪಣೆ ಕೊಡಿಸಿ ಯಿರವ ಕಂಠೀರಾಯಿ ೧೨೨೧ ವಂದು ಸಾವಿರ ಯಿನ್ನೂರಯಿಪ್ಪತ್ತೊಂದು ವರಹಕ್ಕೆ ಹಣದಿಂದ ಜನಿಸಿ ಜೌಳಿ ಮುಂತಾದವರಿಂದ ಉತ್ತರವನ್ನು ಧರ್ಮ ಸಂಗ್ರಹದ ಬಗ್ಗೆ ಅರಮನೆ ದಿವಾನ್ ಕಚೇರಿ ಹಸ್ತಾಂತ್ರದಿಂದ ಪ್ರತಿ ಸಂವತ್ಸರದಲ್ಲು ಕೊಡಿಸಿಕೊಟ್ಟು ಸೇವಾರ್ಥವಾಗಿ ವಿನಿಯೋಗಕ್ಕೆಂದು ನೇಮಿಸಿ ಯಿರುವಂಥವರಿಂದ ಕಾಲತ್ರಯದಲ್ಲು ಶಾಸ್ತ್ರಪ್ರಕಾರ ದೇವತಾ ಸೇವೆಯನ್ನು ಸಾಂಗವಾಗಿ ಮಾಡಿಸುತ್ತ ದಿನಂಪ್ರತಿ ವಿಚಾರಿಸಿ ಕೊಂಡು ವರುಷಂ ಪ್ರತಿ......"

VI ಹೊಸಪ್ರಯತ್ನಗಳು:

ಅವರು ಆಗ ಉಪಯೋಗಿಸಿದ ಶಬ್ದಗಳು ಕನ್ನಡನಾಡಿನ ಇನ್ನೂ ಬೇರೆ ರಾಜ ಮನೆತನಗಳ ಇತಿಹಾಸದಲ್ಲಿಯೂ ದೊರೆಯುತ್ತವೆ. 'ಕಾಟಕಾಯಿ' ಶಬ್ದ 'ಚಳುವಳಿ'ಯ ಸಂಪಾದಿಯಾಗಿದೆ. ಈ ಶಬ್ದ ಕಿತ್ತೂರಿನ ಇತಿಹಾಸದಲ್ಲಿಯೂ ಬರುತ್ತದೆ. ಪರ್ಶಿಯನ್, ಅರ‍್ಯಾಬಿಕ್, ಇಂಗ್ಲಿಷ್, ಪೋರ್ತುಗೀಜ್ ಭಾಷೆಗಳಿಂದ ಅವರು ಕನ್ನಡಕ್ಕೆ ಎರವಲು ಶಬ್ದಗಳನ್ನು ತಂದು ತದ್ಭವಗಳನ್ನು ರಚಿಸಲು ಪ್ರಯತ್ನಿಸಿದ ದೃಷ್ಟಿ ಚೇತೋಹಾರಿ ಯಾಗಿದೆ. ರಾಜಕಾರ್ಯಕ್ಕಾಗಿ ಭಾಷೆಯ ತೊಡಕನ್ನು ತೆಗೆಯಲು ಆಸ್ಥಾನದಲ್ಲಿ ಆಗ ಕನ್ನಡ, ಹಿಂದುಸ್ತಾನಿ, ಪರ್ಶಿಯನ್, ಇಂಗ್ಲೀಷ ಭಾಷೆಯ ಮುನ್ಷಿಗಳು, ಮುತ್ಸದ್ದಿಗಳು ಇದ್ದರು. ಆಗ ಬಳಕೆಯಲ್ಲಿದ್ದ ಕೆಲವು ಶಬ್ದಗಳು:

ಯಿಸ್ತಿರನಾಮೆ	Prodamation	ಪ್ರಕಟನೆ
ಯಿಂಗ್ರೇಜಿ	English	ಇಂಗ್ಲೀಷ
ಕುಂಪ್ಪಣಿ	Company	ಕಂಪನಿ
ಜುಲುಂ	—	ಜುಲುಮೆ
ಜಬರದಸ್ತಿ	—	ಒತ್ತಾಯ
ಅಪಮರಿಯಾದೆ	—	ಅಪಮರ್ಯಾದೆ
ಯಂಣಿಕೆ	—	ಎಣಿಕೆ
ಗವುರ್ನರ್	Governor	ಗವ್ಹರ್ನರ್
ಅರಸಿನವರ್ರು	—	ಅರಸಿನವರು
ತಜಿವಿಜಿ	—	ತಜವೀಜು (ವ್ಯವಸ್ಥೆ)
ಜವಾಬು	—	ಜವಾಬು
ಸವಾಲು	—	ಉತ್ತರ
ಮಜಭೂತ	—	ಮಜಬೂತ(ಗಟ್ಟಿ)
ಸವುಖ್ಯಾ	—	ಸೌಖ್ಯ
ನವೂಕರ್ರಿ	—	ನೌಕರಿ
ಉಕ್ಕಡ	Tollgate	ಜಕಾತಿಕಟ್ಟೆ (ಸರಹದ್ದಿನ ಠಾಣೆ)
ಸಿದ್ದಿ	Negro	ಹಬಶಿ
ಡಿಲಿ	Delay	ತಡ

ಭಾಷೆಯಲ್ಲಿ ಕ್ರಾಂತಿ:

ಕನ್ನಡಭಾಷೆಯಲ್ಲಿ ಒತ್ತಕ್ಷರಗಳಿಲ್ಲದೆ ಬರೆಯುವ ಪ್ರಯತ್ನ, ಬಹುತರ ಕೊಡಗಿನಲ್ಲಿ ಪ್ರಥಮವಾಗಿ ನಡೆದಿರಬೇಕು. (ಸಂಶೋಧಕರು ಇತ್ತ ಪ್ರಯತ್ನಿಸಬೇಕು.) ಇತ್ತೀಚೆಗೆ ಮೈಸೂರು ಸೀಮೆಯಲ್ಲಿ 'ಬೆರಳಚ್ಚು' ಸಂಶೋಧನೆಯ ಕಾಲದಲ್ಲಿ ಕನ್ನಡ 'ಬೆರಳಚ್ಚು' ಶೋಧ ಮಾಡುವಾಗ ಈ ಒತ್ತಕ್ಷರ ವಿರಹಿತ ಭಾಷೆಯ ಪ್ರಯತ್ನ ನಡೆಯಿತು. ಈ ಮಾದರಿ ಇಲ್ಲಿ ಗಮನಾರ್ಹವಾಗಿದೆ.

..."ನಿಂನ ಮೇಲೆ ಕೊಡಗಿನ ರಾಜರ ಬಹಳ ಮೆಹರ್ಬಾನಗಿ ಇದೆ......"

(ಟೀಪ್ಪುಸುಲ್ತಾನನು ಕೊಡಗಿನರಾಜನನ್ನು ಒಲಿಸಿಕೊಳ್ಳಲು ಖಾದರ್‌ಖಾನನೆಂಬವನಿಗೆ ಬರೆದ ಪತ್ರದ ಒಂದು ವಾಕ್ಯ)

ದಿವಂಗತ ಬಿ. ಎಂ. ಶ್ರೀ ಅವರು ಕನ್ನಡದ ಬಾವುಟದಲ್ಲಿ ತದನಂತರ ಕೈಕೊಂಡ ಕನ್ನಡ ಮುದ್ರಣದ ಸುಧಾರಣೆಯನ್ನು ಇದು ಗಮನಕ್ಕೆ ತರುವಂತಿದೆ. ಇದರಲ್ಲಿ ಒತ್ತಕ್ಷರಗಳನ್ನು ಮುದ್ರಿಸಿದ ಕ್ರಮವನ್ನು ಗಮನಿಸಬಹುದು.

ರಾಜೇಂದ್ರ ನಾಮೆ-ಅಂದರೆ ಹಾಲೇರಿ ವೀರರಾಜೇಂದ್ರ ಒಡೆಯರು ಬರೆಸಿದ ಕೊಡಗಿನ ಚರಿತ್ರವು-ಮದರಾಸಿನ ಅಪ್ಪಣೆಯಿಂದ ಪ್ರಕಟಿಸಿದರು. ಇದರಲ್ಲಿ ಒಂದು ವಾಕ್ಯವನ್ನೂ ಕೊಡಬಹುದು.

ಅಂಗೀರಸ ಸಂವತ್ಸರದಲ್ಲಿ ವೀರರಾಜ ಪಡೆಯರ ಪೌತ್ರರಾದ ಅಪ್ಪಾಜಿ ವಡೆಯರ ಪುತ್ರರಾದ ಮುದ್ದುರಾಜ ವಡೆಯರವರು ಪೂರ್ವಾರಭ್ಯ ದೊರೆತನ ಮಾಡಿ ಬಂದಂಥಾ ಸಿಂಹಾಸನದ ಜಾಗಾ ಹಾಲೇರಿ ಅರಮನೆ. ಆದದರಿಂದ ಅಲ್ಲಿ ಇದ್ದುಕೊಂಡು ರಾಜ್ಯಭಾರ ಮಾಡತ್ತಾ ಇದ್ದರು*

ಉಪಸಂಹಾರ :

ಎಷ್ಟೋ ವರ್ಷಗಳ ಪೂರ್ವದಲ್ಲಿ ಕನ್ನಡನಾಡಿನಲ್ಲಿ ನಡೆದಿರುವ ಈ ಪ್ರಯತ್ನವು ಅಭ್ಯಾಸಯೋಗ್ಯವಾಗಿದೆ. ಸುದೈವಕ್ಕೆ ಮಡಕೇರಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಅನೇಕ ಕಡತಗಳು, ಕಾಗದಗಳು, ದಾಖಲೆಗಳು ಸಿಗಲು ಸಾಧ್ಯವಿದೆ. ಅವುಗಳ ಅಭ್ಯಾಸ ಈಗ ನಡೆಯಬೇಕು. ಪರ್ಶಿಯನ್, ಇಂಗ್ಲೀಷ್ ಭಾಷೆಗಳ ಕಾಲದಲ್ಲಿಯೇ ಕನ್ನಡಕ್ಕೂ ರಾಜಭಾಷೆಯ ಸ್ಥಾನವನ್ನು ಕೊಡಗಿನ ಹಾಲೇರಿ ರಾಜರು ತುಂದುಕೊಟ್ಟದ್ದು ಅಭಿಮಾನಾಸ್ಪದ ವಿಷಯವಾಗಿದೆ. ಪರಿಭಾಷೆಯ ತೊಡಕನ್ನು ಅವರು ಬಿಡಿಸಿದ ರೀತಿಯೂ ಕೂಡ ಇಂದು ನಮಗೆ ವಿಶೇಷವಾಗಿ ಮಾರ್ಗದರ್ಶಿಯಾಗಿದೆ.

ಆಧಾರ ಗ್ರಂಥಗಳು

೧ ಡಿ. ಎನ್. ಕೃಷ್ಣಯ್ಯ—ಕೊಡಗಿನ ಇತಿಹಾಸ, ಪ್ರಸಾರಾಂಗ
ಮೈಸೂರ ವಿಶ್ವವಿದ್ಯಾನಿಲಯ, ಮೈಸೂರು ೧೯೭೪

೨ ಲಿಂಗರಾಜೇಂದ್ರ ಒಡೆಯನು ಹೊರಡಿಸಿದ ಹುಕುಮುಗಳು.

೩ ಕೊಡಗಿನ ರಾಜರ ಪತ್ರವ್ಯವಹಾರಗಳು.

೪ ರಾಜೇಂದ್ರ ನಾಮೆ.

೫ Coorg Memoirs—Moogling.

"ಕರ್ನಾಟಕದಲ್ಲಿ ಜನಸಂಖ್ಯಾ ಸಮಸ್ಯೆ"

ಲೇಖಕರು : ಪ್ರೊ. ಈರಣ್ಣ ಪಟ್ಟಿ.

ಪ್ರಕಾಶಕರು : ಐ ಟಿ ಎಚ್ ಪ್ರಕಾಶನ, ಅಶೋಕ ಕಾಲನಿ ಬನಹಟ್ಟಿ.

ಪುಟಗಳು IV + ೫೧ ಬೆಲೆ ರೂ. ೬-೫೦

—ಡಾ. ಎಮ್. ಸಿ. ಕೊಡ್ಲಿ

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯು ಒಂದು ದೊಡ್ಡ ಸಮಸ್ಯೆಯಾಗಿದೆ. ನಮ್ಮ ದೇಶವು ಇದಕ್ಕೆ ಹೊರತಾಗಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳು ಎರಡು ಶತಮಾನಗಳ ಹಿಂದೆ ಔದ್ಯೋಗಿಕ ಕ್ರಾಂತಿಯನ್ನು ಅನುಭವವಿಸುತ್ತಿದ್ದಾಗ ಆ ದೇಶಗಳಲ್ಲಿ ಜನಸಂಖ್ಯೆ ಬೆಳೆಯುವ ಗತಿಯು ತೀರಾ ಕಡಿಮೆ ಇತ್ತು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಆಧುನಿಕ ಔಷಧೋಪಚಾರಗಳು ಮತ್ತು ಸಾರ್ವಜನಿಕ ಆರೋಗ್ಯ ರಕ್ಷಣಾ ಕ್ರಮಗಳು ಔದ್ಯೋಗಿಕ ಕ್ರಾಂತಿಯು ನಂತರ ಬಂದು ಜನಸಾಮಾನ್ಯರ ಆಯುಷ್ಯವನ್ನು ಹೆಚ್ಚಿಸಿದವು. ಆದರೆ ಈಗ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಔದ್ಯೋಗಿಕ ಕ್ರಾಂತಿಯ ಮೊದಲೇ ಆರೋಗ್ಯ ರಕ್ಷಣಾ ಕ್ರಮಗಳು ಆಚರಣೆಯಲ್ಲಿ ಬಂದವು. ಇದರಿಂದ ಮರಣ ಪ್ರಮಾಣವು ಕಡಿಮೆಯಾಗಿ ಜನನ ಪ್ರಮಾಣವು ಅದೇ ರೀತಿಯಲ್ಲಿ ಕಡಿಮೆಯಾಗದ್ದರಿಂದ ಜನಸಂಖ್ಯೆ ಬೆಳೆಯುವ ಗತಿಯು ಬಡ ದೇಶಗಳಲ್ಲಿ ಹೆಚ್ಚಿತು. ಈ ದೇಶಗಳಲ್ಲಿ ವೈದ್ಯಕೀಯ ಸೌಲಭ್ಯ ಇನ್ನೂ ಹೆಚ್ಚಾಗಬೇಕಾಗಿದೆ. ಯಾಕಂದರೆ ಸಣ್ಣ ಮಕ್ಕಳು ಹಾಗೂ ಕೂಸುಗಳ ಮರಣ ಪ್ರಮಾಣವು ಈ ದೇಶಗಳಲ್ಲಿ ಇನ್ನೂ ಹೆಚ್ಚಿಗಿದೆ. ಆದ್ದರಿಂದ ಈ ದೇಶಗಳು ಜನನ ಪ್ರಮಾಣವನ್ನು ಕಡಿಮೆ ಮಾಡದೆ ಬೇರೆ ಮಾರ್ಗವಿಲ್ಲ.

ಪ್ರೊ. ಈರಣ್ಣ ಹಟ್ಟಿಯವರು ಕರ್ನಾಟಕ ಜನಸಂಖ್ಯಾ ಸಮಸ್ಯೆಯನ್ನು ಜಗತ್ತಿನ ಹಾಗೂ ರಾಷ್ಟ್ರದ ಜನಸಂಖ್ಯಾ ಸಮಸ್ಯೆಯ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ತೀವ್ರಗತಿಯಿಂದ ಬೆಳೆಯುವ ಜನಸಂಖ್ಯೆಯಿಂದ ದೇಶದ ಆರ್ಥಿಕ ಅಭಿವೃದ್ಧಿಯ ಮೇಲೆ ಯಾವ

ಪರಿಣಾಮಗಳಾಗುತ್ತವೆಂಬುದನ್ನು ಲೇಖಕರು ತೋರಿಸಲು ಪ್ರಯತ್ನ ಪಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಕುಟುಂಬ ಯೋಜನಾ ಕ್ರಮಗಳ ಪ್ರಗತಿಯನ್ನು ಲೇಖಕರು ವಿವರಿಸಿದ್ದಾರೆ. ೧೯೭೧ ರಲ್ಲಿ ಭಾರತದಲ್ಲಿ ಮೊಟ್ಟ ಮೊದಲು ಜನಗಣತಿಯನ್ನು ನಡೆಸಲಾಯಿತೆಂದು ಲೇಖಕರು ಈ ಪುಸ್ತಕದಲ್ಲಿ ಬರೆದಿರುವದು (ಪುಟ ೭) ಬಹುಶಃ ಪ್ರಿಂಟಿನ ದೋಷವಾಗಿರಬಹುದು. ನಮ್ಮ ದೇಶದಲ್ಲಿ ಮೊದಲ ಜನಗಣತಿಯನ್ನು ೧೮೭೨ ರಲ್ಲಿ ನಡೆಸಲಾಯಿತು. ಅಂಕಿ ಅಂಶಗಳೇ ಹೆಚ್ಚಾಗಿರುವ ಈ ಪುಸ್ತಕವು ಸಾಮಾನ್ಯ ಓದುಗರಿಗೆ ಜನಸಂಖ್ಯಾ ಸಮಸ್ಯೆಯ ಅರಿವನ್ನು ತಂದು ಕೊಡಲು ಸಹಾಯವಾಗಬಹುದು.

ದೇವರೆಂಬ ಸರ್ವಶಕ್ತನ ದಿ. ಲಾಸ್ಟ ಟೆಸ್ಟಾಮೆಂಟ್.

—ಈಶ್ವರ ಕಮ್ಮಾರ

ಎಪ್ಪಾ ! ನನ್ನ ಬತಿಗೆಡಿಸ ಬ್ಯಾಡ್ರೊ್ಯ
ನಾ ಹಂತಾವ, ಹಿಂತಾವ ಅಂತ
ಸುಳ್ಳs ಹೊಗಳ ಬ್ಯಾಡ್ರ್ಯೋ ಎಪ್ಪಾ,
ನಿಮ್ಮ ಕೈ ಮುಗೀತೇನಿ !

ಇದು ಕಲಿಯುಗದ ಇಪ್ಪತ್ತನೆಯ ಶತಮಾನ.
ಈಗ, ಹಂತಾವು ಹಿಂತಾವು ನಡ್ಯೂದಿಲ್ಲ.

ನನಗೆ ಈಗ ರಿಸ್ಟ್ರಿಕ್ಸನ್ನೂ
ಬಾಳ ಅದಾವ ಏನಪಾ.

ಎಲ್ಲಾದಕೂ ಹಿಂಬಾಲಿದ್ದವರ
ಅಪ್ರೂವಲ್ಲೂ, ರಿಕಮೆಂಡೇಶನ್ನೂ ಬೇಕೇಬೇಕು !

ಅದರ ವ್ಯಾಗ ಆ ಮಾರಾಯ
ನರಸಿಂಹಯ್ಯನ ಕಣ್ಣು
ಈ ಬಂಡಾಯದವರ ಕೈ ತಪ್ಪಿಸಿಕೊಂಡು
ಕೆಲಸಾ ಮಾಡಿ ಕೊಡಬೇಕಾಕ್ಕತಿ !

ಅದರಾಗ, ನಾ ಏನೇನಂತ ಮಾಡ್ಲಿ ನೀವs ಹೇಳ್ರಿ?
ಬೇಂದ್ರೆ ಕವಿತಾ ಬರ್ಯೂ ಕಾಲಕ್ಕ
ಆಗ ನೀವೆಲ್ಲಾರೂ ಕೂಡಿ
ಬರೇ ಮೂವತ್ತು ಮೂರು ಕೋಟಿ ಇದ್ರಿ.

ಈಗ, ನೀವಪ್ಪಾ
ಎಪ್ಪತ್ಮೂರರ ಸನೆಸನೇಕ ಬಂದಾಂಗ ಕಾಣತೈತಿ.

ಹಿಂದಕ್ಕ ನಾನು :
ತುಪ್ಪದ ದೀವಿಗಿ ಹಚ್ಚಿದವರಿಗೆ
ಕಣಬಟ್ಟ ಕೊಟ್ಟವರಿಗೆ
ವ್ರತಾ ಹಿಡದವರಿಗೆ
ನನ್ನ ಪುರಾಣಾ ಓದಿದವರಿಗೆ
ಪತ್ತರಿ ಗಿಡಾ ಸುತ್ತಿದವರಿಗೆ
ಜಗಾ ಹೊತ್ತಾವರಿಗೆ
ಬೇಡಿ ಬೇಡಿದ್ದನ್ನೆಲ್ಲಾ ಕೊಟ್ಟೇನಿ.

ಹಂಗ ನೋಡಿದರ ನೀವೆಲ್ಲಾರೂ
ನನ್ನ ನಂಬೇನs ಕರೀತೀರಿ.
ಪೂಜಿ ಮಾಡತೀರಿ
ವ್ರತಾ ಹಿಡಿತೀರಿ
ಅದೆಲ್ಲಾ ನನಗ್ಗೊತ್ತು !

ನೀವs ನೋಡ್ರಿ :
ಎಲ್ಲಾರಿಗೂನು ಬಂಪರ ಬಹುಮಾನಾ ಕೊಡೋತಂದ್ರು
ಅವೇನು ಬ್ಲ್ಯಾಕಲೆ ಮಾರೋ
ಸಿನೇಮಾ ಟಿಕೇಟs ?

ವರಾ ಸುದ್ದ ಇರಬೇಕು
ದೊಡ್ಡ ನೌಕರೀನೂ ಇರಬೇಕು
ವರದಕ್ಷಿಣಾ ಮಾತ್ರ ಕೇಳಬ್ಯಾಡಂದ್ರ
ಅದೇನ ಪ್ಯಾಟ್ಯಾಗಿನ ಟೊಮ್ಯಾಟೋ ಏನಬೇ?

ವಸೂಲಿ ಇಲ್ಲದನs ನೌಕರಿ ಸಿಗಬೇಕು
ಅಂದ್ರ ಹೆಂಗಪಾ ?

ಇವೆಲ್ಲಾ ಗಂಭೀರ ವಿಷಯಾ !
ಇವನ್ನ ಬಗೇ ಹರಿಸೋದು
ಈಗ ನನ್ನ ಕೈಯೊಳಗ ಉಳಿದಿಲ್ಲ ಏನಪಾ.

ಅದೂ ಹೋಗ್ಲಿ :
ಟ್ರಕ್ಕಿನ ಗಾಡಿ ಡ್ರಾಯ್ವರಗ
ಅಪಘಾತಾ ಮಾಡಬ್ಯಾಡಾ ಅಂದ್ರು
ಅವರ ಪಕ್ಕಿಗೆ ಚ್ಯುತಿ ಬಂದಾಂಗ ಆಗೋದಿಲ್ಲಾ?
ಯಾಕ ವಿಚಾರಿಸೋದಿಲ್ಲಾ ನೀವು?

ಕೆಲವೊಂದು ಖಾತೇದವರಿಗೆ
ಲಂಚಾ ತಿನ್ನೋ ಹಕ್ಕ ಇಲ್ಲಂತ
ಹೇಳೋ ಹಕ್ಕು ನನಗೇನೈತಿ?
ಅಥವಾ ನಿಮಗಾರ ಏನೈತಿ?

ತಲಾಟಿಯವರಿಗೆ, ಗ್ರಾಮಸೇವಕರಿಗೆ
ಹಣಾ ಕೊಡಬ್ಯಾಡ್ರಿ ಅಂದ್ರು
ಹೊಲಮನಿ ವ್ಯವಹಾರ ಸಾಗೋದು ಹೆಂಗ?

ಆಸ್ಪತ್ರಿಯೊಳಗ ಉಪಚಾರ ಇಲ್ಲದನ
ರೋಗಿಗಳು ವಿನಾಕಾರಣ ಸಾಯದಿದ್ದರ
ಅದಕ್ಕ ಸರಕಾರಿ ಆಸ್ಪತ್ರಿ ಅಂತ ಯಾಕ ಕರೀಬೇಕು?

ಮಂತ್ರಿಗಳಿಗೆ ಸುಳ್ಳು ಆಶ್ವಾಸನೆ
ಕೊಡಬ್ಯಾಡ್ರಿ ಅಂತ
ಹೇಳೋ ಅಧಿಕಾರ ನನಗಿಲ್ಲ.

ರೇಲು ಗಾಡಿಗಳನ್ನ, ಬಸ್ಸುಗಳನ್ನ
ವೇಳೆಗೆ ಸರಿಯಾಗಿ ಬಿಡಿಸೋದು
ನನ್ನಿಂದ ಆಗೋದಿಲ್ಲ.

ಶಾಲಾ ಮಾಸ್ತರರ ವ್ಯವಹಾರದಾಗ
ಕೈಹಾಕೋ ಧೈರ್ಯ ನನಗಿಲ್ಲಂತ
ಸ್ಪಷ್ಟವಾಗಿ ಹೇಳೀ ಬಿಡ್ತೀನಿ.

ಬೆಲೆಗಳು ಇಳಿಯೋದನ್ನ
ನೋಡಬೇಕಾದರ
ಇನ್ನೂ ನೂರು ವರುಷವಾದರೂ
ನೀವು ಕಾಯಬೇಕು !

ಇದೆಲ್ಲಾ ತಿಳಿದೂ ತಿಳಿದೂ
ಸುಮ್ಮನ ನೀವು ಕಾಡತೇರಿಪಾ !

ಕಡಿಕ ಆಗಲಿಲ್ಲಂತ
ಸುಳ್ಳs ನನ್ನ ಹೆಸರ ಕೆಡಸತೀರಿ.

ಇಷ್ಟಿನ್ಸೂ ಕೂಡಾ :
ಹರಿಜನ ಗಿರಿಜನರಿಗೆ ಪ್ರಥಮ ಪ್ರಾಶಸ್ತ್ಯ
ಕೊಡಬೇಕಂತ ಸವಲತ್ತು ಹಿಡಕೊಂಡು
ಮುಂದೆ ನಿಂತರs

ಈ ಮಹಾಶಯರು ಕನಸಿನ್ಯಾಗ ಸುದ್ಧಾ
ನನ್ನ ನೆನಪು ತೆಗೆಯೋದಿಲ್ಲಾ !
ಅದರ ವಿರುದ್ಧವಾಗಿ
ಈ ಜುಟ್ಟಲದವರು, ಇಬತ್ತಿಯವರು
ಗಂಧಾ, ಕುಂಕುಮಾ, ಭಂಡಾರದವರು
ನನ್ನ ಎಲ್ಲ್ಯೂ ಬಿಡವಲ್ರು

ಕಾಯದೇ ಪ್ರಕಾರ, ಸೂಜಿ ಮನಿಯಷ್ಟು ಸುದ್ದಾ
ಸವಲತ್ತು ಸಿಗೋದಿಲ್ಲಂತಂದ್ರೂನೂs
ಕೇಳವಲ್ರು.
ಭಜನಿ ಕುಟ್ಟೇ ಕುಟ್ಟತಾರ !

ನಿಮಗ ಏನೇನ ಕೊಡಬೇಕು
ಅಂಬೂದು ನನಗೆ ಗೊತ್ತೈತಿ ಏನಪಾ
ಅದೆಲ್ಲಾ ಪಟ್ಟಿ ಮಾಡಿ ಇಟ್ಟೇನಿ :

ಆದರs ಅದು ನಮ್ಮ ಮಂತ್ರಿಮಂಡಳದಾಗ
ತಿದ್ದು ಪಡಿ ಆಗಿ, ಅಪ್ರೂ ಆಗಿ
ಬರಬೇಕು ಏನಪಾ !
ಅದು ಬಿಡುಗಡಿ ಆಗಿ ಬಂದ ಕೂಡ್ಲೇನs
ನಿಮಗೆಲ್ಲಾ ಕೊಟ್ಟು ಬಿಡತೇನಿ
ಅಲ್ಲೀ ವರಿಗೆ ಆದರೂ
ಒಂದು ಸ್ವಲ್ಪ ಭಜನೀ ಕುಟ್ಟೋದನ್ನ ನಿಲ್ಲಸರಿ.

ಈ ನಡುವ ನಿಮಗೊಂದು
ಪುಟ್ಟ ಸಲಹಾ ಏನಂತದ್ರs:
ನಿಮಗೇನಾರ ಅಕಸ್ಮಾತ್
ಲಾಟ್ರೀ ಹತ್ತಿದರs

ಪುಕ್ಕಟೆ ದೊಡ್ಡ ನೌಕರಿ ಬಂದ್ರs
ನಿಮ್ಮ ಮಗಳಿಗೆ ಹೇಳಿದಂಥಾ ವರಾ ಸಿಕ್ಕರs
ಲಂಚಾ ವಗೈರೆ ಏನೂ ಇಲ್ಲದsನ
ನಿಮ್ಮ ಸರಕಾರಿ ಕೆಲಸ ಆದರs
ಅದೆಲ್ಲಾ ನನ್ನ ಕೃಪಾದಿಂದನs
ಆದುವು ಅಂತ ಒಂದಿಷ್ಟು
ಚಲೋತ್ನೆಂಗನs ಪ್ರಚಾರಾ ಮಾಡ್ರಿ
ಅದು ಪತ್ರಿಕೆಯೊಳಗೂ ಬರ್ಲಿ.
ಅದರಿಂದ ನಿಮಗೂ ಲಾಭ ಆಕ್ಕತಿ
ನನಗೂ ಬಾಳ ಚಲೊ ಆಗತ್ತೈತಿ !
ಅದು ಏನ ಅನ್ನೂದನ್ನ
ನಾ ಮುಂದ್ ಹೇಳತೇನಿ !

ಬಳ್ಳಾರಿ ಜಿಲ್ಲೆಯಲ್ಲಿ ದೊರೆತ ಪ್ರಥಮ ಹೊಯ್ಸಳ ತಾಮ್ರ ಶಾಸನ

ಎಸ್. ರಾಜಶೇಖರ

ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ತಾರಾನಗರದ ಹತ್ತಿರ ನಾರೀಹಳ್ಳ ಪ್ರಾಜೆಕ್ಟ್ ಕೆಲಸ ಭರದಿಂದ ನಡೆದಿದ್ದು, ಆ ಪ್ರಾಜೆಕ್ಟಿಗೆ ಹೊಂದಿಕೊಂಡಿರುವ ವೀರಾಪುರ ಗ್ರಾಮದ ಹಳೆಯ ಮನೆಯ ನೆಲದಲ್ಲಿ ಸಿಕ್ಕ ಮೂರು ತಾಮ್ರ ಶಾಸನಗಳು ೧೯೭೫ರಲ್ಲಿ ಬೆಳಕಿಗೆ ಬಂದವು. ಆಗ ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯ ಶಾಸ್ತ್ರ ವಿಭಾಗದ ವರಿಷ್ಠರಾದ ಡಾ॥ ಷ. ಶೆಟ್ಟರ್ ಅವರ ಆದೇಶದ ಮೇರೆಗೆ ನಾನು ತಾರಾನಗರಕ್ಕೆ ತೆರಳಿ, ಆ ತಾಮ್ರ ಶಾಸನಗಳನ್ನು ಸ್ವಚ್ಛಗೊಳಿಸಿ, ಅವುಗಳ ಛಾಯಾ ಚಿತ್ರ ತೆಗೆದು, ಶಾಸನಗಳ ಪಾಠವನ್ನು ಸಹ ಬರೆದುಕೊಂಡು ಬಂದೆ. ಆ ಪಾಠವನ್ನೇ ಇಲ್ಲಿ ಕೊಡಲಾಗಿದೆ.

ದೊರೆತ ಮೂರು ಶಾಸನಗಳಲ್ಲಿ ಒಂದು ಹೊಯ್ಸಳ ವಂಶದವರದು. ಇದು ಬಳ್ಳಾರಿ ಜಿಲ್ಲೆಯಲ್ಲಿ ಇದುವರೆಗೆ ದೊರೆತ ಪ್ರಥಮ ಹೊಯ್ಸಳ ತಾಮ್ರ ಶಾಸನ. ಇದರಲ್ಲಿ ಒಟ್ಟು ಮೂರು ಫಲಕಗಳಿದ್ದು, ಪ್ರತಿಯೊಂದೂ ಸುಮಾರು ೧' ೫" ಉದ್ದ ' ೮.೫" ಅಗಲ ಇವೆ. ಫಲಕಗಳ ಅಂಚು ಎತ್ತರವಾಗಿದ್ದು, ತಗ್ಗಿನ ಭಾಗದಲ್ಲಿ ಶಾಸನವನ್ನು ಕೊರೆಯಲಾಗಿದೆ. ಇವುಗಳಲ್ಲಿ ಮೊದಲ ಫಲಕದ ಹಿಂಬದಿ, ಎರಡನೇ ಫಲಕದ ಎರಡೂ ಬದಿ ಮತ್ತು ಮೂರನೇ ಫಲಕದ ಮುಂಬದಿಯಲ್ಲಿ ಮಾತ್ರ ಶಾಸನ ಕೊರೆಯಲಾಗಿದೆ. ಮೊದಲನೇ ಫಲಕದ ಹಿಂಬದಿಯಲ್ಲಿ ೧೯ ಸಾಲುಗಳನ್ನೂ, ಎರಡನೇ ಫಲಕದ ಮುಂಬದಿಯಲ್ಲಿ ೨೧ ಸಾಲುಗಳನ್ನು, ಹಿಂಬದಿಯಲ್ಲಿ ೧೯ ಸಾಲುಗಳನ್ನು ಮತ್ತು ಮೂರನೇ ಫಲಕದ ಮುಂಬದಿಯಲ್ಲಿ ೧೯ ಸಾಲುಗಳನ್ನು ಕೊರೆಯಲಾಗಿದೆ. ಒಟ್ಟು ೭೮ ಸಾಲುಗಳಿವೆ. ತಾಮ್ರ ಪಟಗಳನ್ನು ಜೋಡಿಸುವ ಉಂಗುರ (ಕೊಂಡಿ) ಮತ್ತು ಮುದ್ರೆ ಕಳೆದು ಹೋಗಿವೆ.

ಹೊಯ್ಸಳ ಇಮ್ಮಡಿ ನರಸಿಂಹನ ಆಳ್ವಿಕೆಯ ಈ ಶಾಸನದ ಕಾಲ ಶಕವರ್ಷ ೧೧೪೬ನೆಯ ತಾರಣ ಸಂವತ್ಸರ, ಪುಷ್ಯ ಶುದ್ಧ ಏಕಾದಶಿ, ಆದಿತ್ಯವಾರ, ಉತ್ತರಾಯಣ ಸಂಕ್ರಮಣ.

ಶಾಸನದ ಪಾಠ ಕೆಳಕಂಡಂತಿದೆ:

ಮೊದಲನೇ ಫಲಕ (ಹಿಂಬದಿ)

೧ ಪಾಯಾದ್ಭುಜಂ ನೃಸಿಂಹಸ್ಯ ದಂಷ್ಟ್ರಿಕಾಪೂರ್ವ್ವ ಪೌತ್ರಿಣಃ
೨ ಸಹಾಧ್ಯಾಯಾಸು ಒಂಧೇನ ಭುವನೋದ್ಧಾರಕರ್ಮ್ಮಣಿ
೩ ಸಳನೆಂಬ ಯಾದವಂ ಹೊಯ್ಸಳನಾದಂ ಶಶಕಪುರದ
೪ ವಾಸಂತಿಕೆಯೊಳ್ಮುಳಿದು ಪುಲಿಪಾಯ್ವುದುಂ ಪೊ
೫ ಯ್ಸಳ ಎನೆ ಮುನಿ ಬಱಿಕಮಾಯ್ತು ಪೊಯ್ಸಳ ವಂ
೬ ಶಂ ॥ ಎನಿಬರ್ಪ್ಪೊಯ್ಸಳ ವಂಶ್ಯರಂ ರನಿಬರುಂ ಪ್ರಖ್ಯಾತ
೭ ರಾರಾಯರೊಳೆ ವಿನಯಾದಿತ್ಯನವಂಗೆ ಪುತ್ರ ನೆಱೆ
೮ ಯಂಗಂ ತತ್ಸುತಂ ವಿಷ್ಣು ತತ್ತನೂಜಾತ ನರಸಿಂಹನಾತನ
೯ ಮಗಂ ಬಲ್ಲಾಳನಾತಂಗೆ ಸೂನು ನೃಸಿಂಹಂ ಮಗರಾಧಿ ರಾ
೧೦ ಯ ಲಯ ಕಾಳಂ ಚೋಳ ನಿಸ್ಸಾರಕಂ ॥ ಕಡಿತಕ್ಕೇ ಮಿತ್ರ(ತ್ತು ?)ನಾ
೧೧ ಲ್ಕುಂ ಕಡಲ ಕಡೆವರಂ ಧಾತ್ರಿ ಕೀರ್ತ್ತಿ ಸೃಜಂ ಸೊಮರ್ಮ್ಮಡಿಗಳ್ಗೇಱಿ
೧೨ ತ್ತು ದಿಕ್ಕಾಂತೆಯರ್ಗ್ಗೆ ಸಕಳ ದಿಕ್ಪಾಳರುತ್ತಂಸಮುಂ ಪಾಯ್ದಡ
೧೩ ದೇಱಿತ್ತಾಜ್ಞೆ ಸಿಂಹಾಸನಮನೊಸೆದು ತಾನೇಱಿ ಕುಳ್ಳಿರ್ದ್ದುಂ
೧೪ ನೂರ್ಮ್ಮಡಿ ವೀರನಾರಸಿಂಹಂ ಯದುಕುಳ ತಿಳಕಂ ಸೋಮವಂಶ
೧೫ ಪ್ರದೀಪಂ ॥ ಆ ನಾರಸಿಂಹದೇವ ಸಭಾನಳಿನೀ ರಾಜಹಂಸನಾಶ್ರಿ
೧೬ ತ ಜನತಾ ದಾನಾಭಿಮಾನ ನಮಿತ ಚಮೂನಾಥ ರಾಯದಂಡ
೧೭ ನಾಯಕ ಹನುಮಂ ॥ ಆತನ ಕಲಿಬಲ್ಲಾಳನ ತಾತನ ಪದ್ಮಾಂ
೧೮ ಬಿಕಾ ಪವಿತ್ರೋದರ ಸಂಜಾತನ ಭಾರದ್ವಾಜ ಖ್ಯಾತನ ಕಾಣ್ವ
೧೯ ಸ್ವಯಾಭಿ ಜಾತನ ಜನಕರ್ ॥ ಪುರುಷತ್ರಯ ಮೋಮೇಣಿದು

ಎರಡನೇ ಫಲಕ (ಮುಂಬದಿ)

೨೦ ಪುರುಷಾರ್ತ್ಥತ್ರಯ ಮೋಪೇಟಿಮೆನೆ ಮೂವಸ್ಸೋದರರುಂ ಪೆ
೨೧ ಸರ್ವ್ವಡೆದರ್ವ್ವಾಯಿರಸಂ ಲಕುಮರಸನಮರ ದಂಡಾಧೀಶಂ ॥ ಆ ಮೂ
೨೨ ವರೊಳಗ್ರಭವಂ ಮಾಮರಸಂ ವಿತರಣೈಕ ಲಕ್ಷ್ಮೀ ವಿಕಚತ್ತಾಮರಸಂ

೨೩ ವೀರಗುಣೋದ್ಧಾಮರಸಂ ಪಡೆದ ಪುತ್ರನಮಿತ ಚಮೂಪಂ ॥ ವೊ
೨೪ ನೆಯೊಳೆ ಮತ್ತಕರವಾಳಂ ಮನೆಯೊಳೆ ಮನ್ಮಂತ್ರಸಿದ್ಧಿ ಸಂಕಟ ದೊ
೨೫ ಳೆ ಮತ್ತನುವೆನಿಪ ಸವಿಹಿತಂ ರಾಯನ್ನಸಿಂಹನನಚ್ಚಿ(?) ನಚ್ಚು ಪೆ
೨೬ ಸಳ ಹನುಮಂ ॥ ಇಱಿಯಲೆ ಕಲ್ತ ಬಱಿಕ ಮಿಲ್ಲ ಸರಿಭಂಗಂ ಶೌರ್ಯ
೨೭ ದೊಳೆ ಚಾಗಮಂ ಮೆಱೆಯಲೆ ಕಲ್ತ ಬಱಿಕ್ಕ ಮಿಲ್ಲ ಕಲಿಕಂಡೌಧಾರ್ಯ ದೊ
೨೮ ಳೆ ಪೆರ್ಮೆಯಿಂ ಪೆಱರಾಪ್ಸೆಯ್ಸಳ ರಾಜ್ಯದೊಳೆ ಪೆಸರ್ಗೊಳಲೆದಂಡಾಧಿಪ
೨೯ ರ್ಮ್ಮಿಸಲೇಱಿಱಿವಂಗೋಸಗೆ ಚಾಗಮಿವನಮಿತಂ ಶೌರ್ಯಂ ಜನಾನಂದವಾ (?)
೩೦ ಅಮಿತಂ ರಾಯನ್ನಸಿಂಹ ಪೆಸಳ ಹನುಮಂ ವೀರದೊಳೆ ಚಾಗದೊ
೩೧ ಳೆ ಹಿಮಸೇತು ಪ್ರತಿ ಬದ್ಧಮಪ್ಪ ಜಸಮಂ ಕಯ್ಕೊಂಡನಾ ತಂದೆಯಿಂದ
೩೨ ಮಗಂ ವೀರನುದಾರನೆಂಬ ಗುಣದಿಂದೊಪ್ಪಿರ್ದ್ದ ತಂದೆಗೊಂದು ಮುಖೀಕ್ಕಗ್ಗಳ
೩೩ ಮಾದ ಷಣ್ಮುಖನವೊಲೆ ಒಲ್ಲಾಳದಂಡಾಧಿಪಂ ॥ ಸ್ವಸ್ತಿ ಸಮಸ್ತ ಭು
೩೪ ವನಾಶ್ರಯಂ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ
೩೫ ದ್ವಾರವತೀ ಪುರವರಾಧೀಶ್ವರಂ ಯಾದವ ಕುಳಾಂಬರದ್ಯುಮಣಿ ಸಂ
೩೬ ವ್ಯಕ್ತ ಚೂಡಾಮಣಿ ಮಲೆರಾಜ ರಾಜನ ಪ್ರಮಿತ ತೇಜಂ ಮಲಪರೊ
೩೭ ಳೆ ಗಂಡಂ ಗಂಡಭೇರುಂಡನ ಸಹಾಯ ಶೂರಂ ಮಂದರ ಧೀರಂ ಶನಿವಾರ ಸಿ
೩೮ ದ್ಧಿ ಶರಣಾಗತವಾರ್ಧಿ ಗಿರಿದುರ್ಗ್ಗಮಲ್ಲಂ ವೈರಿಸಿರಸೆಲ್ಲಂ ಚಲದಂಕ ರಾ
೩೯ ಮನಹಿತ ಗಜ ಭೀಮಂ ಚೋಳರಾಯ ರಾಜ್ಯೋದ್ಧಾರಕ ಮಗರಾಧಿರಾ
೪೦ ಯ ಸೈನ್ಯಸಂಹಾರಕಂ ವ್ಯ (?) ಳನಲ್ಲೂ (?) ರ ಕಾಳಾಗ್ನಿ ರುದ್ರ

ಎರಡನೇ ಫಲಕ (ಹಿಂಬದಿ).

೪೧ ಆರೆಲಾತ್ತ್ರೆಳ ದುರ್ಗ್ಗ ನಿರವಲ ಯಾನಿಳಂ ದ್ರವಿಳ ಮಂಡಳ ನಿ
೪೨ ರ್ದ್ದಾಮ ಧಾಮಂ ಬಾಣೋಧರೆಯ ಗಜಘಟಾಸಹಿತ ಸಪ್ತಾಂ
೪೩ ಗ ಗ್ರಹಣ ಭುಜಬಳಮಲ್ಲಂ ನಿಶ್ಯಂಕ ಪ್ರತಾಪ ಚಕ್ರವರ್ತಿ ಹೊ
೪೪ ಯ್ಸಳ ಶ್ರೀವೀರ ನಾರಸಿಂಹದೇವರ ಪೂರ್ವ್ವ ದಿಗ್ವಿಜಯದೊಳ
೪೫ ಪೂರ್ವ್ವ ಸಾದಿತ ಕರಿತುರಗ ರತ್ನ ವಸ್ತು ವಿಸ್ತಾರಿತ ವಿಜಯ
೪೬ ಲಕ್ಷ್ಮೀ ವಿಳಾಸಮಸೆಯೆ ನಿಜರಾಜಧಾನಿ ಧೋರಸಮುದ್ರದ
೪೭ ನೆಲೆವೀಡಿನೊಳ್ಸುಖ ಸಂಕಥಾ ವಿನೋದದಿಂ ಪೃಥ್ವೀರಾಜ್ಯಂಗೆಯ್ವುತ್ತು

೪೮ ಮೀರೆ ತತ್ಪಾದ ಪದ್ಮೋಪಜೀವಿ ಶ್ರೀಮನ್ಮಹಾಪ್ರಧಾನಂ ಮಹಾಪಸಾ

೪೯ ಯ್ತಂ ಯಾದವರಾಯ ದಕ್ಷಿಣ ಭುಜಾ ದಂಡಂ ಪಗೆ ಮಚ್ಚೆ ಗಂಡಂ

೫೦ ರಾಯ ನರಸಿಂಹಪೆಸಳ ಹನುಮಂತಂ ಹಯಾರೂಢ ರೇವನ್ತಂ ಸ

೫೧ ಬಳ ತ್ರಿಣೇತ್ರಂ ಸಜ್ಜನ ಮಿತ್ರನಾರೂಢ ವಿದ್ಯಾ ವಿಳಾಸ ವೀರ ವಿಜಯ

೫೨ ಲಕ್ಷ್ಮೀ ನಿತ್ಯ ನಿವಾಸ ನಮಿತಯ್ಯ ದಂಡ ನಾಯಕರ್ ಮುಂನಂ ಶ್ರೀವೀರ ಬ

೫೩ ಲ್ಲಾಳ ದೇವರ ಶ್ರೀಹಸ್ತದಿಂ ಧಾರಾಪೂರ್ಬಕಂ ಮಾಡಿ ಕಟ್ಟುಗುತ್ತಗೆ ಪಿಂ

೫೪ ಡಾ ದಾನಂ ಗದ್ಯಾಣ ಎಪ್ಪತ್ತಲು ಮೊದಲಂ ತಿರುವಂತು ಬಿಡಿಸಿದ ಕಲ್ಕ

೫೫ ಣಿ ನಾಡೊಳಗಣಗ್ರಹಾರಂ ಶ್ರೀಪುರವನಾಗ್ರಯ (?) ಮಧ್ಯದೊಳೆ ತಾ

೫೬ ವೆತ್ತಿಸಿದ ತ್ರಿಕೂಟದೇವತಾಲಯದೊಳು ಪ್ರತಿಷ್ಠಿತರಾದ ಶ್ರೀ

೫೭ ಮದಮೃತೇಶ್ವರದೇವರ ವಾಮೇಶ್ವರದೇವರ ಲಕ್ಷ್ಮೀನಾರಾಯಣ ದೇವರಂ

೫೮ ಗ ಭೋಗಕ್ಕಂ ರಂಗ ಪೂಜೆಗಂ ನಿತ್ಯನೈಮಿತ್ತಿಕ ನೈವೇದ್ಯ ಚೈತ್ರ ಪವಿತ್ರಾದಿ

೫೯ ಪಂಚಪರ್ಬ್ಬಂಗಳಂ ಖಂಡಸ್ಫುಟಿತ ಜೀರ್ಣ್ಣೋದ್ಧಾರಕ್ಕಂ ವೇದ (?)ದಿಂದಂ ಸಲ್ವಂ

ಮೂರನೇ ಫಲಕ (ಮುಂಭಾಗ)

೬೦ ತಾಗ ಪಾದಪೂಜೆಯಿತೆರು (?) ಶ್ರೀವೀರನಾರಸಿಂಹದೇವರ ಶ್ರೀ

೬೧ ಹಸ್ತದಿಂ ಶ್ರೀವಜ್ರೇಶ್ವರದೇವರ ಸೋಮನಾಥದೇವರ ಸಂನಿಧಾ

೬೨ ನದೊಳೆ ಶಕವರ್ಷ ೧೧೪೬ನೆಯ ತಾರಣ ಸಂವತ್ಸರದ ಪುಷ್ಯ

೬೩ ಶುದ್ಧದೇಕಾದಶಿಯಾದಿತ್ಯವಾರದುತ್ತರಾಯಣ ಸಂಕ್ರಮಣ

೬೪ ವ್ಯತೀಪಾತದಂದಾರೊ(?)ಳು(?)ಕಸೀಖರಗ್ರಾಮವನಾದೇವರ್ಗ್ಗೆ ಸರ್ವಬಾಧಾ

೬೫ ಪರಿಹಾರ ಸರ್ವನಮಸ್ಯವಾಗಿ ಧಾರಾಪೂರ್ಬಕಂ ಮಾಡಿ ಚಂ

೬೬ ದ್ರಾರ್ಕತಾರಂಬರಂ ಸಲ್ವಂತಾಗಿ ಬಿಟ್ಟದತ್ತಿ ಮಂಗಳ ಮಹಾ ಶ್ರೀ ಶ್ರೀ ಶ್ರೀ

೬೭ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುನ್ಧರಾಂ । ಷಷ್ಟಿಂ ವರ್ಷ ಸ

೬೮ ಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ ॥ ಆ ಗ್ರಾಮದ ಚ

೬೯ ತುಸ್ಸೀಮೆ ಮೂಡಲ್ ಹಂದಿಗೊಳನಲ್ಲಿಂ ತೆಂಕ ಹೊಂನರಳಿಯಲ್ಲಿ ಪಡುವ ಹಾ

೭೦ ದರಿ ಯೊರ್ಬ್ಬೆಯತವಸಿಯಲ್ಲಿ ತೆಂಕಮರುಗೂರ ದೇವದಾನದ ಕ

೭೧ ಲ್ಲಲ್ಲಿಂ ಪಡುವ ಹುಂಗಿಯ ಕೆಱೆಯ ಕಿಬ್ಬಿಯಲ ಮೂಲೆ ಮಣಿಸೆಯ

೭೨ ಲ್ಲಿಂ ಪಡುವಲ್ಗುಂಡು ಗಲ್ಲಲ್ಲಿಂ ಪಡುವ ಹರಗಿನ ಬಟ್ಟೆಯೊಳಗಣ ಸಾತಿಸೆ

೭೩ ಟ್ಟಿಯ ಕೊಳನಲ್ಲಿಂದಾ ಬಟ್ಟೆಯ ತಿಪ್ಪೂರ ಬಟ್ಟೆಯ ಕೂಡಲಲ್ಲಿಂ ಬಡಗಲಿ

೭೪ ಱಿಯ ಮೇಗಣ ಬಿಲೊಣೆ (?) ಯಲ್ಲಿಂ ಬಡಗನಾಡು ತಿರ್ದ್ದಿದ ರಾಸಿ
ಗಲ್ಲಲ್ಲಿ ಮೂ

೭೫ ಡಲಾನೆಗಲ್ಲಲ್ಲಿಂ ಮೀಶಾನ್ಯದಡದಲ್ಲಿಂತೀ ಚತುಸ್ಸೀಮೆಯೊಳಗಣನುಗ್ರಾ

೭೬ ಮಂಗಳೊಳಗೆ ದಣ್ಣಾಯಕರ ಪ್ರಭು ಸಾಮ್ಯಕ್ಕೆ ಮಾಡಿವೆರ್ಗ್ಗಡೆ ಹಳ್ಳಿ ಮೆ(?)

೭೭ ಮಂ ದಣ್ಣಾಯಕನ ಕೆಱಿಯನು ನೇದೇದಿಗಂ ಮಾನ್ಯವಾಗಿ ಮಹಾಜನಂಗಳೆ

೭೮ ಸಲಿಸಿ ಬಹರೀ ಧರ್ಮಮುತ್ತರೋತ್ತರಾಭಿವರ್ದ್ದಮಾನ ಮಾಗಿಸಲಿ
ಮಂಗಳ ಶ್ರೀ*

---

* (ಈ ಶಾಸನ ಪ್ರಕಟಿಸಲು ಅನುಮತಿ ಇತ್ತುದಕ್ಕಾಗಿ ಡಾ॥ ಷ. ಶೆಟ್ಟರ್ ಅವರಿಗೆ ನಾನು ಋಣಿ)

ಇನಾಂದಾರರ "ಮಂಗಲ್ಯಾಂಡಿನಲ್ಲಿ ಮೂರು ವಾರ"

● ಎಂ. ಎಸ್. ಪ್ರಭು

೧. ಪೀಠಿಕೆ:

(ಗ್ರಂಥ ಸಮಾಲೋಚನೆ)

ಅಪ್ರತಿಮ ಕಾದಂಬರಿಗಳನ್ನೂ ಪ್ರತಿಭಾನ್ವಿತ ವಿಮರ್ಶಾಗ್ರಂಥಗಳನ್ನೂ ಕನ್ನಡಕ್ಕೆ ಕೊಟ್ಟ ಪ್ರೊ. ವಿ. ಎಮ್. ಇನಾಂದಾರರು "ಮಂಗಲ್ಯಾಂಡಿನಲ್ಲಿ ಮೂರು ವಾರ" ಎಂಬ ಕಾಲ್ಪನಿಕ ಪ್ರವಾಸ ಕಥನದ ಗ್ರಂಥವನ್ನೂ ಕನ್ನಡಕ್ಕಿತ್ತಿದ್ದಾರೆ. ಇದು ಕನ್ನಡದಲ್ಲಿಯೇ ವಿಶಿಷ್ಟವಾದ ಮಹತ್ವದ ಸಾಧನೆಯೆಂಬುದನ್ನೂ ಯಾರೂ ಅಲ್ಲಗಳೆಯಲಾರರು. ೧೯೭೨ ರಲ್ಲಿಯೇ ಪ್ರಕಟವಾದ ಈ ಗ್ರಂಥದ ಮೇಲೆ ಲೇಖನಗಳು ಬರದೇ ಇದ್ದದ್ದು ದುರ್ದೈವವೆಂದೇ ಹೇಳಬೇಕು. ಲಘುಹಾಸ್ಯ ಮತ್ತು ವಿಡಂಬನೆಗಳಿಂದ ಕೂಡಿದ ಈ ಮನೋರಂಜಕ ಗ್ರಂಥ ನಿಜವಾಗಿಯೂ ಸ್ವಾಗತಾರ್ಹವಾದದ್ದು; ಸ್ತುತ್ಯಾರ್ಹವಾದದ್ದು.

ಸರ್ವಸಾಮಾನ್ಯವಾಗಿ ತಮ್ಮ ಕಾದಂಬರಿಗಳ ತಿರುಳನ್ನು ಇನಾಂದಾರರು ಸೂಚಿಸುವದು ಇಂಗ್ಲೀಷ ಅಥವಾ ಕನ್ನಡದ ಉದ್ಧೃತವಾಕ್ಯಗಳಿಂದ. ಈ ಧ್ಯೇಯವಾಕ್ಯಗಳು ಗ್ರಂಥದ ಇಂಗಿತವನ್ನೂ ಮಾರ್ಮಿಕವಾಗಿ ತಿಳಿಸುತ್ತವೆ. ಈ ಗ್ರಂಥದ ಧ್ಯೇಯವಾಕ್ಯವನ್ನು ಹೊತ್ತ T. S. Eliotನ

" This is the dead land,
This is the cactus land."

ಎಂಬೀ ಸಾಲುಗಳು ಈ ಪುಸ್ತಕದ ಕೇಂದ್ರ ಬಿಂದುವನ್ನೂ ಸೂಚಿಸುತ್ತವೆ. ಈ ಪುಸ್ತಕದಲ್ಲಿ ವರ್ಣಿತವಾದ "ಮಂಗಲ್ಯಾಂಡ" ನಮ್ಮ ದೇಶ ಭಾರತವೇ ಸರಿ. ಹೇಗಿದೆ ನಮ್ಮ ಭಾರತ ? ಇದು ಸಹ T. S Eliotನ 'The Waste Land'' ನಂತೆ; ಸಹರಾ ಮರುಭೂಮಿಯಂತೆ. ನಮ್ಮ ದೇಶದ ಉಜ್ವಲ ಪರಂಪರೆಯನ್ನೂ ಮರೆತು, ಧಾರ್ಮಿಕ ಹಾಗೂ ತಾತ್ವಿಕ ಗ್ರಂಥಗಳನ್ನೂ ಬದಿಗೊತ್ತಿ ತಮ್ಮ ಜೀವನವನ್ನೂ ಬರಡು ಮಾಡಿಕೊಂಡು, ಕೊರಡು ಮಾಡಿಕೊಂಡು ಭಾರತೀಯರಾದ ನಾವು ನಮ್ಮ ದೇಶವನ್ನೇ ಹಾಳು ಮಾಡಿದ್ದೇವೆ. ಜೀವನ ಮೌಲ್ಯಗಳು ಸಂಪೂರ್ಣವಾಗಿ ನಶಿಸಿಹೋಗಿವೆ.

ಲಂಚಾವತಾರ ತನ್ನ ಕರಾಳ ಮುಖವನ್ನು ಎಲ್ಲೆಡೆಗೂ ಪ್ರದರ್ಶಿಸುತ್ತಿದೆ. ಪಾಶ್ಚಾತ್ಯರ ಅಂಧಾನುಕರಣದಿಂದ ತಮ್ಮತನವನ್ನೂ ಮರೆತು, ನಮ್ಮ ಸ್ವಂತಿಕೆಯನ್ನೂ ಮಾರಿಕೊಂಡಿದ್ದೇವೆ. ಭಾರತವು ಪ್ರಾಚೀನಕಾಲದಲ್ಲಿ ಜಗತ್ತಿನಲ್ಲಿಯೇ ಅತ್ಯಂತ ಪ್ರಸಿದ್ಧವಾದ ಸುವರ್ಣ ಭೂಮಿಯಾಗಿತ್ತು. ಆದರೆ ಈಗ ಅದು ವಿವರ್ಣವಾಗಿದೆ. ಇಂದು ಕೇವಲ ಮುಳ್ಳು ಕಂಟೆಗಳು ಬೆಳೆದ ದೇಶ. ಬೆಳೆಗಳಿಂದ ಸಮೃದ್ಧವಾದದ್ದಲ್ಲ. ಭಾರತೀಯರ ಆತ್ಮವೂ ಕೂಡ ಆಧ್ಯಾತ್ಮಿಕವಾಗಿ ಬರಡಾದದ್ದು ಈ ಮಹತ್ವದ ವಿಚಾರವನ್ನು ಇನಾಂದಾರರು ವಿಡಂಬನದ ಮೂಲಕ ಗೇಲಿ ಮಾಡಿ ನಮ್ಮ ದೇಶದ ರಾಜಕೀಯ, ಸಾಮಾಜಿಕ ಸ್ಥಿತಿ ಗತಿಗಳನ್ನು ವಿವರಿಸಿ ಹಾಸ್ಯಶೈಲಿಯಲ್ಲಿ ಹೇಳಿದ್ದಾರೆ. ಅವರೇ ಮುನ್ನುಡಿಯಲ್ಲಿ ಹೇಳಿದಂತೆ, ಸ್ವಿಫ್ಟನ "Gulliver's Travels" ಮತ್ತು Orwellನ "Animal Farm" ಗಳಿಂದ ಒಂದಿಲ್ಲೊಂದು ರೀತಿಯಲ್ಲಿ ಸ್ಫೂರ್ತಿಗೊಂಡು, ಪ್ರಭಾವಿತರಾಗಿ, ಪ್ರೇರಿತರಾಗಿ ಈ ಪುಸ್ತಕವನ್ನು ಬರೆದಿದ್ದಾರೆ ಆದರೆ ಪ್ರತಿಯೊಂದು ಪುಟದಲ್ಲಿಯೂ ಲೇಖಕರ Originality (ಸ್ವಂತಿಕೆ) ಪುಟಿದೆದ್ದು ಕಾಣುತ್ತದೆ. ಈ ವಿಡಂಬನೆಯ ಕಾಲ್ಪನಿಕ ಪ್ರವಾಸ ಕಥನ ಕನ್ನಡಕ್ಕೆ ಹೊಸತು.

೨. ಮಂಗಲ್ಯಾಂಡಿನ ಚಿತ್ರಣ (i) ಮಂತ್ರಿಮಂಡಳ :

ಲೇಖಕರು ರಾಕೆಟ್ಟಿನ ಮೂಲಕ ಮಂಗಲ್ಯಾಂಡಿಗೆ ಹೋಗುತ್ತಾರೆ. ಅಲ್ಲಿಯ ಜೀವನವನ್ನೂ ಅರಿತು, ಅಭ್ಯಸಿಸಿ ಅದರ ರಸಪರಿಪಾಕವನ್ನೂ, ಅಲ್ಲಿಯ ಜನರ ನಡೆ ನುಡಿಗಳ ಬಗ್ಗೆ, ಸಾಹಿತ್ಯದ ಬಗ್ಗೆ, ರಾಜಕೀಯ ಹಾಗೂ ಸಾಮಾಜಿಕ ಜೀವನದ ಬಗ್ಗೆ ದೀರ್ಘವಾಗಿ ಸವಿಸ್ತಾರವಾಗಿ ನಮಗೆ ತಿಳಿಸುತ್ತಾರೆ. ಅವರು ಅರಿಷಿದ ಹೆಸರು "ಹಿಂಡಿಯಾ That is ಮಂಗಲ್ಯಾಂಡ" ಎನ್ನುವದು ಭಾರತವೇ ಎಂಬುದರಲ್ಲಿ ಸಂಶಯವಿಲ್ಲ. ಇಲ್ಲಿಯ ಜನರು ವಾನರರು ನರರಲ್ಲ; ಯದ್ವಾ ತದ್ವಾ ವರ್ತಿಸುವವರು. ಜನರೇ ಮಂಗಗಳಂತೆ ವರ್ತಿಸುವದರಿಂದ ದೇಶದ ಹೆಸರು "ಮಂಗಲ್ಯಾಂಡ" ಎನ್ನುವದು ಯಥಾರ್ಥವಾಗಿದೆ. ಈ ಮಂಗಲ್ಯಾಂಡಿನಲ್ಲಿಯ ಜನಜೀವನವನ್ನು ಆಗುಹೋಗುಗಳನ್ನು ಲೇಖಕರು ಉತ್ತಮವಾಗಿ ವರ್ಣಿಸಿದ್ದಾರೆ.

ಲೇಖಕರು ವಿಮಾನ ಪ್ರಯಾಣಮಾಡಿ ಹಿಂಡಿಯಾ that is ಮಂಗಲ್ಯಾಂಡಿ"ಗೆ ಬರುತ್ತಾರೆ. ಅವರ ವಿಮಾನ ಈ ದೇಶದ ರಾಜಧಾನಿಯಾದ ಲೇಹದಿ (ದೆಹಲಿ)ಯಲ್ಲಿ ಇಳಿಯುತ್ತದೆ. ಅವರ ಸ್ವಾಗತಕ್ಕಾಗಿ ಸುಮಾರು ಐದು ನೂರು ದಪ್ಪಗಾತ್ರದ ಮಂತ್ರಿಗಳು ಸಾಲುಸಾಲಾಗಿ ನಿಂತಿರುತ್ತಾರೆ. ಪ್ರಧಾನಿಗಳು ವಿದೇಶಯಾತ್ರೆಗೆ ಹೋಗಿದ್ದರಿಂದ ಅವರ ಸಹಾಯಕ ಮಂತ್ರಿಗಳು ಲೇಖಕರಿಗೆ ಹಾರ್ದಿಕ ಸ್ವಾಗತವನ್ನು ನೀಡುತ್ತಾರೆ. ಸ್ವಾಗತ ಭಾಷಣದಲ್ಲಿ ಸಂಕ್ಷಿಪ್ತವಾಗಿ ತಮ್ಮ ದೇಶದ ನೀತಿಯನ್ನೂ ಕುರಿತು ಹೇಳುತ್ತಾರೆ.

"ನಮ್ಮ ದೇಶದಲ್ಲಿ ಹಿಂದೆ ನಾವು ಎಷ್ಟೊಂದು ಯುದ್ಧವಾಡಿದರೂ ಇಂದು ಅಹಿಂಸೆಯನ್ನು ಪಾಲಿಸುತ್ತಿದ್ದೇವೆ. ಯಾರ ಜೊತೆಯಲ್ಲಿಯೂ ಯುದ್ಧ ಬೇಡ ಎಂದು ಅಲಿಪ್ತನೀತಿಯನ್ನು ಅನುಸರಿಸಿದ್ದೇವೆ. ಬಡತನವನ್ನು ಹೊಡೆದೋಡಿಸಿದ್ದೇವೆ. ಸಮಾನಾವಕಾಶಗಳ ಸಮಾಜರಚನೆಯನ್ನು ಮುಂದುವರಿಸಿದ್ದೇವೆ."

ಈ ಭಾಷಣ ನಮ್ಮ ದೇಶದ ಮಂತ್ರಿಗಳ Typical ಭಾಷಣವನ್ನು ಹೋಲುತ್ತದೆ. ಸ್ವಾಗತವನ್ನೀಯಲು ಎಲ್ಲ ಮಂತ್ರಿಗಳು ವಿಮಾನ ನಿಲ್ದಾಣಕ್ಕೆ ಹೋಗುವದು, ಪ್ರಧಾನಿಗಳು ಯಾವಾಗಲೂ ವಿದೇಶಯಾತ್ರೆಯಲ್ಲಿಯೇ ಮಗ್ನರಾಗಿರುವದು ಮುಂತಾದವುಗಳ ಮೇಲೆ ಈ ಭಾಷಣ ಬೆಳಕು ಚೆಲ್ಲುವದಲ್ಲದೆ ನಮ್ಮ ದೇಶದ ಟೊಳ್ಳು ನೀತಿಯನ್ನು ಬಯಲಿಗೆಳೆಯುತ್ತದೆ.

ಮಂತ್ರಿವರ್ಯರ ಸ್ವಾಗತಭಾಷಣ ಮುಗಿದನಂತರ ನಾವು "ಜಯಹಿಂದ" ಎಂದಂತೆ ಎಲ್ಲರೂ ಒಕ್ಕೊರಲಿನಿಂದ "ಜೀವಾಹಿಂಡ್" ಎಂದು ಮತ್ತೆ ಮತ್ತೆ ಹೇಳುತ್ತಾರೆ. "ಜೀವಾಹಿಂಡ್" ಎನ್ನುವದು ಅವರ ರಾಷ್ಟ್ರೀಯ ಘೋಷಣೆ ಮಾತ್ರವಾಗಿರದೆ ಅವರ ರಾಜ್ಯಪದ್ಧತಿಯ ಮೂಲಸೂತ್ರವೂ ಆಗಿರಬಹುದೇ ಎಂಬ ಸಂಶಯ ಲೇಖಕರಿಗೆ ಬರುತ್ತದೆ. ಇದಿಷ್ಟು ಪ್ರಸ್ತಾಪಿಸಿದ ನಂತರ ಲೇಖಕರು ಅನೇಕ ಸ್ಥಳಗಳನ್ನು ಭೆಟ್ಟಿಮಾಡಿ, ಸಂಘ ಸಂಸ್ಥೆಗಳನ್ನು ನೋಡಿ ಅವುಗಳ ಕುರಿತು ತಮ್ಮ ಅನಿಸಿಕೆಗಳನ್ನೂ ವ್ಯಕ್ತಪಡಿಸುತ್ತಾರೆ.

ಈ ಹಿಂದೆಯೇ ಹೇಳಿದಂತೆ ಇಲ್ಲಿ ವಿಡಂಬನೆ ವಿವರವಾಗಿ ಬಂದಿದೆ. ಮಂತ್ರಿಗಳ ಮೇಲೆ ಇನಾಂದಾರರು ವಿಡಂಬನೆಯ ಬಾಂಬು ಎಸೆದಿದ್ದಾರೆ. ಮಂಗಲ್ಯಾಂಡಿನ ಮಂತ್ರಿಗಳು ಭೀಮಕಾಯರು (ಇವರಿಗೆ ಚಿಂತೆಯೆನ್ನುವದೇ ಇಲ್ಲ!) ತಡವಾಗಿ ಬರುವವರು, ಪಾರ್ಟಿ ಮುಗಿಸಿಕೊಂಡು ಬರಲು ತಡವಾಗುವದು ಸಹಜ. ಶೌಚಕೂಪದ ಶಂಕುಸ್ಥಾಪನೆಯಿಂದ ಹಿಡಿದು ವಾಚನಾಲಯದ ಉದ್ಘಾಟನೆಯನ್ನೂ ಮಂತ್ರಿಗಳೇ ಮಾಡಬೇಕು. ಒಬ್ಬ ಕ್ಯಾಬಿನೆಟ್ ದರ್ಜೆಯ ಮಂತ್ರಿಗೆ ಇಪ್ಪತ್ತು ಸಹಾಯಕ ಮಂತ್ರಿಗಳಿರುತ್ತಾರೆ. ಮೇಲಿಂದ ಮೇಲೆ ಸಮಾರಂಭಗಳಿರುವದರಿಂದ ಅದರದೇ ಒಂದು ಖಾತೆಯನ್ನು ತೆರೆದಿದ್ದಾರೆ. ಚುನಾಯಿತರಾದವರೆಲ್ಲರೂ ಮಂತ್ರಿಗಳಾಗಬೇಕೆಂಬ ನಿಯಮವನ್ನು ಅವರು ಪಾಲಿಸುತ್ತಾರೆ. ಆದ್ದರಿಂದ ಪಕ್ಷಾಂತರದ ಪಿಡುಗಿನ ಭಯವಿಲ್ಲ; ಎಲ್ಲರಿಗೂ ಸುಖ, ಸಮಾಧಾನಗಳಿರುತ್ತವೆ. ಅಲ್ಲಿಯವರು ಸಮಾಜವಾದಿ ಪದ್ಧತಿಯನ್ನು ಆಚರಿಸುವದರಿಂದ ಎಲ್ಲರಿಗೂ ಮಂತ್ರಿಗಳಾಗುವ ಅವಕಾಶವನ್ನೀಯುತ್ತಾರೆ. ಎಲ್ಲರನ್ನೂ ಮಂತ್ರಿಗಳನ್ನಾಗಿ ಮಾಡಿದರೆ ಬಡತನ ತನ್ನಿಂದ ತಾನೇ ಹೋಗುತ್ತದೆ, ಎನ್ನುವದು ಅವರಿಗೆ ಗೊತ್ತು, ಮತ್ತೆ ಇದು ಚಿರಂತನ ಸತ್ಯ. (ಭಾರತದಲ್ಲಿ ಎಷ್ಟು ಮಂತ್ರಿಗಳು ಬಡವರಿದ್ದಾರೆ?) ಮೇಲಿಂದ ಮೇಲೆ ಪ್ರಧಾನಿಗಳು ತಮ್ಮ ಅಧಿಕಾರವನ್ನು ಪ್ರದರ್ಶಿಸಲು ಮಂತ್ರಿಗಳ ಖಾತೆಯನ್ನು ಬದಲಾಯಿಸುವದು; ಆದ್ದರಿಂದ

ಮಂತ್ರಿಗಳಿಗೆ ವಿಷಯಜ್ಞಾನ ಇರದಿರುವದು, (ಮೊದಲೇ ಮಂತ್ರಿಗಳಿಗೆ ವಿಷಯ ಇರುವದಿಲ್ಲ; ಆದರೆ ಇದೊಂದು ನೆವ ಅವರಿಗೆ ಸಿಗುವದು) ತಾನು ಮಂತ್ರಿ ಉಳಿಯಬೇಕು ಎನ್ನುವ ಒಂದರ ಹೊರತು ಆತನಲ್ಲಿ ಬೇರೆ ಯಾವ ಆಸಕ್ತಿಯೂ ದಿರುವದು (ಇದೂ ನಮ್ಮ ಮಂತ್ರಿಗಳ ಧ್ಯೇಯವಲ್ಲವೇ?). ಉಪಹಾರ ವ್ಯವಸ್ಥೆಗ ಸರಕಾರದ ಅಧಿಕಾರಿಗಳ ದಿನ ನಿತ್ಯ ಸಭೆ ನಡೆಯಬಾರದೆಂಬ ಕಾಯಿದೆ, ಅ ತಿಂಗಳಿಗೊಮ್ಮೆ ಬಡತಿ ಕೊಡುವದು, ನೂರರಲ್ಲಿ ತೊಂಬತ್ತೊಂಬತ್ತು ಪ್ರತಿನಿ ಅವಿರೋಧವಾಗಿ ಆಯ್ಕೆಯಾಗುವದು, ಮಂತ್ರಿಗಳು ಮಧ್ಯಾಹ್ನ ಎರಡುಗಂ ದ್ದಾಗಿ ನಿದ್ದೆ ಮಾಡುವದು, ಮಂತ್ರಿಗಳಿಗೆ ಎಲ್ಲವನ್ನು ಕಾರ್ಯದರ್ಶಿಗಳು ಹೇಳಿ ವದು. ಮಂಗಲ್ಯಾಂಡಿನಲ್ಲಿ ಈ ರೀತಿ ಇರುವ (ಅ)ವ್ಯವಸ್ಥೆಗಳನ್ನು, ಕಾಯಿದೆ ನೋಡಿದರೆ ಯಾರಿಗೂ ನಗೆ ಬರದಿರದು. ಸ್ವತಃ ವಿದ್ಯಾಮಂತ್ರಿಗಳೇ ಪ್ರತಿ ಪ್ರಜೆಯೂ ವಿದ್ಯಾವಂತನಾಗಿರಬಾರದೆಂಬ ತತ್ವದವರು. ಅವರ ಅಭಿಪ್ರಾಯ ಅವರ ಮಾತಿನಲ್ಲೇ ಕೇಳಬೇಕು.

"ನಾನು ಹೆಚ್ಚಾಗಿ ಓದಿದವನಲ್ಲ, ಪ್ರಾಥಮಿಕ ಶಾಲೆಯಲ್ಲಿ ಒತ್ತಕ್ಷರಗಳೇ ನೀಗಲಿಲ್ಲ. ಎಷ್ಟೋ ಸಲ ನನ್ನ ಕಾರ್ಯದರ್ಶಿ ಬರೆದು ಕೊಡುವ ಭಾಷಣ ಓದುವದೇ ನನಗೆ ತುಂಬಾ ಕಷ್ಟವಾಗುತ್ತದೆ. ಆದರೆ ಅದರಿಂದ ನನಗೆ ಕಷ್ಟವಾಗಿದೆ ? ಏನು ನಷ್ಟವಾಗಿದೆ ? ವಿದ್ಯಾಮಂತ್ರಿಯಾಗಿದ್ದೇನೆ(!) ಬೇಕಾ ಸುಖಾನುಕೂಲಗಳನ್ನು ಪಡೆದಿದ್ದೇನೆ."

ಇಲ್ಲಿ ನಾವು ವಿದ್ಯೆಯಿಲ್ಲದ ವಿದ್ಯಾಮಂತ್ರಿಯ ಸ್ಪಷ್ಟ ತಪ್ಪೊಪ್ಪಿಗೆ (F Confession)ಯನ್ನೂ ಮೆಚ್ಚತಕ್ಕದ್ದೇ. ಇಂದಿನ ಭಾರತದಲ್ಲಿ ಏನೂ ಅರ್ಹತೆಗ ತನ್ನ ಜಾತಿಯ ಆಧಾರದ ಮೇಲೆ ಮತದಾರರಿಂದ ಹೇಗಾದರೂ ಆರಿಸಿ ಯಾರಾದರೂ ಮಂತ್ರಿಯಾಗಬಹುದು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬ ಈ ಮಂಗಲ್ಯಾಂಡಿನ (ಅ) ವಿದ್ಯಾಮಂತ್ರಿಗಳು ಮುಂದುವರೆದು—

"ನಾನು ಮಹಿಳಾ ಪಕ್ಷ ಪಾತಿ (ಇದು ಎಲ್ಲ ಮಂತ್ರಿಗಳಿಗಿರುವ ನೀತಿ). ಪ್ರವಾಸಕ್ಕೆ ಹೋದಾಗ ಯಾವಾಗಲೂ ಭೇಟಿಕೊಡುವದು ಮಹಿಳಾ ವಿದ್ಯಾ ಗಳಿಗೆಯೇ" ಎನ್ನುತ್ತಾರೆ. ಇಲ್ಲಿ ಅವರ ನಿರಾಡಂಬರ ವ್ಯಕ್ತಿತ್ವ ಎದ್ದು ಕಾಣ ಎನ್ನಬಹುದೇ ?

ಲೇಖಕರ ಪ್ರಶ್ನೆಗಳಿಗೆ ವಿದ್ಯಾಮಂತ್ರಿಗಳ ಉತ್ತರವಿಲ್ಲ. ಅವರಿಗೆ ಖಾತೆಯ ಗಂಧಗಾಳಿಯಿಲ್ಲ... ಇರಬೇಕೆಂಬ ನಿಯಮವೂ ಇಲ್ಲ. ಈ ಮಂಗಲ್ಯಾ ವಿದ್ಯಾಮಂತ್ರಿಗಳ ಉತ್ತರವೇ ಸ್ವಾರಸ್ಯಕರವಾದದ್ದು—

"ಎಲ್ಲವನ್ನು ನಾನೇ ಹೇಳಬೇಕೆಂದರೆ ನಾನು ಮಂತ್ರಿ ಯಾವುದಕ್ಕೆ ಆಗಬೇಕು ? ಬ್ಬ, ಕಾಲಿಗೊಬ್ಬನಂತೆ ವಿದ್ಯಾಧಿಕಾರಿಗಳೂ ನೂರಾರು ವಿಶ್ವವಿದ್ಯಾಲಯಗಳ ಕುಲಪತಿಗಳೂ ಇದ್ದಾರೆ...ಅವರೊಡನೆ ನೀವು ಚರ್ಚಿಸಬಹುದು" ಎಂದಿಷ್ಟು ಮಂತ್ರಿವರ್ಯರು ಕಾಫಿತಿಂಡಿಗಳ ಧ್ವಂಸಕ್ಕೆ ಸುರುಮಾಡಿದ್ದರಿಂದ ಲೇಖಕರು ಮ್ಮ ಸಂದರ್ಶನ ಮೂಕದರ್ಶನವಾಗಿಯೇ ನಡೆಯಿತು" ಎನ್ನುತ್ತಾರೆ.

ಮಂಗಲ್ಯಾಂಡಿನ ಅಧಿಕಾರಿಗಳು ಕೇವಲ ಮೇಲಧಿಕಾರಿಗಳಿಗೆ **"ಬೇಕಾದುದನ್ನು"** ೈಸಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೆ. "ಕೆಲಸ ಮಾಡುವದಕ್ಕಿಂತ ಡುತ್ತಿದ್ದೇನೆ ಎಂದು ತೋರಿಸುವದು ಮುಖ್ಯ." ಈ ಧ್ಯೇಯ ಎಲ್ಲರಲ್ಲಿಯೂ ಗತವಾಗಿದೆ.

ಮಂತ್ರಿಗಳಂತೂ ಖಾಸಗಿ ಕಾರ್ಯದರ್ಶಿನಿಯರ ಗುಲಾಮರು. ಈ ಕಾರ್ಯ ರ್ಶಿನಿಯರು ಒಂದಿಷ್ಟು ಚುರುಕಾಗಿ, ಚೆಲುವಾಗಿ ಅವರ ಹತ್ತಿರ ಸುಳಿದಾಡಿ ತಮ್ಮ ಸ ಮಾಡಿಸಿಕೊಳ್ಳುತ್ತಾರೆ. ಇಲ್ಲಿ ಮಂತ್ರಿಗಳು ಸುಖಲೋಲುಪರು; ತಮ್ಮ ದ್ಧಿಶಕ್ತಿ (ಅದೊಂದು ಇದ್ದರೆ)ಯನ್ನು ಉಪಯೋಗಿಸದೆ ಸ್ತ್ರೀಸುಖದಲ್ಲಿಯೇ ತಮ್ಮ ವನವನ್ನು ವ್ಯರ್ಥವಾಗಿ ಕಳೆದು, ದೇಶದ ಚಿಂತನೆಯನ್ನು ಎಳ್ಳಷ್ಟು ಮಾಡುವದಿಲ್ಲ ಬುದು ಸ್ಪಷ್ಟವಾಗುತ್ತದೆ. ಪ್ರಧಾನಮಂತ್ರಿಗಳ ಬಗ್ಗೆ ಉಳಿದೆಲ್ಲ ಮಂತ್ರಿಗಳಿಗೆ ಮ್ಮ ಪಟ್ಟ ಭದ್ರಮಾಡಿಕೊಳ್ಳುವದಕ್ಕೋಸ್ಕರ ಇದ್ದ ಭಯ ಭಕ್ತಿಗಳು ಅಪಾರ. ಮಂತ್ರಿಗಳು ಬಡವರನ್ನು ಹೊಡೆದೋಡಿಸಿ ಬಿಟ್ಟರೆ ಬಡತನ ತಾನೇ ಹೊರಟು ಗುತ್ತದೆ ಎಂದು "ಗರೀಬೀ ಹಟಾವೋ"ದ ಪೊಳ್ಳು ಘೋಷಣೆಯಲ್ಲಿ ದೃಢವಾಗಿ ಬಿದವರು.

(II) **ಶಿಕ್ಷಣ :** ಮಂಗಲ್ಯಾಂಡಿನಲ್ಲಿರುವ ವಿದ್ಯಾಸಂಸ್ಥೆಗಳ ಬಗ್ಗೆ ಮಾಡಿದ ರ್ಣನೆ ಓದುಗರ ಹೊಟ್ಟೆ ಹುಣ್ಣಾಗಿಸುವಂತೆ ನಕ್ಕು ನಗಿಸುವಂತಹದು. ಲೇಖಕರು ಟಿಕೊಟ್ಟ ಶಾಲೆ ವಿದ್ಯಾರ್ಥಿನಿಯರದು. ಶಾಲೆಯಲ್ಲಿ ಗದ್ದಲವೋ ಗದ್ದಲ-ದನದ ಜಾತ್ರೆ ಂತೆ.ಅದು ಹುಡುಗಿಯರಶಾಲೆಯಿದ್ದರೂ ಅನೇಕ ಹುಡುಗರಿದ್ದರು-ಶಾಲೆಯ ವಠಾರ ಲ್ಲಿ, ಕೆಲವರಂತೂ ಗೇಟಿನ ಹತ್ತಿರ ಕಾಯುತ್ತಿದ್ದರು; ಕೆಲವರು ಗೋಡೆಯನ್ನಾಶ್ರಯಿಸಿ ನಿತಿದ್ದರು. ಹುಡುಗಿಯರ ಸಮವಸ್ತ್ರ ಕಣ್ಣು ಸೆಳೆಯುವಂಥದು.ಟೊಂಕದ ಕೆಳಗಡೆಯಲ್ಲಿ ಟು ಅಂಗುಲದಷ್ಟು ಒಂದು ಸ್ಕರ್ಟ್; ಮೇಲುಗಡೆಯಲ್ಲಿ ಆರು ಅಂಗುಲದಷ್ಟು ಒಂದು ಕೆ. ವಿದ್ಯಾರ್ಥಿನಿಯರ ಸಂಖ್ಯೆ ಜಾಸ್ತಿಯಾದ್ದರಿಂದ ಸರತಿಯ ಮೇಲೆ ವರ್ಗಗಳು ಡೆಯುತ್ತಿರುತ್ತವೆ. ವಿದ್ಯಾರ್ಥಿಗಳು ಹಾಜರಾಗುವದು ವಾರಕ್ಕೆ ಒಂದು ದಿನ.

ಹಿಂದಿನ ವರುಷ ವಾರಕ್ಕೆ ಎರಡು ದಿನ ಮಾಡಿದ್ದರಿಂದ ವಿದ್ಯಾರ್ಥಿಗಳ ಮುಷ್ಕರ. ಇಲ್ಲಿಯ ವೈಶಿಷ್ಟವೆಂದರೆ– ಶಾಲೆಗೆ ಎಷ್ಟು ದಿನ ಬಿಡುವು ಇರುವದು, ಎಷ್ಟು ದಿನ ಓದುವದು, ಓದುವದು ಏನು, ಎಷ್ಟು, ಪರೀಕ್ಷೆ ಪ್ರಶ್ನೆಗಳು ಹೇಗಿರಬೇಕು, ಎಂಥವಿರ ಬೇಕು; ಎಂಥ ಉತ್ತರಗಳನ್ನು ಬರೆದರೆ ಎಷ್ಟು ಅಂಕಗಳನ್ನು ಕೊಡಬೇಕು ಎಂಬುದನ್ನೂ ವಿದ್ಯಾರ್ಥಿಗಳೇ ನಿರ್ಣಯಿಸುತ್ತಾರೆ. ಮುಖ್ಯವಾಗಿ ಇಲ್ಲಿಯ ಪದ್ಧತಿ "ಕಣ್ಣೀರಿಲ್ಲದ ಕಲಿಕೆ." ಇಲ್ಲಿ ಎಲ್ಲರೂ ಪಾಸಾಗುವರಯ್ಯಾ ! ನೂರಕ್ಕೆ ತೊಂಬತ್ತೊಂಬತ್ತಕ್ಕೂ ಮಿಕ್ಕಿ ಜನ ಉತ್ತೀರ್ಣರಾಗುತ್ತಾರೆ. ಎಂಬತ್ತಕ್ಕೂ ಹೆಚ್ಚು ಜನ ಪ್ರಥಮ ಶ್ರೇಣಿಯಲ್ಲಿ ! ಒಂದು ಕೊಠಡಿಯಲ್ಲಿ ಒಂದು ಸಾವಿರ ವಿದ್ಯಾರ್ಥಿನಿಯರು ! ಗಂಟೆಯಾದ ಕೂಡಲೇ ಕಟ್ಟಡಕ್ಕೆ ಬೆಂಕಿ ಬಿದ್ದ ಹಾಗೆ ಎಲ್ಲರೂ ಈ ಕಾರಖಾನೆಯಿಂದ ಹೊರಗೆ ಓಡಿಬರುವದು ಸ್ವಾರಸ್ಯಕರವಾದ ವಿಷಯ.

ವಿದ್ಯಾಇಲಾಖೆಯೂ (ತನ್ನ ಮಂತ್ರಿಗೆ ತಕ್ಕಂತೆ) ಉತ್ತಮವಾಗಿ ಕೆಲಸಮಾಡು ತ್ತದೆ. ಒಂದು ವರ್ಷ ಪ್ರಶ್ನೆಪತ್ರಿಕೆ ಕಷ್ಟವಾಗಿತ್ತೆಂದು ವಿದ್ಯಾರ್ಥಿಗಳು ಪ್ರತಿಭಟಿಸಿದಾಗ ಆ ವಿಷಯದಲ್ಲಿ ತೇರ್ಗಡೆಯಾಗುವ ಅಗತ್ಯವೇ ಇಲ್ಲ ಎಂದು ಪ್ರಕಟಣೆ ಹೊರಡಿಸಿ, ವಿದ್ಯಾಇಲಾಖೆಯು ವಿದ್ಯಾರ್ಥಿಗಳ ಹಿತರಕ್ಷಣೆಯನ್ನು ಸಾಧಿಸಿತ್ತು. ಒಂದೆರಡು ವಿಷಯಗಳಲ್ಲಿ ಸಾರ್ವತ್ರಿಕವಾಗಿ ಎಲ್ಲರಿಗೂ ಇಪ್ಪತ್ತೈದರಿಂದ ಮೂವತ್ತೈದರ ವರೆಗೆ ಹೆಚ್ಚಿನ ಅಂಕಗಳನ್ನು ಗ್ರೇಸ್ (ದಾನವಾಗಿ) ಕೊಟ್ಟು ತನ್ನ ಔದಾರ್ಯವನ್ನು ಪ್ರದರ್ಶಿಸಿತ್ತು. ವಿದ್ಯಾರ್ಥಿಗಳು ಫೇಲಾದರೆ ಅದೊಂದು ಅಪಾರವಾದ ರಾಷ್ಟ್ರೀಯ ನಷ್ಟ ಎಂಬುದು ವಿದ್ಯಾಇಲಾಖೆಯ ಧ್ಯೇಯವಾಗಿತ್ತು.

ವಿದ್ಯಾಸಂಸ್ಥೆಯಲ್ಲಿ ಲಂಚಗುಳಿತನ, ಭ್ರಷ್ಟಾಚಾರಗಳು ಅಪೂರ್ವವಾದವುಗಳು. ಮುಖ್ಯಾಧ್ಯಾಪಿಕೆಯಂತೂ "**ತೂಕ**"ದ ಹೆಂಗಸು. ಹತ್ತಾರು ಮಂತ್ರಿಗಳನ್ನೂ ತನ್ನ ಮುಷ್ಟಿಯಲ್ಲಿ ಇಟ್ಟುಕೊಂಡವಳು ಅಂದ ಮೇಲೆ ಕೇಳಬೇಕೆ? ಕಟ್ಟಡದ ಕಂಟ್ರಾಕ್ಟು ಹಿಡಿಯುವವರು, ಸಮವಸ್ತ್ರ ಪೂರೈಸುವವರು, ಶಾಲೆಯಲ್ಲಿಯ ಕ್ಯಾಂಟೀನ ನಡೆಸು ವವರು ಎಲ್ಲರೂ ಭ್ರಷ್ಟಾಚಾರದ ತೇರಿನ ಗಾಲಿಗಳು.

ವಿಶ್ವವಿದ್ಯಾಲಯದ ಉಪಕುಲಪತಿ ಇಪತ್ತನಾಲ್ಕು ವರ್ಷದ ಯುವಕ. ಕಿವಿರಿವ ಕೂದಲಿನ ಬಣ್ಣಬಣ್ಣದ ಚಿತ್ರವಿಚಿತ್ರವಾದ ಅರಿವೆಯ ಗುರುಶರ್ಟು ಹಾಕಿಕೊಂಡ ವಿಲಾಸಿ; ಸ್ವತಃ ಅನುಭವದಿಂದ ಪರೀಕ್ಷಾ ವಿರೋಧಿ, ಬಿಯರನ್ನು ಯಾವಾಗಲೂ ಕುಡಿ ಯುವದಷ್ಟೇ ಅಲ್ಲದೆ ಅದನ್ನು ಕ್ಯಾಂಟೀನಿನಲ್ಲಿಡುವ ಯೋಜನೆಯನ್ನು ಹಾಕಿದ ಧೀರ ! ಪರೀಕ್ಷೆಗಳು ಇದ್ದರೆ ದೇಹ ಮನಸ್ಸುಗಳು ಬಳಲುವದರಿಂದ ಪರೀಕ್ಷೆಗಳನ್ನೇ ತೆಗೆದು ಹಾಕುವ ಉಪಕುಲಪತಿಯ ಯೋಜನೆ ಯಾರೂ ಮೆಚ್ಚತಕ್ಕಂತಹದೆ. ಒಂದಿಷ್ಟು ಬಿಸಿಲು ಬಿದ್ದರೆ ಕಾಲೇಜಿಗೆ ರಜೆ; ಮಳೆಗಾಳಿ ಚಳಿ. ಬಿಸಿಲು, ಹವಾಮಾನಗಳಲ್ಲಿ ಒಂದಿಷ್ಟ

ಬದಲಾವಣೆಯಾದರೆ ವಿದ್ಯಾರ್ಥಿಗಳಿಗೆ ರಜೆ! ಇಷ್ಟು ಅಲ್ಲದೆ ವಿಶ್ವವಿದ್ಯಾಲಯಗಳಲ್ಲಿಯೂ ಸಮಾಜವಾದ ! ಎಲ್ಲ ವಿದ್ಯಾರ್ಥಿಗಳು ಪಡೆಯುವ ಅಂಕಗಳನ್ನು ಒಟ್ಟಾಗಿಸಿ ಎಲ್ಲರಿಗೂ ಸರಿಸಮವಾಗಿ ಹಂಚುವದು.

ವಿದ್ಯಾರ್ಥಿಗಳು ಸಂಪಿನ ಮೇಲೆ ಹೋದರೆ ಕಟ್ಟಡಗಳಿಗೆ ಕಲ್ಲು ಒಗೆಯಲು ಅನುಕೂಲವಾಗಲೆಂದು ಜಲ್ಲಿ, ಇಟ್ಟಿಗೆಗಳನ್ನು ಕಂಟ್ರಾಕ್ಟುದಾರರ ಮೂಲಕ ಪೂರೈಸಲಾಗುತ್ತದೆ. ವಿದ್ಯಾರ್ಥಿಗಳ ಹಿತರಕ್ಷಣೆ ವಿಶ್ವವಿದ್ಯಾಲಯದ ಕರ್ತವ್ಯವಲ್ಲವೇ ?

ಅಲ್ಲಿಯ ವಿದ್ಯಾದಾನವೂ ಅಪ್ರತಿಮವಾದದ್ದು! ಆಯಾಶಾಸ್ತ್ರಗಳ ಗ್ರಂಥಗಳನ್ನು ಅರೆದು ಅದರ ರಸಾಯನವನ್ನು ಇಂಜೆಕ್ಷನ್ ಮೂಲಕ ವಿದ್ಯಾರ್ಥಿಗಳಿಗೆ ಕೊಡುವದು. ಆಗ ಅವರಿಗೆ ಎಲ್ಲ ಜ್ಞಾನ ಬರುತ್ತದೆ. ಈ ರೀತಿ ಚುಚ್ಚುಮದ್ದನ್ನು ತೆಗೆದುಕೊಂಡವನು ಪಾಸಾಗಿದ್ದಾನೆಂದು ಪರೀಕ್ಷಾಧಿಕಾರಿ ಸಾರುತ್ತಾನೆ !

ಮಂಗಲ್ಯಾಂಡಿನಲ್ಲಿ ಕಾಲೇಜಿನಲ್ಲಿ "ಕಲೆ" "ವಿಜ್ಞಾನ" ಎಂಬ ಭೇದವಿಲ್ಲ. ಇವೆರಡನ್ನೂ ಕೂಡಿಸಿ "ಕಲ್‌ಜ್ಞಾನ" ಎಂಬ ಕೋರ್ಸು ತೆಗೆದಿದ್ದಾರೆ. "ಕಲ್‌ಜ್ಞಾನ" ಎಂದಾಗ ಲೇಖಕರ ಎದೆ ಝಲ್ಲೆಂದು ಅವರ ಕಣ್ಮುಂದೆ ಕಲ್ಲಿನ ಜಲ್ಲಿಗಳ ಚಿತ್ರ ಕಟ್ಟಿನಿಂತಿತ್ತು. ಮಂಗಲ್ಯಾಂಡಿನವರು ಲೈಂಗಿಕ ಶಿಕ್ಷಣದ ಮಹತ್ವವನ್ನು ಅರಿತವರು. ಯುವಕಯುವತಿಯವರಿಗೆ ಲೈಂಗಿಕ ಶಿಕ್ಷಣವನ್ನು ಒದಗಿಸುವದಕ್ಕೆಂದು ಮಾಡಿದ ವಿಧಾನಗಳು ಅತ್ಯಾಧುನಿಕದದ್ದಲ್ಲದೆ ಅದಕ್ಕಾಗಿ ಏರ್ಪಡಿಸಿದ ಪ್ರಯೋಗಾಲಯಗಳು ಸುಸಜ್ಜಿತವಾಗಿದ್ದುವು! ಲೈಂಗಿಕ ಶಿಕ್ಷಣದಲ್ಲಿ Practicares ಮಹತ್ವವೆಂಬುದನ್ನು ಅಲ್ಲಿಯವರು ಮನಗಂಡಿದ್ದಾರೆ!

(iii) ಆರೋಗ್ಯಧಾಮಗಳು :

ಅಲ್ಲಿಯ ಜನರ ಆರೋಗ್ಯ ಉತ್ತಮ ಎನ್ನುವದಕ್ಕೆ ಜನರ ಗುಡಾಣಗಳಂತಿದ್ದ ಹೊಟ್ಟೆಗಳೇ (ಹಂಡೆಗಳೇ) ನಿದರ್ಶನ. ಹಣವೇ ಆರೋಗ್ಯದ ಮೂಲ ಎಂಬುದನ್ನು ಚೆನ್ನಾಗಿ ಅರಿತ ಈ ಜನ ಹಣದ ಬೆನ್ನು ಹತ್ತಿದವರು. ಅಲ್ಲಿ ಭೋಜನದ ಅಗತ್ಯವಿಲ್ಲ ಏ. ದಿಂದ ಝೆಡ್ ವರೆಗಿನ ಅನ್ನಾಂಗಗಳನ್ನು ಸೇರಿಸಿ ಮಾಡಿದ ಮಾತ್ರೆಗಳನ್ನು ಜನರು ಸೇವಿಸುತ್ತಾರೆ. ಆರೋಗ್ಯವಿಲ್ಲದವರನ್ನು ಆಸ್ಪತ್ರೆಗೆ ಸೇರಿಸುತ್ತಾರೆ. ಆಸ್ಪತ್ರೆಗೆ ಹೋಗುವದೆಂದರೆ ಮರಣದ ಮೊದಲಿನ ಮೆಟ್ಟಲು. ಆಸ್ಪತ್ರೆಗಳು ಸಮೀಪದಲ್ಲಿಯೇ ವಿದ್ಯುದ್ದಹಸಲಯವನ್ನೂ ಸರಕಾರದವರೇ ಮಾಡುತ್ತಾರೆ. ಅಲ್ಲಿಯ ಡಾಕ್ಟರರುದಾದಿಯರು ಬಂದು ರೋಗಿಯನ್ನು "ನೋಡಿಕೊಂಡು" ಎಂದರೆ ರೋಗಿ ಬದುಕಿದ್ದಾನೆಯೇ ಅಥವಾ ಸತ್ತಿದ್ದಾನೆಯೇ ಎಂಬುದನ್ನು ನೋಡಲು ಹೋಗುತ್ತಾರೆ. ರೋಗಿಗಳ ಸಾವು ಒಂದು ಕಡೆ, ಡಾಕ್ಟರ ನರ್ಸುಗಳ ಸರಸಸಲ್ಲಾಪ, ಚೆಲ್ಲಾಟ ಇನ್ನೊಂದೆಡೆಗೆ

ಸರಾಗವಾಗಿ ನಡೆದಿರುತ್ತವೆ. ಸರಕಾರದ್ದ ಸರಬರಾಜು ರೋಗಿಗಳಿಗೆ ಮುಟ್ಟುವದೇ ಇಲ್ಲ. ಅಲ್ಲಿಯ ಡಾಕ್ಟರರು ಕೊಟ್ಟ ಹೇಳಿಕೆಯೂ ಮಹತ್ವಪೂರ್ಣವಾದುದು– "ಸಾಯಬೇಕಾ ದಾದವರನ್ನು ಬದುಕಿಸುವದು ನಿಯಮ ಬಾಹಿರವಾಗುತ್ತದೆ. ಒಂದು ದೃಷ್ಟಿಯಿಂದ ತಪ್ಪು ಆಗುತ್ತದೆ. ಸಾಯಬೇಕಾದವನು ಸಾಯದಿದ್ದರೆ ದೇಶದಲ್ಲಿಯ ಜನಸಂಖ್ಯೆಯ ಗತಿ ಏನು?"

(iv) **ಧರ್ಮ :**

ಅಲ್ಲಿಯೂ ಸ್ವಾಮೀಜಿಗಳಿದ್ದಾರೆ, ಎಚ್ಚರಿಕೆ! ಅಲ್ಲಿಯ ಸ್ವಾಮೀಜಿಗಳು ಸಿಲ್ಕಿನ ಕಾವಿಬಟ್ಟೆ ಹಾಕಿಕೊಂಡು, ಚಿನ್ನದ ವಾಚು ಕಟ್ಟಿಕೊಂಡು, ಮೈಗೆ ಸ್ನೋ ಪೌಡರುಗಳನ್ನು ಲೇಪಿಸಿ, ಸುಗಂಧದ ಅತ್ತರನ್ನು ಹಚ್ಚಿಕೊಂಡು ಜನರಿಗೆ ಧರ್ಮೋಪದೇಶ ಮಾಡುತ್ತಾರೆ. ಚುನಾವಣೆಯ ಸಮಯದಲ್ಲಿ ಪ್ರತಿಯೊಬ್ಬ ಮಂತ್ರಿಯೂ ಈ ಸ್ವಾಮೀಜಿಗಳಿಂದ ಮಂತ್ರಾಕ್ಷತೆ ಮತ್ತು ಆಶೀರ್ವಾದ ಪಡೆಯುತ್ತಾನೆ. ಈ ಸ್ವಾಮೀಜಿಗಳ ಪ್ರವಚನಗಳಿಗೆ ಮಹಿಳೆಯರ ನೂಕುನುಗ್ಗಲು. ಈ ಮಹಿಳೆಯರ ಮಧ್ಯದಲ್ಲಿ ಇಂತಹ ಸ್ವಾಮೀಜಿ ಯವರು ಸುಮಾರು ಅರ್ಧಗಂಟೆ ಅಂಧಕಾರದಲ್ಲಿ ಮಗ್ನ (ನಗ್ನ ?)ರಾಗಿ ಧ್ಯಾನಮಾಡು ತ್ತಾರೆ. ಅವರ ವಿಚಾರಧಾರೆ ಯಾರೂ ಮೆಚ್ಚುವಂತಹದು. ಸಂಸಾರದಲ್ಲಿ ಇದ್ದೂ ಇಲ್ಲದ ಹಾಗಿರಬೇಕು. ಅಂದರೆ ಇದ್ದ ಹಾಗೆ ತೋರಿಸಿಕೊಡಬಾರದು"– ಹೇಗಿದೆ ಅವರ ವೈಖರಿ! ಅವರೇ ಹೇಳುವಂತೆ ಕಾವಿಬಟ್ಟೆಯಿಂದಾಗಿ ಸುಳ್ಳೆಲ್ಲ ಸತ್ಯವಾಗುತ್ತದೆ.

(v) **ಸಾಹಿತ್ಯ ಮತ್ತು ಕಲೆ :**

ಯಾವುದೇ ಒಂದು ದೇಶದ ಪ್ರಗತಿಯನ್ನು ಅಳೆಯಬೇಕಾದರೆ, ಸಮಾಜವನ್ನು ಪ್ರತಿಬಿಂಬಿಸುವ ಸಾಹಿತ್ಯ ಕಲೆಗಳ ಜ್ಞಾನ ಪಡೆಯಬೇಕು. ಈ ದೃಷ್ಟಿಕೋನದಿಂದ ನೋಡಿದರೆ ಮಂಗಲ್ಯಾಂಡಿನ ಜನರ ಅದ್ಭುತ ಪ್ರಗತಿಯ ಅರಿವು ನಮಗೆ ಆಗುತ್ತದೆ.

ಅಲ್ಲಿಯ ಸಾಹಿತಿಗಳ ಪುರಾಣವಂತೂ ಹೇಳತೀರದು. ಅಲ್ಲಿಯ ಸಾಹಿತಿಗಳಲ್ಲಿ ಎರಡು ಪ್ರಬಲ ಬಣಗಳಿದ್ದು ಯಾವಾಗಲೂ ಶೀತಲ ಸಮರದಲ್ಲಿ ತೊಡಗಿರುತ್ತವೆ. ತಾವು ಬರೆದ ಕೃತಿಯೇ ಮೇರುಕೃತಿ, ಅದಕ್ಕೆ ಸರಕಾರದ ಪುರಸ್ಕಾರ ಸಿಗಬೇಕು ಎನ್ನುವ ಪ್ರಚಾರವೇ ಪ್ರಚಾರ. ಈ ಪ್ರಚಾರ ಮಾಡಲಿಕ್ಕೆಂದೇ ಅನೇಕ ಪತ್ರಿಕೆಗಳಿವೆ. ಎಲ್ಲಿಯಾದರೂ ವಿಚಾರ ಸಂಕಿರಣವಾದರೆ ಎರಡೂ ಗುಂಪುಗಳ ಮಧ್ಯೆ ಘರ್ಷಣೆ ಯುಂಟಾಗಿ ಪೋಲೀಸರೇ ಮಧ್ಯೆ ಪ್ರವೇಶಿಸಿ ಸಂಕಿರಣ ಸಾಂಗಗೊಳಿಸುವ ವಾಡಿಕೆಯಿದೆ. ಮುದುಕರಿಗೂ ಯುವಕರಿಗೂ ಲಗ್ಗೆ. ಸಂಖ್ಯಾಬಲದಿಂದ ಸಾಹಿತಿಯ ಗರಿಷ್ಠತೆಯನ್ನು ಅಳೆಯುವದು ಪದ್ಧತಿ. ಸಾಹಿತ್ಯಸಂಮೇಲನದಲ್ಲಿ ಒಬ್ಬರಿಗೊಬ್ಬರು ಬೆನ್ನು ತಿರುಗಿಸಿ ಕೊಡುವದು, ಸ್ವಾಗತಬಯಸುವವ "ಹಿರಿಯರೇ, ಕಿರಿಯರೇ" ಎಂದಾಗ "ಹಿರಿಯರಿ

ಗೇಕೆ ಮೊದಲು ಸ್ವಾಗತ?" ಎಂಬ ಪ್ರಶ್ನೆ ತೇಲಿಬರುತ್ತಿತ್ತು. ಉದ್ಘಾಟಕರಾದ ಮಂತ್ರಿಗಳಿಗೆ ಸಾಹಿತ್ಯದ ಗಂಧಗಾಳಿಯಿಲ್ಲ. ಅವರ ಅಭಿಪ್ರಾಯ ಅವರ ಮಾತಿನಲ್ಲೇ ಕೇಳಬೇಕು: "ನನಗೂ ಸಾಹಿತ್ಯಕ್ಕೂ ದೂರ. ಬಹಳ ದೂರ. ನನಗೆ ಅದರ ಗಂಧಗಾಳಿ ಯಿಲ್ಲ. ಆದರೆ ಸಾಹಿತ್ಯಪುಸ್ತಕಗಳ ಮೇಲೆ ಅರೆ ಬೆತ್ತಲೆ ಹೆಣ್ಣುಮಕ್ಕಳ ಚಿತ್ರಗಳಿರು ತ್ತವೆ ಎನ್ನುವದನ್ನೂ ಹಾಗಿದ್ದಾಗಲೇ ಅದಕ್ಕೆ ಸಾಹಿತ್ಯ ಅನ್ನುತ್ತಾರೆ ಎನ್ನುವದನ್ನೂ ನನ್ನ ಮಕ್ಕಳು ಓದುತ್ತಿರುವ ಪುಸ್ತಕಗಳಿಂದ ತಿಳಿದುಕೊಂಡಿದ್ದೇನೆ."

ಮಂಗಲ್ಯಾಂಡಿನ ಎಲ್ಲ ಸಾಹಿತಿಗಳಿಗೆ ಸರಕಾರದ ಬಹುಮಾನ ಪಡೆಯಬೇಕೆಂಬ ಮಹತ್ವಾಕಾಂಕ್ಷೆ. ಒಬ್ಬ ಸಾಹಿತಿಯಂತೂ "ಭಾವವಿಲ್ಲದ ಭಾವ ನನ್ನದು" ಎನ್ನುವದು ಅತಿ ಹಾಸ್ಯಮಯವಾಗಿದೆ. ಎಲ್ಲ ಸಾಹಿತಿಗಳು ಅಮರ ಕೃತಿ ("ಅಮರ" ಎಂದರೆ ಮಾರಾಟವಾಗದೆ ಪ್ರಕಾಶಕರ ಗೋಡೌನುಗಳಲ್ಲಿಯೇ ಕಾಯಂ ಆಗಿ ವಾಸಮಾಡುವ") ಗಳನ್ನು ರಚಿಸುವವರೇ.

(vi) **ಪ್ರಗತಿಯ ಕಲ್ಪನೆ:**

ದೇವರನ್ನೇ ಹೊಡೆದೋಡಿಸಿದ ಧೀರರು ಈ ಮಂಗಲ್ಯಾಂಡಿನ ಜನರು. ಅವರು ಪ್ರಗತಿಯ ಬಗ್ಗೆ ಕಲ್ಪನೆ ಬರಲು ಬೃಹತ್ ಕಟ್ಟಡಗಳನ್ನು ಕಟ್ಟುತ್ತಾರೆ. ವಿಮಾನಾಂಗಣ ದಂತೆ ಇಡೀ ದೇಶವನ್ನು ಸಮತಟ್ಟಾಗಿಸಿ ಕಾಂಕ್ರೀಟು ಮಾಡಿಸಿದ್ದರಿಂದ ಎಲ್ಲೆಲ್ಲೂ ವಿಮಾನ ಇಳಿಯುವಂತೆ ಮಾಡಿದ ಅದ್ಭುತ, ಆಹಾರಧಾನ್ಯಗಳನ್ನು ಆಮದು ಮಾಡಿ ಕೊಳ್ಳುವಿಕೆ, ಎಲ್ಲ ಹೂದೋಟಗಳನ್ನು ಪ್ಲ್ಯಾಸ್ಟಿಕ್‌ನಿಂದ ಮಾಡಿದ ವೈಖರಿ, ತಾವೇ ದೇವರು ಎಂಬ ಭಾವನೆ, ಹೆಂಗಸರಿಗೂ ಗಂಡಸರಂತೆ ಸಮಾನಾವಕಾಶ ಒದಗಿಸಿಕೊಡುವ ವಿಚಾರದಿಂದ ಗಂಡಸರಿಗೆ ಕೃತಕ ಗರ್ಭಾಶಯ ಜೋಡಿಸುವ ವಿಚಾರ ಅಲ್ಲಿಯ ಪ್ರಗತಿಯನ್ನು ತೋರಿಸುತ್ತದೆ.

(vii) **ಇನ್ನಿತರ ವಿಷಯಗಳು :**

ಮಂಗಲ್ಯಾಂಡಿನಲ್ಲಿ ಎಲ್ಲ ಉದ್ದಿಮೆಗಳನ್ನು ಸರಕಾರವೇ ನಡೆಸುತ್ತದೆ. ಕಸಪೊರಕೆ ಗಳನ್ನು ತಯಾರಿಸುವದರಿಂದ ಈರುಳ್ಳಿ ಬೆಳೆಯುವದರ ವರೆಗೆ ಎಲ್ಲ ಉದ್ದಿಮೆಗಳು ಸರಕಾರದ ಸ್ವಾಧೀನದಲ್ಲಿ. ಪಂಚತಾರಾ ಹೊಟೆಲನ್ನು ಸಹ ಅದು ನಡೆಸುತ್ತದೆ; ಹೇರಳ ಹಣವನ್ನು ವೆಚ್ಚಮಾಡುತ್ತದೆ. ಸರಕಾರೀ ಉದ್ಯಮವೆಂದ ಮೇಲೆ ಲಾಭದ ಪ್ರಶ್ನೆಯೇ ಇಲ್ಲ. ಬೇಸಾಯವನ್ನು ಸಂಪೂರ್ಣವಾಗಿ ಅಲ್ಲಿ ಬಹಿಷ್ಕರಿಸಲಾಗಿದೆ. ಏಕೆಂದರೆ ಅದರೊಡನೆ ಹತ್ತಾರು ಸಮಸ್ಯೆಗಳು ಉದ್ಭವವಾಗುತ್ತವೆ–ಬೆಳೆಯುವದು, ಸಂಗ್ರಹಿಸು ವದು, ವಿತರಣೆಮಾಡುವದು. ಮನೆಯಲ್ಲಿ ಗೃಹಿಣಿಯರು ಬೇಯಿಸುವದು ಇವೇ ಆ ಸಮಸ್ಯೆಗಳು. ಕೋಮಲಾಂಗಿಯರು ದಿನಾಲು ಅಡಿಗೆ ಮಾಡುತ್ತ ಕುಳಿತರೆ ಅವರಿಗೆ

ತಮ್ಮ ಸೌಂದರ್ಯ ವರ್ಧನೆಗೆ ಅವಕಾಶ ಸಿಗುವದಿಲ್ಲ. ಆದ್ದರಿಂದ ಆಹಾರದ ಮಾತ್ರೆಗಳ ಆಮದು ಮಾಡಿ ಹೆಂಗಳೆಯರು ಉಪಯೋಗಿಸುವ ಸ್ನೋ, ಪೌಡರುಗಳ ಮತ್ತು ಅನೇಕ ಕೃತಕ ಸಾಧನಗಳ ಕಾರಖಾನೆಗಳನ್ನು ತೆಗೆದಿದ್ದಾರೆ. ಮಹಿಳೆಯರ ಫ್ಯಾಶನ್ನುಗಳು ಮಹತ್ವವಾದವುಗಳು ಉದಾ : ಶಾಲೆಯ ಮುಖ್ಯಾಧ್ಯಾಪಿಕೆಗೂ ಫ್ಯಾಶನ್ನು ಮುಖ್ಯ. ಅವಳ ಕೃತಕ ಕೇಶರಾಶಿ ತಲೆಯ ಮೇಲ್ಗಡೆಯಲ್ಲಿ ಒಂದು ಭವ್ಯವಾದ ಕೊತ್ತಳದಂತೆ ಇತ್ತು. ಅವಳ ಸೀರೆ ಅವಳ ದೇಹ ಸೌಂದರ್ಯವನ್ನೂ ತಪ್ಪಿ ಕೂಡ ಯಾರೂ ನೋಡ ದಿರಬಾರದೆಂಬಂತೆ ಮೈಗೆ ಅಂಟಿಕೊಂಡಿತ್ತು. ಅಲ್ಲಿಯ ಸ್ತ್ರೀಯರು ಬಟ್ಟೆಯನ್ನು ಮಿತವ್ಯಯದಿಂದ ಉಪಯೋಗಿಸುತ್ತಾರೆ. ಕೆಲವರು "ಬಿಕಿನಿ" ಧರಿಸಿದ್ದರೆ ಅದರಿಂದಲೂ ಸೆಖೆಯಾಗುತ್ತದೆಂದು"ಬಟ್ಟೆಯ ಬಂಧನವೇ ಬೇಡ" ಎನ್ನುವ ಸ್ಥಿಯಲ್ಲಿದ್ದವರು ಕೆಲವರು. ಕೈಯಲ್ಲಿ ಕಿರುಗನ್ನಡಿಯನ್ನು ಹಿಡಿದುಕೊಂಡು, ಹುಬ್ಬುಗಳನ್ನು ತಿದ್ದುವದು, ತುಟಿಗಳ ಬಣ್ಣವನ್ನು ಸರಿಯಾಗಿಸಿಕೊಳ್ಳುವದು, ಕೇಶರಚನೆಯನ್ನು ಮೇಲಿಂದ ಮೇಲೆ ಮುಟ್ಟಿ ಕೊಳ್ಳುವದು (ಅದು ಅಲ್ಲಿಂದ ಹೋಗಿಲ್ಲವೆಂಬುದನ್ನು ತಿಳಿದುಕೊಳ್ಳಲು) ನಡೆಯುವವು.

ಚುನಾವಣೆಗಳಲ್ಲಿ ಹೆಚ್ಚಾಗಿ ಅವಿರೋಧ ಆಯ್ಕೆಯಾಗುವದು ಖಂಡಿತ. ಆದರೂ ಅಭ್ಯರ್ಥಿ ಹೇಗಿರಬೇಕು ಎಂಬುದರ ಬಗ್ಗೆ ಅಲ್ಲಿ ಮಾನದಂಡವಿದೆ. ಅಭ್ಯರ್ಥಿಯು ಪ್ರಬಲನಾಗಿರಬೇಕು, ಪ್ರಭಾವಶಾಲಿಯಾಗಿರಬೇಕು; ತನ್ನ ಆಯ್ಕೆಗಾಗಿ ಸಾಮಾನ್ಯವಾಗಿ ಹತ್ತುಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಯೋಗ್ಯತೆಯಿರಬೇಕು. ಇತ್ಯಾದಿ-

೩. ಸಮಾರೋಪ :

ಮೇಲೆ ಹೇಳಿದ ಎಲ್ಲ ಅಂಶಗಳನ್ನು ಗಮನಿಸಿದರೆ "ಮಂಗಲ್ಯಾಂಡಿನಲ್ಲಿ ಮೂರು ವಾರ" ಒಂದು ಉತ್ತಮ ರಾಜಕೀಯದು ಹಾಗೂ ಸಾಮಾಜಿಕ ವಿಡಂಬನೆಯ ಮನವರಿಕೆ ಯಾಗುವದು. ಸಮಾಜವಾದದ, ಗುಲ್ಲೆಬ್ಬಿಸಿ, ಬಡವರ ಬಂಧು ಎಂದು ಅನ್ನಿಸಿಕೊಂಡು ತಮ್ಮ ಬೆನ್ನುಗಳನ್ನು ತಾವೇ ಚಪ್ಪರಿಸಿಕೊಂಡು ದೇಶದ ಶೋಷಣೆ ನಡೆಸಿರುವ ನಮ್ಮ ಮಂತ್ರಿಗಳು; ಪ್ರಜಾಪ್ರಭುತ್ವ, Secularism ಮುಂತಾದ ಟೊಳ್ಳು ಘೋಷಣೆಗಳನ್ನು ಮುಂದಿಟ್ಟು ತಮ್ಮ ಗಾದಿಗಳನ್ನು ಭದ್ರಪಡಿಸಿಕೊಂಡು ಬಡತನವನ್ನು ಹೊಡೆದೋಡಿ ಸುವ ನೆವದಲ್ಲಿ ತಮ್ಮ ಬಡತನವನ್ನು ನಿವಾರಿಸಿ ಶ್ರೀಮಂತಸೌಧಗಳನ್ನು ಕಟ್ಟಿಕೊಂಡಿ ರುವ ನಮ್ಮ ಮುಂದಾಳುಗಳ ಚಿತ್ರವಿಲ್ಲಿದೆ. ಜೀವನ ಮೌಲ್ಯಗಳನ್ನು ಮಾರಿಕೊಂಡು ಮ್ಯಾಕ್‌ಬೆಥ್‌ನಂತೆ "Evil be thou my Good" ಎಂಬುದನ್ನೆ ಜನರು ತಮ್ಮ ಧ್ಯೇಯವಾಕ್ಯವನ್ನಾಗಿ ಮಾಡಿಕೊಂಡಂತಿದೆ. ಜನರು ಪ್ರೀತಿ, ಗೀತಿ, ಸ್ನೇಹ, ಕೃತಜ್ಞತೆ ಎಲ್ಲವನ್ನು ಮರೆತು ಸ್ವಾರ್ಥಸಾಧನೆಯನ್ನು ಕಲಿತಿದ್ದಾರೆ. ಪ್ರಗತಿಯಪರಿಣಾಮವಾಗಿ ಮನುಷ್ಯ ಸಮಯಸಾಧಕನಾಗಿದ್ದಾನೆ.

ಗ್ರಂಥದ ಪ್ರತಿಪುಟದಲ್ಲಿ ಹಾಸ್ಯದ ಹೊನಲು ಹರಿಯುತ್ತದೆ. ಅವರ ಹಾಸ್ಯಶೈಲಿಯ ಪರಿಚಯ ಮಾಡಿಕೊಡಲು ಕೆಳಗಿನ ಉದಾಹರಣೆಗಳನ್ನು ನೋಡಬಹುದು.

೧) ಅಲ್ಲಿಯ ಶಾಲೆಯ ಮುಖ್ಯಾಧ್ಯಾಪಿಕೆ "ಮಹಾಕಾಯದ ಮಹಾತಾಯಿ." "ಅಧಿಕಾರಕ್ಕೆ ತಕ್ಕ ದೇಹ, ದೇಹಕ್ಕೆ ತಕ್ಕ ಹೆಮ್ಮೆ ಅಥವಾ ಹೆಮ್ಮೆಗೆ ತಕ್ಕ ಎಮ್ಮೆಯಂಥ ದೇಹ ಆಕೆಯದಾಗಿತ್ತು. ದೇಹ ಎಮ್ಮೆಯ ಗಾತ್ರದ್ದಾದರೂ ಆಕೆಯ ಕೀರಲು ದನಿ ಇಲಿಯದಾಗಿತ್ತು. ಬಹುಶಃ ಆಕೆಯ ಕುತ್ತಿಗೆಯ ಮಾಂಸಖಂಡಗಳಲ್ಲಿ ಧ್ವನಿ ಪೆಟ್ಟಿಗೆ ಸಿಕ್ಕಿಬಿದ್ದು ಜಜ್ಜಿಹೋಗಿ ಮುದ್ದೆಯಾಗಿರಬೇಕು."

೨) ಶಾಲೆಯ ಮಕ್ಕಳಿಗಾಗಿ ಆ ಊರಲ್ಲಿ ಎಂಟು ಚಿತ್ರಮಂದಿರಗಳಿದ್ದವು. "ಓದು ಬರಹಗಳಿಂದ ಆಗದ ಕೆಲಸವನ್ನು ಚಿತ್ರಗಳು ಮಾಡಬಲ್ಲವು."

೩) ಅಲ್ಲಿಯ ಚಿತ್ರಕಲೆಯಬಗ್ಗೆ– "ನಾಲ್ಕು ಗೋಡೆಗಳ ಮೇಲೆ ಏನಿಲ್ಲೆಂದರೂ ಒಂಬತ್ತು ಬಣ್ಣಗಳನ್ನು ಕೈಗೆ ಬಂದ ಹಾಗೆ **ಬಳಸಿದ ಅಥವಾ ಬಳಿದ** ಹಾಗಿತ್ತು."

೪) ಸಾಹಿತಿಗಳ ಬಗ್ಗೆ— ಆ ಗುಂಪುಗಳಲ್ಲಿ ಕೂಡ ಒಬ್ಬರನ್ನು ಕಂಡರೆ ಇನ್ನೊಬ್ಬರಿಗಾಗುವದಿಲ್ಲ. ಗುಂಪುಗಳಲ್ಲಿ ಒಳಗುಂಪುಗಳು. ಒಳಗುಂಪುಗಳಲ್ಲಿ ಒಳ–ಒಳಗುಂಪುಗಳು ! ಪ್ರತಿಯೊಬ್ಬನೂ ಆಚಾರ್ಯ ಪುರುಷನೇ ! ಒಬ್ಬೊಬ್ಬನದೂ ಒಂದು ಮತ, ಆತನ ಸುತ್ತ ಸದಾಕಾಲವೂ ಗಂಟೆ, ತಮಟೆ, ಜಾಗಟೆಗಳನ್ನು ಹಿಡಿದುಕೊಂಡು ಆತನ ಪ್ರಚಾರಕ್ಕಾಗಿಯೇ ನಿಂತ ಒಂದು ಚಿಕ್ಕಗಣ.

೫) "ಬಿಕಿನಿ" ಉಡುಪಿನಿಂದಲೂ ಸಹ ಸೆಖೆಯಾಗುತ್ತದೆಯೆಂದು ಕೆಲವೊಂದು ಹೆಂಗಳೆಯರು "ಬಟ್ಟೆಯ ಬಂಧನವೇ ಬೇಡ" ಎಂದು ಸಂಪೂರ್ಣ ಸ್ವಾತಂತ್ರ್ಯ ಬೇಡುವ ಸನ್ನಾಹದಲ್ಲಿದ್ದರೆಂದು ಕಾಣುತ್ತದೆ. ಹುಟ್ಟಿದಾಗ ಯಾವ ಬಟ್ಟೆ ಇದ್ದಿತು ? ಎನ್ನುವದು ಅವರ ವಾದ, ಪ್ರಶ್ನೆ.

೬) ಅಲ್ಲಿಯ ಹೆಂಗಸರ ಕೇಶರಚನೆಯ ಬಗ್ಗೆ— "ಕಾಗೆ ಗೂಗೆಗಳು ಎಷ್ಟು ಬಗೆಯ ಗೂಡುಗಳನ್ನು ಕಟ್ಟಬಲ್ಲವೋ ಅಷ್ಟು ಬಗೆಯ ಗೂಡುಗಳು, ಗೋಲಗಳು, ಗುಮ್ಮಟಗಳು, ಗೌಸಣಿಕೆಗಳು ಅವರ ತಲೆಯ ಮೇಲಿದ್ದವು.……ನೋಡಿದವರು ತಲೆದೂಗಲೇ ಬೇಕಾದ ತಲೆಗಳು ಅವರವಾಗಿದ್ದವು. "

೭) ಎಲ್ಲಿಯಾದರೂ ತಪ್ಪಿ ಒಂದು ಸಸಿ ಕಾಣಿಸಿಕೊಂಡರೆ ಅದನ್ನು ಕಿತ್ತು ತಂದ ವರಿಗೆ ಬಹುಮಾನ ಕೊಡುತ್ತಾರೆ. ಸರಕಾರದವರು ಅವಕ್ಕೆ "ವನಹನನೋತ್ಸವ" ಎಂಬ ಸಮಾರಂಭ ಸಪ್ತಾಹವನ್ನೇ ಆಚರಿಸುತ್ತಾರೆ.

೮) ಯುವಕ ಸಾಹಿತಿಗಳ ಬಗ್ಗೆ–"ಯುವಕರಿಗೆ ತಕ್ಕ ಹಾಗೆಯೇ ವೇಷಭೂಷಣ ಮಾಡಿಕೊಂಡಿದ್ದರು. ಭೂಷಣ ಎಂದು ಅವರು ಅಂದುಕೊಂಡಿದ್ದರು. ತರತರದ ವೇಷಗಳೇನೋ ಇದ್ದವು. ಭೂಷಣ ಅವರ ದೃಷ್ಟಿಯಲ್ಲಿ ಮಾತ್ರ."

ಇಂತಹ ಅನೇಕ ವಾಕ್ಯಗಳಲ್ಲಿ ಲೇಖಕರ ಲಘುಹಾಸ್ಯ ವ್ಯಂಗ್ಯ. ವಿಡಂಬನೆಗಳ ಪರಿಚಯುವಾಗುತ್ತದೆ. ಇನ್ನೂ ಕೆಲವೊಮ್ಮೆ ಇನಾಂದಾರರು Epigrammatic Style ದಲ್ಲಿ ಬರೆದಾಗ ಸಹ ಹಾಸ್ಯ ಪುಟಿದೇಳುತ್ತದೆ.

ಉದಾ :

೧. ಲೇಖಕರ ಮಾರ್ಗದರ್ಶಿಯ ಹೆಂಡತಿ ಅವರ ತೀರ ಹತ್ತಿರ ಕೂತಾಗ— ಆಕೆಯ ನಿಸ್ಸಂಕೋಚವನ್ನು ನೋಡಿ ನನಗೆಯೇ ಸಂಕೋಚವೆನಿಸುತ್ತಿತ್ತು.
೨. ನಮ್ಮ ಸಂದರ್ಶನ ಮೂಕದರ್ಶನವಾಗಿಯೇ ನಡೆಯಿತು.
೩. ಹಣವೇ ಆರೋಗ್ಯದ ಮೂಲ.
೪. ಆಸ್ಪತ್ರೆಯ ವಾತಾವರಣದ ಬಗ್ಗೆ—ಅತ್ತ ಸಾವು, ಇತ್ತ ಬದುಕು; ಅತ್ತ ವಿನಾಶ, ಇತ್ತ ವಿಲಾಸ.
೫. ಬರಹಕ್ಕೆ ತಕ್ಕ ವರಹ.

ಇಂತಹ intellectual flashes ಗಳು ಗ್ರಂಥದ ಸೌಂದರ್ಯವನ್ನು ಪರಿಣಾಮ ಕಾರಿಯಾಗಿ ಹೆಚ್ಚಿಸಿವೆ. Inverted commasದಲ್ಲಿ ಅವರು ಇಟ್ಟ ಶಬ್ದಗಳು ವ್ಯಂಗ್ಯ ವಾಗಿ ಅರ್ಥವನ್ನು ಸೂಚಿಸುವದಲ್ಲದೆ ಆಯಾ ಸಂದರ್ಭಗಳಲ್ಲಿ ಹೆಚ್ಚು ಅರ್ಥ ವತ್ತಾಗಿ, ಹಾಸ್ಯದ ಚಟಾಕಿಯನ್ನೆಬ್ಬಿಸುತ್ತವೆ. ಉದಾ: "ದಕ್ಷ" ಅಧಿಕಾರಿ; ಡಾಕ್ಟರರು ರೋಗಿಗಳನ್ನು "ನೋಡಿ" ಹೋಗುವದು; ಹೆಗಸರು ತಮ್ಮ "ಪಡಪ"ಗಳಲ್ಲಿಯ ಕಿರುಗನ್ನಡಿಗಳಲ್ಲಿ ಮೇಲಿಂದ ಮೇಲೆ ನೋಡುವದು.; ಮುಖ್ಯಾಧ್ಯಾಪಿಕೆ "ತೂಕ"ದ ಹೆಂಗಸು: ಮಂತ್ರಿಗೆ ಕಾರ್ಯದರ್ಶಿನಿ "ಬೇಕಾದುವನ್ನೂ" ಪೂರೈಸುವದು.

ಈ ಗ್ರಂಥದಲ್ಲಿ ಅತಿಶಯುವನ್ನು ವಾಸ್ತವಿಕೆಯೆಂದು ವರ್ಣಿಸುವ ವಿಡಂಬನೆಯ ರೀತಿಯ ಮೂಲಕ ಹಾಸ್ಯದ ಹೊಳೆ ಹರಿಯುತ್ತದೆ. ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿಯ ವಿದ್ಯಮಾನಗಳನ್ನು ಅಪಹಾಸ್ಯಕ್ಕೆ ಗುರಿಮಾಡಿ ಇನಾಂದಾರರು ನಮ್ಮ ದೇಶದ ಜನರ ಕಣ್ಣು ತೆರೆಯಿಸಿದ್ದಾರೆ. ನಮ್ಮ ದೇಶದಲ್ಲಿಯ ಭ್ರಷ್ಟಾಚಾರದ ಮುಖವಾಡವನ್ನು ತೆಗೆದುಹಾಕಿ ನಮಗೆ ಭಾರತದರ್ಶನ ಮಾಡಿಸಿದ್ದಾರೆ. ಭಾರತೀಯರು ಮನುಷ್ಯತ್ವವನ್ನೇ ಮಾರಿಕೊಂಡದ್ದರ ಬಗ್ಗೆ ಲೇಖಕರಿಗೆ ಕನಿಕರವಿದೆ. ತಮ್ಮ ಅವೌಲ್ಯವಾದ ವಿಚಾರಗಳನ್ನು ಮನೋರಂಜಕ ರೀತಿಯಲ್ಲಿ ಇನಾಂದಾರರು ವಿವರಿಸಿದ್ದಾರೆ. ಅಲ್ಲಲ್ಲಿ ಹಾಸ್ಯ ಅತಿಯಾಗಿ Farcical ಆಗಿ ಪರಿಣಮಿಸುವದುಂಟು (ಸರಸ್ವತಿ ಪ್ರಕರಣ, ಸಾಹಿತಿಗಳ ಸಮ್ಮೇಳನ, ಮನರಂಜನೆಗಾಗಿ ಅಲ್ಲಿಯವರು ಮಾಡಿದ ನಾಟಕ ಇತ್ಯಾದಿ). ಈ ಕುಂದು ಗ್ರಂಥದ ಕುಂದಣದಲ್ಲಿ ಅಡಗಿಹೋಗುತ್ತದೆ. ಈ ನೂತನ ಪ್ರಯೋಗದ ವಿಶಿಷ್ಟವಾದ ಗ್ರಂಥವನ್ನು ಕೊಟ್ಟು ಇನಾಂದಾರರು ಕನ್ನಡಕ್ಕೆ, ಕನ್ನಡದ ಜನತೆಗೆ ಮಹದುಪಕಾರ ಮಾಡಿದ್ದಾರೆ.

ರಾಷ್ಟ್ರೀಯ ವಯಸ್ಕರ ಶಿಕ್ಷಣ ಸಾಧನೆ (೧೯೭೯-೮೦)

● ಟಿ. ಆರ್. ನಾಗಪ್ಪ

ಕಳೆದ ಐದು ಪಂಚವಾರ್ಷಿಕ ಯೋಜನೆಗಳಲ್ಲಿ ಭಾರತ ಸರಕಾರ ತನ್ನ ರಾಷ್ಟ್ರದ ಅಭಿವೃದ್ಧಿಗೆ ೯೬,೯೧೧ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದೆ. ಆದರೂ ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡ ೪೬ ಮಂದಿ ಇನ್ನೂ ಬಡತನದ ರೇಖೆಯ ಅಂಚಿನಲ್ಲೇ ಇದ್ದಾರೆ. ಅವರ ಉದ್ಧಾರಕ್ಕೆ ಕೆಳಗೆ ಕಂಡ ಕನಿಷ್ಠ ಕಾರ್ಯಕ್ರಮಗಳು ಅಗತ್ಯ.

೧) ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸ ಯೋಜನೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದು.

೨) ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ ಸುಧಾರಣೆ.

೩) ಕುಡಿಯುವ ನೀರಿನ ವ್ಯವಸ್ಥೆ.

೪) ರಸ್ತೆಗಳ ನಿರ್ಮಾಣ ಮತ್ತು ದುರಸ್ತಿ.

೫) ಗ್ರಾಮೀಣರ ವಸತಿ ಸೌಕರ್ಯ.

೬) ವಿದ್ಯುಚ್ಛಕ್ತಿಯ ಸರಬರಾಜು.

೭) ಪೌಷ್ಟಿಕ ಆಹಾರ ಯೋಜನೆ.

೮) ನಗರದ ಕೊಳಚೆ ಪ್ರದೇಶಗಳ ಸುಧಾರಣೆ.

೯) ವಯಸ್ಕರ ಶಿಕ್ಷಣ.

ಮೇಲೆ ವಿವರಿಸಿರುವ ಗುರಿಗಳನ್ನು ಸಾಧಿಸಲು ಎಲ್ಲ ಅಭಿವೃದ್ಧಿ ಇಲಾಖೆಗಳೂ ಒಟ್ಟಾಗಿ ಸೇರಿ ಕೆಲಸಮಾಡಬೇಕಾಗಿದೆ. ಈ ಇಲಾಖೆಗಳ ಸೇವೆಯ ಪ್ರತಿಫಲ ಎಲ್ಲರನ್ನೂ ಮುಟ್ಟಬೇಕಾಗಿದೆ. ಆದರೆ, "ಬಾಯುಳ್ಳವನು ಬರದಲ್ಲಿ ಗೆದ್ದ" ಎಂಬಂತೆ ಕೇವಲ ಹಲವಾರು ವಾಚಾಳಿಗಳು ಮತ್ತು ಪ್ರತಿಭಾವಂತರು ಸರಕಾರದ ಸೌಲಭ್ಯಗಳನ್ನು

ಪಡೆಯುತ್ತಿದ್ದರೆ ಆಶ್ಚರ್ಯವೇನಿಲ್ಲ. ಜೊತೆಗೆ ಇನ್ನು ಕೆಲವರಿಗೆ ಸರಕಾರದ ಸೌಲಭ್ಯಗಳ ಪರಿಚಯವೇ ಇಲ್ಲ ಎಂದು ಹೇಳಿದಲ್ಲಿ ಉತ್ಪ್ರೇಕ್ಷೆ ಆಗಲಾರದು.

ಜನತೆ ಅದರಲ್ಲೂ ದೀನದುರ್ಬಲ ವರ್ಗದವರು ಮತ್ತು ಮಹಿಳೆಯರು ಸರಕಾರದ ವಿವಿಧ ಅಭಿವೃದ್ಧಿ ಇಲಾಖೆಗಳು ನೀಡುವ ಸೌಲಭ್ಯವನ್ನು ಪಡೆದು ತಮ್ಮ ಪ್ರಗತಿಯನ್ನು ಸಾಧಿಸಬೇಕಾಗಿದೆ. ಇದು ರಾಷ್ಟ್ರೀಯ ವಯಸ್ಕರ ಶಿಕ್ಷಣದ ಗುರಿ. ಸ್ವಾತ್ರಂತ್ರ್ಯ ಸಂದ ೩೦ ವರ್ಷಗಳಲ್ಲಿ ಸರಕಾರ ವಯಸ್ಕರ ಶಿಕ್ಷಣಕ್ಕೆ ಸಾಕಷ್ಟು ಗಮನ ನೀಡಲಿಲ್ಲ.

೧೯೭೭ ನೆಯ ಎಪ್ರಿಲ್ ಏಳನೆಯ ತಾರೀಖು ಭಾರತದ ವಯಸ್ಕರ ಶಿಕ್ಷಣ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯುವ ದಿನ. ಅಂದು ಎಲ್ಲ ರಾಜಕೀಯ ಪಕ್ಷಗಳು ಒಟ್ಟಾಗಿ ಭಾರತ ಸರಕಾರ ರೂಪಿಸಿದ್ದ ವಯಸ್ಕರ ಶಿಕ್ಷಣ ಯೋಜನೆಗೆ ತಮ್ಮ ಅಂಗೀಕಾರ ಮುದ್ರೆಯನ್ನೊತ್ತಿದವು. ಇದೊಂದು ಶುಭಸೂಚನೆ. ಇಂದಿನ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ ಹಲವಾರು ರೀತಿಗಳಲ್ಲಿ ಹಿಂದಿನ ಯೋಜನೆಗಳಿಗಿಂತ ವೈಶಿಷ್ಟ್ಯಪೂರ್ಣ. ಮೊದಲನೆಯದಾಗಿ ಭಾರತ ಸರಕಾರ ನಿರೂಪಿಸಿದ ಯೋಜನೆ ಮೇಲೆ ತಿಳಿಸಿದಂತೆ ಎಲ್ಲ ರಾಜಕೀಯ ಪಕ್ಷಗಳ ಅಂಗೀಕಾರ ಮುದ್ರೆಯನ್ನು ಪಡೆದಿದೆ. ಎರಡನೆಯದಾಗಿ ಇದೊಂದು ಬೃಹತ್ ಯೋಜನೆ. ಐದು ವರ್ಷಗಳಲ್ಲಿ ೧೫–೩೫ ವಯೋಮಿತಿಯ ೧೦ ಕೋಟಿ ಅನಕ್ಷರಸ್ಥ ವಯಸ್ಕರಿಗೆ ಈ ಯೋಜನೆ ಅನ್ವಯವಾಗಲಿದೆ. ಮೂರನೆಯದಾಗಿ ಇದು ಕೇವಲ ವಿದ್ಯಾಇಲಾಖೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲ ಅಭಿವೃದ್ಧಿ ಇಲಾಖೆಗಳು ಈ ಕಾರ್ಯಕ್ರಮದಲ್ಲಿ ತೊಡಗಬೇಕು. ನಾಲ್ಕನೆಯದಾಗಿ ಇದು ಜನತಾ ಚಳುವಳಿಯ ಸ್ವರೂಪತಾಳಲಿದೆ. ಈ ದೃಷ್ಟಿಯಿಂದ ಖಾಸಗಿ ಸಂಘ-ಸಂಸ್ಥೆಗಳು ಹೆಚ್ಚಿನ ರೀತಿಯಲ್ಲಿ ಸೇವೆ ಸಲ್ಲಿಸಲು ಅವಕಾಶ ಮತ್ತು ಹೆಚ್ಚಿನ ಪ್ರೋತ್ಸಾಹವನ್ನು ಭಾರತ ಸರಕಾರ ನೀಡಲಿದೆ. ಐದನೆಯದಾಗಿ ಶಿಕ್ಷಣಾರ್ಥಿಗಳ ಅಗತ್ಯ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ನಡೆಯಬೇಕಾದ ಕಾರ್ಯಕ್ರಮ. ಆರನೆಯದಾಗಿ ದೀನ ದುರ್ಬಲ ವರ್ಗದವರಿಗೆ ಮತ್ತು ಮಹಿಳೆಯರಿಗೆ ಈ ಯೋಜನೆಯಲ್ಲಿ ಪ್ರಾಶಸ್ತ್ಯ ನೀಡಲಾಗಿದೆ.

ಯೋಜನೆಯನ್ನು ರೂಪಿಸುವ ಮುನ್ನ ವಯಸ್ಕರ ಶಿಕ್ಷಣ ತಜ್ಞರ, ಕಾರ್ಮಿಕ ಸಂಘದ ಪ್ರತಿನಿಧಿಗಳ, ಉಪಾಧ್ಯಾಯರ, ಸ್ವಯಂಸೇವಾಸಂಸ್ಥೆಗಳ ಹಾಗೂ ಯುವಕ ಸಂಘಗಳ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆದಿದೆ. ವಿಶ್ವವಿದ್ಯಾನಿಲಯದ ಧನ ಸಹಾಯ ಮಂಡಲಿ ಮತ್ತು ಅಖಿಲಭಾರತ ವಿಶ್ವವಿದ್ಯಾನಿಲಯಗಳ ಸಂಘವು ಈ ಯೋಜನೆಯನ್ನು ಅಂಗೀಕರಿಸಿವೆ. ಮೇಲಾಗಿ ವಿವಿಧ ರಾಜ್ಯಗಳ ವಿದ್ಯಾಮಂತ್ರಿಗಳ ಸಭೆಯು ದೀರ್ಘವಾಗಿ ಪರಿಶೀಲಿಸಿ ತನ್ನ ಅಂಗೀಕಾರ ಮುದ್ರೆಯನ್ನು ಒತ್ತಿದೆ.

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯ ಗುರಿ ಏನು ?......

ಸಾರ್ವಜನಿಕ ಕಡ್ಡಾಯ ಪ್ರಾಥಮಿಕ ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣ ಒಂದೇ ನಾಣ್ಯದ ಎರಡು ಮುಖಗಳು. ಈ ಎರಡು ಕಾರ್ಯಕ್ರಮಗಳು ಒಟ್ಟಾಗಿ ಪರಿಣಾಮಕಾರಿಯಾಗಿ ನಡೆಯತಕ್ಕದ್ದು.

ನಿರಕ್ಷರತೆ ವ್ಯಕ್ತಿಯ ಪ್ರಗತಿಗೆ ಹಾಗೂ ರಾಷ್ಟ್ರದ ಪ್ರಗತಿಗೆ ಮಾರಕ. ಈ ದೃಷ್ಟಿಯಿಂದ ಇದು ಅಗತ್ಯವಾಗಿ ಆಗಬೇಕಾದ ಕಾರ್ಯಕ್ರಮ.

ಶಿಕ್ಷಣ ಕೇವಲ ಶಾಲೆಗೆ ಸೀಮಿತವಾದುದಲ್ಲ, ಅದು ಜೀವನದ ಒಂದು ಭಾಗ.

ಶಿಕ್ಷಣ ಜೀವನ ಪರ್ಯಂತ (ಲೈಫಲಾಂಗ ಎಜ್ಯುಕೇಷನ್) ಸಾಗುವ ಒಂದು ಕಾರ್ಯ ಚಟುವಟಿಕೆ. ಅದು ಜೀವನ ಶಿಕ್ಷಣವಾದಾಗ ಮಾತ್ರ ಹೆಚ್ಚು ಅರ್ಥಪೂರ್ಣವಾದೀತು.

ದೀನದುರ್ಬಲವರ್ಗದವರು ಹಾಗೂ ನಿರಕ್ಷರರು ವಿಚಾರವಿನಿಮಯ, ಸಾಕ್ಷರತಾ ಕಾರ್ಯಕ್ರಮ ಹಾಗು ಇತರ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿಯೂ ಹಾಗೂ ಪರಿಣಾಮಕಾರಿಯಾಗಿಯೂ ಪಾಲುಗೊಳ್ಳುವುದರ ಮೂಲಕ ತಮ್ಮ ಪ್ರಸಕ್ತ ಶೋಚನೀಯ ಪರಿಸ್ಥಿತಿಯಿಂದ ಮುಕ್ತರಾಗಲು ಸಾಧ್ಯ. ಆದರೆ.

ನೀಡಲಿರುವ ಶಿಕ್ಷಣ ವಯಸ್ಕರ ವಾತಾವರಣ ಮತ್ತು ಅವಶ್ಯಕತೆಗಳಿಗೆ ಅನುಗುಣವಾಗಿರತಕ್ಕದ್ದು. ಆದ್ದರಿಂದ ಮೊದಲಾಗಿ ಕಲಿಯುವವರ ಪರಕಾಯ ಪ್ರವೇಶಮಾಡಿ ಅವರ ಅಗತ್ಯ ಮತ್ತು ಅಭಿರುಚಿಗಳನ್ನು ತಿಳಿಯತಕ್ಕದು,

ಪಠ್ಯಸೂಚಿ, ಪಾಠೋಪಕರಣಗಳ ರಚನೆ ಹಾಗೂ ಬೋಧನಾವಿಧಾನಗಳಲ್ಲಿ ವೈವಿಧ್ಯತೆ ಇರತಕ್ಕದ್ದು.

ಕಾರ್ಯಕ್ರಮ ಶಾಸ್ತ್ರೀಯವಾಗಿ ಕ್ರಮವಾಗಿದ್ದು ವ್ಯವಸ್ಥೆ ಸಂಪೂರ್ಣವಾಗಿರತಕ್ಕದ್ದು.

ಪಠ್ಯವಸ್ತು ಸಾಧ್ಯವಾದಷ್ಟು ಆಯಾ ಕ್ಷೇತ್ರದ ನಿರಕ್ಷರ ಕುಕ್ಷಿಗಳ ಆಡುಭಾಷೆಯಲ್ಲಿರಬೇಕು.

ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ರೂಪಿಸುವಾಗ ದೀನದುರ್ಬಲರಿಗೆ ಹರಿಜನ ಗಿರಿಜನರಿಗೆ ಮತ್ತು ಮಹಿಳೆಯರಿಗೆ ಪ್ರಾಧಾನ್ಯತೆ ನೀಡಬೇಕು.

ಭಾರತ ಸರಕಾರ ವಯಸ್ಕರ ಶಿಕ್ಷಣ ಯೋಜನೆಗೆ ೬೮೬ ಕೋಟಿ ರೂಪಾಯಿಗಳನ್ನು ನಿಗದಿಮಾಡಿದೆ. ಕೇಂದ್ರ ಸರಕಾರ ಈಗಾಗಲೇ ೨೦೦ ಕೋಟಿ ರೂಪಾಯಿಗಳನ್ನು ಮೊದಲನೆಯ ಕಂತನ್ನಾಗಿ ಬಿಡುಗಡೆಮಾಡಿದೆ. ಈ ಹಣದಲ್ಲಿ ಅರ್ಧಭಾಗವನ್ನು

ರಾಜ್ಯ ಸರಕಾರಗಳು ವಿನಿಯೋಗಿಸಬೇಕು ಉಳಿದರ್ಧವನ್ನು ಕೇಂದ್ರಸರಕಾರ ವಹಿಸಲಿದೆ. ಖಾಸಗಿ ಸಂಸ್ಥೆಗಳ ಪೂರ್ಣವೆಚ್ಚವನ್ನು ಕೇಂದ್ರಸರಕಾರವೇ ಭರಿಸಲಿದೆ. ವಯಸ್ಕರ ಶಿಕ್ಷಣ ಕೇಂದ್ರದ ಅವಧಿ ೧೦ ತಿಂಗಳು: ೩೦೦-೩೫೦ ಘಂಟೆಗಳು.

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ ೧೯೭೮ರ ಅಕ್ಟೋಬರ ಎರಡರಂದು ಔಪಚಾರಿಕವಾಗಿ ಪ್ರಾರಂಭವಾಯಿತಷ್ಟೆ. ಆ ಸಂದರ್ಭದಲ್ಲಿ ಹಳ್ಳಿಯಿಂದ ದಿಲ್ಲಿಯವರೆಗೆ ಸಾವಿರಾರು ಪ್ರಚಾರಸಭೆಗಳು ನಡೆದುದಾಗಿ ವರದಿಯಾಗಿದೆ. ಆದರೂ ಇನ್ನೂ ಅನೇಕ ಗ್ರಾಮಗಳಲ್ಲಿ ರಾಷ್ಟ್ರೀಯ ವಯಸ್ಕರ ಯೋಜನೆಯ ಸ್ವರೂಪ ತಿಳಿದಿಲ್ಲ. ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳು ಈ ಯೋಜನೆಯಲ್ಲಿ ತಮ್ಮ ಪಾತ್ರವೇನೆಂಬುದನ್ನು ಅರಿಯಬೇಕಾಗಿದೆ.

ವಯಸ್ಕರ ಶಿಕ್ಷಣ ಕಾರ್ಯಕ್ರಮ ಆಯಾ ರಾಜ್ಯ ಸರಕಾರಗಳ ಜವಾಬ್ದಾರಿ. ಅದನ್ನು ನಿರ್ವಹಿಸಲು ರಾಜ್ಯ ಸರಕಾರಗಳು ಒಪ್ಪಿವೆ. ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ಕೇವಲ ಓದುಬರಹ ಕಲಿಯಲಿಕ್ಕೆ ಮಾತ್ರ ಸೀಮಿತವಲ್ಲ ಎಂಬ ಅಂಶವನ್ನು ರಾಜ್ಯ ಸರಕಾರಗಳು ಮನಗಂಡಿವೆ. ಆದರೂ ಈ ಕಾರ್ಯಕ್ರಮ ಎಲ್ಲ ರಾಜ್ಯಗಳಲ್ಲೂ ಒಂದೇ ತೆರನಾಗಿ ನಡೆಯುತ್ತಿಲ್ಲ. ಬಿಹಾರ, ಗುಜರಾತ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ, ಜಮ್ಮು, ಮತ್ತು ಕಾಶ್ಮೀರ ರಾಜ್ಯಗಳು ಕೇಂದ್ರಸರಕಾರದ ನೆರವಿನ ಜೊತೆಗೆ ತಮ್ಮ ರಾಜ್ಯದ ಸಂಪನ್ಮೂಲಗಳನ್ನು ಕೂಡಿಸಿಕೊಂಡು ಒಳ್ಳೆಯ ಕೆಲಸಮಾಡುತ್ತಿವೆ. ಉತ್ತರ ಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ, ಆಂಧ್ರ ಕರ್ನಾಟಕ, ಹರಿಯಾಣಾ ಮಣಿಪುರ ಮತ್ತು ಶಿಕ್ಕಿಂ ರಾಜ್ಯಗಳು ಯೋಜನೆಯನ್ನು ಕಾರ್ಯಗತಗೊಳಿಸಲು ನಿಗದಿಯಾದ ಆಡಳಿತದ ಚೌಕಟ್ಟು ಮತ್ತು ಸಿಬ್ಬಂದಿಯ ಬಗ್ಗೆ ಆಲೋಚಿಸುತ್ತಿವೆ. ಉಳಿದ ರಾಜ್ಯಗಳಲ್ಲಿ ಇನ್ನೂ ವಾಸ್ತವಿಕ ಕಾರ್ಯಕ್ರಮಗಳನ್ನು ರೂಪಿಸುವ ಬಗ್ಗೆ ಪ್ರಯತ್ನಗಳು ನಡೆಯುತ್ತಿವೆ. ಉತ್ತರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಗೆ ನಿಗದಿಯಾಗಿರುವ ಹಣ ಖೋತಾ ಆಗಿದೆ. ತತ್ಪರಿಣಾಮವಾಗಿ ಆ ರಾಜ್ಯಗಳ ಯೋಜನೆ ಒಹುಮಟ್ಟಿಗೆ ಕುಂಠಿತವಾಗಿದೆ.

ಖಾಸಗಿ ಸಂಘಸಂಸ್ಥೆಗಳ ಪಾತ್ರ :

ವಯಸ್ಕರ ಶಿಕ್ಷಣ ಹೆಚ್ಚಾಗಿ ಖಾಸಗಿ ಸಂಘಸಂಸ್ಥೆಗಳಿಂದ ಆಗಬೇಕಾದ ಕಾರ್ಯ ಎಂಬ ನೀತಿಗೆ ಭಾರತ ಸರಕಾರ ಬದ್ಧ. ಭಾರತ ಸರಕಾರದ ಹೊಸ ಅನುದಾನದ ನೀತಿಯಿಂದಾಗಿ ಅನೇಕ ಖಾಸಗಿ ಸಂಸ್ಥೆಗಳು ವಯಸ್ಕರ ಶಿಕ್ಷಣ ಕಾರ್ಯ ಕೈಗೊಳ್ಳಲು ಮುಂದೆ ಬಂದಿವೆ. ಇದುವರೆಗೆ ೧೭ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು ೬೦೩ ಖಾಸಗಿ ಸಂಘ-ಸಂಸ್ಥೆಗಳು ವಯಸ್ಕರ ಶಿಕ್ಷಣ ಯೋಜನೆಯಲ್ಲಿ ತೊಡಗಿವೆ. ಭಾರತದಂತಹ ವಿಶಾಲ ರಾಷ್ಟ್ರದಲ್ಲಿ ಈಗ ಮುಂದೆ ಬಂದಿರುವ ಸಂಘಸಂಸ್ಥೆಗಳ ಸಂಖ್ಯೆ

ಹೆಚ್ಚೇನಿಲ್ಲ. ಈ ಸಂಸ್ಥೆಗಳು ಕೆಲಸಮಾಡುವ ಉತ್ಸಾಹದ ಭರದಲ್ಲಿ ತಪ್ಪುಹೆಜ್ಜೆ ಇಡಲು ಸಾಧ್ಯ. ಕೆಲವು ಸಂಸ್ಥೆಗಳು ಸ್ಥಳೀಯ ವಾತಾವರಣ ತಿಳಿಯದೆ ಮತ್ತು ಮುಖಂಡರಲ್ಲಿ ಆಲೋಚಿಸದೆ ಕಾಗದದ ಯೋಜನಾಕುದುರೆಗಳನ್ನು ತಯಾರಿಸಿದಲ್ಲಿ ಆಶ್ಚರ್ಯವೇನಿಲ್ಲ. ಹೀಗಾಗದಂತೆ ಪರಿಣಾಮಕಾರಿಯಾದ ತಾಂತ್ರಿಕ ಮಾರ್ಗದರ್ಶನ ಅಗತ್ಯ. ಸೇವೆ ಸಲ್ಲಿಸುತ್ತಿರುವ ಖಾಸಗಿ ಸಂಘಸಂಸ್ಥೆಗಳ ವಿಚಾರದಲ್ಲಿ ಮಹಾರಾಷ್ಟ್ರ, ಗುಜರಾತ, ಬಿಹಾರ, ರಾಜಾಸ್ಥಾನ ಮತ್ತು ಮಣಿಪುರ ರಾಜ್ಯಗಳಿಗೆ ಮೊದಲನೆಯ ಸ್ಥಾನ.

ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಪಾತ್ರ : ವಿಶ್ವವಿದ್ಯಾನಿಲಯ ಧನಸಹಾಯ ಮಂಡಲಿ ಹಾಗೂ ಅಖಿಲಭಾರತ ವಿಶ್ವವಿದ್ಯಾನಿಲಯಗಳ ಸಂಘವು ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯಲ್ಲಿ ಭಾಗವಹಿಸುವಂತೆ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಿಗೆ ಕರೆಕೊಟ್ಟಿದೆ. ಜೊತೆಗೆ ವಿಶ್ವವಿದ್ಯಾನಿಲಯ ಧನಸಹಾಯ ಮಂಡಲಿ ಯೋಜನೆಯನ್ನು ಕಾರ್ಯಗತ ಮಾಡುವಬಗ್ಗೆ ಕೆಲವು ಮಾರ್ಗದರ್ಶನಗಳನ್ನು ನೀಡಿದೆ. ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ನಿರತರಾಗಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ಯೋಜನೆ ಮೀಸಲು. ಆದು ಸಲ್ಲದು. ಉತ್ಸಾಹ ಮತ್ತು ವಿಶ್ವಾಸದಿಂದ ಸೇವೆ ಸಲ್ಲಿಸಲು ಮುಂದೆಬರುವ ಎಲ್ಲ ವಿದ್ಯಾರ್ಥಿಗಳಿಗೂ ಈ ಯೋಜನೆ ಪ್ರವೇಶ ನೀಡುವುದು ಒಳ್ಳೆಯದು.

ಕೆಲವು ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಲ್ಲಿ ವಯಸ್ಕರ ಶಿಕ್ಷಣಕ್ಕೆ ಪ್ರತ್ಯೇಕ ವಿಭಾಗವನ್ನು ತೆಗೆಯಬೇಕೆಂಬ ಯೋಜನೆ ಇದೆ. ಆದರೆ ಇದು ಸಾಧುವಲ್ಲ. ರಾಷ್ಟ್ರೀಯ ಸೇವಾ ಯೋಜನೆಯೊಂದಿಗೆ ವಯಸ್ಕರ ಶಿಕ್ಷಣ ಯೋಜನೆಯನ್ನೂ ಸಹ ಐಕ್ಯಗೊಳಿಸುವುದು ಒಳಿತು.

ಅಖಿಲಭಾರತ ವ್ಯವಸಾಯ ಸಂಶೋಧನಾ ಮಂಡಲಿಯು ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯನ್ನು ಅಂಗೀಕರಿಸಿದೆ. ಆದು ತನ್ನ ಆಶ್ರಯದಲ್ಲಿರುವ ಕೃಷಿ ವಿಶ್ವ ವಿದ್ಯಾನಿಲಯಗಳಿಗೆ ಮತ್ತು ಕೃಷಿವಿಜ್ಞಾನಕ್ಕೆ ಸಂಬಂಧಪಟ್ಟ ಸಂಸ್ಥೆಗಳಿಗೆ ಯೋಜನೆ ಯನ್ನು ಕಾರ್ಯಗತಮಾಡುವ ಬಗ್ಗೆ ಸೂಕ್ತಸೂಚನೆಯನ್ನು ನೀಡಿದೆ. ಕೆಲವು ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳು ಪಾಠೋಪಕರಣಗಳನ್ನು ತಯಾರಿಸಲು ಮುಂದೆ ಬಂದಿವೆ. ಅವು ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯನ್ನು ಸಂಶೋಧನಾ ದೃಷ್ಟಿಯಿಂದ ಶಾಸ್ತ್ರೀಯವಾಗಿ ನಡೆಸುವುದು ಒಳ್ಳೆಯದು. ಮೇಲಾಗಿ ವಿಶ್ವವಿದ್ಯಾ ನಿಲಯಗಳು ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ಮತ್ತು ಮೌಲ್ಯಮಾಪನೆಯಲ್ಲಿ ತೊಡಗುವುದು ಒಳ್ಳೆಯದು.

ಮಹಾರಾಷ್ಟ್ರ, ಬಿಹಾರ ಮತ್ತು ತಮಿಳುನಾಡಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿಶ್ವ ವಿದ್ಯಾನಿಲಯಗಳು ಮತ್ತು ಕಾಲೇಜುಗಳು ಮುಂದೆ ಬಂದಿವೆ. ಇಡೀ ಭಾರತದಲ್ಲಿ

ಪಾಲುಗೊಂಡಿರುವ ವಿಶ್ವವಿದ್ಯಾನಿಲಯಗಳ ಒಟ್ಟು ಸಂಖ್ಯೆ ೮೦. ಮತ್ತು ಕಾಲೇಜು ಗಳ ಒಟ್ಟು ಸಂಖ್ಯೆ ೨೦೦೦. ಅವುಗಳ ಪೈಕಿ ೪೯ ವಿಶ್ವವಿದ್ಯಾನಿಲಯಗಳು ಮತ್ತು ೫೧೫ ಕಾಲೇಜುಗಳು ಕಾರ್ಯಕ್ರಮಕೈಗೊಳ್ಳಲು ಧನಸಹಾಯ ಪಡೆದಿವೆ.

ನೆಹರು ಯುವಕ ಕೇಂದ್ರಗಳು : ಭಾರತಾದ್ಯಂತ ೧೫೮ ನೆಹರು ಯುವಕ ಕೇಂದ್ರಗಳಿವೆ. ಪ್ರತಿಯೊಂದು ಕೇಂದ್ರದ ಆಶ್ರಯದಲ್ಲಿ ೩೦ ರಿಂದ ೧೦೦ ಚೇತನ ಸಂಘಗಳಿವೆ. ಕೆಲವು ನೆಹರು ಯುವಕ ಸಂಘಗಳು ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆದಿವೆ. ಅವು ಯಶಸ್ವಿಯಾಗಿ ಸೇವೆಸಲ್ಲಿಸಲು ಕಾಲಕ್ಕೆ ಸರಿಯಾಗಿ ಹಣಬಿಡುಗಡೆ ಆಗುತ್ತಿಲ್ಲ ಎಂಬ ಕೂಗಿದೆ.

ಉದ್ಯೋಗಪತಿಗಳ ಪಾತ್ರ : ಕಾರ್ಖಾನೆಗಳ ಮಾಲಿಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ತೊಡಗಿರುವ ಉದ್ಯೋಗಿಗಳಿಗೆ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸ ಬಹುದು. ಉದಾಹರಣೆಗೆ, ಕೋಲ್ ಇಂಡಿಯಾ ಕಂಪನಿ (ಕಲ್ಲಿದ್ದಲು ಗಣಿ)ಯ ಆಡಳಿತ ವ್ಯಾಪ್ತಿ ನಾಲ್ಕು ರಾಜ್ಯಗಳಿಗೆ ಸೀಮಿತವಾಗಿದೆ. ಅದು ತನ್ನ ಆಶ್ರಯದಲ್ಲಿರುವ ಅನಕ್ಷರಸ್ಥ ಕಾರ್ಮಿಕರಿಗೆ ಹಾಗೂ ಹೆಚ್ಚಿನ ಕರ್ಮಕೌಶಲ್ಯವಿಲ್ಲದವರಿಗೆ ಓದುಬರಹ ಕಲಿಸಲು ಮುಂದುಬಂದಿದೆ. ಅಷ್ಟೇಅಲ್ಲ, ಉದ್ಯೋಗಿಗಳ ಸಂಸಾರಕ್ಕೂ ಸಹ ಶಿಕ್ಷಣ ಸೌಲಭ್ಯ ನೀಡಲು ಯೋಚಿಸುತ್ತಿದೆ.

ಸಿಂಗರೇಲಿಯಲ್ಲಿ ೨೦೦೦ ಮೆಗೋವ್ಯಾಟಿನ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರ ೩೦೦ ಕೋಟಿ ರೂ. ವೆಚ್ಚದಲ್ಲಿ ಸ್ಥಾಪನೆ ಆಗಲಿದೆ. ಗುಡ್ಡಗಾಡು ಜನರ ಕ್ಷೇತ್ರ ಅದು. ಈ ಕೇಂದ್ರದಲ್ಲಿ ನಿರತರಾದ ಉದ್ಯೋಗಿಗಳಿಗೆ ಮತ್ತು ಇತರರಿಗೆ ಅನುಕೂಲವಾಗುವಂತೆ ಶ್ರಮಿಕ ವಿದ್ಯಾಪೀಠ ಯೋಜನೆಯನ್ನು ಕೈಗೊಳ್ಳಲಾಗುವುದು.

ಅಖಿಲ ಭಾರತ ಉಕ್ಕಿನ ಸಂಸ್ಥೆ ತನ್ನ ಆಶ್ರಯದಲ್ಲಿರುವ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಹಾಗೂ ಸಾಕಷ್ಟು ಕರ್ಮಕೌಶಲ್ಯವಿಲ್ಲದಿರುವವರಿಗೆ ಕ್ರಿಯಾತ್ಮಕ ಶಿಕ್ಷಣ ನೀಡುವಂತೆ ಕರೆಕೊಟ್ಟಿದೆ. ಅಷ್ಟೆ ಅಲ್ಲ, ಕಾರ್ಖಾನೆಯಿರುವ ಜಿಲ್ಲೆಯ ಜನರಿಗೂ ಸಹ ದೊರೆಯಲಿದೆ.

ಸಂಪನ್ಮೂಲಗಳ ಅಭಿವೃದ್ಧಿ : ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ ಯಲ್ಲಿ ಪಠ್ಯಸೂಚಿರಚನೆ, ಬೋಧನಾ ಸಾಮಗ್ರಿಗಳ ತಯಾರಿಕೆ. ತರಬೇತು ಮತ್ತು ಮೌಲ್ಯ ಮಾಪನೆಗೆ ಆದ್ಯತೆಯುಂಟು. ಪಠ್ಯಸೂಚಿ ಮತ್ತು ಪಾಠೋಪಕರಣಗಳ ತಯಾರಿಕೆ, ಕಲಿಯುವವರ ಆಸಕ್ತಿ ಮತ್ತು ಅಭಿರುಚಿಗೆ ತಕ್ಕಂತೆ ಇರಬೇಡವೆ ? ಅವರ ತಯಾರಿಕೆ ಅಷ್ಟೇನು ಸುಲಭ ಸಾಧ್ಯವಾದ ಕಾರ್ಯವಲ್ಲ. ವಯಸ್ಕರ ಶಿಕ್ಷಣ ಕಾರ್ಯಕರ್ತರಿಗೆ

ಇದೊಂದು ಸವಾಲು. ಈ ಕಾರ್ಯದಲ್ಲಿ ಅಖಿಲಭಾರತ ವಯಸ್ಕರ ಶಿಕ್ಷಣ ನಿರ್ದೇಶನಾಲಯ ಮತ್ತು ರಾಜ್ಯ ಸಂಪನ್ಮೂಲ ಕೇಂದ್ರಗಳು ನಿರತವಾಗಿವೆ.

ಭಾರತಾದ್ಯಂತ ೧೯ ರಾಜ್ಯಗಳಲ್ಲಿ ೧೫ ರಾಜ್ಯ ಸಂಪನ್ಮೂಲ ಕೇಂದ್ರಗಳು ಕೆಲಸ ಮಾಡುತ್ತಿವೆ. ವಿಶ್ವವಿದ್ಯಾನಿಲಯ ಹಾಗೂ ಇತರ ಖಾಸಗಿ ಸಂಘಸಂಸ್ಥೆಗಳ ಆಶ್ರಯದಲ್ಲಿ ನಾಲ್ಕು ಕೇಂದ್ರಗಳಿವೆ.

ರಾಜ್ಯ ಸಂಪನ್ಮೂಲ ಕೇಂದ್ರಗಳ ಕಾರ್ಯ :

೧) ಕಲಿಯುವವರ ಆಸಕ್ತಿಗೆ ಅನುಗುಣವಾದ ಪಠ್ಯಸೂಚಿ ರಚನೆ, ಪಾಠೋಪಕರಣಗಳ ತಯಾರಿಕೆ ಹಾಗೂ ಈ ವಿಚಾರದಲ್ಲಿ ಕೈಪಿಡಿ ಪ್ರಕಟಣೆ.

೨) ಸ್ಥಿರೀಕರಣ ಸಾಹಿತ್ಯ ರಚನೆ ಮತ್ತು ಹಾಲಿ ಇರುವ ಸಾಹಿತ್ಯದ ಮೌಲ್ಯಮಾಪನ, ಹೊಸ ಸಾಹಿತ್ಯ ಪ್ರಕಟಣೆ. ಸಾಹಿತ್ಯರಚನೆಯ ಬಗ್ಗೆ ಕೈಪಿಡಿಯ ಪ್ರಕಟಣೆ.

೩) ವಿವಿಧ ಹಂತದ ಕಾರ್ಯಕರ್ತರಿಗೆ ತರಬೇತು.

೪) ತರಬೇತಿ ನೀಡಲು ಅನುಕೂಲವಾಗುವಂತೆ ಜಿಲ್ಲಾಮಟ್ಟದಲ್ಲಿ ಅನುಭವಶಾಲಿಗಳ ತಂಡದ ರಚನೆ.

೫) ಚಿತ್ರಪಟ, ಭಿತ್ತಿಪತ್ರ, ಸಾಮೂಹಿಕ ಪ್ರಸಾರ ಮಾಧ್ಯಮ, ಪ್ರಚಾರಸಾಹಿತ್ಯ ಮತ್ತು ಪ್ರದರ್ಶನಗಳ ಮೂಲಕ ವಯಸ್ಕರ ಶಿಕ್ಷಣ ಯೋಜನೆಗೆ ಸೂಕ್ತವಾತಾವರಣ ಕಲ್ಪಿಸುವುದು.

೬) ಸಂಶೋಧನ ಮತ್ತು ಮೌಲ್ಯಮಾಪನೆ.

೭) ಕೇಂದ್ರ ವಯಸ್ಕರ ಶಿಕ್ಷಣ ನಿರ್ದೇಶನಾಲಯದ ಪ್ರಕಟಣೆಗಳನ್ನು ಸ್ಥಳೀಯ ಭಾಷೆಗಳಿಗೆ ಭಾಷಾಂತರಿಸಿ ಪ್ರಕಟಿಸುವುದು.

ಮೇಲೆ ಹೇಳಿದ ಎಲ್ಲ ಕಾರ್ಯಕ್ರಮಗಳನ್ನು ಎಲ್ಲ ರಾಜ್ಯ ಸಂಪನ್ಮೂಲ ಕೇಂದ್ರಗಳು ಕೈಗೊಳ್ಳಲು ಆಗದಿರಬಹುದು. ಆದರೆ ಬೋಧನ ಸಾಮಗ್ರಿಗಳ ತಯಾರಿಕೆ ಮತ್ತು ಕಾರ್ಯಕರ್ತರ ತರಬೇತಿಗೆ ಎಲ್ಲ ಕೇಂದ್ರಗಳು ಗಮನ ಇತ್ತಿವೆ. ಬೋಧನಸಾಮಗ್ರಿಗಳ ಬಗ್ಗೆ ಪ್ರಯೋಗ ನಡೆಸಲು ರಾಜ್ಯ ಸಂಪನ್ಮೂಲ ಕೇಂದ್ರಗಳು ಹಲವಾರು ಕೇಂದ್ರಗಳನ್ನು ನಡೆಸುತ್ತಿವೆ. ಕೆಲವು ಆತುರಾತುರದಲ್ಲಿ, ಉತ್ಸಾಹಭರದಲ್ಲಿ ತಾವು ರಚಿಸಿದ ಪಠ್ಯ ಪುಸ್ತಕಗಳ ಮೌಲ್ಯಮಾಪನ ಶಾಸ್ತ್ರೀಯವಾಗಿ ನಡೆಸುತ್ತಿಲ್ಲ. ಕೇಂದ್ರದ ಕಾರ್ಯದಲ್ಲಿ ಹೊಂದಾಣಿಕೆ ಅಗತ್ಯ. ಹೀಗಾಗಿ ಕೇಂದ್ರದ ತಜ್ಞರ ಸೇವೆ ಸರಿಯಾಗಿ ಬಳಕೆಯಾಗುತ್ತಿಲ್ಲ. ಇದಕ್ಕೆಲ್ಲಾ ಕೆಲವು ಕಡೆಗಳಲ್ಲಿ ಕೇಂದ್ರದ ಸಮುನ್ವಯಾಧಿಕಾರಿಗಳ ಸ್ವಪ್ರತಿಷ್ಠೆ ಮತ್ತು ದೂರದೃಷ್ಟಿಯ ಅಭಾವ ಅಡ್ಡಿಬಂದಿದ್ದಲ್ಲಿ ಆಶ್ಚರ್ಯವೇನಿಲ್ಲ.

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ ವಿಸ್ತಾರವಾಗುತ್ತಿದೆ. ಇಷ್ಟೊಂದು ಕೆಲಸವನ್ನು ರಾಜ್ಯ ಸಂಪನ್ಮೂಲ ಕೇಂದ್ರ ಒಂದೇ ನಿರ್ವಹಿಸಲು ಸಾಧ್ಯ ಆಗುತ್ತಿಲ್ಲ. ಆದ್ದರಿಂದ ಜಿಲ್ಲಾಮಟ್ಟದಲ್ಲಿ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವ ಅಗತ್ಯವಿದೆ. ಅದರಲ್ಲೂ ಉಪಾಧ್ಯಾಯರ ತರಬೇತಿಯನ್ನು ನಡೆಸಲು ಜಿಲ್ಲಾಮಟ್ಟದಲ್ಲಿ ಅನುಭವ ಶಾಲಿಗಳ ತಂಡದ ರಚನೆ ಅನಿವಾರ್ಯ. ಸ್ಥಳೀಯ ಮಟ್ಟದಲ್ಲಿ ಪಠ್ಯಪುಸ್ತಕಗಳ ರಚನೆ ಆಗ ಬೇಕಾಗಿದೆ. ಈ ಕಾರ್ಯದಲ್ಲಿ ಜಿಲ್ಲಾ ಸಂಪನ್ಮೂಲ ಕೇಂದ್ರಗಳು ತಮ್ಮ ಕಾಣಿಕೆಯನ್ನು ಸಲ್ಲಿಸಬೇಕಾಗಿದೆ.

ಬಿಹಾರಿನ ರಾಂಚಿ ಮತ್ತು ಮಾಂಘ್ಯೆರ, ರಾಜಾಸ್ಥಾನದ ಬಿಕನೀರ್, ಉದಯಪುರ ಮತ್ತು ಬರೋಡದ ಖಾಸಗಿ ಸಂಘಸಂಸ್ಥೆಗಳು ಪರಸ್ಪರ ತಾಂತ್ರಿಕ ನೆರವನ್ನು ಪಡೆಯಲು ತಮ್ಮತಮ್ಮಲ್ಲೇ ಸಹಕಾರಸಂಘಗಳನ್ನು ರಚಿಸಿಕೊಂಡಿವೆ. ಇಂತಹ ಏರ್ಪಾಡು ಎಲ್ಲ ಕಡೆಯೂ ಅಗತ್ಯ. ಈ ಕಾರ್ಯವನ್ನು ಜಿಲ್ಲಾವಯಸ್ಕರ ಶಿಕ್ಷಣ ಅಧಿಕಾರಿಗಳು ಮತ್ತು ರಾಜ್ಯ ಸಂಪನ್ಮೂಲ ಕೇಂದ್ರದ ಅಧಿಕಾರಿಗಳು ಮಾಡಬೇಕು.

ತರಬೇತು : ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯಲ್ಲಿ ನಿರತನಾದ ಪ್ರತಿಯೊಬ್ಬ ಕಾರ್ಯಕರ್ತನಿಗೂ ಯೋಜನೆಯ ಪೂರ್ಣ ಮಾಹಿತಿ ಇರಬೇಕು. ಇಲ್ಲದಿದ್ದಲ್ಲಿ ಕಾರ್ಯಕ್ರಮ ಕುಂಠಿತವಾಗುವುದು. ಉಪಕರಣವಿಲ್ಲದ ಗಾರೆ ಕೆಲಸಗಾರನಂತೆ ಆಗುವುದು. ರಾಜ್ಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಿಂದ ಹಿಡಿದು ಉಪಾಧ್ಯಾಯನ ಮಟ್ಟದವರೆವಿಗೆ ತರಬೇತಿ ಅಗತ್ಯ. ಈ ತೆರನಾದ ತರಬೇತಿ ನಡೆಸಲು ಹಲವಾರು ಸಂಸ್ಥೆಗಳಿವೆ. ನೀತಿ ನಿಯಮಗಳು ರಚಿತವಾಗಿವೆ. ಆದರೆ ವಾಸ್ತವಿಕವಾಗಿ ನಡೆಯುತ್ತಿರುವುದೇ ಬೇರೆ. ಒಟ್ಟಿನಲ್ಲಿ ತರಬೇತಿ ಇನ್ನೂ ಹೆಚ್ಚಿಗೆ ಪರಿಣಾಮಕಾರಿಯಾಗಿರಬೇಕು. ತರಬೇತಿ ಪಡೆಯುವವರನ್ನು ತರಬೇತಿ ನೀಡುವ ಸಂಸ್ಥೆಗಳ ಕಾರ್ಯಕರ್ತರು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ತರಬೇತಿಯ ಬಗ್ಗೆ ಅವರು ಸೂಚಿಸುವ ಕೊರತೆಗಳ ಬಗ್ಗೆ ಗಮನ ನೀಡಬೇಕು ಈಗ ತರಬೇತಿ ಶಿಬಿರದ ಮುಕ್ತಾಯ ಸಮಾರಂಭಗಳಲ್ಲಿ ತರಬೇತಿ ಪಡೆದ ಕಾರ್ಯಕರ್ತರ ಪ್ರತಿನಿಧಿಗಳು ಔಪಚಾರಿಕವಾಗಿ ತರಬೇತಿಯ ಬಗ್ಗೆ ಮತ್ತು ಅದನ್ನು ನೀಡಿದವರ ಬಗ್ಗೆ ಮೆಚ್ಚುಗೆ ಸೂಚಿಸುವ ಸಂಪ್ರದಾಯವಿದೆ. ಇದು ಎಷ್ಟು ಬೇಗ ತಪ್ಪಿದರೆ ಅಷ್ಟೂ ಒಳ್ಳೆಯದು. ಬದಲಾಗಿ ತರಬೇತಿ ಕಾರ್ಯಕ್ರಮದ ಶಾಸ್ತ್ರೀಯ ಮೌಲ್ಯಮಾಪನೆಯನ್ನು ಜಾರಿಗೆ ತರುವುದು ಫಲಕಾರಿ.

ಉಪಾಧ್ಯಾಯರ ತರಬೇತಿಯ ಅವಧಿ ೩ ವಾರಗಳು. ಅದನ್ನು ಎರಡು ಹಂತಗಳಲ್ಲಿ ಏರ್ಪಡಿಸಲು ಅಖಿಲಭಾರತ ವಯಸ್ಕರ ಶಿಕ್ಷಣ ನಿರ್ದೇಶನಾಲಯ ಒಪ್ಪಿದೆ. ಆದರೆ ಈ ಶಿಬಿರದ ಅವಧಿ ೫ ರಿಂದ ೭ ದಿನಗಳಿಗೆ ಇಳಿದಿದೆ. ತರಬೇತಿ ಬಹುಮಟ್ಟಿಗೆ ಉಪನ್ಯಾಸರೂಪದಲ್ಲಿ ನಡೆಯುತ್ತಿವೆ. ಒಂದು ಕಡೆಯಲ್ಲಿ ನಡೆದಿದ್ದು ಹೀಗೆ. ಒಬ್ಬ

ಉಪನ್ಯಾಸಕರು ವ್ಯವಸಾಯದ ಬಗ್ಗೆ ಒಂದು ಗಂಟೆಯ ಕಾಲ ಭಾಷಣ ಕುಟ್ಟಿದ್ದರು. ತಮ್ಮ ಭಾಷಣದ ಬಗ್ಗೆ ತಾವೇ ಪ್ರಶಂಸೆ ಮಾಡಿಕೊಂಡರು. ಆದರೆ, ಕೇಳಿದ್ದು ಅನ್ನ ಕೊಟ್ಟಿದ್ದು ಕಲ್ಲು ಎಂಬಂತೆ ಗ್ರಾಮಸ್ಥರಿಗೆ ಬೇಕಾದದ್ದು ಸಕಾಲಕ್ಕೆ ಬೀಜ ಮತ್ತು, ಗೊಬ್ಬರ. ಅವರಿಗೆ ಅವುಗಳ ಬಗ್ಗೆ ಉಪನ್ಯಾಸ ಬೇಕಿರಲಿಲ್ಲ. ಕಾರಣ ಅದು ರೈತರಿಗೆ ಮೊದಲೇ ತಿಳಿದಿತ್ತು. ಇನ್ನು ಕೆಲವು ಕಡೆಗಳಲ್ಲಿ ತರಗತಿಗಳು ಪ್ರಾರಂಭವಾದ ಎಷ್ಟೋ ದಿನದ ನಂತರ ತರಬೇತಿ ಪ್ರಾರಂಭ. ವಿದ್ಯುಚ್ಛಕ್ತಿಯ ಸ್ವಿಚ್ ಒತ್ತಿದ ತಕ್ಷಣ ದೀಪ ಬಂದಂತೆ, ಒಂದೇ ದಿನ ಜಿಲ್ಲಾದ್ಯಂತ ನೂರಾರು ತರಗತಿಗಳ ಸ್ಥಾಪನೆ. ಕೈಹುಣ್ಣಿಗೆ ಕನ್ನಡಿ ಬೇಕೆ ಎಂಬಂತೆ ಇವಕ್ಕೆ ಮೌಲ್ಯಮಾಪನ ಬೇರೆ ಬೇಕೆ ?

ಆಡಳಿತ : ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯನ್ನು ಕಾರ್ಯಗತಮಾಡಲು ವಿವಿಧ ಹಂತಗಳಲ್ಲಿ ಹೊಸ ಸಂಸ್ಥೆಗಳನ್ನು ರಚಿಸುವ ಬದಲು ಹಾಲಿ ಇರುವ ಸಂಸ್ಥೆಗಳನ್ನೇ ಬಲಪಡಿಸಲು ನಿರ್ಧರಿಸಲಾಯಿತು. ಕೇಂದ್ರಮಟ್ಟದಲ್ಲಿ ರಾಷ್ಟ್ರೀಯ ಕೇಂದ್ರ ವಯಸ್ಕರ ಶಿಕ್ಷಣ ನಿರ್ದೇಶನಾಲಯ ಇದೆ. ವಯಸ್ಕರ ಶಿಕ್ಷಣ ವಿಚಾರದಲ್ಲಿ ರಾಜ್ಯ ಸರಕಾರಗಳಿಗೆ ಸಲಹೆ ಹಾಗೂ ಅವುಗಳ ಕಾರ್ಯಪರಿಶೀಲನೆ ನಿರ್ದೇಶನಾಲಯದ ಜವಾಬ್ದಾರಿ. ಈ ಸಂಸ್ಥೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಯುನೆಸ್ಕೋ ಮುಂತಾದ ಸಂಸ್ಥೆಗಳಿಂದ ತಾಂತ್ರಿಕ ಜ್ಞಾನ ಮತ್ತು ನೆರವು ಪಡೆಯುತ್ತಿದೆ.

ವಯಸ್ಕರ ಶಿಕ್ಷಣದ ಬಗ್ಗೆ ಸಲಹೆ ನೀಡಲು ಕೇಂದ್ರ ಮತ್ತು ರಾಜ್ಯಮಟ್ಟಗಳಲ್ಲಿ ಸಲಹಾ ಮಂಡಲಿಗಳಿವೆ. ಕೆಲವು ಸಲಹಾ ಮಂಡಲಿಗಳಲ್ಲಿ ವಯಸ್ಕರ ಶಿಕ್ಷಣ ತಜ್ಞರ ಕೊರತೆ ಕಂಡುಬಂದಿದೆ. ಕೇಂದ್ರದಂತೆ ರಾಜ್ಯಮಟ್ಟದಲ್ಲೂ ವಯಸ್ಕರ ಶಿಕ್ಷಣ ನಿರ್ದೇಶನಾಲಯವಿದೆ. ಅದರ ನಿರ್ದೇಶನದಲ್ಲಿ ಜಿಲ್ಲಾಕಾರ್ಯಕರ್ತರು ಸೇವೆ ಸಲ್ಲಿಸುವರು. ಜಿಲ್ಲಾ ವಯಸ್ಕರ ಶಿಕ್ಷಣ ಕಾರ್ಯಕರ್ತರಿಗೆ ಸಲಹೆ ನೀಡಲು ಹಾಗೂ ಇಡೀ ಜಿಲ್ಲೆಯ ವಯಸ್ಕರ ಶಿಕ್ಷಣ ಕಾರ್ಯ ಮೇಲ್ವಿಚಾರಣೆ ನಡೆಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಲಹಾ ಸಮಿತಿ ಇರಬೇಕೆಂದು ನಿಗದಿಯಾಗಿದೆ. ಆದರೆ ರಾಜಸ್ಥಾನ ಮತ್ತು ಗುಜರಾತ ರಾಜ್ಯಗಳ ವಿನಃ ಉಳಿದ ರಾಜ್ಯಗಳಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣ ಸಲಹಾ ಮಂಡಲಿಗಳು ಇನ್ನೂ ರಚಿತವಾಗಿಲ್ಲ. ತಮಿಳುನಾಡು, ಕರ್ನಾಟಕ, ಕೇರಳ, ಆಂಧ್ರ ಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತಿನಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣ ಅಧಿಕಾರಿಗಳ ನೇಮಕ ಆಗಿದೆ. ವಯಸ್ಕರ ಶಿಕ್ಷಣ ಕೇಂದ್ರಗಳು ಬೇಡುವ ತಾಂತ್ರಿಕ ಸಲಹೆ ಸೌಕರ್ಯಗಳನ್ನು ನೀಡಲು ಅಭಿವೃದ್ಧಿ ಇಲಾಖೆಗಳು ಒಪ್ಪಿವೆ.

ವಯಸ್ಕರ ಶಿಕ್ಷಣ ಕೇಂದ್ರಗಳ ಮೇಲ್ವಿಚಾರಣೆ ನಡೆಸಲು ಅನೇಕ ರಾಜ್ಯಗಳಲ್ಲಿ ಮೇಲ್ವಿಚಾರಕರ ನೇಮಕ ಆಗಿಲ್ಲ. ಅಂತಹ ರಾಜ್ಯಗಳ ಪೈಕಿ ಕರ್ನಾಟಕವೂ ಸಹ ಒಂದು.

ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಗಮನ ನೀಡಬೇಕೆಂಬುದು ಭಾರತ ಸರಕಾರದ ಆಶಯ. ಆದರೂ ಸಾಕಷ್ಟು ಮಹಿಳಾ ಕೇಂದ್ರಗಳು ಆರಂಭವಾಗಿಲ್ಲದಿರುವುದು ಶೋಚನೀಯ. ಮಹಿಳಾ ಕೇಂದ್ರಗಳನ್ನು ತೆರೆಯಲು ಅನೇಕ ಕಡೆಗಳಲ್ಲಿ ಮಹಿಳಾ ಮೇಲ್ವಿಚಾರಕರ ನೇಮಕವಾಗಿಲ್ಲ, ಕಾರಣ, ಅವರು ಈ ಕಾರ್ಯಕ್ಕೆ ಮುಂದುಬರುತ್ತಿಲ್ಲ ಎಂಬುದು. ಗ್ರಾಮಾಂತರ ಪ್ರದೇಶಗಳಲ್ಲಿ ಅವರು ಒಂಟಿಯಾಗಿ ಪ್ರವಾಸಮಾಡಲು ತೊಂದರೆ. ಆದ್ದರಿಂದ ಅವರ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಕಡಿಮೆ ಮಾಡಿ ಹೆಚ್ಚು ಮಂದಿ ಮಹಿಳಾ ಕಾರ್ಯಕರ್ತರನ್ನು ನೇಮಕ ಮಾಡಬಹುದು. ಪ್ರತಿಹತ್ತು ಇಲ್ಲವೇ ೫ ತರಗತಿಗಳಿಗೆ ಒಬ್ಬರಂತೆ ಮಹಿಳಾ ಮೇಲ್ವಿಚಾರಕರನ್ನು ನೇಮಕಮಾಡಿದರೆ ಒಳ್ಳೆಯದು. ಈಗ ಮಹಿಳಾ ಕಾರ್ಯಕರ್ತರ ನೇಮಕದ ಬಗ್ಗೆ ನೀತಿನಿಯಮಗಳನ್ನು ಸಡಿಲಿಸಿ ಹೆಚ್ಚುಮಂದಿ ಮಹಿಳೆಯರು ಈ ಕ್ಷೇತ್ರಕ್ಕೆ ಬರುವಂತೆ ಆಕರ್ಷಿಸಬೇಕು. ಪ್ರತಿ ೩೦ ತರಗತಿಗಳಿಗೆ ಒಬ್ಬ ಗಂಡಸು ಮೇಲ್ವಿಚಾರಕ ಎಂಬ ನಿಯಮ ಮಹಿಳಾ ಕೇಂದ್ರಗಳ ಬಗ್ಗೆ ಸಲ್ಲದು.

ಒಬ್ಬನಿಗೆ ವಯಸ್ಕರ ಶಿಕ್ಷಣ ನೀಡಲು ತಗಲುವ ವೆಚ್ಚ ಸರಾಸರಿ ೮೦ ರೂಪಾಯಿ. ಜನತಾ ಚಳುವಳಿಯಾದ ಮಹಾರಾಷ್ಟ್ರ ಗ್ರಾಮಶಿಕ್ಷಣ ಮೋಹಿಂನಲ್ಲಿ ಸರಾಸರಿ ವೆಚ್ಚ ಕೇವಲ ಒಂದು ರೂಪಾಯಿ. ಇಷ್ಟೊಂದು ಹಣ ಖರ್ಚಾಗುವಾಗ ಕಾರ್ಯ ವ್ಯವಸ್ಥೆ ಮತ್ತು ಶ್ರದ್ಧೆಯಿಂದ ನಡೆಯಬೇಕೆಂದು ನಿರೀಕ್ಷಿಸುವುದು ತಪ್ಪಾಗದು. ಅಕ್ಷರ ಪ್ರಚಾರದಲ್ಲಿ ಸುಳ್ಳು ಅಂಕಿಸಂಖ್ಯೆಗಳು ನುಸುಳುತ್ತವೆ ಎಂಬ ದೂರಿದೆ. ಇದು ಕೇವಲ ಅಕ್ಷರ ಪ್ರಚಾರಕ್ಕೆ ಸೀಮಿತವಾಗಿಲ್ಲ ಎಂಬುದನ್ನು ಮನಗಾಣುವುದು ಒಳ್ಳೆಯದು. ಪ್ರಾಮಾಣಿಕವಾದ ಪ್ರಗತಿಯ ವರದಿ ಹಾಗೂ ಪ್ರಗತಿಯನ್ನು ಸಾಧಿಸಲು ಇರುವ ಸಮಸ್ಯೆಗಳನ್ನು ಕಾರ್ಯಕರ್ತರು ಮತ್ತು ಸಂಘಸಂಸ್ಥೆಗಳು ನಿಸ್ಸಂಕೋಚವಾಗಿ ಮತ್ತು ನಿರ್ಭಯವಾಗಿ ತಿಳಿಸಬೇಕೆಂದು ಭಾರತ ಸರಕಾರ ಆಶಿಸಿದೆ. ಸುಳ್ಳುವರದಿಗಳು ಕಾರ್ಯಕ್ರಮದ ಯಶಸ್ಸಿಗೆ ಮಾರಕವಲ್ಲವೆ ? ಆದ್ದರಿಂದ ಪ್ರತಿಯೊಬ್ಬ ಕಾರ್ಯಕರ್ತನು ತನ್ನ ಕಾರ್ಯದ ಬಗ್ಗೆ ತನ್ನ ಅಂತರಾತ್ಮವನ್ನು ಕೇಳಬೇಕು. ಈ ತೆರನಾದ ವೈಜ್ಞಾನಿಕ ಪರಿಶೀಲನೆಯ ಮನೋಭಾವ ಕಾರ್ಯಕರ್ತರಲ್ಲಿ ಮೂಡಿದ ಹೊರತು ಕಾರ್ಯ ಯಶಸ್ವಿಯಾಗಲಾರದು ಹಾಗೂ ಹಣದ ಪೋಲು ತಪ್ಪದು.

● ●

ಒರೆಗಲ್ಲು

● ಆರ್. ಸುಬ್ಬಕೃಷ್ಣ

೧. ದಕ್ಕುಂದಲೆ - ಒಂದು ಅರ್ಥ ವಿವೇಚನೆ :

ಕೃತ್ತಿರೆದೆಯುಮುತ್ವತ್ವಾ
ಯತ್ತಮನುಸ್ವಾರಮಸ್ವರದ ನಣಕತ್ವಂ
ಮತ್ತೆ ಳಕಾರಕ್ಕುತ್ವಂ
ಪತ್ತಲೊಡಂ ಬಿಂದು ಬಂದು ನೆಲೆಗೊಂಡಿರ್ಕುಂ ॥

—ಶ. ದ. ಸೂತ್ರ ೧೮೩

ಉಕಾರಾಂತ ಇಕಾರಾಂತವಾದ ಕೃದಂತಗಳು ಪೂರ್ವಪದವಾಗಿದ್ದು ಗದಬಜಕಾರಗಳು ಪರವಾದರೆ ಕರ್ಮಧಾರಯದಲ್ಲಿ ನಡುವೆ ಬಿಂದು ಬರುವುದನ್ನೂ ಅದಕ್ಕೆ ಬಾಹುಳ್ಯವನ್ನೂ ಹೇಳಿ ನಂತರ ಉಕಾರ ಅಕಾರಾಂತಗಳಿದ್ದು **ಕೃದಂತವಲ್ಲದಿದ್ದರೂ** ಅಲ್ಲಿಯೂ ಬಿಂದು ಬರುತ್ತದೆಂದು ಹೇಳಲು ಈ ಸೂತ್ರವನ್ನು ಕೊಡಲಾಗಿದೆ. ಇದಕ್ಕೆ ಉದಾಹರಣೆಯಾಗಿ ಉದಂತಕ್ಕೆ ಪ್ರಯೋಗವಾಗಿ ಕೊಟ್ಟಿರುವ ಶಬ್ದಗಳಲ್ಲಿ 'ದಕ್ಕುಂದಲೆ' ಒಂದು.

ಈ ಶಬ್ದವನ್ನು ಕಿಟೆಲ್ ಕೋಶದಲ್ಲಿ 'ದಕ್ಕು' ಶಬ್ದದ ಕ್ರಿಯಾರ್ಥದ ಕೆಳಗೆ ಕೊಟ್ಟು 'a head that has been saved or has escaped(?)' (ಸಂಪುಟ ೨. ೧೯೬೯) ಎಂಬುದಾಗಿ ವಿವರಣೆಯನ್ನು ಕೊಟ್ಟಿದ್ದಾರೆ. ವಿವರಣೆಯ ಕೊನೆಯಲ್ಲಿರುವ ಪ್ರಶ್ನಾರ್ಥಕ ಚಿಹ್ನೆ ಈ ವಿವರಣೆಯ ಬಗ್ಗೆ ಅವರಿಗಿರುವ ಸಂದೇಹವನ್ನು ಸೂಚಿಸುತ್ತದೆ. ಆದರೆ ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿರುವ ನಿಘಂಟಿನಲ್ಲಿ ಈ ಶಬ್ದಕ್ಕೆ 'ಉಳಿದುಕೊಂಡ ತಲೆ; ರಕ್ಷಿಸಲ್ಪಟ್ಟ ತಲೆ' (ಪುಟ. ೪೩೩) ಎಂಬ ಅರ್ಥವನ್ನು ಸಂದೇಹಾತೀಕವಾಗಿ ನಿಘಂಟುವಿನ ನಿರ್ಮಾತೃಗಳು ಕೊಟ್ಟಿದ್ದಾರೆ. ದುರದೃಷ್ಟವೆಂದರೆ ವೈಯಾಕರಣಿ ಕೇಶಿರಾಜನು **ಕೃತ್ತಲ್ಲದ ಉದಂತಕ್ಕೆ** ಕೊಟ್ಟಿರುವ ಪ್ರಯೋಗವನ್ನು ಉದಂತ ಕೃದಂತವಾಗಿ ಅರ್ಥೈಸಿರುವುದು.

ಅದು ಕೃತ್ತಲ್ಲದ ಉದಂತವಾಗಿದ್ದಲ್ಲಿ ಅದರ ರೂಪವೇನಿರಬಹುದೆಂಬುದಕ್ಕೆ ಮೇಲೆ ಹೇಳಿದ ನಿಘಂಟುಗಳಲ್ಲೇ ಉತ್ತರವೂ ದೊರೆಯುತ್ತದೆ. ಈ ಎರಡೂ ನಿಘಂಟುಗಳೂ 'ದರ್ಕು' ಎಂಬ ಶಬ್ದವನ್ನು 'ಶೂಲದ ಮೊನೆ ಅಥವಾ ಶೂಲ' ಎಂಬರ್ಥ ದಲ್ಲಿ ಗುರುತಿಸಿವೆ. 'ದರ್ಕು' ಎಂಬುದು ಸಮೀಕರಣದಿಂದ 'ದಕ್ಕು' ಎಂದಾಗಿರುವು ದನ್ನು ಕಿಟ್ಟೆಲ್ ಕೋಶ ಗುರುತಿಸಿದೆ. ಈ 'ಶೂಲದ ಮೊನೆ ಅಥವಾ ಶೂಲ' ಎಂಬರ್ಥದ ದರ್ಕುವಿನಿಂದ ಸಾಧಿತವಾದ 'ದಕ್ಕು' ಎಂಬ ನಾಮಪದವೇ 'ದಕ್ಕುಂದಲೆ'ಯಲ್ಲಿ ಪೂರ್ವ ಪದವಾದ ಉದಂತ ಶಬ್ದ.

ಬಹುಶಃ ಶೂಲಕ್ಕೇರಿಸಲ್ಪಟ್ಟ ಅಥವಾ ಶೂಲದ ಮೊನೆಯಲ್ಲಿರುವ ತಲೆ ಎಂದು ಅರ್ಥ ಬರುವ ಈ ಸಮಾಸವನ್ನು ಕೇಶಿರಾಜನ ಸಂಹಿತೆಗೆ ವಿರುದ್ಧವಾಗಿ ಅರ್ಥೈಸಿದರೆ, ಅದು ನಾವು ನಮ್ಮ ಭಾಷೆಯ ಮೂಲ ಜೀವಾಳದಿಂದ ಬಹುದೂರ ಹೋಗಿದ್ದೇವೆಂಬು ದಕ್ಕೆ ಮತ್ತೊಂದು ಸಾಕ್ಷಿಯಾದೀತು.

೨. 'ಅಂಗೈ' ಮತ್ತು 'ಮೇಂಗೈ' ಒಂದು ಚಿಂತನೆ :

ಈ ಎರಡು ಶಬ್ದಗಳೂ ಕೇಶಿರಾಜನು ಅವ್ಯಯೀಭಾವ ಸಮಾಸಕ್ಕೆ ಕೊಟ್ಟಿರುವ ಪ್ರಯೋಗಗಳಲ್ಲಿವೆ. ಇವುಗಳನ್ನು ಸಾಮಾನ್ಯವಾಗಿ, ಕ್ರಮವಾಗಿ 'ಕೈಯ + ಅಡಿ' ಮತ್ತು 'ಕೈಯ + ಮೇಗು' ಎಂಬುದಾಗಿ ವಿಗ್ರಹಿಸುವುದು ರೂಢಿ. ಕೇಶಿರಾಜನ ಚಿಂತ ನೆಯೂ ಇದೇ ರೀತಿ ಇದ್ದು, ಇದಕ್ಕಾಗಿ ಅವ್ಯಯೀ ಭಾವ ಸಮಾಸವಾಗುವಾಗ 'ಅಡಿ' ಮತ್ತು 'ಮೇಗು'ಗಳ ಕಡೆಯ ಅಕ್ಷರಗಳಿಗೆ ಬಿಂದು ಬರುತ್ತದೆನ್ನುವ ನಿಯಮವನ್ನು ರೂಪಿಸಿದ್ದಾನೆ. ಈ ಉದಾಹರಣೆಗಳನ್ನು ಒಂದೊಂದಾಗಿ ಪರಿಶೀಲಿಸೋಣ.

ಅ) ಅಂಗೈ : ಡಾ. ಕುಳ್ಳಿಯವರು ತಮ್ಮ ಶಬ್ದಮಣಿದರ್ಪಣದ ಬಗೆಗಿನ ಮಹಾ ಪ್ರಬಂಧದಲ್ಲಿ (Keśiraja's Śabdamanidarpaṇa, Karnatak University, 1976, pp. 158) ಈ ಶಬ್ದವನ್ನು ಕೈಯ + ಅಡಿ ಎಂದು ವಿಗ್ರಹಿಸು ವುದು ರೂಢಿಯೆಂದು ಹೇಳಿ, "The examples aṅgay, aṅgāl can be broken down as an + kay and an + kāl, is 'an' the resultpnt form of adi ? In Tamil, the form is akam-kay. Can this 'an' be related to it ? It requires furthèr investigation" ಎಂದಿದ್ದಾರೆ. ಆದರೆ ೧೯೬೬ ರಲ್ಲಿ ಪ್ರಕಟವಾಗಿರುವ ಕಿಟೆಲ್ ಕೋಶದ (ಮದ್ರಾಸ್ ಆವೃತ್ತಿ) ಮೊದಲ ಸಂಪುಟದಲ್ಲಿ (ಪುಟ. ೧೭) ಅಂ-ಗೆ ವಿವರಣೆಯನ್ನು ಕೊಡುವಾಗ 'here Kittel had mistaken ಅಂ etc. to be an equivalents of ಅಡಿ. ಅಂ does not mean foot, bottom, sole. It is evidently the form taken by ಅಗ- in

compounds such as ಅಗಂ+ಕಾಲ್ etc' ಎಂಬ ಟಿಪ್ಪಣಿಯನ್ನು ಸಂಪಾದಕರು ಕೊಟ್ಟಿದ್ದಾರೆ. ಇದು ಅಂಗೈ, ಅಂಗಾಲ್ ಶಬ್ದಗಳನ್ನು ಅಕಂ+ಕೈ ಮತ್ತು ಅಕಂ+ ಕಾಲ್ ಎಂಬುದರಿಂದಲೇ ಸಾಧಿಸಬೇಕೆಂಬುದರ ಬಗ್ಗೆ ಬಹುಪಾಲು ತೀರ್ಮಾನವೇ ಆಗಿದೆ.

'ಅಕಂ' ಎಂಬುದು ದ್ರಾವಿಡ ಶಬ್ದ. ಇದಕ್ಕೆ ಒಳಭಾಗ, ಒಳಗೆ ಎಂಬುದು ಮೊದಲ್ಗೊಂಡು ಮನೆ, ಸ್ಥಳ ಇತ್ಯಾದಿಯಾಗಿ ಅರ್ಥಗಳಿವೆ. ಅಕ (~ಅಗ) ಎಂಬುದು ಇದೇ ಅರ್ಥದಲ್ಲಿ ಹಳಗನ್ನಡದಲ್ಲೂ ಉಪಯೋಗಿಸಲ್ಪಟ್ಟಿರುವುದು ಕಿಟ್ಟೆಲ್ ಕೋಶ ದಲ್ಲಿ ಗುರುತಿಸಲ್ಪಟ್ಟಿದೆ.

ಕೈಯ ಒಳಭಾಗ ಎಂಬರ್ಥಕ್ಕಾಗಿ ಈ ಶಬ್ದವನ್ನು ಕೈ ಎಂಬ ಶಬ್ದದೊಡನೆ ಉಪಯೋಗಿಸಿದಾಗ ಅಕಂ+ಕಯ್ ಎಂದು ಆಗಿ ಅಕಂಕಯ್ ಎಂಬ ರೂಪವಿದ್ದು (ಒಳ+ಕಯ್>ಒಳಕಯ್ ಆಗುವಂತೆ), ನಂತರ ಪ್ರತಿಭಾಷೆಗೂ ಸಹಜವಾದ ಸಮಾನಾಕ್ಷರಲೋಪ (haplology) ನಿಯಮದ ಮೇರೆಗೆ (ಈ ನಿಯಮ ಸಾಮಾನ್ಯ ವಾಗಿ ಪಕ್ಕ ಪಕ್ಕದಲ್ಲಿ ಬರುವ ಸಮಾನಾಕ್ಷರಗಳಲ್ಲಿ ಒಂದನ್ನು ಲೋಪ ಮಾಡುತ್ತದೆ.) ಅಕಂಕಯ್ ಎಂಬುದರಲ್ಲಿನ ಮೊದಲನೇ ಕ ಕಾರವು ಲೋಪ ಹೊಂದಿ ಅಂಕಯ್ ಆಗಿ ಅಂಗಯ್ ಅಥವಾ ಅಂಗೈ ಎಂಬ ರೂಪದಲ್ಲಿದೆಯೆಂದು ಹೇಳಬಹುದು.

ಕಿಟೆಲ್ ಕೋಶದ ಸಂಪಾದಕರು ತಮ್ಮ ಟಿಪ್ಪಣಿಯಲ್ಲಿ ವ್ಯಕ್ತಪಡಿಸಿರುವಂತೆ ಅಡಿ>ಅಂ ಎಂಬ ಅಭಿಪ್ರಾಯ ಕಿಟೆಲ್‌ರ ತಪ್ಪು ತಿಳುವಳಿಕೆಯಲ್ಲ. ಅದು ಕೇಶಿರಾಜನ ಸಲಹೆಯ ಮೇರೆಗೆ ಅರ್ಥೈಸಿಕೊಂಡುದೆಂದು ಕೇಶಿರಾಜನು ಕೊಡುವ "ಅಡಿ ಮೇಗು ಗಳಂತ್ಯಾಕ್ಷರದೆಡೆಗಕ್ಕುಂ ಬಿಂದು" ಕ. ದ. ಸೂತ್ರ ೧೭೭ರಿಂದ ತಿಳಿಯ ಬಹುದು. ಈ ನಿಯಮದ ಸಹಜತೆಯನ್ನು ಗಮನಿಸೋಣ.

ಕೇಶಿರಾಜನೇ ಹೇಳುವ ನಿಯಮದಂತೆ 'ಅಡಿ'ಯಲ್ಲಿನ ಡಕಾರ ಕೈನಲ್ಲಿನ ವ್ಯಂಜನ ದೊಂದಿಗೆ ಸೇರಬೇಕಾದರೆ (ಕಾಡು+ಕಿಚ್ಚು=ಕಾಟ್ಕಿಚ್ಚು) ವಿಕಾರವಾಗಿ ಮಾರ್ಪಡಬೇಕೇ ಹೊರತು ಅನುಸ್ವಾರವಾಗಿ ಅಲ್ಲ. ಡ ಕಾರ ಅನುಸ್ವಾರವಾಗಿ ಮಾರ್ಪಡುವುದು ಯಾವ ಭಾಷಾ ವ್ಯವಹಾರದಲ್ಲೂ ಅಸಾಧ್ಯ ಆದ್ದರಿಂದ ಅಡಿ ಎಂಬುದರಿಂದ ಅಂ ರೂಪನ್ನು ಸಾಧಿಸುವುದು ಅಸಂಬದ್ಧವೆನಿಸುತ್ತದೆ.

ಆ) ಮೇಂಗೈ : ಇದನ್ನು ಕೈಯ+ಮೇಗು ಎಂದು ವಿಗ್ರಹಿಸಿ ಹೇಳುವುದು ರೂಢಿ. ಮೇಲೆ ಹೇಳಿದ ನಿಯಮದಂತೆ ಗು ನ ಬದಲಿಗೆ ಬಿಂದು ಬಂದು ಸೇರಿ ಮೇಗು ಎಂಬುದು ಮೇಂ ಆಗಿ ಮಾರ್ಪಡುತ್ತದೆಂದು ರೂಢಿಯಲ್ಲಿರುವ ವಿವರಣೆ. ಈಗ ಮೇಗುವಿನ ರಚನೆಯನ್ನು ನೋಡೋಣ.

ಈ ಶಬ್ದದ ರಚನೆ 'ಮೇ+ಗು' ಎಂದು. ಇಲ್ಲಿ ಬರುವ ಗು ಎಂಬುದು ನಾಮ ರೂಪವನ್ನು ಸಾಧಿಸುವ ಪ್ರಾತಿಪದಿಕ ಪ್ರತ್ಯಯವೆಂದೂ ಮೇ ಎಂಬುದು ಧಾತುರೂಪ ವೆಂದೂ ಕಿಟೆಲ್ ಕೋಶದಲ್ಲಿ ಗುರುತಿಸಲ್ಪಟ್ಟಿದೆ. ಮೇಗಡೆ ಎಂಬ ಪ್ರಯೋಗದಲ್ಲಿ ಇದನ್ನು ಕಾಣಬಹುದು. ಅಂತೆಯೇ ಕಿಟೆಲ್ ಕೋಶದಲ್ಲಿ ಮೇಗಾಲು = ಮೇಂಗಾಲು ಎಂದಿರುವುದನ್ನು ಗಮನಿಸಿದರೆ ಮೇ ಎಂಬುದರ ಪ್ರಭೇದರೂಪ (alternant form) ಮೇಂ ಎಂಬುದನ್ನೂ ತಿಳಿಯಬಹುದು. ಆದ್ದರಿಂದ ಕೇಶಿರಾಜನು ಹೇಳುವ ಮೇಗು> ಮೇಂ ಎಂಬ ಸೂತ್ರ ತಪ್ಪಾಗಿ ಮೇ ~ ಮೇಂ ಎಂಬುದು ಸರಿಯೆನಿಸುತ್ತದೆ. ಈ ನಿಯಮದಂತೆ ಮೇಂಗಯ್ ಮತ್ತು ಮೇಂಗಾಲ್ ಎಂಬ ಸಮಾಸಗಳನ್ನು ಈ ಕೆಳಕಂಡ ಎರಡು ರೀತಿಯಲ್ಲಿ ಸಾಧಿಸಬಹುದು :

೧) ಮೇಂ + ಕಯ್ > ಮೇಂಗಯ್
ಮೇಂ + ಕಾಲ್ > ಮೇಂಗಾಲ್

೨) ಮೇ + ಕಯ್ > ಮೇ + ೦ + ಕಯ್ > ಮೇಂಗಯ್
ಮೇ + ಕಾಲ್ > ಮೇ + ೦ + ಕಾಲ್ > ಮೇಂಗಾಲ್

೨) ರ ನಡುವಣ ಹಂತದಲ್ಲಿ ಬರುವ ಬಿಂದು ಸಾಮಾನ್ಯವಾಗಿ ಸಮಾಸಕಾರ್ಯವಾಗು ವಾಗ ಬರುವ ಸಾಧ್ಯತೆಯಿರಬಹುದಾದ ಬಿಂದು. ೨) ಕ್ಕಿಂತ ೧) ರ ಸಾಧ್ಯತೆ ಹೆಚ್ಚಿದ್ದು ಅದು ಹೆಚ್ಚು ತರ್ಕಬದ್ಧವೂ ಸ್ವಾಭಾವಿಕವೂ ಆಗಿರುವಂತೆ ತೋರುತ್ತದೆ.

ಮೇಲೆ ಕೊಟ್ಟ ಅಂಗೈ, ಅಂಗಾಲ್ ಮತ್ತು ಮೇಂಗೈ, ಮೇಂಗಾಲ್ ಎಂಬ ಸಮಾಸಗಳನ್ನು 'ಅವ್ಯಯ ಪೂರ್ವಪದ ಅವ್ಯಯೀಭಾವ ಸಮಾಸ'ವೆಂದಿಟ್ಟುಕೊಂಡರೆ ಇದುವರೆಗೆ ಹೇಳಿದ ಅಕಂಕಯ್ > ಅಂಗಯ್; ಅಕಂಕಾಲ್ > ಅಂಗಾಲ್; ಮೇಂ ಕಯ್ > ಮೇಂಗಯ್; ಮೇಂಕಾಲ್ > ಮೇಂಗಾಲ್ ಎಂಬುದು ಸಂಪೂರ್ಣ ತರ್ಕಕ್ಕೆ ಒಳಪಟ್ಟಿದೆ ಎಂದು ಹೇಳಬಹುದು. ಅಷ್ಟೇ ಅಲ್ಲದೆ ಅಕಂಕಯ್, ಅಕಂಕಾಲ್ ಮತ್ತು ಮೇ ಎಂಬ ರೂಪಗಳನ್ನು ನೋಡಿದರ ದ್ರಾವಿಡ ಭಾಷೆಗಳಲ್ಲಿಯೂ ಮೇ ~ ಮೇಂ- ಎಂಬುದನ್ನು ಕನ್ನಡ ಭಾಷೆಯಲ್ಲಿಯೂ ದ್ರಾವಿಡ ವ್ಯುತ್ಪತ್ತಿಕೋಶ (Dravidian Etymolygical Dictionary) ಕಾರರು ಗುರುತಿಸಿರುವುದರಿಂದ ಈ ವಿವರಣೆಗೆ ಮತ್ತಷ್ಟು ಪುಷ್ಟಿ ದೊರಕಿದಂತಾಗಿದೆ.

———

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೪ (ಅಂಚೆವೆಚ್ಚ ಸೇರಿ)

ಬಿಡಿ ಪ್ರತಿ : ರೂ. ೨–೫೦ (ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ೨–೦೦ ಮಾತ್ರ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳು ೧೦೦-೦೦ ರೂ ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ"ಯ ತ್ರೈಮಾಸಿಕ ಪ್ರತ್ರಿಕೆ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ಮಾನವಿಕ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೬ ೦೦

ಬಿಡಿ ಪ್ರತಿ : ರೂ. ೩–೫೦ (ಅಂಚೆ ವೆಚ್ಚ ೧-೨೫ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ರೂ. ೪-೦೦

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨-೫೦ (ಅಂಚೆ ವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ರೂ. ೪ ೦೦

(ಹಣವನ್ನು ಡಿಮಾಂಡ ಡ್ರಾಪ್ಟ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ **ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩